ಜ್ಞಾನಪೀಠ ಪ್ರಶಸ್ತಿ ವಿಜೇತ

**ಪನ್ನಾಲಾಲ್ ಪಟೇಲ್‌ರ**

ಕಾದಂಬರಿ ಆಧಾರಿತ

# ಜನುಮದ ಜೋಡಿ

**ಚಿತ್ರಕಥೆ**

(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)

ಚಿತ್ರಕಥೆ – ನಿರ್ದೇಶನ

**ಟಿ.ಎಸ್. ನಾಗಾಭರಣ**

ಸಂಭಾಷಣೆ

**ಡಾ. ಬರಗೂರು ರಾಮಚಂದ್ರಪ್ಪ**

Sirivara

**ಸಿರಿವರ ಪ್ರಕಾಶನ**

ಜನುಮದ ಜೋಡಿ: ಚಿತ್ರಕಥೆ
(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)
**Janumada Jodi**
Writer : **T.S. Nagabharana**
"Shruthalaya" No. 61,
3rd Cross, S.B.M. Colony
Bangalore - 560 050, Mob: 9845277408
E-mail: shruthalaya@gmail.com

Published by **Sirivara Prakashana**
No. M37/B, 8th Crosss
Lakshminarayanapura, Bangalore - 560 021
Mob: 98441 09706 - email -ravisirivara@gmail.com
www.sirivaraculturalacademy.blogspot.com

| | |
|---|---|
| Pages | : 184 |
| Price | : Rs.140/- |
| Fist Impression | : 2015 |
| Copies | : 1000 |
| Rights | : Author |
| Paper | : N S Maplitho 70 GSM |
| D.T.P | : Prasanna Kumar. R |
| Cover page art | : Mohan Kamakshi |
| ISBN | : 978-93-81846-61-2 |

| | |
|---|---|
| Advisary Board | : Pro. S G Siddaramaiah |
| | : Dr. N Damodarashetty |
| | : Lakshmipathykolar |
| | : Dr. Banjagere Jaiprakash |
| | : Dr. M S Murthy |
| | : Dr. H V Venugopal |
| | : S Manjunath |

| | |
|---|---|
| Publisher | : Ravindranath Sirivara |
| Printed at | : Swara Print and Publication<br>#1, 3rd Cross, Shankarappa Garden,<br>Magadi Road, Bengaluru-560 023<br>Mob: 9844109706 |

## *ಜನುಮದ ಜೋಡಿಯ ನೆನಪಿನಲ್ಲಿ*

ಪ್ರಸಿದ್ಧ ಚಲನಚಿತ್ರ ನಿರ್ದೇಶಕರೂ ಗೆಳೆಯರೂ ಆದ ಶ್ರೀ ಟಿ.ಎಸ್. ನಾಗಾಭರಣ ಅವರು ಇತ್ತೀಚೆಗೆ ಫೋನ್ ಮಾಡಿ "ಜನುಮದ ಜೋಡಿ" ಚಿತ್ರಕತೆಯನ್ನು ಸಂಭಾಷಣೆ ಸಹಿತ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದ್ದೇವೆ ಮುನ್ನುಡಿ ಬರ್‍ಕೊಡಿ ಗುರುವೆ ಎಂದರು. ನಾನು ಸಂದಿಗ್ಧಕ್ಕೆ ಒಳಗಾದೆ. ಅದಕ್ಕೆ ಕಾರಣವಿತ್ತು. ನಾನು ಜನುಮದ ಜೋಡಿಯ ಚಿತ್ರಕತೆಯ ಚರ್ಚೆಯಲ್ಲಿ ಪೂರ್ಣಕಾಲ ಭಾಗಿಯಾಗಿದ್ದೆ. ಸಂಭಾಷಣೆ ಬರೆಯುವಾಗ ಚರ್ಚೆಯಲ್ಲಿ ಒಪ್ಪಿತವಾದ ಚಿತ್ರಕತೆಯ ಬಹುಪಾಲು ಅಂಶಗಳಿಗೆ ಲಿಪಿಕಾರನಾಗಿದ್ದೆ, ಹಾಡು ಬರೆದಿದ್ದೆ ಹೀಗೆ ತೊಡಗಿಸಿಕೊಂಡಿದ್ದ ನಾನು ಮುನ್ನುಡಿ ಬರೆಯುವುದು ಸರಿಯೆ ಎಂಬ ಪ್ರಶ್ನೆ ನನ್ನನ್ನು ಸಂದಿಗ್ಧಕ್ಕೆ ತಳ್ಳಿತ್ತು 'ಸ್ವಲ್ಪ ಕಾಲಾವಕಾಶ ಕೊಡಿ ಆಮೇಲೆ ಹೇಳ್ತೇನೆ' ಎಂದೆ ನಾಗಾಭರಣ ಸುಮ್ಮನಾದರು ಆದರೆ ಸ್ವಲ್ಪ ಕಾಲ ಮಾತ್ರ. ನಾನು ಕೇಳಿದ್ದು 'ಸ್ವಲ್ಪ ಕಾಲಾವಕಾಶ' ಅದಕ್ಕನುಗುಣವಾಗಿ 'ಗುರುವೇ' ಅಂತ ಪ್ರೀತಿಯ ಒತ್ತಾಯಕ್ಕೆ ಮುಂದಾದರು. ನಾನು ಸಂದಿಗ್ಧಕ್ಕೆ ಕಾರಣವಾದ ನೈತಿಕ ಪ್ರಶ್ನೆಯನ್ನು ಅವರ ಮುಂದಿಟ್ಟೆ. ಅವರಲ್ಲಿ ಪರಿಹಾರ ಸಿದ್ಧವಾಗಿತ್ತು "ನೀವು ಮುನ್ನುಡಿ ಅಂತ ಬರೀಬೇಡಿ ನಿಮಗೆ ಏನು ಅನ್ನುತ್ತೊ ಅದನ್ನ ಬರೀರಿ. ಜನುಮದ ಜೊಡಿ ಸಿನಿಮಾಕ್ಕೆ ತೊಡಿಗಿಸಿಕೊಂಡ ಅನುಭವ ಬೇಕಿದ್ರೂ ಬರೀರಿ. ಒಟ್ಟಿನಲ್ಲಿ ನಿಮ್ಮ ಬರಹ ಇರಬೇಕು ಗುರುವೆ" ಎಂದು ಸರಾಗವಾಗಿ ಹೇಳಿ ಬಿಟ್ಟರು! 'ಗುರುವೇ' ಅನ್ನುತ್ತಲೇ ನನ್ನನ್ನು ಕ್ಷಣಕಾಲ ಗಪ್‌ಚಿಪ್ ಮಾಡಿದರು, ಆದರೆ ಗುರುವೇನು ಕಡಿಮೆಯಲ್ಲ 'ಅನಾಯಾಸವಾಗಿ' ಗುರುವೇ ಅನಿಸಿಕೊಂಡವನು ಮತ್ತೆ ಕಾಲಾವಾಕಾಶ ತಗೊಂಡೆ, ನನ್ನೊಳಗೆ ನಾನೆ ಪ್ರಶ್ನೆಯಾಗಿ ಉತ್ತರ ಕಂಡುಕೊಳ್ಳುತ್ತಾ ಏನಾದ್ರು ಬರೆ-ಯೋದು ತಾನೆ ಸರಿ ಎಂದು ನಿರಾಳವಾದೆ. ಬರೀತೇನೆ ಅಂತ ನಾಗಾಭರಣ ಅವರಿಗೆ ಹೇಳಿದಾಗ ಅವರೂ ನಿರಾಳವಾದರು.

'ಜನುಮದ ಜೋಡಿ ಚಿತ್ರಕತೆಯ ಡಿ ಟಿ ಪಿ ಪ್ರತಿಯನ್ನು ಒಮ್ಮೆ ನೋಡುತ್ತಾ ಹೋದಂತೆ ನೆನಪು ಆಪ್ತವಾಗಿ ಆವರಿಸಿಕೊಳ್ಳತೊಡಗಿತು.

ಅಂದೊಂದು ದಿನ ನಾಗಾಭರಣ ನಮ್ಮ ಮನೆಗೆ ಬಂದರು. 'ಗುರುಗಳೇ ಹೇಗಿದ್ದೀರಿ?' ಎಂದು ಮಾತು ಶುರುಮಾಡಿದರು. ನಿಜ ಅವತ್ತು ಅವರು ಗುರುವೇ ಅಂದಿರಲಿಲ್ಲ, ಗುರುಗಳೇ ಅಂದಿದ್ದರು ಇಷ್ಟಕ್ಕೂ ನಾನೇನು ಅವರಿಗೆ ಪಾಠ ಮಾಡಿರಲಿಲ್ಲ. ಅವರು ಹೇಗೆ ಕರೆದರೂ ಅದು ಗೌರವ ವಾಚಕವೇ. ಹೀಗೆ ಪದಗೌರವ ಕೊಡುವುದು ನಾಗಾಭರಣ ಅವರ ಜಾಯಮಾನ. ಜಾಯಮಾನವನ್ನು ಅಭಿಮಾನವನ್ನು ಅಭಿಮಾನದಿಂದ ಸ್ವೀಕರಿಸಿದ ನಾನು ಅವರ ಮುಂದಿನ ಮಾತಿಗಾಗಿ ಕಾಯುತ್ತಾ ಇದ್ದಾಗ 'ಡಾ. ರಾಜ್‌ಕುಮಾರ್ ಅವರ ಮನೆಗೆ ನೀವು ಬರಬೇಕು ಗುರುಗಳೇ' ಎಂದರು. ಡಾ ರಾಜ್ ಕುಮಾರ್ ರವರ ಪರಿಚಯವೇನೋ ನನಗಿತ್ತು. ಆದರೂ ಔಪಚಾರಿಕ ಮಾತುಕತೆಯಲ್ಲಿ ಬೆಳೆದಿದ್ದ ಪರಿಚಯ, ನಾಗಾಭರಣ ಅವರು ಡಾ. ರಾಜ್‌ಕುಮಾರ್ ರವರ ಆಹ್ವಾನದ ವಿವರಗಳನ್ನು

ನೀಡಿದರು. ಗುಜರಾತಿ ಭಾಷೆಯಲ್ಲಿ ಸಾಹಿತ್ಯ ರಚಿಸಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಶ್ರೀ ಪನ್ನಲಾಲ್ ಪಟೇಲರ ಕಾದಂಬರಿಯು 'ಜನುಮದ ಜೋಡಿ' ಅನ್ನೊ ಹೆಸರಿನಲ್ಲಿ ಕನ್ನಡಕ್ಕೆ ಭಾಷಾಂತರಗೊಂಡಿತ್ತು. ಅದನ್ನು ನಾಗಾಭರಣ ಅವರು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ರವರ ನಿರ್ಮಾಣ ಸಂಸ್ಥೆಗಾಗಿ ಸಿನಿಮಾ ಮಾಡಲು ಸಿದ್ಧವಾಗಿದ್ದರು. ಅವರ ನಿರ್ದೇಶನದಲ್ಲಿ ತಯಾರಾಗುವ ಸಿನಿಮಾಕ್ಕೆ ಶಿವರಾಜ್ ಕುಮಾರ್ ಪ್ರಮುಖ ಪಾತ್ರದಾರಿ. ಪನ್ನಲಾಲ್ ಪಟೇಲರ ಕಾದಂಬರಿಯಲ್ಲಿ ಗುಜುರಾತಿನ ಗ್ರಾಮೀಣ ಸಂಸ್ಕೃತಿ ವಿವರಗಳು ಹಾಸು ಹೊಕ್ಕಾಗಿದ್ದವು. ಕನ್ನಡದಲ್ಲಿ ಸಿನಿಮ ಮಾಡುವಾಗು ಅಲ್ಲಿರುವ ಸಾಂಸ್ಕೃತಿಕ ವಿವರಗಳಿಗೆ ಸಮಾನವಾದ ಅಥವಾ ಸಮೀಪವಾದ ಕರ್ನಾಟಕ ಸಾಂಸ್ಕೃತಿವ ವಿವರಗಳನ್ನು ಅಳವಡಿಸಬೇಕಿತ್ತು. ಸಂಭಾಷಣೆಯು ಗ್ರಾಮೀಣ ಸೊಗಡಿನಿಂದ ಕೂಡಿರಬೇಕಿತ್ತು. ಈ ಕಾರ್ಯಕ್ಕೆ ನಾನೆ ತಕ್ಕವನೆಂದು ಡಾ. ರಾಜ್‌ಕುಮಾರ್, ನಾಗಾಭರಣ ಮತ್ತು ಡಾ. ರಾಜ್‌ಕುಮಾರ್ ಸೋದರ ವರದರಾಜ್ ತೀರ್ಮಾನಿಸಿದ್ದರು ಅವರ ಮಾತುಕತೆಯಲ್ಲಿ ನಾಗಾಭರಣ ಅವರು ನನ್ನ ಹೆಸರು ಹೇಳಿದಾಗ 'ಸರ್ವಾನುಮತ' ದಿಂದ ನಿರ್ಣಯಿಸಿದ್ದರು! ಇದಿಷ್ಟು ವಿವರಗಳನ್ನು ತಮ್ಮದೇ ಶೈಲಿಯಲ್ಲಿ ನಾಗಾಭರಣ ವಿವರಿಸಿದರು. ನಾನು ನಿಜಕ್ಕೂ ಸಂತೋಷ ಪಟ್ಟೆ, ನನ್ನ ನಿರ್ದೇಶನದ ಸಿನಿಮಾಗಳನ್ನು ಬಿಟ್ಟು ಬೇರೆ ಯಾರ ಸಿನಿಮಾಗಳಿಗೂ ಬರೆಯದೆ ಇದ್ದ ನಾನು ಸಂಭ್ರಮದಿಂದಲೇ ಡಾ ರಾಜ್ ಕುಮಾರ್ ರವರ ಮನೆಗೆ ಹೋದೆ. ಹೋಗುವಾಗ ಕಾರಿನಲ್ಲಿ ನಾಗಾಭರಣ 'ಗುರುಗಳೇ' ಎನ್ನುತ್ತಲೇ 'ನನಗೆ ಜನುಮದ ಜೋಡಿ' ಯ ಪಾಠ ಮಾಡಿದರು! ಎಷ್ಟಾದರು ನಿರ್ದೇಶಕರು! ಅವರು ಹೇಳಿದ ಕಥಾಹಂದರವನ್ನು ಶಿಷ್ಯನಂತೆ ಕೇಳಿದೆ ! ನಿಜ 'ಶಿಷ್ಯನಾಗಿ ಅಲ್ಲ' ಶಿಷ್ಯನಂತೆ. ಅದೇ ರೀತಿ ನಾನು ಅವರಿಗೆ 'ಗುರುವಾಗಿ ಅಲ್ಲ' ಗುರುವಿನಂತೆ !

ಡಾ. ರಾಜ್‌ಕುಮಾರ್‌ರವರು ಆತ್ಮೀಯರಾಗಿ ಕರೆದುಕೊಂಡು ವರದರಾಜು ವಿಷಯವನ್ನು ವಿವರಿಸಿದರು. ನಾಗಾಭರಣ 'ಹಿಡ್ಕೊಂಡು ಬಂದಿದ್ದೀನಿ ನೋಡಿ' ಅನ್ನೊ ಗೆಲುವುನಲ್ಲಿದ್ದರು. ಮಾತುಕತೆಯಾಡ್ತಾ ಎಲ್ಲರೂ ತಂತಮ್ಮ ಬಾಹ್ಯಾ ಭಾವನೆಗಳನ್ನು ಕಳಕೊಳ್ತಾ ಅಂತರಂಗದಲ್ಲಿ ಒಂದೇ ಕೇಂದ್ರಕ್ಕೆ ಬಂದೆವು. ಅದೇ 'ಜನುಮದ ಜೋಡಿ' ನಿರ್ಮಾಪಕಿ ಶ್ರೀ ಮತಿ ಪಾರ್ವತಮ್ಮ ರಾಜ್ ಕುಮಾರ್ ಅವರು ಚಿತ್ರಕತೆಯ ಚರ್ಚೆಯ ಹೊಣೆಯನ್ನು ಸೋದರ ಸಂಬಂಧದ 'ಜನುಮದ ಜೋಡಿ' ಯಾದ ಡಾ. ರಾಜ್ ಮತ್ತು ವರದಪ್ಪ ನವರಿಗೆ ಬಿಟ್ಟು ತಾವು ನೇಪಥ್ಯದಲ್ಲೇ ಇದ್ದು ಆತಿಥ್ಯ ನೋಡಿಕೊಂಡರು.

ಮಾರನೆ ದಿನದಿಂದಲೇ ಶುರುವಾಯಿತು; 'ಜನುಮದ ಜೋಡಿ' ಯ ಚಿತ್ರಕತೆಯನ್ನು ಆಕೃತಿಗೊಳಿಸುವ ಕ್ರಿಯೆ, ಅದೊಂದು ಯಾಂತ್ರಿಕ ಕ್ರಿಯೆಯಾಗಿರಲಿಲ್ಲ. ಸೃಷ್ಟಿ ಕ್ರಿಯೆಗೆ ಬೇಕಾದ ಸಂವಾದವಾಗಿತ್ತು. ನಿರ್ದೇಶಕ ನಾಗಾಭರಣ ಅವರು ಸಿದ್ಧಪಡಿಸಿದ್ದ ಏಕವಾಕ್ಯ ದೃಶ್ಯಾನು ಕ್ರಮಣಿಕೆಯನ್ನು ಬಿಡಿಬಿಡಿಯಾಗಿ ಚರ್ಚಿಸಲಾಯಿತು, ಡಾ. ರಾಜ್‌ಕುಮಾರ್ ಅವರನ್ನು ಒಳಗೊಂಡಂತೆ ಯಾರು ತಮ್ಮದೇ ಸರಿಯಂದು ವಾದಿಸಲಿಲ್ಲ. ಡಾ. ರಾಜ್ ಕುಮಾರ್‌ರವರು ತಮ್ಮ ಅಭಿಪ್ರಾಯವನ್ನು ಒಪ್ಪದಿರುವ ಅಂಶಗಳನ್ನು ಸಮಾಧಾನದಿಂದ ಕೇಳುತ್ತಿದ್ದರು. 'ನಾನು ಒಬ್ಬ ಕಲಾವಿದ' ಹೀಗಾಗಿ ಅಭಿನುಯದ ದೃಷ್ಟಿಯಿಂದಲೇ ಎಲ್ಲವನ್ನು ನೋಡಿಬಿಡಬಹುದು. ಚಿತ್ರ ಕತೆಯು ಅಭಿನಯ ಒಂದೆ ಅಲ್ಲ, ಎಲ್ಲ ಅಂಶಗಳು ಸೇರ್ಕೋಬೇಕು, ಆದ್ದರಿಂದ



ನಿಮಗೆ ಏನ್ ಅನ್ಸುತ್ತೊ ಹೇಳಿ ಎಂದು ಅವರೇ ಒತ್ತಾಯಿಸುತ್ತಿದ್ದರು, ದೃಶ್ಯವನ್ನು ಕಟ್ಟುವಲ್ಲಿ ವರದರಾಜು ಅವರ ಅಪೂರ್ವ ಸಲಹೆಗಳು ಸಹಕಾರಿಯಾಗುತ್ತಿದ್ದವು, ನಾಗಾಭರಣ ಅವರು ಚರ್ಚೆಗೆ ಬಿಟ್ಟು ಸಂವಾದವನ್ನು ಸವಿಯುತ್ತಿದ್ದರು, ನಾನು ಕೊನೆಯಲ್ಲಿ ಮಾತನಾಡ್ತಾ ಇದ್ದೆ, ರಾಜ್‌ಕುಮಾರ್‌ರವರು ಆ ದಿನಗಳಲ್ಲಿ ನನ್ನ ಬಗ್ಗೆ ಹೇಳಿದ್ದರಂತೆ. 'ಆ ಮನುಷ್ಯ ಕೊನೆವರೆಗೂ ಸುಮ್ನೆ ಕೂತಿರ್ತಾರೆ. ಕೊನೆಗೆ ಸರಿಯಾಗಿ ಒಂದು ಪಾಯಿಂಟ್ ಹಾಕ್ಬಿಡ್ತಾರೆ. ಜ್ಞಾನಿ; ತುಂಬಾ ಜ್ಞಾನಿ'.

ಒಟ್ಟಿನಲ್ಲಿ 'ಜನುಮದ ಜೋಡಿ' ಚರ್ಚೆ ಪ್ರಜಾಸತ್ತಾತ್ಮಕವಾಗಿತ್ತು. ಸ್ವತಂತ್ರ ಅಭಿಪ್ರಾಯದ ವಾತಾವರಣವಿತ್ತು. ರಾಜ್‌ಕುಮಾರ್ ಅವರಾಗಲಿ ವರದರಾಜು ಅವರಾಗಲಿ ಯಾವುದನ್ನೂ ಹೇರಲಿಲ್ಲ. ಶಿವರಾಜ್‌ಕುಮಾರ್ ಪಾತ್ರಕ್ಕಿಂತ ನಾಯಕಿಯ ಪಾತ್ರಕ್ಕೆ ಹೆಚ್ಚು ಅವಕಾಶವಿರುವ ದೃಶ್ಯಗಳು ರೂಪುಗೊಂಡಾಗಲೂ ಕಿಂಚಿತ್ತೂ ಆಕ್ಷೇಪವೆತ್ತಲಿಲ್ಲ, ಕಡಿಮೆ ಮಾಡಿಸಲಿಲ್ಲ. 'ಕತೆಗೆ ಆ ದೃಶ್ಯಗಳೆಲ್ಲಾ ಬೇಕು ಚೆನ್ನಾಗಿ ಬೆಳೆಸಿ' ಎಂದು ನಿರ್ದೇಶಕರನ್ನು ಹುರಿದುಂಬಿಸಿದರು. ಚಿತ್ರದ ಉತ್ತರಾರ್ದದಲ್ಲಿ ಶಿವರಾಜ್‌ಕುಮಾರ್ ಪಾತ್ರವು ಸುಮಾರು ಇಪ್ಪತ್ತು ಇಪ್ಪತ್ತೈದು ನಿಮಿಷಗಳವರೆಗೆ ಕಾಣೀಸುವುದೇ ಇಲ್ಲ! ಚಿತ್ರಕತೆಗೆ ಅಗತ್ಯವಾದಂತೆ ಪಾತ್ರ ಪೋಷಣೆಯಿರಲಿ ಎಂದರೇ ಹೊರತು ಒಂದೇ ಒಂದು ಸಾರಿಯೂ ತಮ್ಮ ಪುತ್ರನ ಪಾತ್ರ ಸದಾ ಪ್ರಮುಖವಾಗಿರಲಿ ಎಂದು ಹೇಳಲಿಲ್ಲ ಡಾ. ರಾಜ್‌ಕುಮಾರ್! ಇನ್ನು ನಾಗಾಭರಣ ಅವರೋ ಸ್ವಭಾವತಃ ಪ್ರಜಾಪ್ರಭುತ್ವ ಪ್ರಿಯರು. ಎಲ್ಲಾ ಕಡೆ ತಮ್ಮದೆ ನಡೆಯಬೇಕೆಂಬ ಒಣ ಪ್ರತಿಷ್ಠೆಯಿಲ್ಲ. ಪ್ರತಿಷ್ಠೆ ಮತ್ತು ಪ್ರಜಾಪ್ರಭುತ್ವ ಒಟ್ಟಾಗಿ ಇರುವುದಿಲ್ಲ!

ನಿರ್ದೇಶಕ ನಾಗಾಭರಣ ಅವರಿಗೆ ಯಾರಿಂದ ಯಾವ ಕೆಲಸವನ್ನು ಹೇಗೆ ಮಾಡಿಸಬೇಕೇಕು ಅಂತ ಗೊತ್ತು. ಸಿನಿಮಾದ ಪ್ರತಿ ವಿಭಾಗದವರಿಂದಲೂ ಪ್ರಜಾಸತ್ತಾತ್ಮಕ ರೂಪದಲ್ಲೇ ಕೆಲಸ ತೆಗೆಯುವ 'ಆದರ್ಶ ಮಾದರಿ' ಯನ್ನು ಅನುಸರಿಸುವ ನಾಗಾಭರಣ ಚಿತ್ರಕತೆಯ ಒಟ್ಟು ಚರ್ಚೆಯಲ್ಲಿ ಸ್ವೀಕರಣ ಮನೋಭಾವದಲ್ಲಿ ಇದ್ದದ್ದು ಹೆಚ್ಚು. ಜೊತೆಗೆ ಇಡೀ ಚರ್ಚೆಯನ್ನು ಧ್ವನಿ ಮುದ್ರಿಸಿಕೊಂಡಿದ್ದು ಮತ್ತೆ ಮತ್ತೆ ಕೇಳುವ ಸೌಲಭ್ಯವನ್ನೂ ತಾವಾಗಿಯೇ ಒದಗಿಸಿಕೊಂಡಿದ್ದರು. ಒಟ್ಟಾರೆ ನಮ್ಮ ನಾಲ್ವರಲ್ಲಿದ್ದ ಪೂರ್ವಾಗ್ರಹ ರಹಿತ ಪ್ರಜಾಸತ್ತಾತ್ಮಕ ಚರ್ಚೆಯು ನನ್ನ ನೆನಪಿನಲ್ಲಿ ಸದಾ ಉಳಿದಿದೆ. ಈ ಪ್ರಜಾಸತ್ತಾತ್ಮಕ ಚರ್ಚೆಯ ಮನೋಧರ್ಮವು 'ಜನುಮದ ಜೋಡಿ' ಯ ಯಶಸ್ಸಿಗೆ ಮೂಲಾಧಾರವಾಯಿತೆಂಬ ನನ್ನ ಖಚಿತ ತಿಳುವಳಿಕೆಯಾಗಿದೆ. ನಾವು ನಾಲ್ವರ ಮನಸ್ಸಿನಲ್ಲಿ ಇದ್ದದ್ದು ಸಂವಹನಶೀಲವಾದ, ಸೃಜನಾತ್ಮಕವಾದ ಜನಪ್ರೀತಿಯ ಒಂದು ಕಲಾಕೃತಿಯನ್ನು ಕಟ್ಟಿಕೊಡುವ ಕಾಳಜಿ. ನಾಗಾಭರಣ ಅವರು ಕೊಟ್ಟ ಚಿತ್ರಕತೆಯ ಪ್ರತಿಯನ್ನು ಓದುತ್ತಾ ಓದಂತೆ ಪ್ರತಿ ದೃಶ್ಯದ ಚರ್ಚೆ ದೃಶ್ಯಾತ್ಮಕವಾಗಿ ಮರುಕಳಿಸಿದಂತಾಗುತ್ತದೆ. ಒಂದು ಅಭಿಪ್ರಾಯವನ್ನು ಹೇಳಿ ನಮ್ಮಿಬ್ಬರ ಮಾತಿಗೆ ಅನುವು ಮಾಡಿಕೊಟ್ಟು ಮೌನವಾಗಿ ಕೇಳಿಸಿಕೊಳ್ಳುತ್ತಿದ್ದ 'ಅಪೂರ್ವ ಸೋದರರ' (ಡಾ. ರಾಜ್ ಮತ್ತು ವರದಪ್ಪ) ಆಕೃತಿಗಳು ಕಾಡುತ್ತವೆ. ಆಗ ಓದುವುದನ್ನ ನಿಲ್ಲಿಸಿ ಮೌನವಾಗುತ್ತೇನೆ. ಎಷ್ಟೋ ಹೊತ್ತಾದ ಮೇಲೆ ಮತ್ತೆ ತೆರೆಯುತ್ತೇನೆ. ಆಗ ಮತ್ತೆ ನೆನಪು ತೆರೆದುಕೊಳ್ಳುತ್ತದೆ.

ಚರ್ಚೆಯ ಸಂದರ್ಭದಲ್ಲಿ ತೆಪ್ಪದ ಸ್ಪರ್ದೆ, ಕೊಂತಮ್ಮನ ಹಬ್ಬ, ವಿಷಸೇವನೆಗಾಗಿ ದತ್ತೂರಿ ಗಿಡದ ಬೀಜ ಬಳಸುವುದು– ಇಂಥ ಕೆಲವು ಸಂಗತಿಗಳನ್ನ ನಾನು ಹೇಳಿದಾಗ ಪ್ರತಿ ವಿವರವನ್ನು ಕೇಳಿ ತಿಳಿದುಕೊಂಡು ಅಳವಡಿಸಲು ಒಪ್ಪಿದ್ದು ನನ್ನ ನೆನಪಿನ ಭಾಗವಾಗಿದೆ. ನಾಗಾಭರಣರ ಉದಾರತೆ ಎಷ್ಟರಮಟ್ಟಿಗಿತ್ತು ಎಂದರೆ 'ಗುರುಗಳೇ' ಏನಾದ್ರು ಹೇಳಿ ಎಂದು ಹುರಿದುಂಬಿಸಿ ನನ್ನ ವ್ಯಾಪ್ತಿಯ ಗೆರೆಗಳನ್ನು ಹಿಗ್ಗಿಸಿಬಿಟ್ಟಿದ್ದರು. ನಾವು ಚರ್ಚಿಸುತ್ತಾ ಹೋದಂತೆ, ಡಾ ರಾಜ್ ಮತ್ತು ವರದಪ್ಪನವರ ಕೊಡುಗೆ ಸೇರುತ್ತಾ ಹೋದಂತೆ ಮೂಲ ಸಾಹಿತ್ಯ ಕೃತಿಯ ಅನೇಕ ಸನ್ನಿವೇಶಗಳು ಹೊಸ ರೂಪ ಪಡೆದವು. ಕೆಲವು ಇಲ್ಲವಾದವು; ಕೆಲವು ಹೊಸ ಸನ್ನಿವೇಶಗಳು ಸೇರಿಕೊಂಡವು. ಇದರ ಫಲವಾಗಿ ಮೂಲ ಕಾದಂಬರಿಯು ಸಿನಿಮಾಕ್ಕೆ 'ಪುನರ್‌ಸೃಷ್ಟಿ'ಯಾಯಿತು! ಕೇವಲ ರೂಪಾಂತರವಾಗಲಿಲ್ಲ. ಒಂದು ವೇಳೆ ಮೂಲ ಲೇಖಕರಾದ ಪನ್ನಲಾಲ್ ಪಟೇಲರಿಗೆ ಇದು ತಿಳಿಯುವಂತಿದ್ದರೆ ಏನನ್ನುತ್ತಿದ್ದರೋ ಗೊತ್ತಿಲ್ಲ!

ಈ ಮಾತು ಹೇಳುವಾಗ ಕನ್ನಡ ಚಿತ್ರರಂಗದಲ್ಲಿ ಎದ್ದಿದ್ದ ಒಂದೆರಡು ವಿವಾದಗಳ ನೆನಪು ಬರುತ್ತದೆ.. ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಯಶಸ್ವಿ ಚಿತ್ರ 'ನಾಗರಹಾವು' ಬಗ್ಗೆ ಮೂಲ ಕಾದಂಬರಿ ಕರ್ತೃ ತ.ರಾ.ಸು ಅವರು 'ಇದು ನಾಗರಹಾವಲ್ಲ ಕೇರೇ ಹಾವು' ಎಂದು ಟೀಕಿಸಿದ್ದುಂಟು. ತಮ್ಮ ಕಾದಂಬರಿಯ ಸನ್ನಿವೇಶಗಳನ್ನು ತುಂಬಾ ಬದಲಾಯಿಸಲಾಗಿದೆ. ಎಂಬುದು ಅವರ ಆಕ್ಷೇಪವಾಗಿತ್ತು. ಕಾದಂಬರಿಗಾರ್ತಿ ಎಂ.ಕೆ. ಇಂದಿರಾ ಅವರ 'ಗೆಜ್ಜೆ ಪೂಜೆ' ಯನ್ನು ಅದೇ ಹೆಸರಿನಲ್ಲಿ ಸಿನಿಮಾ ಮಾಡಿದ (ನಿರ್ದೇಶಿಸಿದ) ಪುಟ್ಟಣ್ಣ ಕಣಗಾಲ್ ಅವರಿಗೆ 'ಚಿತ್ರಕತೆ' ಗಾಗಿ ಪ್ರಶಸ್ತಿ ಬಂದಾಗ ಲೇಖಕಿ ಆ ಪ್ರಶಸ್ತಿಯು ಕಾದಂಬರಿ ಬರೆದ ತನಗೆ ಬರಬೇಕಾಗಿತ್ತೆಂದು ಹೇಳಿಕೆ ಕೊಟ್ಟರು. ಪುಟ್ಟಣ್ಣ ಕಣಗಾಲ್ ಅವರು ನಿರ್ದೇಶಿಸಿದ 'ಶುಭಮಂಗಳ' ಚಿತ್ರದ ಮೂಲ ಕಾದಂಬರಿ ಲೇಖಕಿ 'ತುಂಬಾ ಬದಲಾಯಿಸಿಕೊಂಡಿರುವ' ಬಗ್ಗೆ ಪ್ರತಿಕ್ರಿಯಿಸಿದಾಗ ಪುಟ್ಟಣ್ಣನವರು 'ನಾನು ಕಾದಂಬರಿಯ ಒಂದು ಹಾಳೆ ಬಳಸಿಕೊಂಡಿದ್ದೇನೆ ಅಷ್ಟೆ' ಎಂದು ಬಿರುನುಡಿಯಲ್ಲಿ ಉತ್ತರಿಸಿದರು. ಇಂಥ ವಿವಾದಗಳನ್ನು ನೋಡಿದಾಗ ಜಾನ್ ಬೂರ್‌ಮನ್ ಎಂಬ ನಿರ್ದೇಶಕ ಹೇಳಿದ ಮಾತು ನೆನಪಿಗೆ ಬರುತ್ತದೆ. 'I just want to use writers, I just want to squeeze them, exploit them, exploit their ideas and discard them' – ಜಾನ್ ಬೂರ್‌ಮನ್ ಹೀಗೆ ಹೇಳಿದರೆ ಲೇಖಕಿ ವರ್ಜೀನಿಯಾ ವುಲ್ಫ್ ಪ್ರಕಾರ 'ಸಿನಿಮಾ ಮತ್ತು ಸಾಹಿತ್ಯಗಳ ನಡುವಿನ ಒಪ್ಪಂದವು ಎರಡು ಮಾಧ್ಯಮಗಳಿಗೆ ಅಸ್ವಭಾವಿಕವಾದದ್ದು ಮತ್ತು ಆಪತ್ಕಾರವಾದದ್ದು. ಎರಡು ಮಾಧ್ಯಮಗಳ ಸಂಬಂಧದಿಂದ ಪುಸ್ತಕಗಳು ನತದೃಷ್ಟ ಬಲಿಯಾದರೆ ಚಲನಚಿತ್ರಗಳು ಪರಾವಲಂಬಿಯಾಗುತ್ತದೆ'

ಆದರೆ ಈ ಎರಡು ಅಭಿಪ್ರಾಯಗಳಿಗೆ ಹೊರತು ಎಂಬಂತೆ ಸಾಹಿತ್ಯ ಮತ್ತು ಸಿನಿಮಾದ ಸಂಬಂಧ ಬೆಳೆಯುತ್ತ ಬಂದಿದೆ. ಹಾಗೆ ನೋಡಿದರೆ ಹಾಲಿವುಡ್ ಸಹ ಆರಂಭದ ದಿನಗಳಲ್ಲಿ ಮೌಖಿಕ ಪರಂಪರೆಯ ಸಾಹಿತ್ಯವನ್ನು ಬಳಸಿಕೊಂಡಿದೆ. ಕನ್ನಡ ಸಿನಿಮಾವು ಆರಂಭದಲ್ಲಿ ಇದೇ ದಾರಿಯನ್ನು ಹಿಡಿದು ಬೆಳೆದು ಬಂದಿದೆ. ಪುರಾಣ ಕತೆಗಳನ್ನು ಜನಪದ ಕತೆಗಳನ್ನು ಸಿನಿಮಾಂತರಗೊಳಿಸಿ ಯಶಸ್ವಿಯಾಗಿದೆ. ಸಾಹಿತ್ಯ ಮತ್ತು ಸಿನಿಮಾ ಕಲೆಗಳು



ಪರಸ್ಪರ ವಿರುದ್ಧವಾಗಬೇಕಾಗಿಲ್ಲ. ಒಂದಕ್ಕೊಂದು ಪೂರಕವಾಗುತ್ತ ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಿದೆ. Joy Gould Boyum ಎಂಬ ಪುಸ್ತಕದಲ್ಲಿ ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯ; ಆತ ಹೀಗೆ ಹೇಳಿದ್ದಾನೆ. "...the art with which film (or atleast narrative film) clearly shares most from its use of plot, characters, setting, dialogue and imagery through its manner of expressing theme to its tendency to manipulate space and time is LITERATURE"

ಕನ್ನಡ ಸಿನಿಮಾ ಆರಂಭದಿಂದಲೂ ಮೌಖಿಕ ಸಾಹಿತ್ಯ ಪರಂಪರೆ ಮತ್ತು ರಂಗಭೂಮಿಯ ಸಂಬಂಧವನ್ನು ಬೆಸೆದುಕೊಂಡು ಬೆಳೆದು ಬಂದಿದೆ. ಆದರೆ ಅಧಿಕೃತವಾಗಿ ಲಿಖಿತ ಸಾಹಿತ್ಯ ಕೃತಿಯನ್ನು ಆಧರಿಸಿದ ಕನ್ನಡ ಚಿತ್ರ ತಯಾರಾದದ್ದು 1962 ರಲ್ಲಿ. ಜನಪ್ರಿಯ ಕಾದಂಬರಿಕಾರ ಶ್ರೀ ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ' ಕಾದಂಬರಿಯನ್ನು ಆಧರಿಸಿ 'ಕರುಣೆಯೇ ಕುಟುಂಬದ ಕಣ್ಣು' ಎಂಬ ಕನ್ನಡ ಚಿತ್ರವನ್ನು 1962 ರಲ್ಲಿ ನಿರ್ಮಿಸಲಾಯಿತು. ಆನಂತರ ಲಿಖಿತ ಸಾಹಿತ್ಯ ಕೃತಿಯನ್ನಾಧರಿಸಿದ ಅನೇಕ ಸಿನಿಮಾ ಕೃತಿಗಳು ಕನ್ನಡದಲ್ಲಿ ಬಂದಿವೆ. ಅನೇಕವು ಸಾಹಿತ್ಯ ಕೃತಿಯ ರೂಪಾಂತರಗಳು. ಕೆಲವು ಪುನರ್ ಸೃಷ್ಟಿಗಳು.

ನಾನು ಮೊದಲೇ ಹೇಳಿದಂತೆ 'ಜನುಮದ ಜೋಡಿ'ಯು ಒಂದು ಪುನರ್‌ಸೃಷ್ಟಿಯೆಂದೇ ನನ್ನ ತಿಳುವಳಿಕೆ. ನಿರ್ದೇಶಕ ನಾಗಾಭರಣ ಸಿನಿಮಾಕ್ಕೆ ಸಂಬಂಧಿಸಿದ ಎಲ್ಲಾ ಪ್ರಕಾರಗಳನ್ನೂ ಕೇಂದ್ರ ಪ್ರಜ್ಞೆಗೆ ತಕ್ಕಂತೆ ಎರಕ ಹೊಯ್ದು ಒಂದು ಉತ್ತಮ ಸಿನಿಮಾ ಕೃತಿಯನ್ನು ಕೊಟ್ಟಿದ್ದಾರೆ. 'ಜನುಮದ ಜೋಡಿ' ಬಿಡುಗಡೆಯಾದಾಗ ನಾಗಾಭರಣ ನಿರ್ದೇಶನ, ವಿ. ಮನೋಹರ್ ಅವರ ಸಂಗೀತ ಮತ್ತು ನನ್ನ ಸಂಭಾಷಣೆಗೆ ಸಾಕಷ್ಟು ಮೆಚ್ಚುಗೆ ವ್ಯಕ್ತವಾಯಿತು. 'ಸುಧಾ' ವಾರ ಪತ್ರಿಕೆಯು ಮುಖಪುಟ ಲೇಖನವನ್ನು ಪ್ರಕಟಿಸಿ 'ಜನುಮದ ಜೋಡಿ' ಯ ಯಶಸ್ಸಿಗೆ ನಾಗಾಭರಣ, ಮನೋಹರ್ ಮತ್ತು ನಾನು ಕಾರಣ ಕರ್ತರೆಂದು ದಾಖಲಿಸಿತು. ನನಗಂತೂ 'ಜನುಮದ ಜೋಡಿ' ಒಂದು ಹೊಸ ಅನುಭವ ಕೊಟ್ಟಿತ್ತು. ವಿಶೇಷವಾಗಿ ಡಾ ರಾಜ್‌ಕುಮಾರ್ ಅವರ ಸಾಮೀಪ್ಯದಲ್ಲಿ ಸಂವೇದನಾಶೀಲತೆಯಿತ್ತು. ಪ್ರಜಾಸತ್ತಾತ್ಮಕತೆಯೂ ಇತ್ತು. ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ನಾಯಕ ಮತ್ತು ನಾಯಕಿ ಎತ್ತಿನ ಬಂಡಿಯಲ್ಲಿ ಕೂತು ಪ್ರಯಾಣಿಸುವ ದೃಶ್ಯಕ್ಕೆ ನಾನು ಒಗಟಿನ ರೂಪದ ಸಂಭಾಷಣೆಯನ್ನು ಬರೆದಿದ್ದೆ. ಅದನ್ನು ಓದಿದ ಸಂಗೀತ ನಿರ್ದೇಶಕ ಮನೋಹರ್ ಅವರು 'ಈ ಸಂಭಾಷಣೆಯನ್ನೇ ಹಾಡಾಗಿ ಮಾಡಬಹುದು' ಎಂದು ಸಲಹೆ ಕೊಟ್ಟರು. ಡಾ ರಾಜ್‌ಕುಮಾರ್ ಮತ್ತು ವರದಪ್ಪನವರು 'ಪ್ರಯತ್ನಿಸಿ ನೋಡೇ ಬಿಡೋಣ' ಎಂದು ಹುರಿದುಂಬಿಸಿದರು. ನಿರ್ದೇಶಕ ನಾಗಾಭರಣ ಸಮ್ಮತಿಸಿದರು. ಮನೋಹರ್ ನನ್ನ ಸಂಭಾಷಣೆಯನ್ನೇ ಹಾಡಿ ತೋರಿಸಿದರು. ಎಲ್ಲರೂ ಸೈ ಎಂದರು. ಕೆಲವೇ ಕೆಲವು ಪದಗಳ ಬದಲಾವಣೆಯೊಂದಿಗೆ ನನ್ನ ಸಂಭಾಷಣೆ ಹಾಡಾಗಿ ಬಿಟ್ಟಿತು. ಅದೇ 'ಮಣಿ ಮಣಿ' ಹಾಡು. ಚಿತ್ರ ಬಿಡುಗಡೆಯಾದಾಗ ಈ ಹಾಡು ಜನಪ್ರಿಯವೂ ಆಯಿತು. 'ಜನುಮದ ಜೋಡಿ' ಚರ್ಚೆಯ ಸಂದರ್ಭದಲ್ಲಿದ್ದ ಉತ್ತಮ ವಾತಾವರಣಕ್ಕೆ ಇದೊಂದು ಉದಾಹರಣೆ.

'ಜನುಮದ ಜೋಡಿ' ಕನ್ನಡ ಚಿತ್ರರಂಗ ಕಂಡ ಒಂದು ಉತ್ತಮ ಪ್ರಯೋಗ. ವ್ಯಾಪಾರಿ ದೃಷ್ಟಿಯ 'ಮಸಾಲೆ ' ಗಳಿಂದ ಮಲಿನಗೊಳ್ಳದೆ 'ಕಲಾತ್ಮಕ' ದೃಷ್ಟಿಯ 'ಬಿಗಿಮುಖ' ವಿಲ್ಲದೆ ಏಕಕಾಲಕ್ಕೆ ಜನಪರವೂ ಜನಪ್ರಿಯವೂ ಆಗುವ ಆಕೃತಿಯನ್ನು ಪಡೆದದ್ದು ಒಂದು ಉತ್ತಮ ಪ್ರಯೋಗವಲ್ಲದೆ ಮತ್ತೇನು? ಗಂಭೀರ ವಸ್ತುವೊಂದು ತೀರಾ ತೆಳುವಾಗದೆ ಜನಕ್ಕೆ ತಲಪುವಂತೆ ಮಾಡಿದ ಮೊದಲ ಕೀರ್ತಿ ನಿರ್ದೇಶಕ ನಾಗಾಭರಣ ಅವರಿಗೆ ಸಲ್ಲಬೇಕು. ಚಿತ್ರತಂಡ ಮತ್ತು ಸ್ವಾತಂತ್ರ್ಯ ನೀಡಿದ ನಿರ್ಮಾಪಕರಿಗೂ ಸಲ್ಲಬೇಕು.

ಈಗ 'ಜನುಮದ ಜೋಡಿ' ಸಂಭಾಷಣೆ ಸಹಿತ ಚಿತ್ರಕತೆಯನ್ನು ಪ್ರಕಟಿಸಿ ಅಭ್ಯಾಸಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಮುಖ್ಯ ದೃಶ್ಯಗಳ ಅಡಿಯಲ್ಲಿ ಕೊಟ್ಟಿರುವ 'ನಿರ್ದೇಶಕರ ಟಿಪ್ಪಣಿ' ಉಪಯುಕ್ತವಾಗಿದೆ. ಈ ಪುಸ್ತಕದ ಮೂಲಕ ಮತ್ತೆ ನನ್ನನ್ನು ನಾನು ನೋಡಿಕೊಳ್ಳಲು ಮತ್ತು ನೆನಪುಗಳು ಬಿಚ್ಚಿಕೊಳ್ಳಲು ಕಾರಣರಾದ ಶ್ರೀ ನಾಗಾಭರಣ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತಾ, ಈ ಪುಸ್ತಕದ ಸಿನಿಮಾಭ್ಯಾಸಿಗಳಿಗೆ ಪೂರಕ-ವಾಗುತ್ತದೆಯಂದು ನಂಬುತ್ತ ಆಶಿಸುತ್ತ ಶುಭ ಕೋರುತ್ತೇನೆ.

*– ಡಾ. ಬರಗೂರು ರಾಮಚಂದ್ರಪ್ಪ*



## *ಜನುಮದ ಜೋಡಿಯ ಮೋಡಿಯಲ್ಲಿ...*

1982 ರಿಂದ 1995ರ ವರೆಗೆ "ಜನುಮದ ಜೋಡಿ" ಚಿತ್ರೀಕರಣದ ಹಕ್ಕನ್ನ ಕಾಯ್ದಿರಿಸಿಕೊಂಡು ಬಂದಿದ್ದರ ಭದ್ಧತೆಯೇ ಈ ಕಥೆ ನನ್ನನ್ನು ಕಾಡಿಸಿದ್ದಕ್ಕೆ ಸಾಕ್ಷಿಯಾಗಿದೆ. ಚಲನಚಿತ್ರೋದ್ಯಮದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಭಾವ ಎಷ್ಟಾಗುತ್ತದೆ ಮತ್ತದು ಸಾಮಾಜಿಕ ಸ್ವಾಸ್ಥ್ಯವನ್ನು ಹೇಗೆ ರೂಪಿಸುತ್ತದೆ ಎನ್ನುವುದಕ್ಕೆ ಹಿಡಿದ ಕೈಗನ್ನಡಿ, ಜನುಮದ ಜೋಡಿ

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಪ್ರಥಮ ಅಧ್ಯಕ್ಷನಾಗಿ ಅಕಾಡೆಮಿಯ ರೂಪುರೇಷೆಗಳನ್ನ ನಿರ್ಧರಿಸುತ್ತಿದ್ದಾಗ ಸಿನಿಮಾ ಶೈಕ್ಷಣಿಕವಾಗಿ ಬೆಳೆಯಲು ಬೆಳೆಸಲು ಬೇಕಾದ ಆಕರಗಳನ್ನ ಗಮನಿಸಿ ಅವುಗಳನ್ನು ನೀಗಿಸುವ ನಿಟ್ಟಿನಲ್ಲಿ ಹಲವು ಯೋಚನೆಗಳನ್ನು, ಯೋಜನೆಗಳನ್ನು ಕೈಗೆತ್ತಿಕೊಂಡೆ. ಅವುಗಳಲ್ಲಿ ಒಂದು 'ಚಿತ್ರಕಥಾ ಪಠ್ಯಗಳ ಮುದ್ರಣ', "ಚಲನಚಿತ್ರದಲ್ಲಿ ಶಿಕ್ಷಣ, ಶಿಕ್ಷಣದಲ್ಲಿ ಚಲನಚಿತ್ರ" ಎಂಬ ಘೋಷವಾಕ್ಯದೊಂದಿಗೆ ಪ್ರಾರಂಭವಾದ ಅಕಾಡೆಮಿಯ ಆಶಯ ಹಾಗೆಯೇ ಮುಂದುವರೆಯಲಿ ಎಂದು ಆಶಿಸುತ್ತಾ ನನ್ನ ಚಲನಚಿತ್ರಯಾನದಲ್ಲಿ ನಾನು ಮತ್ತು ನನ್ನ ಪ್ರೇಕ್ಷಕರು ಗುರುತಿಸಿದ ಕೆಲವು ಪ್ರಯೋಗಗಳ ಚಿತ್ರಕಥೆಯನ್ನು ಓದುಗರ ಹಾಗು ಸಿನಿಮಾಸಕ್ತರ ಉಪಯೋಗಕ್ಕಾಗಿ ಪ್ರಕಟಿಸಲು ಹರ್ಷಿಸುತ್ತೇನೆ.

ಸಿನಿಮಾ ಮತ್ತು ಇನ್ನುಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಿಯೇ ಚಿತ್ರಕಥೆಗಳ ಓದಿನ ಒಳಗೆ ವಿಹರಿಸಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಸಾಹಿತ್ಯ ಕೃತಿಗಳ ಅಮೂರ್ತ ಅನುಭವವನ್ನು ಚಲನಚಿತ್ರಗಳು ಮೂರ್ತ ಅನುಭವಗಳಾಗಿ ಪರಿವರ್ತಿಸುವುದರಿಂದ ಮತ್ತು ಓದುಗರ ಮುಖಾಮುಖಿಯಾಗುವ ಸಾಧ್ಯತೆಯಿರುತ್ತದೆ. ಈ ಕಾರಣದಿಂದಾಗಿಯೇ ಚಿತ್ರಕಥಾ ಸಾಹಿತ್ಯವು ತನ್ನದೇ ಆದ ಸಾಹಿತ್ಯಿಕ ಆಯಾಮವೊಂದನ್ನು ಸೃಷ್ಟಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಕನ್ನಡದ ಮಟ್ಟಿಗೆ ಕೆಲವೇ ಚಿತ್ರಕಥಾ ಸಾಹಿತ್ಯ ಕೃತಿಗಳು ಪ್ರಕಟವಾಗಿರುವುದರಿಂದ ಅವುಗಳ ಶೈಲಿ, ವ್ಯಾಕರಣ, ಬಂಧ, ಓಘ ಇವುಗಳ ನಿರ್ದಿಷ್ಟ ಸ್ವರೂಪ ಪಕ್ವವಾಗಿಲ್ಲ. ಈ ದಿಸೆಯಲ್ಲಿಟ್ಟ ಹೆಜ್ಜೆಗಳಲ್ಲಿ ನನ್ನದೂ ಒಂದು ಪ್ರಾಯೋಗಿಕ ಹೆಜ್ಜೆ ಎಂಬುದರ ಅರಿವಿನೊಡನೆ ಈ ಚಿತ್ರಕಥೆಯನ್ನು ನಿಮ್ಮ ಕೈಯಲ್ಲಿ ಇರಿಸುತ್ತಿದ್ದೇನೆ.

ಚಲನಚಿತ್ರ ರಂಗನಾಟಕದ ಪರಿಷ್ಕೃತ ರೂಪವೇ ಎಂಬುದು ಒಂದು ಪ್ರಶ್ನೆ. ಒಂದು ರೀತಿಯಲ್ಲಿ ಹೌದು ಎಂದಾದರೆ ಇನ್ನೊಂದು ರೀತಿಯಲ್ಲಿ ಅದರ ವಿಸ್ತೃತ ರೂಪ ಎಂದೇ ಹೇಳಬಹುದು. ಚಲನಚಿತ್ರ ಪ್ರಾರಂಭವಾದದ್ದೇ ರಂಗರೂಪಗಳನ್ನು ದೃಶ್ಯ ರೂಪಗಳನ್ನಾಗಿ ಮಾರ್ಪಡಿಸುತ್ತ. ಹೀಗಾಗಿ ಅದರ ಛಾಪು ಈಗಲೂ ಇದೆ. ನಾಟಕಗಳನ್ನು ಓದುವ ಮತ್ತು ಅವುಗಳನ್ನು ನಂತರ ರಂಗರೂಪಕ್ಕೆ ತರುವ ವಿಧಾನಗಳನ್ನು ನಾವು ಗಮನಿಸಿದಾಗ

ಅದೇ ಶೈಲಿಯಲ್ಲಿ ಚಲನಚಿತ್ರದ ಚಿತ್ರಕಥೆ ಹಾಗು ಸಿನಿಮಾ ದೃಶ್ಯ ರೂಪ ನಮ್ಮ ಕಣ್ಣಮುಂದೆ ಬರುತ್ತದೆ. ಚಲನಚಿತ್ರಕ್ಕೆ ಪೂರಕವಾದ ಶ್ರವ್ಯ ಸಾಮಾಗ್ರಿ ಮತ್ತು ದೃಶ್ಯ ಸಾಮಾಗ್ರಿ ಇವೆರಡನ್ನೂ ಬೇರೆ ಬೇರೆಯಾಗಿ ವಿಭಜಿಸಲೂಬಹುದು. ಒಟ್ಟಾರೆಯಾಗಿ ಹೇಳುತ್ತಲೂ ಹೋಗಬಹುದು. ಚಿತ್ರಕಥೆ ಸಂಭಾಷಣೆ ಹಾಗು ಅಲ್ಲಿ ನಡೆಯುವ ಕ್ರಿಯೆಗಳ ಸಮೀಕರಣವನ್ನು ನಾವು ಕಾಣಬಹುದು ಆದರೆ ಚಿತ್ರಿಕೆಗಳು ಕಣ್ಣಮುಂದೆ ಮೂಡುವುದಿಲ್ಲ ಹೀಗಾಗಿ ಚಿತ್ರಕಥಾ ಸೃಷ್ಟಿಯೊಂದನ್ನು ಓದುವ ಕ್ರಮವನ್ನು ಅಥವಾ ಓದುವ ಇತಿಮಿತಿಗಳನ್ನು ಅರ್ಥಮಾಡಿಕೊಂಡೆ ಚಲನಚಿತ್ರ ಕಥಾ–ಸಾಹಿತ್ಯವನ್ನು ನಾವು ಸ್ವೀಕರಿಸಬೇಕಾಗುತ್ತದೆ. ಪಾತ್ರಗಳಲ್ಲಿರುವ ಪಾತ್ರಪೋಷಣೆಗಳನ್ನು ನವಿರಾದ ಭಾವಗಳನ್ನು ತೀವ್ರ ಸಂವೇದನೆಗಳನ್ನು ಚಿತ್ರಕಥೆ ಓದುವವನ ಪರಿಭಾವಕ್ಕೆ ಮತ್ತು ಆತನ ಕಲ್ಪನೆಗೆ ಬಿಡುತ್ತ ಹೋಗುತ್ತದೆ. ಅದಕ್ಕೆ ಬೇಕಾದ ಸೂಕ್ಷ್ಮಗಳನ್ನು ಸದೃಡೀಕರಿಸುತ್ತ ಹೋಗುತ್ತದೆ. ಆದರೆ ನಿಜವಾಗಿಯೂ ಬಿಂಬ–ಭಾವದಲ್ಲಿ ಮೂಡುವುದು ಏನು ಎಂಬುದು ತಕ್ಷಣವೇ ಹೊಳೆಯದಿರಬಹುದು ಆದರೆ ಅದು ಹೀಗಿರಬಹುದು ಎಂಬ ವ್ಯಾಖ್ಯೆಯನ್ನು ಅದು ಕೊಡುತ್ತದೆ.

ಚಿತ್ರಕಥಾ ಲೇಖನ ಒಂದು ಕ್ರಿಯಾಶೀಲ ನಿರ್ಮಿತಿಯಾಗಿರುವುದರಿಂದ ಕಥಾಹಂದರ ಹೇಗಿತ್ತು ಅದರ ನಂತರ ಹೇಗಾಯಿತು ಎಂಬುದರ ಬಗ್ಗೆ ಕೂಡ ಚರ್ಚೆಯನ್ನು ಏರ್ಪಡಿಸಬಲ್ಲದು. ಕಥೆಯ ಹಂತದಲ್ಲಿದ್ದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಇಲ್ಲದಿರಬಹುದು ಹಾಗೆಯೇ ಕಥೆಯಲ್ಲಿ ಇಲ್ಲದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಸೇರಬಹುದು ಈ ದೃಷ್ಟಿಯಲ್ಲಿಯೂ ಕೂಡ ಸೃಜನಶೀಲ, ಕ್ರಿಯಾಶೀಲ ನಿರ್ಮಿತಿಗಿರುವಂತಹ ಎಲ್ಲ ಸಾಧ್ಯತೆಗಳನ್ನು ಚಿತ್ರಕಥಾ ಸಾಹಿತ್ಯ ತನ್ನದಾಗಿಸಿಕೊಳ್ಳುತ್ತದೆ. ಕೆಲವೊಮ್ಮೆ ಚಿತ್ರಕಥೆಯೇ ಇಲ್ಲದೆ ಚಿತ್ರೀಕರಣ ಮಾಡುವುದು ಕೆಲವರಿಗೆ ಸಾಧ್ಯವಾಬಹುದೋ ಏನೋ, ಆದರೆ ಅದು ಒಂದು ರೀತಿ ಹಬ್ಬದ ಊಟವನ್ನು ನೆಲದ ಮೇಲೆ ಹಾಕಿಕೊಂಡು ತಿಂದಂತೆಯೇ ಚಿತ್ರಕಥೆಯಲ್ಲಿ ಎಷ್ಟು ಸಮರ್ಥವಾಗಿ ಚಿತ್ರಿಕೆಗಳು ಮೂಡುತ್ತವೆಯೋ ಆಗಲೆ ಚಲನಚಿತ್ರ ತನ್ನ ಗುರಿಯನ್ನು ಮುಟ್ಟುತ್ತದೆ. ಹೀಗಾಗಿ ನಿರ್ದೇಶಕ, ಸಂಕಲನಕಾರ, ಛಾಯಾಗ್ರಾಹಕ ಈ ಮೂವರು ಮುಖ್ಯರ ಜೊತೆಜೊತೆಯಲ್ಲಿಯೇ ನಟ–ನಟಿಯರ ಒಂದು ಸಾಂಘಿ–ಕ ಕ್ರಿಯೆ ಚಿತ್ರಕಥಾ ಸಾಹಿತ್ಯವನ್ನು ಚಲನಚಿತ್ರವನ್ನಾಗಿ ಮಾರ್ಪಡಿಸುತ್ತದೆ ಆದ್ದರಿಂದ ಚಿತ್ರಕಥೆಯ ಹಂತದಲ್ಲಿಯೇ ಎಲ್ಲರಿಗೂ ಅದರ ದರ್ಶನಭಾಗ್ಯ ಸಾಧ್ಯವಾಗುವುದು ಬಹಳ ಮುಖ್ಯವೆನಿಸುತ್ತದೆ. ಆ ದೂರದರ್ಶನದ ಜೊತೆಜೊತೆಯಲ್ಲಿಯೇ ಎಲ್ಲರು ಒಮ್ಮುಖವಾಗಿ ಕೆಲಸಮಾಡುವುದು ಬಹಳ ಮುಖ್ಯ ಕೂಡ. ಚಲನಚಿತ್ರಕ್ಕೆ ಕಥೆ ಬೀಜವಾದರೆ ಚಿತ್ರಕಥೆ ಅಂಕುರ. ಇನ್ನುಳಿದ ಸಾಧನ ಸಲಕರಣೆಗಳು ಕಲಾವಿದರೊಟ್ಟಿಗೆ ಬಳಕೆಯೊಂದಿಗೆ ಒಂದು ವೃಕ್ಷವಾಗುತ್ತದೆ. ಇಂತಹ ಮಾದರಿ ಚಿತ್ರಕಥೆಗಳು ಚಲನಚಿತ್ರ ನಿರ್ಮಾಣದ ಪರಂಪರೆಯನ್ನು ನಮಗೆ ಐತಿಹಾಸಿಕವಾಗಿ ಮುಟ್ಟಿಸುತ್ತದೆ ಹಾಗೂ ಹುಟ್ಟುಹಾಕುತ್ತದೆ. ಅದೊಂದು ಪಾರದರ್ಶಕ ಯೋಜನೆಯಾಗುತ್ತದೆ. ಅದರ ಉನ್ನತೀಕರಣ ಚಿತ್ರಕಥೆಯಿದ್ದಾಗ ಮಾತ್ರ ಸಾಧ್ಯವಾಗುತ್ತದೆ. ಸಾಹಿತಿಯ ಆತ್ಮಸಂಗಾತದಿಂದ ಹುಟ್ಟುವ ಕಥಾಗತಿತ ಸಂಗಾತವನ್ನೇ ಪ್ರವೇಶಿಸಲು ಪ್ರಥಮ ಪೂರಕ ನಿರ್ಮಿತಿ ಈ ಚಿತ್ರಕಥೆ. ಇಲ್ಲಿ ಸಾಹಿತಿ ನಿರ್ದೇಶಕನೂ ಆಗುತ್ತಾನೆ. ಚಲನಚಿತ್ರ ಒಟ್ಟಾರೆಯಾಗಿ ಬಯಸುವ ದೃಶ್ಯಾವಳಿಗಳಲ್ಲಿ ಆಹಾರ್ಯಾದಿ ಸಾಧನ ಸಲಕರಣೆಗಳು ಕಲಾವಂತಿಕೆಯ ಸ್ಪರ್ಶ ಇತ್ಯಾದಿಗಳೆಲ್ಲವೂ ಚಿತ್ರಕಥೆಯಿದ್ದಾಗ ದಟ್ಟವಾಗುತ್ತ ಸೃಜನಶೀಲವಾಗುತ್ತ ದಟ್ಟವಾದ ನಿರ್ಮಿತಿಯೊಂದಕ್ಕೆ ಸಾಕ್ಷಿಯಾಗುತ್ತದೆ.



ದೃಶ್ಯ ಹಾಗು ಶ್ರವ್ಯ ಮಾಧ್ಯಮಗಳ ಒಗ್ಗೂಡುವಿಕೆ ಇಲ್ಲಿನ ಕ್ರಿಯಾಶೀಲ ನಿರ್ಮಿತಿ. ಅಲ್ಲಿ ಭಾಷೆ, ಸಂಗೀತ, ಪರಿಸರ ಧ್ವನಿಗಳು ಪೂರಕ ಅಂಶಗಳಾಗಿ ಕೆಲಸಮಾಡುತ್ತವೆ. ಚಲನಚಿತ್ರದಲ್ಲಿ ಬಳಸಿದ ಭಾಷೆ ಚಿತ್ರಕಥಾ ಹಂದರದಲ್ಲಿಯೇ ಸ್ಪಷ್ಟವಾಗಿ ಗೋಚರಿಸಿದಾಗ ಅದು ಆ ನಟ–ನಟಿಯರ ಮುಖಾಂತರ ಇನ್ನೊಂದು ಆಯಾಮವನ್ನು ಕಟ್ಟಿಕೊಡುತ್ತದೆ. ಹೀಗೆ ಭಾಷೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಚಲನಚಿತ್ರಗಳು ಬಹಳಷ್ಟು ಮುಂಚೂಣಿಯಲ್ಲಿ ಕೆಲಸ ಮಾಡಿವೆ. ಇನ್ನು ಚಿತ್ರಬ್ರಹ್ಮನೆಂದು ಕರೆಯಲ್ಪಡುವ ನಿರ್ದೇಶಕ, ಚಲನಚಿತ್ರದ ಮೊದಲ ಹಂತದಲ್ಲಿ ಅಂದರೆ ಚಿತ್ರಕಥಾ ಹಂತದಲ್ಲಿಯೇ ತನ್ನೆಲ್ಲ ಇತಿಮಿತಿಗಳನ್ನು ನಿರ್ಧರಿಸಿಕೊಳ್ಳುತ್ತಾನೆ. ಅದು ವ್ಯಾವಹಾರಿಕವಾಗಿರಬಹುದು, ರಾಜಕೀಯವಾಗಿರಬಹುದು, ಸಾಮಾಜಿಕವಾಗಿರಬಹುದು ಹಾಗೆಯೇ ಸೃಜನಶೀಲವೂ ಆಗಿರಬಹುದು. ತನ್ನ ಸಿನಿಮಾದ ತಿರುವು ಬಿಂದುಗಳನ್ನು ಆತ ನಿರ್ಧರಿಸಿದಾಗ ಮಾತ್ರ ಉತ್ತಮ ಚಲನಚಿತ್ರದತ್ತ ಆ ಚಿತ್ರಕಥೆ ಹೆಜ್ಜೆಹಾಕುತ್ತದೆ. ಚಲನಚಿತ್ರ ಕಥೆಯ ಚಿತ್ರಕಥೆಯನ್ನು ಓದುವ ಕ್ರಮವೊಂದನ್ನು ನಾವು ಅಂದುಕೊಳ್ಳಬೇಕು ಎಂದು ನನಗನಿಸುತ್ತದೆ.

"ಅಯ್ಯೋ ಅಪ್ಪ ಹಿಂಗೂ ಉಂಟಾ, ಆ ಕೂಸು ಎಷ್ಟು ಕಷ್ಟ ಪಡ್ತಪ್ಪ, ಸಧ್ಯ ಅವರಿಬ್ಬರನ್ನ ಕೂಡಿಸ್ದ್ಯಲ್ಲ ನಿಂಗೆ ನೂರು ನಮಸ್ಕಾರ" ಈ ಉದ್ಗಾರಗಳು ಡಾ. ರಾಜ್ ಅವರದ್ದು. ಹೀಗೆ ಮುಗ್ಧವಾಗಿ ಸಿನಿಮಾವನ್ನು ಪ್ರೀತಿಸಿದವರಿಂದ ಹಿಡಿದು ಸಿನಿಮಾವನ್ನು ಶಿಸ್ತಿನ ಪಠ್ಯವನ್ನಾಗಿಸಿಕೊಂಡು ವಿಶ್ವವಿದ್ಯಾನಿಯಲಗಳವರೆಗೆ ಸಂವಹಿಸಿದ ಚಿತ್ರ ಜನುಮದ ಜೋಡಿ.

ಇಂಥಹ ಚಲನಚಿತ್ರವೊಂದರ ಪಠ್ಯ ನನ್ನ ಭಾಷೆಯ, ನನ್ನ ನಾಡಿನ, ನನ್ನ ರಾಷ್ಟ್ರದ, ಸಿನಿಮಾ ವಿಧ್ಯಾರ್ಥಿಗಳಿಗೆ ದೊರಕುವುದು ಬೇಡವೇ–ಅದಕ್ಕೆ ಈ ಪ್ರಯತ್ನ ಸಿನಿಮಾ ಕೇವಲ ಒಂದು ನೆನಪಲ್ಲ. ಅದೊಂದು ಇತಿಹಾಸ ಅದೊಂದು ಪರಂಪರೆ. ಎಲ್ಲ ಕಾಲ ಘಟ್ಟಗಳಲ್ಲಿಯೂ ಸಲ್ಲಬಹುದಾದ ಕೆಲವೇ ಚಿತ್ರ ರತ್ನಗಳು ಕನ್ನಡದ ಪಾಲಾಗಿದೆ ಎಂಬುದೇ ನಮ್ಮ ಹೆಮ್ಮೆ. ಆ ಗೌರವವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಾ ಈ ಪಠ್ಯ ಇನ್ನುಳಿದ ಚಿತ್ರ ಕಥಾ ಲೇಖಕರಿಗೆ ಸ್ಪೂರ್ತಿಯಾಗಲಿ ಎಂದು ಆಶಿಸುತ್ತೇನೆ

***– ಟಿ.ಎಸ್. ನಾಗಾಭರಣ***

## *ಕನ್ನಡ ಚಲನಚಿತ್ರ ಇತಿಹಾಸದಿಂದ...*

'ಜನುಮದ ಜೋಡಿ' ದಶಕದ ಅತ್ಯಂತ ಯಶಸ್ವಿ ಚಿತ್ರಗಳಲ್ಲೊಂದು. ಗುಜರಾತಿ ಕಾದಂಬರಿಕಾರ ಪನ್ನಲಾಲ್ ಪಟೇಲ್ ಕಾದಂಬರಿ ಆಧರಿಸಿದ್ದ ಈ ಚಿತ್ರ, ನಿರ್ದೇಶಕ ನಾಗಾಭರಣರ ಖ್ಯಾತಿಯನ್ನು ಎತ್ತರಕ್ಕೆ ಕೊಂಡೊಯ್ದಿತು. ಕನಕ ಕುಗ್ರಾಮವೊಂದರ ಕ್ಷೌರಿಕನ ಪುತ್ರಿ. ಕೃಷ್ಣ–ಕನಕ ಜಾತ್ರೆಯೊಂದರಲ್ಲಿ ಆಕಸ್ಮಿಕವಾಗಿ ಭೇಟಿಯಾಗಿ ಮೊದಲ ನೋಟದ ಪ್ರೇಮಿಗಳಾಗುತ್ತಾರೆ. ಕೃಷ್ಣನನ್ನು ವರಿಸಲು ಸಿದ್ಧಳಾಗಿದ್ದ ಕನಕಳನ್ನು ಮೋಸದಿಂದ ಇನ್ನೊಬ್ಬನಿಗೆ ಮದುವೆ ಮಾಡುತ್ತಾರೆ. ಬೇಸತ್ತ ಕೃಷ್ಣ ಊರು ತೊರೆಯುತ್ತಾನೆ. ಕೊನೆಗೆ ಆ ಜೋಡಿಯನ್ನು ಬೇರೆ ಮಾಡಿದ್ದ ಹಿರಿಯರಿಗೆ ಜ್ಞಾನೋದಯವಾಗಿ ಅಂತ್ಯದಲ್ಲಿ ಜನುಮದ ಜೋಡಿಯ ಸಮಾಗಮವಾಗುತ್ತದೆ. ಅಗಲಿದ ಜೋಡಿಯ ವಿರಹವನ್ನು, ಇದಕ್ಕಿಂತ ಮುಖ್ಯವಾಗಿ ಜಾತಿ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಮೂಡಿಸಿ, ಚಿತ್ರ 'ಕೋಲುಮಂಡೆ ಜಂಗಮ ದೇವರು' ಕಂಸಾಳೆ ಹಾಡಿಗೆ ಅತ್ಯಂತ; ಹಿಂದೆಂದೂ ಕಾಣದಂಥ ಜನಪ್ರಿಯತೆ ತಂದಿತು. ಚಿತ್ರಮಂದಿರಗಳಲ್ಲಿ ಪ್ರೇಕ್ಷಕರು ಗದ್ದಲ, ಒತ್ತಾಯ ಮಾಡಿ ಈ ಹಾಡನ್ನು ಎರಡೆರಡು ಬಾರಿ ಪುನರಾವರ್ತಿಸಿಕೊಂಡು ನೋಡಿದ ಅಪರೂಪದ ಘಟನೆಗಳು ನಡೆದವು. ನಗರ ಜೀವನದ, ಭೂಗತಲೋಕದ ವಸ್ತುವಿನ ಚಿತ್ರಗಳೇ ವಿಜೃಂಭಿಸುತ್ತಿದ್ದ ದಿನಗಳಲ್ಲಿ ಸಾಧಾರಣ ಉಡುಗೆ–ತೊಡುಗೆ, ಕುಗ್ರಾಮದ ಜನಜೀವನವೇ ತುಂಬಿದ್ದ ಈ ಚಿತ್ರಗಳಿಸಿದ ಯಶಸ್ಸು ಇನ್ನೂ ಬೆರಗಿನ ಸಂಗತಿಯೇ.

1997 ಮಾರ್ಚ್ ಮೊದಲ ವಾರ ಈ ಚಿತ್ರಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ನಡೆದ ವಿಚಾರ ಸಂಕಿರಣ ಚಿತ್ರದ ವಸ್ತುವಿನ ಬಗ್ಗೆ ಸಾಮಾನ್ಯರೂ ಚಿಂತಿಸುವಂತೆ ಮಾಡಿತು. ಅಂದಿನ ಚರ್ಚೆಯಲ್ಲಿ ಚಿತ್ರದಲ್ಲಿನ ಪಾಳೇಗಾರಿಕೆ ಮೌಲ್ಯವನ್ನು ಪ್ರಶ್ನಿಸುವ, ಜಾತಿ ಕಟ್ಟುಪಾಡುಗಳ ವಿರುದ್ಧ ಧ್ವನಿ ಎತ್ತುವ, ಧಾರ್ಮಿಕ ಡಂಭಾಚಾರ ಬಯಲು ಮಾಡುವ ಅಂಶಗಳನ್ನು ಜನಪ್ರಿಯ ಮಾಧ್ಯಮದ ಮೂಲಕ ಎತ್ತಿ ಹಿಡಿಯುವ ಬಗ್ಗೆ ಅಪಾರ ಪ್ರಶಂಸೆ ವ್ಯಕ್ತವಾಯಿತು. ಎಡಪಂಥೀಯ ಸಂಘಟನೆಗಳಾದ ಜನವಾದಿ ಮಹಿಳಾ ಸಂಘಟನೆ, ಎಸ್ ಎಫ್ ಐ ಹಾಗು ಡಿವೈಎಫ್ಐ ಒಂದಾಗಿ ಈ ಚರ್ಚೆಯನ್ನು ಏರ್ಪಡಿಸಿದ್ದವು. ಜಾನಪದ ನುಡಿಗಟ್ಟುಗಳನ್ನು ಬಳಸಿಕೊಳ್ಳುವುದರೊಂದಿಗೆ ಪ್ರಾದೇಶಿಕ ಸಂಸ್ಕೃತಿಯನ್ನು ಸಮರ್ಪಕವಾಗಿ ಚಿತ್ರದಲ್ಲಿ ಬಿಂಬಿಸಲಾಗಿತ್ತು. ಬೆಂಗಳೂರು ನಗರದ ಎಂಟು ಚಿತ್ರಮಂದಿರಗಳಲ್ಲಿ ಪ್ರತಿದಿನ 31 ಪ್ರದರ್ಶನಗಳನ್ನು ಕಂಡ ಹಿರಿಮೆಯ ಜನುಮದ ಜೋಡಿ, 100 ನೇ ದಿನಕ್ಕೆ ಕಾಲಿಟ್ಟಾಗ (21–2–1997) ರಾಜ್ಯಾದ್ಯಂತ 32 ಚಿತ್ರಮಂದಿರಗಳಲ್ಲಿ 83 ಪ್ರದರ್ಶನ ಕಾಣುತ್ತಿತ್ತು. ರಾಯಚೂರು, ಗಂಗಾವತಿಯಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಿ 100 ದಿನಗಳ ಪ್ರದರ್ಶನದ ದಾಖಲೆಯಿರುವುದು ಇದೊಂದು ಚಿತ್ರಕ್ಕೆ ಮಾತ್ರ. ಕಂಪ್ಲಿಯಂಥ ಪುಟ್ಟ ಊರಿನ ಚಂದ್ರಕಲಾ



ಚಿತ್ರಮಂದಿರದಿಂದ ಹಿಡಿದು ಮಧ್ಯಮ ಹಾಗು ಮಹಾನಗರಗಳವರೆಗೆ ಕನ್ನಡ ಚಿತ್ರರಂಗದ ಅದುವರೆಗಿನ 63 ವರ್ಷಗಳ ಇತಿಹಾಸದಲ್ಲಿ ಯಾವ ಚಿತ್ರವೂ ಸಾಧಿಸದ ಯಶಸ್ಸನ್ನು ಸಾಧಿಸಿ ಈ ಚಿತ್ರವು ದಾಖಲೆಗಳನ್ನು ನಿರ್ಮಿಸಿತು.

'ಜನುಮದ ಜೋಡಿ' ವಿಶೇಷಗಳಲ್ಲಿ ಜಾತ್ರೆ ಮುಖ್ಯವಾದದ್ದು. ಇದರ ಚಿತ್ರೀಕರಣಕ್ಕೆ 15 ದಿನ ಹಿಡಿದಿತ್ತು. 'ಕೋಲುಮಂಡೆ...' ಹಾಡಿನ ಚಿತ್ರೀಕರಣವನ್ನು ಒಂದೂವರೆ ದಿನದಲ್ಲಿ ಮುಗಿಸಲಾಗಿತ್ತು. ಮೂಲ ಜಾನಪದ ಗೀತೆಯ ಕೆಲವು ವಾಕ್ಯಗಳನ್ನು ಇಟ್ಟುಕೊಂಡು ಈ ಗೀತೆಯನ್ನು ಬರೆದವರು ದೊಡ್ಡರಂಗೇಗೌಡ. ಈ ಹಾಡಿನ ರಾಗ ಸಂಯೋಜನೆ ಬಗ್ಗೆ ಸಂಗೀತ ನಿರ್ದೇಶಕ ವಿ ಮನೋಹರ್ 'ಅರ್ಧ ರಾಗ ಕಂಸಾಳೆ ಮಹಾದೇವಯ್ಯನವರದು. ಇನ್ನರ್ಧ ನನ್ನದು' ಎಂದು ಹೇಳಿದ್ದಾರೆ. ಅಂದರೆ ಈ ಗೀತೆ ಮೂಲ ಜಾನಪದ ಧಾಟಿಯಲ್ಲಿತ್ತು ಎಂಬುದನ್ನು ಅವರು ಸಮರ್ಥಿಸಿದರು. ಗೀತೆ, ಅದಕ್ಕೆ ತಕ್ಕದಾದ ನೃತ್ಯ, ಗೀತೆಯ ಸಂದರ್ಭ ಹಾಗು ಚಿತ್ರಣ ಇವೆಲ್ಲವೂ ಸಮರ್ಪಕವಾಗಿದ್ದ ಉದಾಹರಣೆ ಇದು. ಈ ಹಾಡಿನ ಮೂಲಕ ಯುವಗಾಯಕ ಎಲ್.ಎನ್. ಶಾಸ್ತ್ರಿ ಜನಪ್ರಿಯತೆ ಗಳಿಸಿದರು. ಚಿತ್ರದ ಇನ್ನೊಂದು ಜನಪ್ರಿಯ ಗೀತೆ 'ಮಣಿ ಮಣಿ...' ಇದನ್ನು ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಸಂಬಂಧಿಸಿದ ದೃಶ್ಯದ ಸಂಭಾಷಣೆಯಾಗಿ ಬರೆದುಕೊಟ್ಟಿದ್ದರು. ನಂತರ ಅದನ್ನೇ ಏಕೆ ಹಾಡಿಗೆ ಹೊಂದಿಸಬಾರದು ಎಂದು ಯೋಚಿಸಿದ ನಾಗಾಭರಣ ಹಾಗೆ ಮಾಡುವುದರಲ್ಲಿ ಯಶಸ್ವಿಯೂ ಆದರು. ನಾಯಕ ಶಿವರಾಜ್ ಕುಮಾರ್ ಅವರೇ ಹಾಡಿರುವ ಧ್ವನಿ ಮುದ್ರಣಕ್ಕೆ ಮೂರು ದಿನ ಹಿಡಿಯಿತು. ಇದನ್ನು ವಿಶೇಷವಾಗಿ ಹಗಲಿನ ಬೇರೆಲ್ಲಾ ದೃಶ್ಯಗಳ ಚಿತ್ರೀಕರಣವಾದ ಮೇಲೆ ಸಂಜೆ 6 ರಿಂದ 7 ರವರೆಗೆ ಒಂದುಒಂದೂವರೆ ಗಂಟೆಯಂತೆ ಸ್ವಲ್ಪ ಸ್ವಲ್ಪವೇ ಎಂಟು ದಿನಗಳ ಕಾಲ ಚಿತ್ರಿಸಲಾಯಿತು. ಚಿತ್ರದಲ್ಲಿ ಬಹಳ ದಿನಗಳ ನಂತರ ಮತ್ತೆ ಅಭಿನಯಿಸಿದ ರಾಜೀವ್, ಗಂಭೀರ ಪಾತ್ರದಲ್ಲಿ ಅಶೋಕ್ ಗಮನ ಸೆಳೆದರು. ರಂಗಭೂಮಿಯ ಹಿರಿಯ ನಟ ಏಣಗಿ ಬಾಳಪ್ಪ ಜಂಗಮಯ್ಯನಾಗಿ ಅಭಿನಯಿಸಿದ್ದು ಮತ್ತೊಂದು ವಿಶೇಷ. ಎಲ್ಲಾ ವಿಭಾಗಗಳಲ್ಲೂ ಅಚ್ಚುಕಟ್ಟು ಕಾಣುತ್ತಿದ್ದ ಈ ಚಿತ್ರದ ಹಿಂದೆ ಇನ್ನೊಂದು ಸ್ವಾರಸ್ಯದ ಸಂಗತಿಯಿದೆ. ನಾಗಾಭರಣ 1982 ರಲ್ಲಿ 'ಅನ್ವೇಷಣೆ' ಮಾಡುವಾಗ ಇದೇ ಕಥೆಯನ್ನು ಹಲವಾರು ಮಂದಿ ನಿರ್ಮಾಪಕರಿಗೆ, ನಟರಿಗೆ ಹೇಳಿದ್ದರು. ಹದಿನೈದು ವರ್ಷಗಳಲ್ಲಿ ಆಗಾಗ ಪ್ರಯತ್ನಗಳನ್ನು ಮಾಡುತ್ತಲೇ ಇದ್ದರು. ಆದರೆ ಯಾರೂ ಉತ್ಸಾಹ ತೋರಲಿಲ್ಲ. ಕೊನೆಗೆ ರಾಜ್ ಸಂಸ್ಥೆ ಆಸಕ್ತಿ ತೋರಿತು.

'ಜನುಮದ ಜೋಡಿ' ಯಶಸ್ಸಿನ ಮುಖ್ಯ ಅಂಶಗಳಲ್ಲಿ ಬಿ.ಸಿ. ಗೌರಿಶಂಕರ್ ಶ್ರೇಷ್ಠ ಛಾಯಾಗ್ರಹಣವೂ ಒಂದು. ಮೂರು ಗಂಟೆಗಳ ಕಾಲ ಹಳ್ಳಿಯಲ್ಲಿಯೇ ವಿಹರಿಸುವ ಅನುಭವ ಉಂಟುಮಾಡುವ ಗೌರಿಶಂಕರ್ ಈ ಚಿತ್ರದಲ್ಲಿ ಅವರ ವೃತ್ತಿ ಬದುಕಿನ ಇನ್ನೊಂದು ಶೃಂಗ ತಲುಪಿದರು. ಹರಿತ ಮಾತು ಅರ್ಥಪೂರ್ಣ ಸಂಭಾಷಣೆ ಬರೆದ ಬರಗೂರು ರಾಮಚಂದ್ರಪ್ಪ ಚಲನಚಿತ್ರ ಸಂಭಾಷಣೆಗೆ ಬೇರೊಂದು ಆಯಾಮವೂ ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು. 1996–97 ರಲ್ಲಿ ಈ ಚಿತ್ರ ಪಡೆದ ಆರು ರಾಜ್ಯ ಪ್ರಶಸ್ತಿಗಳಲ್ಲಿ ಇವರಿಬ್ಬರೊಂದಿಗೆ ನಾಯಕಿ ಶಿಲ್ಪಾ, ಸಂಗೀತ ನಿರ್ದೇಶಕ ವಿ ಮನೋಹರ್, ಕವಿ ದೊಡ್ಡರಂಗೇಗೌಡ, ಗಾಯಕ ಎಲ್ ಎನ್ ಶಾಸ್ತ್ರಿ ಇವರ ಹೆಸರುಗಳಿವೆ. ಇದರೊಂದಿಗೆ

ವಿಶೇಷ ಬಹುಮಾನ ಕೂಡ ಈ ಚಿತ್ರಕ್ಕೆ ಲಭ್ಯವಾಯಿತು. ಮಾನವಶಾಸ್ತ್ರ ಅಧ್ಯಯನ ವಸ್ತುವಾಗಿ ಅಮೇರಿಕಾದ ವಿಶ್ವವಿದ್ಯಾಲಯ ಈ ಚಿತ್ರವನ್ನು ಉಲ್ಲೇಖಿಸಿರುವುದು ಚಿತ್ರದ ಇನ್ನೊಂದು ವೈಶಿಷ್ಟ್ಯ. ಜೊತೆಗೆ ಆ ದಿನಗಳಲ್ಲಿ ಅಪರೂಪವಾಗಿದ್ದ ಲಕ್ಷಣಗಳಿಂದಾಗಿ ಈ ಚಿತ್ರ ಪತ್ರಿಕೆಗಳ ಮೆಚ್ಚುಗೆಯನ್ನೂ ಪಡೆಯಿತು. ಒಂದು ಪತ್ರಿಕೆಯ ಶೀರ್ಷಿಕೆ 'ಸದಭಿರುಚಿಯ ಕಾವ್ಯಾತ್ಮಕ ಕಲಾಕೃತಿ' ಎಂದಿದ್ದರೆ, ಇನ್ನೊಂದು ಪತ್ರಿಕೆ 'ಜೋಡಿ' ಎಡಪಂಥೀಯರಿಗೂ 'ಜೋಡಿ' ಎಂದಿತ್ತು. ಸದಭಿರುಚಿಯ ಪ್ರಾಮಾಣಿಕ ಪ್ರಯತ್ನಗಳಿಗೆ ಪ್ರೇಕ್ಷಕರು ಸ್ಪಂದಿಸುತ್ತಾರೆನ್ನುವುದಕ್ಕೆ 'ಜನುಮದ ಜೋಡಿ' ಯಶಸ್ಸು ಜ್ವಲಂತ ನಿದರ್ಶನ.

*ಕೃಪೆ : ಕನ್ನಡ ಚಲನಚಿತ್ರ ಇತಿಹಾಸ*





## ಪನ್ನಲಾಲ್ ಪಟೇಲ್

**(17-05-1912 - 6-4-1989)**

ಭಾರತೀಯ ಜ್ಞಾನಪೀಠದ 1985ನೆಯ ವರ್ಷದ ಜ್ಞಾನಪೀಠದ ಪುರಸ್ಕಾರವನ್ನು ಶ್ರೀ ಪನ್ನಲಾಲ್ ಪಟೇಲರು ಭಾರತೀಯ ಸಾಹಿತ್ಯಕ್ಕೆ ನೀಡಿರುವ ಅಮೂಲ್ಯವಾದ ಯೋಗ ದಾನಕ್ಕೆ ಸಮರ್ಪಿಸಲಾಗಿದೆ. 'ಮಲೇಲ ಜೀವ', 'ಮಾನವೀನೀ ಭಾವಾಈ' ಮತ್ತು 'ಪ್ರಾರ್ಥನೇ ಕಹೋ ಚಢಾವೆ ಬಾಣ್', ಮೊದಲಾದವು ಅವರ ಪ್ರಖ್ಯಾತ ಕಾದಂಬರಿಗಳು.

ಎಂಬತ್ತು ವರ್ಷಗಳಿಗಿಂತ ಹಿಂದಿನ ಮಾತು. ಅಹಮದಬಾದಿನಲ್ಲಿ ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಗುಜರಾತಿ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಪ್ರೇಮಾಭಾಯಿ ಹಾಲ್‌ನಲ್ಲಿ ನಡೆಯುವುದಿತ್ತು. 'ಉಮಾಶಂಕರ್ ಜೋಶಿ ಅವರು ಮುಂಬೈನಿಂದ ಬರುವವರಿದ್ದಾರೆ' ಎಂಬ ಸುದ್ದಿ ಅವರ ಕಿವಿಗೆ ಬಿತ್ತು. ಹತ್ತು ವರ್ಷಗಳ ನಂತರ ಸ್ನೇಹಿತನನ್ನು ಬೇಟಿ ಮಾಡುಬಹುದಾದ ಅವಕಾಶ ಸಿಕ್ಕಿತು.

ಸನ್ 1936ರ ನವೆಂಬರ್; ಪುನರ್ಮಿಲನದ ಸಮಯದಲ್ಲಿ, ಇಬ್ಬರು ಮಿತ್ರರಿಗೂ 25 ವರ್ಷಗಳು ತುಂಬಿದ್ದವು. ಉಮಾಶಂಕರರು ಒಬ್ಬ ಕವಿಯ ರೂಪದಲ್ಲಿ ಬಂದಿದ್ದರು. ಪನ್ನಲಾಲ್ ರಾಜಸ್ಥಾನದ ಸಾಗಬಾಡ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಜೀವನದ ವಿವಿಧ ವಿಷಯಗಳ ಮತ್ತು ಕಿಕ್ಕಿರಿದ ಅನುಭವಗಳ ಬೆಂಕಿಯಲ್ಲಿ ಬೆಂದು ಹೋಗಿದ್ದರು. ಪ್ರೇಮಾಭಾಯಿ ಹಾಲ್‌ನ ಸಮೀಪದ ಒಂದು ಹೋಟೆಲ್‌ನಲ್ಲಿ ಉಮಾಶಂಕರರು ಟೀ ಕುಡಿಯುತ್ತ ಕುಳಿತಿದ್ದವರು ಪನ್ನಲಾಲರನ್ನು ಕುರಿತು ಬರಿಯೊ ಎಂದರು, ಇದು ಮೊದಲ ಪ್ರೇರಣೆ. ಆನಂತರದ್ದು, ಅದೇ ಸಾಹಿತ್ಯ ಸಮ್ಮೇಳನದಲ್ಲಿ ಮಹಾತ್ಮ ಗಾಂಧಿ ಅವರು ಸಾಹಿತ್ಯದ ವ್ಯಾಪಕತೆಯ ವಿಷಯದಲ್ಲಿ ರೈತ ಮತ್ತು ಕೂಲಿಯ ಪಾಲುಗಾರಿಕೆಯ ಬಗ್ಗೆ ಹೇಳಿದ ಒಂದು ಕ್ರಾಂತಿಕಾರಿ ಮಾತು. ಆದರೆ ಶತಮಾನಗಳಿಂದ ಕಾಪಾಡಿಕೊಂಡು ಬಂದಿದ್ದ ಸಂಸ್ಕೃತಿಯ ಸಾಹಿತ್ಯ ಸಾಧನೆಯ ನಂತರ ಭಾರತ ದೇಶದಲ್ಲಿನ ಶ್ರಮಿಕನು ಶಬ್ದಗಳ ಸೇವೆಯಲ್ಲಿ ನಿರತನಾಗಬೇಕಾದ ಯುಗ ಬರಬೇಕಿತ್ತು. ಇದು ಪನ್ನಲಾಲ್ ಅವರ ಲೇಖನಗಳಿಗೆ ನಡುವೆ ಒಂದು ಪರೋಕ್ಷ ಆಹ್ವಾನವೇ ಆಗಿತ್ತು. ಪನ್ನಲಾಲ್ ಪಟೇಲರ ಬಗ್ಗೆ ಹೇಳಬೇಕಾದ ಒಂದು ಅತ್ಯಂತ ಮುಖ್ಯ ವಿಷಯ ಏನೆಂದರೆ ಅವರು ಶಾಲೆಯಲ್ಲಿ 8ನೇಯ

ತರಗತಿಯವರೆಗೆ ಓದಿದ್ದದ್ದು. ಅವರು 1912ನೆ ಮೇ ತಿಂಗಳ 17 ರಂದು ಗುಜರಾತ ಮತ್ತು ರಾಜಸ್ಥಾನಗಳ ಎಲ್ಲೆಯಲ್ಲಿನ ಮಾಂಡಲೀ ಎಂಬ ಹಳ್ಳಿಯಲ್ಲಿ ಜನಿಸಿದರು. ಶಾಲೆಯನ್ನು ಬಿಟ್ಟ ನಂತರ ಕೆಲವು ವರ್ಷಗಳ ವರೆಗೆ ಪನ್ನಲಾಲರು ಬೀದಿ ಸುತ್ತುತ್ತಲೇ ಕಾಲ ಕಳೆದರು. ಕಲ್ಪನೆಗಳಲ್ಲೇ ಅವರ ಓಡಾಟ ಸಾಗಿತ್ತು ಆಗ ಅವರಿಗೆ ಯಾರೋ ಸಾಧುವಿನ ಸಂಪರ್ಕ ಉಂಟಾಗಿ ಅವರು ಮನೆ ಬಿಟ್ಟು ಓಡಿದರು. ಆ ಸಾಧುವಿನಿಂದ ಅವರಿಗೆ ಎಷ್ಟರ ಮಟ್ಟಿಗೆ ಈಶ್ವರತ್ವದ ಪ್ರಾಪ್ತಿ ಅಥವಾ ಧರ್ಮದ ಲಾಭ ಪ್ರಾಪ್ತವಾಯಿತು ಎಂದು ಯಾರಿಗೂ ಗೊತ್ತಿಲ್ಲ. ಆದರೆ ಸಾಧುವಿನೊಂದಿಗಿದ್ದು ಪನ್ನಲಾಲರು ಜೀವನದ ಬಗ್ಗೆ ಬಹಳಷ್ಟು ಅರಿತುಕೊಂಡರು ಎಂಬುದಂತು ಸತ್ಯ.

ಉಮಾಶಂಕರ್ ಜೋಷಿಯವರ ಪ್ರಭಾವ ಪನ್ನಲಾಲರ ಮೇಲೆ ಉಂಟಾಗಿದ್ದೇನೋ ನಿಜ. ಪನ್ನಲಾಲರು ಪ್ರಾರಂಭದಲ್ಲಿ ಕವಿತೆಗಳನ್ನು ಬರೆದರು. 'ನನಗೆ ಹಾಡಲು ಬರುವುದರಿಂದ ನಾನು ಕವಿತೆ ಬರೆಯಬಲ್ಲೆ' ಎಂದುಕೊಂಡರು. ಅವರು ಬಹಳ ಒಳ್ಳೆಯ ಗಾಯಕರಾಗಿದ್ದರು. ಪನ್ನಲಾಲರು ಒಂದೊಂದೆ ಎನ್ನುತ್ತ ಬಹಳ ಸಣ್ಣ ಕತೆಗಳನ್ನು ಬರೆದರು. ಪನ್ನಲಾಲರ ಸಾಹಿತ್ಯ ಜೀವನ ಆರಂಭವಾಯಿತು.

1941ರಲ್ಲಿ ಪನ್ನಲಾಲರ ಎರಡನೇ ಕಾದಂಬರಿ 'ಮಲೇಲ ಜೀವ್' ಪ್ರಕಟವಾಯಿತು. ಅದೊಂದು ಪ್ರೇಮಕಥೆ, ಅದರಲ್ಲಿ ಜಾತಿ ಮತ ಭೇದ ಅಥವಾ ಇತರ ಸಾಮಾಜಿಕ ರೀತಿಗಳು ಗೌಣ. ಸಂಘರ್ಷ ಪ್ರಮುಖವಾಗಿ ತುಂಬಿದೆ. ಪ್ರೇಮದ ತೀವ್ರ ಅನುಭವ ಮತ್ತು ಆತ್ಮ ಸಂಯಮದ ನಡುವೆ ಇದ್ದ ಸಂಘರ್ಷವು ನಾಯಕನನ್ನು ಪಲಾಯನ ಮಾಡಲು ಪ್ರೇರೇಪಿಸುತ್ತದೆ ಮತ್ತು ನಾಯಕಿಯನ್ನು ಬೇರ್ಪಡಿಸುತ್ತದೆ. ಆಗ "ಜೀವಿ" ಹುಚ್ಚಳಾಗುತ್ತಾಳೆ. ಕಾನಾಜಿ ಪಟ್ಟಣದಿಂದ ಹಳ್ಳಿಗೆ ಬಂದು ಅವಳನ್ನು ಬೇಟಿ ಮಾಡದೆ ಹಾಗೆ ಹೊರಟು ಹೋಗುತ್ತಾನೆ. ಜೀವಿಗೆ ಅಳಿದುಳಿದಿದ್ದ ಆರೋಗ್ಯವು ಹಾಳಾಗುತ್ತದೆ. ಒಂದು ವರ್ಷಕ್ಕೆ ಮುಂಚೆ ಅತ್ಯಂತ ರೂಪವತಿಯಾಗಿದ್ದ ಆ ಜೀವಿಯ ಬಗ್ಗೆ ಲೋಭವನ್ನು ತೋರಿಸದೆ ಮುಕ್ತನಾಗಿದ್ದ ಕಾನಾಜಿ ಈಗ ಹುಚ್ಚಿಯಾಗಿದ್ದು ಜೀವಿಯನ್ನು ತನ್ನೊಂದಿಗೆ ಕರೆದೊಯ್ಯುತ್ತಾನೆ. 'ಮಲೇಲ ಜೀವ್' ಕಾದಂಬರಿ ಪ್ರಣಯ ಗೀತ ಕಾವ್ಯ.

ಪನ್ನಲಾಲ್ ಪಟೇಲರು ಒಬ್ಬ ಶುದ್ಧೀಕೃತ ಶೈಲಿಯವರು, ಅವರ ವಿಶಿಷ್ಟ ಶೈಲಿಗೆ ಮೂಲಧಾರೆಯು ಜನಪದ ಭಾಷೆಯೇ ಆಗಿತ್ತು. ಅದು ತನ್ನೊಳಗಿನ ಆಳವಾದ ಅರ್ಥ ಛಾಯೆಗಳು ಮತ್ತು ಗ್ರಾಮ್ಯ ಜೀವನದ ಎಲ್ಲಾ ವಲಯದ ಕವಿತೆಯನ್ನು ಮಾನವ ಹೃದಯದ ಮೂಲಭೂತ ಸಂವೇದನೆಗಳನ್ನು ಆಕರ್ಷಕ ರೂಪದಲ್ಲಿ ಉದ್ದೀಪ್ತಗೊಳಿಸುತ್ತದೆ. ಒಮ್ಮೊಮ್ಮೆ ಅದರ ನೈತಿಕತೆಯ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕುವುದು ಕೂಡ ಪೂರ್ಣ ನಿರರ್ಥವಾಗುತ್ತದೆ. ಮಾನವೀಯತೆಯ ಆಪೇಕ್ಷಿತ ಕೋನಗಳಿಂದ ತೆಗೆದು–ಕೊಂಡಿದ್ದ ಏನೋ ಅರಿಯದವರ ಪಾತ್ರಗಳ ಉದ್ಗಾರಗಳ ನಾಟಕೀಯ ಸಮಾವೇಶದಲ್ಲಿ ಪ್ರಾಯಶಃ ಸಾರಗರ್ಭಿತ ದಾರ್ಶನಿಕತೆ ಮಿಂಚುತ್ತದೆ. ಆದರೂ ಕಥೆಯ ಹಂತ ಸೌಂದರ್ಯಕ್ಕೆ ಹಾನಿಯುಂಟಾಗುವುದಿಲ್ಲ. ಪನ್ನಲಾಲರ ಇಡೀ ವಾತಾವರಣದೊಂದಿಗಿನ ತದ್ಯಾತ್ಮಕತೆ ಅವರ ಕಾವ್ಯಮಯ ವರ್ಣನೆ ಹಾಗು ಪಾತ್ರಗಳ ಗುಣ ಮತ್ತು ವ್ಯವಹಾರದಲ್ಲಿನ



ಅವರ ಸ್ವಂತದ ಅಂತರ್ದೃಷ್ಟಿ ಮತ್ತು ಅವರ ಕಥೆ ಹೇಳುವ ಪ್ರಾವೀಣ್ಯತೆ ಇವು ಎಲ್ಲವೂ ಕಾದಂಬರಿಯ ಕಲೆಯಲ್ಲಿ ನೂತನ ಆಯಾಮಗಳನ್ನು ಸೃಷ್ಟಿಸಿವೆ.

1989ನೇ ಇಸವಿಯ ಏಪ್ರಿಲ್ 6ರಂದು ಅವರು ನಿಧನರಾದರು. ಪನ್ನಲಾಲ್ ಪಟೇಲರು ಈ ಮೊದಲೇ ಹೇಳಿರುವಂತೆ ಜ್ಞಾನಪೀಠ ಪುರಸ್ಕಾರವನ್ನು ಪಡೆದಿದ್ದ ಬೇರೊಬ್ಬ ಕವಿ ಉಮಾಶಂಕರ್ ಜೋಷಿ ಅವರ ಪ್ರೇರಣೆಯಿಂದ ಸಾಹಿತ್ಯದ ಸೃಷ್ಟಿಯಲ್ಲಿ ಪಾಲುಗೊಂಡಿದ್ದರು. ಕಾಲವು ನಾಲ್ಕು ತಿಂಗಳ ಅಂತರದಲ್ಲಿ ಈ ಇಬ್ಬರನ್ನು ತನ್ನಲ್ಲಿ ಐಕ್ಯಗೊಳಿಸಿಕೊಂಡದ್ದು ಒಂದು ವಿಡಂಬನೆಯೇ ಸರಿ.

ಇವರ ಸಾಹಿತ್ಯ ಕೃತಿಗಳು ಹಲವು ಭಾಷೆಗಳಲ್ಲಿ ಪ್ರಕಟಗೊಂಡು ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ವಿಭಿನ್ನ ಸೃಷ್ಟಿರೂಪವನ್ನು ಹಾಗು ಅಪಾರ ಓದುಗ ಮನ್ನಣೆಯನ್ನು ಪಡೆದು ಪನ್ನಲಾಲ್ ಪಟೇಲರನ್ನು ಚಿರಸ್ಥಾಯಿಯಾಗಿಸಿದೆ.

## ಸಿರಿನುಡಿ....

ರಂಗಭೂಮಿ ಹಿನ್ನೆಲೆಯಿಂದ ಬಂದ ನಾನು 'ಉದರ ನಿಮಿತ್ತ ಬಹುಕೃತ ವೇಷಂ' ಎನ್ನುವಂತೆ ಹೊಟ್ಟೆಪಾಡಿಗಾಗಿ ಪ್ರಕಾಶನ ಸಂಸ್ಥೆ ಪ್ರಾರಂಭಿಸಿದೆ. ಆದರೆ ನನ್ನಲ್ಲಿ ಅಡಗಿರುವ ಕಲಾವಿದ ಸದಾ ಕಾಡತೊಡಗಿದ್ದ, ಅದಕ್ಕಾಗಿಯೇ ರಂಗಭೂಮಿ ಹವ್ಯಾಸವನ್ನಾಗಿಸಿಕೊಂಡೆ ಅಷ್ಟಕ್ಕೆ ತೃಪ್ತನಾಗದ ನನ್ನೊಳಗಿನ ಕಲಾವಿದ ಮತ್ತೇನನ್ನಾದರೂ ಮಾಡಬೇಕೆಂದು ತುಡಿಯ ತೊಡಗಿದ ಈ ತುಡಿತ ನನ್ನನ್ನು ಚಲನಚಿತ್ರ ಕ್ಷೇತ್ರಕ್ಕೆ ಕಾಲಿಡುವಂತೆ ಮಾಡಿತು.

2006ರಲ್ಲಿ **'ದಾಟು'** ಚಿತ್ರದ ನಿರ್ಮಾಪಕನಾಗಿ ಈ ಕ್ಷೇತ್ರಕ್ಕೆ ಕಾಲಿಟ್ಟ ನನಗೆ ಮುಂದೆ **'ಪ್ರಾರ್ಥನೆ'** ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕನಾಗಿ ಕೆಲಸ ನಿರ್ವಹಿಸಿದೆ ಈ ಎರಡು ಚಿತ್ರಗಳ ತಯಾರಿಯಲ್ಲಿ ನಾನೂ ಕೇವಲ ನಿರ್ಮಾಪಕನಾಗಿರದೆ ಚಲನಚಿತ್ರ ಎಲ್ಲಾ ವಿಭಾಗಗಳಲ್ಲಿಯೂ ಗಮನ ಹರಿಸುವ ಅವಕಾಶ ಸಿಕ್ಕಿತು. ಇಂತಹ ಅವಕಾಶವನ್ನು ಬಿಟ್ಟವರುಂಟೇ, ಆದರೂ ಸದಾ ನಿರ್ದೇಶಕರ ಹಿಂದೆ-ಮುಂದೆ ಸುತ್ತುತ್ತಾ ಅವರ ಕಾರ್ಯ ವೈಖರಿಯಿಂದ ಪ್ರಭಾವಿತನಾದೆ. ಇದರ ಫಲವೇ ನಾನು ನಿರ್ದೇಶಕನಾಗಿದ್ದು.

**'ಗಾಂಧಿ ಜಯಂತಿ'** ಹಾಗೂ **'ಕೌದಿ'** ಎಂಬ ಎರಡು ಸೃಜನಶೀಲ ಚಲನಚಿತ್ರಗಳ ನಿರ್ದೇಶಿಸಿದೆ. ಈ ಸಂದರ್ಭದಲ್ಲಿ ನಾನು ಯಾರ ಬಳಿಯೂ ನೇರವಾಗಿ ಸಹಾಯಕನಾಗಿ ಕೆಲಸ ನಿರ್ವಹಿಸಿರಲಿಲ್ಲ. ಇಪ್ಪತ್ತು ವರ್ಷಗಳ ರಂಗಭೂಮಿ ಅನುಭವ ಹಾಗೂ ಎರಡು ಚಿತ್ರಗಳ ನಿರ್ವಹಿಸಿದ ಅನುಭವ ಅಷ್ಟೆ. ಆದರೆ ನನಗೆ ಇನ್ನೂ ಏನೋ ತಿಳಿದುಕೊಳ್ಳಬೇಕೆನ್ನುವ ಕಾತರ. ಈ ನಿಟ್ಟಿನಲ್ಲಿ ಯಾವುದಾದರೂ ಪುಸ್ತಕಗಳು ಸಿಗುತ್ತವೆಯೇನೋ ಎಂಬ ಹುಡುಕಾಟ ಪ್ರಾರಂಭವಾಯಿತು. ಅಲ್ಲೂ ನಿರಾಶೆ ಯಾಕೆಂದರೆ ನನಗೆ ಸಿಕ್ಕ ಸಿನಿಮಾ ಸಂಬಂಧ ಕೃತಿಗಳಲ್ಲಿ ನಿರ್ದೇಶಕರು ತಮ್ಮ ಯಾವ ಗುಟ್ಟನ್ನು ಬಿಟ್ಟುಕೊಟ್ಟಿರಲಿಲ್ಲ.




ನನ್ನ ಈ ಅಭಿಪ್ರಾಯವನ್ನು ಹಿರಿಯ ನಿರ್ದೇಶಕರು ಹಾಗೂ ಸದಾ ಹೊಸಬರಿಗೆ ಪ್ರೋತ್ಸಾಹ ಕೊಡುತ್ತಾ ಬಂದಿರುವ ಶ್ರೀಯುತ **ಟಿ.ಎಸ್.ನಾಗಾಭರಣ** ಅವರ ಬಳಿ ಹೇಳಿಕೊಂಡಾಗ ಅವರು **'ಆಕಸ್ಮಿಕ'** ಚಿತ್ರದ ಚಿತ್ರಕಥಾ ಕೃತಿಯನ್ನು ನನ್ನ ಕೈಯಲ್ಲಿಟ್ಟರು. ಅದನ್ನು ಓದಿದ ನನಗೆ ನಿಜಕ್ಕೂ ಭರಣ ಸರ್ ಅವರಲ್ಲಿ ಹತ್ತು ಚಿತ್ರಕ್ಕೆ ಸಹಾಯಕನಾಗಿ ಕೆಲಸ ಮಾಡಿದ ಅನುಭವ ಮೂಡಿತು. ಇಂತಹ ಚಲನಚಿತ್ರ ಕೃತಿಗಳು ಇನ್ನೂ ಹೆಚ್ಚು ಹೆಚ್ಚು ಬರಬೇಕು. ನಮ್ಮಂತ ಸಿನಿಮಾಸಕ್ತರ ಹಸಿವಿಗೆ ಆಹಾರವಾಗಬೇಕೆಂಬ ಬಯಕೆ. ಅದನ್ನು ಗುರುಗಳಿಗೆ ಹೇಳಿದಾಗ ಸಂತೋಷದಿಂದ ಒಪ್ಪಿ **'ಮೈಸೂರು ಮಲ್ಲಿಗೆ'** ಹಾಗೂ **'ಜನುಮದ ಜೋಡಿ'** ಚಿತ್ರಕಥೆ ನನ್ನ ಕೈಗಿತ್ತರು. ಈ ಕೃತಿಗಳು ನಿಜಕ್ಕೂ ಸಿನಿಮಾ ಕಲಿಯುವ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಲಿದೆ. ಅದರಲ್ಲೂ ಪ್ರತಿಯೊಂದು ದೃಶ್ಯವನ್ನು ನಿರ್ದೇಶಕರು ನಿರ್ವಹಿಸಿದ ರೀತಿ, ಅದರಿಂದಾದ ಅನುಭವವನ್ನು ಟಿಪ್ಪಣಿಯೊಂದಿಗೆ ಇಲ್ಲಿ ಕೊಟ್ಟಿದ್ದಾರೆ.

ಇಂತಹ ಕೃತಿಯುನ್ನು ಹೊರತರಲು ಅನುಮತಿ ಇತ್ತ ಶ್ರೀಯುತ ಟಿ.ಎಸ್.ನಾಗಾಭಾರಣ ಅವರಿಗೆ ನನ್ನಂತಹ ಹಲವಾರು ಸಿನಿಮಾ ವಿದ್ಯಾರ್ಥಿಗಳ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಸ್ವರ ಪ್ರಿಂಟರ್ಸ್‌ನ ಗೆಳೆಯರಿಗೆ ಹಾಗೂ ಡಿ.ಟಿ.ಪಿ. ಮಾಡಿದ ಪ್ರಸನ್ನ ಕುಮಾರ್. ಎಂ ಅವರಿಗೆ ಮತ್ತು ಮುಖಪುಟ ವಿನ್ಯಾಸ ಮಾಡಿದ ಮೋಹನ್ ಕಾಮಾಕ್ಷಿ ಅವರಿಗೆ ನಾನು ಅಭಾರಿ.


ಈ ಕೃತಿಯನ್ನು ಕೊಂಡು ಓದಿ ತಮ್ಮ ಸಿನಿಮಾ ಕ್ಷೇತ್ರ ಅನುಭವವನ್ನು ಹೆಚ್ಚಿಸಿಕೊಳ್ಳುವ ಎಲ್ಲರಿಗೂ ನನ್ನ ವಂದನೆಗಳು.

**– ರವೀಂದ್ರನಾಥ ಸಿರಿವರ**
ಪ್ರಕಾಶಕರು


ಡಾ|| ರಾಜ್‌ಕುಮಾರ್
ಶ್ರೀ ವಜ್ರೇಶ್ವರೀ ಕಂಬೈನ್ಸ್ ಶಿವರಾಜ್‌ಕುಮಾರ್
ಮೈ ತುಂಬಿ ಮನ ತುಂಬಿ ಗಟ್ಟಿಯನಾಡಿ
ಜಗ ತುಂಬಿ ನಗೆ ಚಿಂದಿ ಜನುಮದ ಜೋಡಿ
ಜನುಮದ
ಪಾರ್ವತಮ್ಮ ರಾಜ್‌ಕುಮಾರ್






ಇಂದಿನಿಂದ ಪ್ರಾರಂಭ
ಜೋಡಿ
ಟಿ.ಎಸ್. ನಾಗಾಭರಣ

## ಸಾರಾಂಶ

ಜಾತಿ ವ್ಯವಸ್ಥೆಯ ಕ್ರೂರ ಮುಖವನ್ನು ಪರಿಣಾಮಕಾರಿಯಾಗಿ ತೋರಿಸಿದ ಜನಪ್ರಿಯ ಕಮರ್ಷಿಯಲ್ ಚಿತ್ರವಿದು. ಡಾ. ಶಿವರಾಜಕುಮಾರ್ ಅಭಿನಯದ ಈ ಚಿತ್ರ ಹಳ್ಳಿಯ ಸೊಗಡನ್ನು, ಅಲ್ಲಿನ ತಣ್ಣಗಿನ ಜಾತಿ ಕ್ರೌರ್ಯವನ್ನು ತೆರೆದಿಟ್ಟಿತು. ಒಂದು ಸಾಮಾಜಿಕ ಸಂದೇಶವನ್ನು ಕಮರ್ಷಿಯಲ್ ಚಿತ್ರಗಳ ಮೂಲಕವೂ ಹೇಗೆ ಜನಪ್ರಿಯಗೊಳಿಸಬಹುದು ಎಂಬುದನ್ನು ಸಮರ್ಥವಾಗಿ ತೋರಿಸಲಾಗಿದೆ. ಇದರ ಜೊತೆಗೆ ಮೈಮರೆಯುವಂತಹ ಗೀತೆಗಳು ಚಿತ್ರಕ್ಕೆ ಹೊಸ ಮೆರುಗನ್ನು ತಂದುಕೊಡುತ್ತವೆ.

ಈ ಚಿತ್ರವು ಒಂದು ಜಾತ್ರೆಯಿಂದ ಆರಂಭವಾಗಿ ಅದೇ ಜಾತ್ರೆಯಿಂದ ಮುಕ್ತಾಯವಾಗುತ್ತದೆ. ಜಾತ್ರೆಯಲ್ಲಿ ನಾಯಕ ಕೃಷ್ಣ ಹಾಗು ನಾಯಕಿ ಇಬ್ಬರು ಪರಸ್ಪರ ಅಕಸ್ಮಾತಾಗಿ ನೋಡಿ ಮೊದಲ ನೋಟದಲ್ಲಿಯೇ ಆಕರ್ಷಿತರಾಗುತ್ತಾರೆ. ಅದೇ ಊರಿನ ಸಿಂಗಾರಿಗೌಡ ಹಾಗು ತಮಡಪ್ಪ ನಾಯಕಿಯನ್ನು ಅನುಭವಿಸಲು ಇನ್ನಿಲ್ಲದ ಸಂಚುಗಳನ್ನ ಹೂಡುತ್ತಾರೆ. ಅದರಂತೆಯೇ ನಾಯಕನ ಜೊತೆ ನಡೆಯಬೇಕಿದ್ದ ಮದುವೆಯನ್ನು ತಪ್ಪಿಸಲು, ಸಂಚು ಮಾಡಿ ನಾಯಕಿಯನ್ನು ಮೋಸದಿಂದ ಕರೆತಂದು ಅದೇ ಊರಿನ ಅಂದಾನಿಯೆಂಬುವನ ಜೊತೆ ಮದುವೆ ಮಾಡಿಸುತ್ತಾನೆ. ವಿಷಯ ತಿಳಿದ ನಾಯಕ ಸಿಂಗಾರಿಗೌಡನನ್ನು ಹೊಡೆಯಲು ಹೋದಾಗ ನಾಯಕನ ಅಣ್ಣ ಬಂದು ಜಗಳ ಬಿಡಿಸುವನು. ಸಿಂಗಾರಿಗೌಡ ನಡೆದ ವಿಷಯವನ್ನು ತಿರುಚಿ ತನ್ನ ತಾನು ಸಮರ್ಥಿಸಿಕೊಳ್ಳುತ್ತಾನೆ. ಇದರಿಂದ ನಾಯಕ ಊರು ಬಿಟ್ಟು ಹೊಲ ಸೇರಿಕೊಳ್ಳುತ್ತಾನೆ. ವಿಷಯ ತಿಳಿದ ನಾಯಕಿ ಬಂದು ಅವನನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾಳೆ. ಆದರೆ ನಾಯಕ ಇದ್ಯಾವುದಕ್ಕೂ ಒಪ್ಪದೆ ಅವಳನ್ನ ಅಲ್ಲಿಂದ ಕಳುಹಿಸುತ್ತಾನೆ. ನಡುರಾತ್ರಿಯಲ್ಲಿ ಅಲ್ಲಿಂದ ಹೊರಟ ನಾಯಕಿಗೆ ಸಿಂಗಾರಿಗೌಡ ಎದುರಾಗಿ ಅವಳನ್ನು ಬಲತ್ಕಾರ ಮಾಡುವ ಪ್ರಯತ್ನ ಮಾಡುತ್ತಾನೆ. ಇದ್ದಕ್ಕಿದ್ದಂತೆ ನಾಯಕ ಬಂದು ನಾಯಕಿಯನ್ನು ಕಾಪಾಡುತ್ತಾನೆ. ಅಂದು ರಾತ್ರಿ ನಾಯಕನಿದ್ದ ಹೊಲದಲ್ಲೇ ಕಳೆದು ಬೆಳಗ್ಗೆ ಎದ್ದು ಊರು ಸೇರಿಕೊಳ್ಳುತ್ತಾಳೆ. ಕೊಂತಮ್ಮನ ಜಾತ್ರೆಗೆ ನಾಯಕನನ್ನು ಕರೆತರಲು ಊರಿನ ಎಲ್ಲರೂ ಬಂದು ಕರೆಯುವರು. ಎಲ್ಲರ ಒತ್ತಾಯಕ್ಕೆ ಮಣಿದು ಕೃಷ್ಣ ಬರಲು ಒಪ್ಪುತ್ತಾನೆ. ತಮಡಪ್ಪ ಜಾತ್ರೆಯಲ್ಲಿ ತನ್ನ ಮೈ ಮೇಲೆ ದೇವರು ಬಂದಂತೆ ನಟಿಸಿ, ನಾಯಕನನ್ನು ಊರಿನಿಂದ ಬಹಿಷ್ಕಾರ ಹಾಕುವಂತೆ ಹೇಳುತ್ತಾನೆ.

ಕೋಪಗೊಂಡ ನಾಯಕ ತಿರುಗಿ ಬೀಳುತ್ತಾನೆ. ಊರಿನ ಐನೋರು ಬಂದು ಎಲ್ಲರಿಗೂ ಬುದ್ಧಿ ಹೇಳಿ ಅಲ್ಲಿಂದ ಕಳುಹಿಸುತ್ತಾರೆ. ಮರುದಿನ ತಮಡಪ್ಪನ ಕೊಲೆಯಾಗಿರುತ್ತದೆ. ಸಿಂಗಾರಿಗೌಡ ತಮಡಪ್ಪನ ಕೊಲೆಯನ್ನು ನಾಯಕನ ಮೇಲೆ ಹೊರಿಸುವ ಎಲ್ಲಾ ಹುನ್ನಾರಗಳನ್ನ ಮಾಡಿ ಊರಿಗೆ ಪೋಲೀಸರನ್ನ ಕರೆಸುತ್ತಾನೆ. ಆದರೆ ಈ ಕೊಲೆ ಮಾಡಿರುವುದು ತಮಡಪ್ಪನ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಲಕ್ಷ್ಮಿಯ ತಂದೆ ಬೀಮಪ್ಪ ಎಂಬ ಸತ್ಯ ತಿಳಿಯುತ್ತದೆ. ಪೋಲೀಸರು ಭೀಮಪ್ಪನನ್ನು ಬಂಧಿಸಿ, ಕರೆದೊಯ್ಯುತ್ತಾರೆ. ಮರುದಿನ ಅಂದಾನಿ ತನ್ನ ಹೆಂಡತಿಯಾದ ನಾಯಕಿಗೆ ಹೊಡೆಯುವುವಾಗ, ಅಲ್ಲಿಗೆ ಬರುವ



ನಾಯಕನನ್ನು ಕಂಡು ತನ್ನನ್ನು ಕರೆದುಕೊಂಡು ಹೋಗುವಂತೆ ಅಂಗಲಾಚುತ್ತಾಳೆ. ಒಪ್ಪದ ನಾಯಕನನ್ನು ಶಪಿಸಿ ತನ್ನ ದೃಷ್ಟಿಯಿಂದ ದೂರ ಹೋಗು ಎಂದು ಕಿರುಚುತ್ತಾಳೆ. ನಾಯಕ ಊರು ಬಿಟ್ಟು ತೆರಳುವನು. ಇದರಿಂದ ನೊಂದ ನಾಯಕಿ ಸಾಯಲು ತೀರ್ಮಾನಿಸಿ ವಿಷಯ ರೊಟ್ಟಿ ಮಾಡಿಟ್ಟಿರುತ್ತಾಳೆ. ಅಕಸ್ಮಾತಾಗಿ ಅದು ಅಂದಾನಿ ಕಣ್ಣಿಗೆ ಬಿದ್ದು ವಿಷದ ರೊಟ್ಟಿಯನ್ನು ತಿಂದು ಸಾಯುತ್ತಾನೆ. ನಾಯಕಿಯೇ ತನ್ನ ಗಂಡನನ್ನು ಕೊಂದಳು ಎಂದು ಭಾವಿಸಿ ಪಂಚಾಯತಿ ಕರೆಯುತ್ತಾರೆ. ಅವಮಾನಗೊಂಡ ನಾಯಕಿ ಹುಚ್ಚಿಯಾಗಿ ಅಲ್ಲಿಂದ ಓಡುವಳು. ಮರುವರ್ಷದ ಜಾತ್ರೆಗೆ ನಾಯಕಿಯನ್ನು ಕರೆದುಕೊಂಡು ಹೋದರೆ ಹುಚ್ಚು ಬಿಡಬಹುದೆಂದು ಅವಳನ್ನು ಕರೆದೊಯ್ಯುತ್ತಾರೆ. ಜಾತ್ರೆಯಲ್ಲಿ ನಾಯಕಿಗೆ ನಾಯಕನ ಪ್ರಥಮ ಬೇಟಿಯ ನೆನಪುಗಳು ಮರುಕಳಿಸುತ್ತವೆ. ದಿಕ್ಕಾಪಾಲಾಗಿ ಓಡುತ್ತಿರುವ ಬಂಡಿಗಳ ನಡುವೆ ನಾಯಕಿಯನ್ನು ರಕ್ಷಿಸಲು ಜನರು ಹೆಣಗಾಡುತ್ತಿರುವಾಗ ಇದ್ದಕ್ಕಿದ್ದಂತೆ ನಾಯಕ ಬಂದು ಅವಳನ್ನು ರಕ್ಷಿಸಿ ಅಲ್ಲಿಂದ ಭವಿಷ್ಯದ ಕಡೆ ಅವಳನ್ನು ಕೈ ಹಿಡಿದು ಕರೆದು-ಕೊಂಡು ಹೋಗುತ್ತಾನೆ. ಹೀಗೆ ಹಲವು ಏರಿಳಿತಗಳೊಡನೆ ಜನುಮದ ಜೋಡಿಯ ಕಥೆ ಸುಖಾಂತ್ಯವಾಗುತ್ತದೆ.

## SYNOPSIS

Janumada jodi is a film not just about the character's in the village. It is about the culture and the living style and an ideal presentation for reference to anthropology. The folky tunes on the folky atmosphere brings out the folky tradition of Karnataka.

The hero glimpses the heroine in a jatre (mela) and it is love at first sight. But all is not well, The villain singari gowda, also tries to entice the heroine and is thoroughly rebuffed. Always lost in thought of kanaka. Krishna finally tells his friends of his desperate yearning to see.

Kanaka's stepmother tries to plan the girl off on her drunken elder brother. Krishna and his friends, on the advice of their teacher Ayyanavaru, plan a midnight marriage for Krishna and Kanaka. Kali, who has earmarked Krishna for herself overhears the plan and promptly informs Thamadappa.

Singari Gowda and Thamadappa rupture Krishna's plan and marry Kanaka off to the imbecile Andani. Krishna leaves the village for fields. The villagers curse Kanaka, citing her to be the cause of Krishna's exile. Kanaka pleads with Krishna to return in vain. Singari Gowda waylays her and tries to force himself on her. Krishna jumps in to fight Singari Gowda and saves her. Singari Gowda plots with Thamadappa to get rid of Krishna.

Thamadappa is just a corpse. With Singari's manipulation the stage is set for Krishna to go to jail. But another girl, Lakashmi's father Bheemappa confesses to Thamadappa's murder and Krishna is released. Singari also goes to jail for having hidden the murderer. Meanwhile, Andani ill treats his wife Kanaka, who screams to Krishna for help. Krishna hesitates, enraged Kanaka tells Krishna to get out of her sight, and Krishna leaves the village.



Kanaka, deciding to die, makes a poison dough. Andani eats the dough and dies.

On the panchyat deciding that Kanaka murdered her husband, she goes mad. Kanaka is taken to the next year's jatre, in the hope that services to god might cure madness. Memories of the previous year crowd on Kanaka. She rushes admits running carts. An individual runs to save her. It is Krishna. Kanaka smile in joy. Krishna taking her hand, starts to lead her away. Ramanna his brother comes forward to stop him, but Ayyanavaru prevents him, declaring that they are Janumada jodi and should not be held apart any more.

The story is based on Jnana peet award Sri. Pannalal patel's Gujarathi novel. 'Makla Jeeva'

## ಜನುಮದ ಜೋಡಿ ಚಿತ್ರಕ್ಕೆ ಸಂದ ಪ್ರಶಸ್ತಿಗಳು

**ಅತ್ಯುತ್ತಮ ನಿರ್ದೇಶಕ**
ಫಿಲ್ಮ್ ಫೇರ್

**ಸ್ಪೆಶಲ್ ಜ್ಯೂರಿ ಪ್ರಶಸ್ತಿ**
ಕರ್ನಾಟಕ ಸರ್ಕಾರ

**ಅತ್ಯುತ್ತಮ ನಟಿ**
ಕರ್ನಾಟಕ ಸರ್ಕಾರ

**ಅತ್ಯುತ್ತಮ ಸಂಗೀತ ನಿರ್ದೇಶಕ**
ಕರ್ನಾಟಕ ಸರ್ಕಾರ

**ಅತ್ಯುತ್ತಮ ಗೀತ ರಚನೆಕಾರ**
ಕರ್ನಾಟಕ ಸರ್ಕಾರ

**ಅತ್ಯುತ್ತಮ ಸಂಭಾಷಣೆ**
ಕರ್ನಾಟಕ ಸರ್ಕಾರ

**ಉತ್ತಮ ಹಿನ್ನೆಲೆ ಗಾಯಕ**
ಕರ್ನಾಟಕ ಸರ್ಕಾರ

*"ಕನ್ನಡ ಚಿತ್ರರಂಗದಲ್ಲಿ ಬಂಗಾರದ ಮನುಷ್ಯದ ನಂತರ ಅತಿ ಹೆಚ್ಚು ಗಳಿಕೆ ದಾಖಲಿಸಿದ ಚಿತ್ರ"*



## ಕಲಾವಿದರು

ಶಿವರಾಜ್ ಕುಮಾರ್
ಶಿಲ್ಪ
ಎಣಗಿ ಬಾಳಪ್ಪ
ಅಮೂಲ್ಯ
ಪವಿತ್ರ ಲೋಕೇಶ್
ರಾಜೀವ್
ಅಶೋಕ್
ಮುಖ್ಯಮಂತ್ರಿ ಚಂದ್ರ
ಕರಿಬಸವಯ್ಯ
ಕೃಷ್ಣೇಗೌಡ
ಹೊನ್ನವಳ್ಳಿ ಕೃಷ್ಣ
ಅರುಣ್ ಕುಮಾರ್
ಎಸ್ ರಾಮು
ಮಂಡ್ಯ ರಮೇಶ್
ಶನಿಮಹದೇವಪ್ಪ
ಜಯಕುಮಾರ್
ರಾಜಶೇಖರ್ ಕದಂಬ
ಡಾ. ಸಿಂಧುವಳ್ಳಿ ಅನಂತ ಮೂರ್ತಿ
ಚಂದ್ರಪ್ಪ
ಮೈಸೂರ್ ಆನಂದ
ಸುಮಾ ಜಗದೀಶ್
ರಾಧಾ ರಾಮಚಂದ್ರ
ಶೋಭಾ ರಾಘವೇಂದ್ರ
ಜ್ಯೋತಿ
ವಸುಂಧರ ಮಗ್ಗಾವಿ
ಪಾರ್ವತಿ ಲೋಕೇಶ್
ಸೆಲ್ವಿ
ಸೀಮಾ
ಬಸವರಾಜ್
ಸೋಮಣ್ಣಾ
ವಡ್ಡ ನಾಗರಾಜ್
ದೀಪಕ್ ರಾಂ
ಸುಗುಣ ಎಂ ಎಂ
ಡಿ ನಾಗೇಂದ್ರ ಕುಮಾರ್
ಟಿ ಎಸ್ ರಾಮನಾಥ್
ಬಿ ರೇಣುಕಾ ಪ್ರಸಾದ್
ಕೆ ಪ್ರಕಾಶ್ ಶಣೈ
ಡಾ. ಎಚ್ ಎ ಪಾರ್ಶ್ವನಾಥ್
ಆರ್ ಎಸ್ ಗಿರಿ
ಎಂ ವಿ ಶ್ರೀನಿವಾಸ್ ರಾವ್
ನಾಗೇಂದ್ರ ಜಿ

## ತಂತ್ರಜ್ಞರು

**ಸಾಹಸ**
ಥ್ರಿಲ್ಲರ್ ಮಂಜು
ಆಕ್ಷನ್ ಮೂರ್ತಿ

**ನೃತ್ಯ**
ತಾರ
ಪ್ರಸಾದ್

**ಸಹಾಯಕ ನಿರ್ದೇಶನ**
ಪ್ರಕಾಶ್ ರಾಜ್ ಮೇಹು
ನಾಗಪ್ಪ ಮಾರಡಗಿ

**ಸಹ ನಿರ್ದೇಶನ**
ಬಿ. ರಘುನಂದನ್

**ಹಾಡುಗಳು**
ವಿ ಮನೋಹರ್
ದೊಡ್ಡರಂಗೇಗೌಡ
ಶ್ರೀರಂಗ
ಬರಗೂರು ರಾಮಚಂದ್ರಪ್ಪ

**ಗಾಯನ**
ಡಾ. ರಾಜ್ ಕುಮಾರ್
ಮಂಜುಳ ಗುರುರಾಜ್
ಸಂಗೀತ ಕಟ್ಟಿ
ಶಿವರಾಜ್ ಕುಮಾರ್

**ಕಲಾ ನಿರ್ದೇಶನ**
ದಿನೇಶ್ ಮಂಗಳೂರು

**ಪ್ರಚಾರ ಕಲೆ**
ಅಚ್ಚು ಆರ್ಟ್ಸ್

**ಟೈಟಲ್ ಡಿಸೈನ್**
ಮೀರಾ ಅರುಣ್

**ಟೈಟಲ್ ಕಾರ್ಡ್**
ಗಂಗಾಧರ್

**ಕಥೆ**
*ಜ್ಞಾನಪೀಠ ಪ್ರಶಸ್ತಿ ವಿಜೇತ*
ಪನ್ನಾಲಾಲ್ ಪಟೇಲ್

**ಸಂಭಾಷಣೆ**
ಬರಗೂರು ರಾಮಚಂದ್ರಪ್ಪ

**ಸಂಗೀತ**
ವಿ. ಮನೋಹರ್

**ಸಂಕಲನ**
ಶಶಿಕುಮಾರ್

**ಛಾಯಾಗ್ರಹಣ**
ಬಿ.ಸಿ. ಗೌರಿಶಂಕರ್

**ನಿರ್ಮಾಪಕರು**
ಶ್ರೀಮತಿ ಪಾರ್ವತಮ್ಮ ರಾಜಕುಮಾರ್

**ಚಿತ್ರಕಥೆ–ನಿರ್ದೇಶನ**
ಟಿ.ಎಸ್. ನಾಗಾಭರಣ



## ದೃಶ್ಯ–1


*ಹಗಲು – ದೇವಸ್ಥಾನದ ಆವರಣ*

(ದೇವಸ್ಥಾನದಲ್ಲಿ ವಿಶೇಷ ಪೂಜೆ ಕಾರ್ಯಕ್ರಮವಿದೆ. ಎಲ್ಲೆಲ್ಲಿಯೂ ಸಂಭ್ರಮ, ಸಡಗರ, ಆಚರಣೆಗಳು, ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ಒಟ್ಟಾರೆ ಒಂದು ಜಾತ್ರಾ ಮಹೋತ್ಸವ. ದೇವಸ್ಥಾನದ ಆವರಣದಲ್ಲಿರುವ ಕೊಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ನಾನ, ಮಡಿ ಮಾಡಿಕೊಳ್ಳುತ್ತಿರುವ ಮಹಿಳೆಯರು. ಅಲ್ಲಿ ಸ್ನಾನ ಮಾಡಿ ಹೋಗುತ್ತಿದ್ದ ಮಹಿಳೆಯರನ್ನು ಕದ್ದು ನೋಡುತ್ತಿರುವ ತಮಡಪ್ಪ ಮತ್ತು ಸಿಂಗಾರಿಗೌಡ ಖುಷಿಪಡುತ್ತ:)

ತಮಡಪ್ಪ : ಅಯ್ಯಯ್ಯೊ...
(ಮಹಿಳೆಯರನ್ನು ನೋಡುತ್ತ ಖುಷಿಯಲ್ಲಿ)

ಸಿಂಗಾರಿಗೌಡ : ತಮಡಪ್ಪ, ನಮ್ಮೂರ್ನಾಗ್ ಮಾಮೂಲಿ ಹೊಕ್ಕಳ್ನೆ ನೋಡಿ ನೋಡಿ ಬರ್ಗೆಟ್ಟೋಗಿತ್ತು.

ತಮಡಪ್ಪ : ಹೌದು ಸಿಂಗಾರಿಗೌಡ, ಹೆಂಗ್ ಕಳಸ ಇಟ್ಟವ್ರಂಗ್ ಅವ್ರೆ ನೋಡು.



ಸಿಂಗಾರಿಗೌಡ : ತಮಡಪ್ಪ, ಜಾತ್ರೆಗ್ ಹೊಗದೇ ಬೇಡ. ಮೂರ್ ದಿವ್ಸಾನು ಈ ದಂಡೆ ಮ್ಯಾಗೆ ಕೂತಿರುವ.

**ನಿರ್ದೇಶಕರ ಟಿಪ್ಪಣಿ:**
ಸ್ಥಳ ಕರಿಘಟ್ಟ. ವೆಂಕಟರಮಣ ದೇವಸ್ಥಾನದ ಮುಂಭಾಗದಲ್ಲಿ ಊರ ಜಾತ್ರೆಯ ಪುನರ್ ನಿರ್ಮಾಣ ಮಾಡಲಾಗಿತ್ತು. ಇದು ಹಲವಾರು ದಿನಗಳ ಪರಿಶ್ರಮದ ಫಲವಾಗಿತ್ತು. ಈ

ಪುನರ್ ನಿರ್ಮಾಣದಲ್ಲಿ ಬಳಸುವ ಪರಿಕರಗಳು, ಅಭಿನಯಿಸಲು ಬಂದಿದ್ದ ಸಾವಿರಾರು ಕಿರಿಯ ಕಲಾವಿದರು ಹಾಗೂ ಜಾತ್ರೆಗೆ ಹೊಂದಿಕೊಂಡಂತೆ ಇದ್ದ ಜಾತ್ರೆಯ ರಥೋತ್ಸವ ಹಾಗೂ ಗಿರಿಗಿಟ್ಲೆ, ರಾಟೆಗಳನ್ನು ಮತ್ತು ಹಲವಾರು ಎತ್ತಿನ ಬಂಡಿಗಳು, ರಾಸುಗಳು ಇವೆಲ್ಲವನ್ನು ಸವಿವರವಾಗಿ ಚಿತ್ರೀಕರಣಕ್ಕೆ ಒಳಪಡುವಂತೆ ಕೆಲಸಮಾಡಲಾಗಿತ್ತು.



## ದೃಶ್ಯ–1ಅ

*ಹಗಲು – ದೇವಸ್ಥಾನದ ಆವರಣದ ಕೊಳ – ಹೊರಗೆ*

(ಕೊಳದ ದಂಡೆಯ ಮೇಲೆ ಕೈಹಿಡಿದುಕೊಂಡು ಮಗನನ್ನು ಸ್ನಾನ ಮಾಡಿಸಲು ಎಳೆದೊಯ್ಯುತ್ತಿರುವ ವೃದ್ಧಮಹಿಳೆ, ಬೇಡ ಬರುವುದಿಲ್ಲವೆಂದು ಬಲವಂತ ಮಾಡಿಬರುತ್ತಿರುವ ಮಗ ಅಂದಾನಿ.)

ಅಂದಾನಿ : ಅವ್ವಾ

ತಾಯಿ : ಲೇ ಅಂದಾನಿ, ಬಿರ್ನೆ ಬಾರ್ಲ. ಏ ಯೆಳೆಮಗೀನಂಗಾಡ್ಬ್ಯಾಡ. ಬಾರ್ಲಾ ಅಂದ್ರೆ

ಅಂದಾನಿ : ಬುಟ್ಬುಡವ್ವ.

ತಾಯಿ : ಬಾರ್ಲಾ.

ಅಂದಾನಿ : ನನ್ ಮುಳುಗ್ಸ್ಬೇಡ ಕಣವ್ವ. ನೀರಾಗ್ ಮುಳುಗುದ್ರೆ ನಂಗ್ ಎದೆ ನೋವ್ ಬತ್ತದೆ ಕಣವ್ವ.

ತಾಯಿ : ಈ ವಯಸ್ನಾಗ್ ಎಂಥ ಎದೆ ನೋವ್ಲಾ ಏನೋ ಬಿರ್ನೆ ಮದ್ವೆಯಾಗ್ಲಿ ಅಂತ ದೇವ್ರಗ್ ಹರ್ಕೆ ಹೊತ್ಕೊಂಡ್ ನೀರಲ್ ಮುಳುಗುಸ್ತೀನಿ ಅಂದ್ರೆ ಆ ನೋವು ಈ ನೋವು ಅಂತೀಯಾ?

ಅಂದಾನಿ : ಏ ಮದ್ವೆ ಬೇಡವ್ವೋ.

ತಾಯಿ : ಏ ಇನ್ನ ಎಷ್ಟ್ ದಿನಾ ಮದ್ವೆ ಆಗ್ದೆ ಹಿಂಗೇ ಇರ್ತಿಯೋ. ಈ ಜಾತ್ರೆನಾಗೆ ಯಾರಾದ್ರು ನೆಂಟ್ರು ಗಿಂಟ್ರು ಸಿಕ್ಕುದ್ರೆ ಅವರ್ಕಡೆ ಮೈನೆರೆದ್ ಹುಡ್ಗೀರು ಮದ್ವೆಗ್ ಅವ್ರಾ ಅಂತ ಕ್ಯೊಳ್ತಿನಿ.

ಅಂದಾನಿ : ಮೈನೆರೆದಿರೋ ಹುಡ್ಗೀನ?! ಅಯ್ಯಯ್ಯಪ್ಪ ನಾ ಒಪ್ಕಳಕಿಲ್ಲ. ಮೈನೆರೆದಿರೋ ಹುಡ್ಗೀನಾ ಎಲ್ಲಾರ ಮದ್ವೆ ಆಗದುಂಟಾ ಏ ಬುಡ್ ಬುಡವ್ವೋ.

ತಾಯಿ : ಏ ಮೈನೆರೆದಿರೋ ಹುಡ್ಗೀನ ಬುಟ್ಬುಟ್ಟು ಇನ್ನೇನ್ ತೊಟ್ಲಾಗಿರೋ ಕೂಸ್ ಮದ್ವೆ ಆಗ್ತೀಯೇನ್ಲಾ?

ಅಂದಾನಿ : ಏ ಹಂಗಲ್ಲ ಕಣವ್ವೋ, ತಲೆಯೆಲ್ಲ ನೆರ್ದಿರದ್ನ ಎಲ್ಲಾನ ಕೇಳಿವ್ನಿ, ಮೈಯೆಲ್ಲ ನೆರ್ದಿರೋ ಹುಡುಗೀನ ಮದ್ವೆ ಆಗಕಿಲ್ಲ ಅಂದ್ರೆ ಆಗಾಕಿಲ್ಲ.

(ಸುತ್ತ ಮುತ್ತ ಸ್ನಾನ ಮಾಡುತ್ತಿದ್ದ ಮಹಿಳೆಯರೆಲ್ಲ ಜೋರಾಗಿ ನಗುತ್ತಾರೆ.)

## ದೃಶ್ಯ–1ಆ

*ಹಗಲು–ಹೊರಾಂಗಣ–ದೇವಸ್ಥಾನದ ಆವರಣದ ಕೊಳ*

(ಸ್ನಾನ ಮಾಡಿ ಕೊಳದ ದಡದಲ್ಲಿ ನಿಂತಿರುವ ಲಕ್ಷ್ಮಿಯನ್ನು ನೋಡಿ ತಮಡಪ್ಪ;)

ತಮಡಪ್ಪ : ಹೇಯ್ ಲಕ್ಷ್ಮೀ. (ಅವಳ ಹತ್ತಿರ ಬಂದು) .. ಲಕ್ಷ್ಮೀ,

ಲಕ್ಷ್ಮಿ : ಏನೂ..?

(ಅಷ್ಟರಲ್ಲಿ ಲಕ್ಷ್ಮಿಯ ಅಪ್ಪ ಭೀಮಪ್ಪ ಬರುತ್ತಾನೆ)

ತಮಡಪ್ಪ : ನೀನು ಬ್ಲೋ ಚಂದಾಗ್ ಕಾಣ್ತೀಯ.

(ಅಪ್ಪ ಬರುವುದನ್ನು ಲಕ್ಷ್ಮಿ ಗಮನಿಸುತ್ತಾಳೆ)

ತಮಡಪ್ಪ : ಇಲ್ಲಿರೋರ್ಗಿಂತ

(ಭೀಮಪ್ಪ ಬಂದಿದ್ದನ್ನು ನೋಡಿ ಹೇಳುವುದನ್ನು ಅಲ್ಲಿಗೇ ನಿಲ್ಲಿಸುತ್ತಾನೆ)

ಲಕ್ಷ್ಮಿ : ಅಪ್ಪಾ..

(ತಮಡಪ್ಪನಿಗೆ ಸೂಚಿಸಿ, ಇಬ್ಬರೂ ಭಯಭೀತರಾಗಿ ನಿಲ್ಲುತ್ತಾರೆ)

ಭೀಮಪ್ಪ : ಏ ತಮಡಪ್ಪ, ನನಗಿದೆಲ್ಲ ಹಿಡ್ಸಾಕಿಲ್ಲ.

ತಮಡಪ್ಪ : ಯಾಕೆ ಏನಾಯ್ತು ಭೀಮಪ್ಪ.

ಭೀಮಪ್ಪ : ಲಕ್ಷ್ಮಿ ಅಪ್ಪ ನಾನಿರ್ವಾಗ, ನನ್ನೆಸ್ರಿಡಿದು ಕರಿದೆ ತುಂಬಿದ್ ಜಾತ್ರೆಲಿ ನನ್ನ ಮಗ್ಳ ಹೆಸ್ರಿಡಿದು ಕರೀತಿದ್ಯಲ್ಲ ನಂಗಿದ್ ಸರಿಕಾಣಕಿಲ್ಲ.

ತಮಡಪ್ಪ : ಏನೋ ಹೆಸ್ರು ಬಲ ಜೊತೆಗೆ ಅಭ್ಯಾಸಬಲ ಹಿಂಗ್ ಕರ್ದ್‌ಬುಟೆ ಅಷ್ಟೆ.





ಭೀಮಪ್ಪ : ಏನ್ ಅಭ್ಯಾಸಬಲ ಅಂದ್ರೆ? ಯಾವಾಗ್ಲು ನನ್ ಮಗ್ಳು ಧ್ಯಾನ ಮಾಡ್ತಿರ್ತೀಯ?

ತಮಡಪ್ಪ : ಹಂಗಲ್ಲ ಭೀಮಪ್ಪ. ಕೆಲವ್ರಿಗೆ ಸರಸ್ವತಿ ಧ್ಯಾನ, ಕೆಲವ್ರಿಗೆ ಲಕ್ಷ್ಮಿ ಧ್ಯಾನ ಇನ್ನು ನಂಗೆ ದಕ್ಷಿಣೆ ಎತ್ತುತೀನಲ್ಲ ಹಂಗಾಗಿ ಲಕ್ಷ್ಮೀ ಲಕ್ಷ್ಮೀ ಅಂತ ಕರ್ದ್‌ಬಿಟ್ಟೆ.

ಭೀಮಪ್ಪ : ಆಯ್ತಾಯ್ತು. ನಿನ್ ಪಾಡಿಗ್ ನೀನ್ ಹೋಗು, ನಾವು ಹೋಯ್ತಿವಿ. ಲಕ್ಷ್ಮಿ, ಬಂಡರಸಮ್ಮನ್ ಬಂಡಿತಾವ್ ಹೋಗ್ಬೇಕು ಬಾವ್ವ ಹೋಗನ. ಬಾ.

(ಅಲ್ಲಿಂದ ಹೊರಡುತ್ತಾರೆ)

**ನಿರ್ದೇಶಕರ ಟಿಪ್ಪಣಿ:**

ಮಹದೇವಪುರದ ಸಮೀಪವಿರುವ ಸ್ನಾನ ಘಟ್ಟ. ಈ ದೃಶ್ಯದಲ್ಲಿ ಸಿಂಗಾರಿಗೌಡ ಮತ್ತು ತಮಡಪ್ಪ ಅವರ ಪಾತ್ರ ಪರಿಚಯವನ್ನು, ಸ್ನಾನಘಟ್ಟದಲ್ಲಿ ಸ್ನಾನ ಮಾಡುತ್ತಿರುವ ಮಹಿಳೆಯರನ್ನು ನೋಡುವ ಉದ್ದೇಶದಿಂದಲೇ ಬಂದಿದ್ದಾರೆಂಬುದರ ಮೂಲಕ ಬಿಂಬಿಸಲಾಗಿದೆ ಮತ್ತು ಜೊತೆಗೆ ಅಂದಾನಿ ಮತ್ತು ಅವನ ತಾಯಿಯ ಪರಿಚಯವನ್ನೂ ಅವರ ಮಾತುಗಳಲ್ಲಿ ಅವನು ಮುಗ್ಧ ಎಂಬುದನ್ನು ತಿಳಿಸುವುದರ ಮೂಲಕ ಮಾಡಲಾಗಿದೆ. ಹಾಗೆಯೇ ತಮಡಪ್ಪ ಮತ್ತು ಲಕ್ಷ್ಮಿ ನಡುವಿನ ಸ್ನೇಹ ಮತ್ತು ಭೀಮಪ್ಪನ ಪರಿಚಯವನ್ನು ಮಾಡಲಾಗಿದೆ.

## ದೃಶ್ಯ-2

*ಹಗಲು – ದೇವಸ್ಥಾನದ ಆವರಣ – ಹೊರಗೆ*

(ಅಲಂಕಾರಗೊಂಡ ಎತ್ತಿನಗಾಡಿಗಳು ಓಡಾಡುತ್ತಿವೆ. ಅಲ್ಲಿ ಸದ್ಯದಲ್ಲೆ ಎತ್ತಿನಗಾಡಿ ಪಂದ್ಯ ಆರಂಭವಾಗುವ ಸೂಚನೆಯಿದೆ.)

ರಘು : ಗಿರಿಗೌಡ ಎತ್ತಗೊಳ್ಳಲ್ಲ ಹಿಂಗ್ ಓಡ್ತಾವಲ್ಲಪ್ಪ. ಜಾತ್ರೆಲಿ ಹೆಂಗುಸ್ರು ಮಕ್ಕೆಲ್ಲ ಅವ್ರೆ ಏನಾದ್ರು ಹೆಚ್ಚು ಕಡ್ಮೆ ಆದ್ರೆ ಏನಪ್ಪ ಗತಿ.

ಗಿರಿಗೌಡ : ಇದು ದ್ಯಾವರ್ ಸೇವೆ ಕಣಣ್ಣ. ಅಮ್ಮಾವ್ರ್ ಮಹಿಮೆ ಇದ್ರಲ್ ಗೊತಾಗ್ತೈತೆ. ಹೆಂಗೋಡುದ್ರು ಯಾರ್ಗು ಏನೂ ಆಗಾಕಿಲ್ಲ.

ಪ್ರಕಾಶ : ಬಂಡಿ ಕಟ್ದಾ ಅಂದ್ರೆ ಎಮ್ಮೆಯಂಗ್ ಮಲಿಯೋ ಎತ್ತ್‌ಗೊಳುವೆ ಕುದ್ರೆಯಂಗ್ ಓಡ್ತವೆ ಕಣಣ್ಣೋ.

ಕಲ್ಲಪ್ಪ : ಬಂಡಿ ಕಟ್ಟಿದ್ ಎತ್ತಗಳ್ಗೆ ರೋಗ ರುಜಿನ ಏನು ಬರಕಿಲ್ಲ.
(ಸುತ್ತಲೂ ಜಾತ್ರೆಯ ಸಡಗರ ಕಾಣಿಸುತ್ತಿದೆ)



## ದೃಶ್ಯ-2ಅ

*ಹಗಲು – ದೇವಸ್ಥಾನದ ಆವರಣ – ಹೊರಗೆ*

(ಒಂದು ಎತ್ತಿನಗಾಡಿ ದಿಕ್ಕಾಪಾಲಾಗಿ ಓಡುತ್ತ, ಸುತ್ತಮುತ್ತ ನೆರೆದಿದ್ದ ಸಾರ್ವಜನಿಕರನ್ನೆಲ್ಲ ಘಾಸಿಮಾಡಿಕೊಂಡು, ಅಲ್ಲಿದ್ದ ಆಸ್ತಿ ಪಾಸ್ತಿಗಳನ್ನು ನಾಶಮಾಡಿಕೊಂಡು ಮುನ್ನುಗ್ಗುತ್ತಿರುತ್ತದೆ. ಜನರೆಲ್ಲ ಭಯಭೀತರಾಗಿ, ದಿಕ್ಕಾಪಾಲಾಗಿ ಓಡುತ್ತಿರುತ್ತಾರೆ. ಮುಂದೇನು ಅಪಾಯ ಇರುವುದೋ ಎಂದು ಯೋಚಿಸುತ್ತಿರುವಾಗ, ನಾಯಕ ಕೃಷ್ಣ ಅಲ್ಲಿಗೆ ಬಂದು ಓಡುತ್ತಿದ್ದ ಎತ್ತಿನಗಾಡಿಯನ್ನು ಹಿಡಿದು ನಿಲ್ಲಿಸಿ ಗಾಡಿ ಹೊಡೆಯುತ್ತಿದ್ದವನಿಗೆ;)

ಕೃಷ್ಣ : ಯೋ ನಿನ್ ಕೈಯ್ಯಾಗ್ ಕಿಸಿಯಾಕ್ ಆಗ್ದಿದ್ರೆ ಬಂಡಿಯಾಕಯ್ಯ ಕಟ್ಕೋಕ್ ಹೋದೆ. ಏನಾದ್ರು ಅನಾಹುತ ಆಗಿದ್ರೆ ಏನ್ ಗತಿ. ಬೇರೆ ಯಾರ್ಗಾದ್ರು ಬಂಡಿ ಓಡ್ಸಾಕ್ ಹೇಳು.

ಬಂಗಾರು : ಒಳ್ಳೆ ಗಂಡಾಂತ್ರ ತಪ್ಪುಸ್ದಂಗ್ ಆಯ್ತು.

ಮಹದೇವ : ಅಪ್ಪಾ ಮಾರಾಯ ಏನ್ ಬರೀ ಇಂಥಾ ಮೈ ಮೂಳೆ ಮುರಿಯಂಥಾ ಕೆಲ್ಸಾನೆ ಮಾಡ್ತಾ ಇರ್ತಿಯೋ ಅಥ್ವಾ ಜಾತ್ರೆನಾಗ್ ಏನಾದ್ರು ಮಜಾ-ಗಿಜಾ ತೋರ್ಸ್ತಿಯೋ ಹೆಂಗೆ.

ಕೃಷ್ಣ : ಲೋ ಬನ್ರುಲಾ ಹೋಗವಾ.
(ಕೃಷ್ಣ ತನ್ನ ಸ್ನೇಹಿತರೊಡನೆ ಜಾತ್ರೆಯ ಜನರ ಮಧ್ಯೆ ಒಂದಾಗುತ್ತಾನೆ)

**ನಿರ್ದೇಶಕರ ಟಿಪ್ಪಣಿ:**
ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದ ಬಂಡರಸಮ್ಮನ ಬಂಡಿಯನ್ನು ಕೃಷ್ಣ ಅದರ ಮೂಕಿಯನ್ನು ಹಿಡಿದು ನಿಲ್ಲಿಸುವುದರ ಮೂಲಕ ಆತ ಮತ್ತು ಆತನ ಸ್ನೇಹಿತರ ಪರಿಚಯವನ್ನು ಮಾಡಲಾಗಿದೆ.

## ದೃಶ್ಯ–3

*ಹಗಲು – ಜಾತ್ರೆ – ಹೊರಗೆ*

(ಮೇಲೆ ಕೆಳಗೆ ಆಡುತ್ತಿರುವ ತೊಟ್ಟಿಲ ಜೋಕಾಲಿಯ ಬಳಿ)

ಕೃಷ್ಣ : ನೋಡ್ರುಲ, ಎಲ್ರುಗು ಹೇಳ್ತಿವ್ನಿ ಜೋಕಾಲಿ ನಿಂತೇಟ್ಗೆ ಖಾಲಿ ಇರಾತಾವ ಕುತ್ಕಬುಡ್ಬೇಕು. ಆಮೇಲ್ ಜಾಗ ಸಿಗ್ನಿಲ್ಲ ಅಂತ ಜಾತ್ರೆನಾಗೆಲ್ಲ ಜಾಪಾಳ್ ಮಾತ್ರೆ ತಗೊಂಡೋರ್ಥರ ಆಡ್ಬ್ಯಾಡ್ರಿ.

ಬಂಗಾರು : ಎಲ್ಲಾರು ಉಂಟಾ ತೊಟ್ಲು ನಿಂತೇಟ್ಗೆ ತಟಕ್ಕಂತ ಎಗ್ರಿ ಕೂತ್ಕಂಡ್ಬುಡ್ತೀನಿ.

(ಎನ್ನುತ್ತಲೇ ತೊಟ್ಟಿಲು ನಿಲ್ಲುತ್ತದೆ. ಖಾಲಿ ಇರುವುದನ್ನು ನೋಡಿ ಕೃಷ್ಣ ಹೋಗಿ ಒಂದು ತೊಟ್ಟಿಲಲ್ಲಿ ಕೂರುತ್ತಾನೆ. ಪಕ್ಕದಲ್ಲಿ ಒಂದು ಹೆಣ್ಣು ಕುಳಿತಿರುವುದನ್ನು ಆತ ಗಮನಿಸಿರುವುದಿಲ್ಲ)

ಕೃಷ್ಣ : ಆ.. ನಂಗೆ ಜಾಗ ಸಿಕ್ತು. (ಎಂದು ಕೂರುವನು)


ಕೃಷ್ಣ : (ಸ್ನೇಹಿತರಿಗೆ) ಲೋ ಎಲ್ಲಾರು ಬೇಗ್ ಬೇಗ.

(ತೊಟ್ಟಿಲು ಮೇಲೆ ಬರುತ್ತದೆ.)

ಕನಕ : (ತನ್ನ ಸ್ನೇಹಿತೆಗೆ) ಲೇ ಯಾಕೆ ಇಳ್ದಬಿಟ್ಟೆ.

ಕೃಷ್ಣ : ಲೋ ನಂಜ ಕೂತ್ಕಂಡ್ರೆನೋ.

(ಜೋರಾಗಿ ಕೂಗಿದಾಗ ಕನಕ ಕೃಷ್ಣನ ಕಡೆ ತಿರುಗುತ್ತಾಳೆ. ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ. ತೊಟ್ಟಿಲು ಮೇಲೆ ತೂಗಾಡುತ್ತಿದೆ. ಹಾಡೊಂದು ಪ್ರಾರಂಭವಾಗುತ್ತದೆ)





## ದೃಶ್ಯ–4

*ಹಗಲು – ಜಾತ್ರೆಯ ವಾತಾವರಣ – ಹೊರಗೆ*
*ಹಾಡು: ಇವನ್ಯಾರ ಮಗನೋ ಹಿಂಗವ್ನಲ್ಲ*
*ಸಾಹಿತ್ಯ: ವಿ. ಮನೋಹರ್*
*ಹಾಡಿದವರು: ರಾಜೇಶ್ ಕೃಷ್ಣನ್ ಮತ್ತು ಮಂಜುಳಾ ಗುರುರಾಜ್*

(ತೊಟ್ಟಿಲೊಳಗೆ ಜೀಕುವ ಮನಸ್ಸುಗಳು ಹಾಡತೊಡಗುತ್ತವೆ. ಹಿನ್ನೆಲೆಯ ಹಾಡು. ಅವರ ಮನಸ್ಸುಗಳು ಮಾತಾಡಿದಂತೆ ಹಾಡಿ ನಲಿಯುತ್ತವೆ)

ಹೆ : ಇವನ್ಯಾರ ಮಗನೋ ಹಿಂಗವ್ನಲ್ಲ..
ಗ : ಇವಳ್ಯಾರ ಮಗಳೋ ಹಿಂಗವ್ಳಲ್ಲ..
ಗ : ಮಹಾಲಕ್ಷ್ಮೀ ರೂಪ.. ಹೆ : ಶೂರಾ ಈ ಭೂಪ..
ಗ : ಮಹಾಲಕ್ಷ್ಮೀ ರೂಪ.. ಹೆ : ಶೂರಾ ಈ ಭೂಪ..
ಗ : ಕಣ್ಣಿಂದ್ಲೆ ಸೆಳಕೊಂಡ್ಲೇ ಹಾ...
ಹೆ : ಇವನ್ಯಾರ ಮಗನೋ ಹಿಂಗವ್ನಲ್ಲ..
ಗ : ಇವಳ್ಯಾರ ಮಗಳೋ ಹಿಂಗವ್ಳಲ್ಲ..

ಹೆ : ಮನಸೆಲ್ಲ ಇವನಿಂದ ರಾಟೆ ತೊಟ್ಲಾ ಆಯ್ತು
ಈ ತೊಟ್ಲ ತುಂಬೆಲ್ಲಾ ಇವನೇ ಕುಂತಾಯ್ತು
ಗ : ಎದೆ ಈಗ ಇವಳಿಂದ ಗಿರಗಿಟ್ಲೇ ಆಯ್ತು
ಇವಳ್ಹಿಂದೆ ಹಿಂದೇನೆ ಅಲೆಯೋಕ್ ಶುರುವಾಯ್ತು
ಹೆ : ಏನು ನವಿರು.. ಕೂಗೊ ಹೆಸರು.. ಹೇಗೆ ಇರಬಹುದಪ್ಪ
ನಾಳೆ ಇವನು.. ಆದ್ರೆ ಗೆಣೆಯ.. ಹ್ಯಾಗೆ ಕರೀಬಹುದಪ್ಪ
ಗ : ಇನಳೇನ ಸಿರಿದೇವಿ ಹಾ..
ಹೆ : ಇವನ್ಯಾರ ಮಗನೋ ಹಿಂಗವ್ನಲ್ಲ..
ಗ : ಇವಳ್ಯಾರ ಮಗಳೋ ಹಿಂಗವ್ಳಲ್ಲ..



ಹೆ : ಹೋ.. ಜಾತ್ರೇಯ ನೋಡೋಕೆ.. ನೋಡಿ ಕೊಂಡಾಡೋಕೆ..
ಶಿವನೆ ಅವತಾರಾನ ಎತ್ತಿ ಬಂದಾನೋ..
ಗ : ಕೈಲಾಸ ಗಿರಿಯಿಂದ ಭೂಲೋಕ ಸುತ್ತೋಕೆ
ಪಾರೋತಿ ಈ ವೇಷ ತಾಳಿ ಬಂದಾಳೋ
ಹೆ : ಏನು ಇವನ ಆಸೆ ಒಳಗೆ ಯಾರ ಪಟವೋ ಕಾಣೆ
ಗ : ಯಾವ ಪದವೂ ಹೇಳದೇನೆ ನನ್ನ ಸೆಳೆದ ಜಾಣೆ
ಹೆ : ಒಲಿದಾರೆ ಇವಗೇನೆ.. ಹಾ..

ಹೆ : ಇವನ್ಯಾರ ಮಗನೋ ಹಿಂಗವ್ನಲ್ಲ..
ಗ : ಇವಳ್ಯಾರ ಮಗಳೋ ಹಿಂಗವ್ಳಲ್ಲ..

ಗ : ಮಹಾಲಕ್ಷ್ಮೀ ರೂಪ.. ಹೆ : ಶೂರಾ ಈ ಭೂಪ..
ಗ : ಮಹಾಲಕ್ಷ್ಮೀ ರೂಪ.. ಹೆ : ಶೂರಾ ಈ ಭೂಪ..
ಗ : ಕಣ್ಣಿಂದ್ಲೆ ಸೆಳಕೊಂಡ್ಲೇ ಹಾ...
ಹೆ : ಇವನ್ಯಾರ ಮಗನೋ ಹಿಂಗವ್ನಲ್ಲ..
ಗ : ಇವಳ್ಯಾರ ಮಗಳೋ ಹಿಂಗವ್ಳಲ್ಲ...

(ಹಾಡು ಮುಗಿಯುತ್ತಿದ್ದಂತೆ ಕನಕಳ ಸ್ನೇಹಿತೆಯರು ಮತ್ತು ಕೃಷ್ಣನ ಸ್ನೇಹಿತರು ಬಂದು ಅವರನ್ನು ಜಾತ್ರೆಯ ಮಧ್ಯೆ ಕರೆದೊಯ್ಯುವರು.)

**ನಿರ್ದೇಶಕರ ಟಿಪ್ಪಣಿ:**
ಈ ದೃಶ್ಯದಲ್ಲಿ ಕೃಷ್ಣ ಮತ್ತು ಕನಕ ಒಬ್ಬರನ್ನೊಬ್ಬರು ನೋಡಿದಾಗ ಅಲ್ಲಿ ಜಾತ್ರೆಯಲ್ಲಿ ನಡೆಯುತ್ತಿರುವ ಶಬ್ದಗಳೆಲ್ಲ ಸ್ತಬ್ಧವಾಗಿ ಅವರ ಮನಸ್ಸುಗಳು ಮಾತನಾಡಿಕೊಳ್ಳುವ ಶಬ್ಧ ಮಾತ್ರ ಕೇಳಿಸುವಂತಹ ಒಂದು ರೀತಿಯ ವಿಭಿನ್ನ ರೀತಿಯ ಹಾಡಿನ ದೃಶ್ಯವನ್ನು ಚಿತ್ರೀಕರಿಸಲಾಗಿದೆ. ಜಾತ್ರೆಯ ಮಧ್ಯ ಹಲವಾರು ನೃತ್ಯ ತಂಡಗಳ ಬಳಿ ಬಂದರು. ಇವರಿಗೆ ಇವರ ಮನಸ್ಸಿನ ಮಾತು ಬಿಟ್ಟು ಬೇರೆ ಯಾವ ಮಾತೂ ಕೇಳಿಸುವುದಿಲ್ಲ. ಜಾತ್ರೆಗೆ ಬಂದಿದ್ದ ಎಲ್ಲ ಕಲಾಪ್ರಕಾರಗಳ ಮಧ್ಯೆ ಓಡಾಡುತ್ತಲೆ ಒಬ್ಬರಿಗೊಬ್ಬರು ಆಕರ್ಷಿತರಾಗಿದ್ದಾರೆಂಬುದು ಪ್ರಕಟವಾಗುತ್ತದೆ.)



## ದೃಶ್ಯ–5

*ಹಗಲು – ದೇವಸ್ಥಾನ ರಥದ ಹತ್ತಿರ – ಹೊರಗೆ* .

(ರಥದ ಬಳಿ ಊರಿನ ಹಿರಿಯರು, ಯಜಮಾನರುಗಳು ಒಬ್ಬರಿಗೊಬ್ಬರು ನಮಸ್ಕಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ.)

ರಾಮನಾಥ : ಈರೇಗೌಡ್ರು ಇನ್ನ ಬರ್ಲೇ ಇಲ್ವಲ್ಲ. ಹೊತ್ ಬೇರೆ ಮೀರ್ತಾ ಬಂತು. ಈಗೇನ್ರಪ್ಪ ಮಾಡದು? (ಅಲ್ಲಿ ನೆರೆದಿದ್ದವರಿಗೆ ಕೇಳುತ್ತಾನೆ)

ಸಿಂಗಾರಿಗೌಡ : ಏನ್ ಮಾಡದು ಅಂದ್ರೆ ಕಾಯ್ಬೇಕು. ನಮ್ಮಪ್ಪ ಬರಗಂಟ ಕಾಯ್ಬೇಕು ಅಷ್ಟೇಯ.

ಪ್ರಕಾಶ : ನಂಗೇನೋ ಹಿಂಗನ್ನಸ್ತೈತೆ. ಇದುವರೆಗೂ ಈರೇಗೌಡ್ರು ಯಾವ್ದೋ ಕಾರ್ಣಕ್ಕೆ ಇಲ್ಲಿಗ್ ಬಂದಿಲ್ಲ, ಅದಿಕ್ಕೆ ಅದೇ ಊರ್ನವ್ರು ಸುತ್ತೇಳ್ಹಳ್ಳಿಲಿ ನ್ಯಾಯ ಮಾಡೋರು , ರಾಮಣ್ಣೋರೆ ರಥ ಎಳಿಲಿ ಅಂತ.

ತಮಡಪ್ಪ : ಇದ್ರಜ್ಜಿ ಎಕ್ಕುಟ್ಟೋಗ, ಅದೆಲ್ಲ ಹೆಂಗಾಗುತ್ತೀಗ, ಈರೇಗೌಡ್ರು ಇಲ್ಲದಿದ್ರೇನು? ಅವರ್ ಮಗ ಸಿಂಗಾರಿಗೌಡ ಇಲ್ವ.

ನಾಗೇಂದ್ರ : ಇರ್ಬೋದು. ಇಲ್ಲಾ ಅಂತ ಯಾರ್ ಹೇಳಿದ್ದು. ಅದಿಕ್ಕೆಲ್ಲ ಹಿರಿತನ ಮುಖ್ಯ.

ಸಿಂಗಾರಿಗೌಡ : ಓ ಹಂಗಂತ ನಮ್ ಮನೆತನಕ್ಕೆ ಅಪಮಾನ ಮಾಡ್ತೀರ? ಇದ್ರಲ್ಲೇನೊ ಮಸಲತ್ತೈತೆ, ನಾನಿದೆಲ್ಲ ಸಹಿಸಾಕಿಲ್ಲ.

ಕಲ್ಲಪ್ಪ : (ಕೋಪಗೊಂಡು) ಏನಾ, ಮಸ್ಲತ್ತು ಗಿಸ್ಲತ್ತು ಅಂತ ಮಾತಾಡ್ತಿದ್ದೈ? ಯಾರು ಇಲ್ದ್ ಮನೆಗೆ ಈರಜ್ಜಿನೇ ಯಜಮಾನಿ ಅಂದ್ಹಂಗೆ ಏನೋ ಹಿರಿಯ ನಿಮಪ್ಪ ಅಂತ ಮರ್ವಾದೆ ಕೊಟ್ರೆ ನಿಂದ್ಯಾಕೊ ಮಿತಿ ಮೀರ್ತಾ ಐತೆ ಅಷ್ಟೆಯಾ.

ಸಿಂಗಾರಿಗೌಡ : ಹೇ.. ಮಿತಿ ಮೀರ್ತಾರೋದು ನೀನು, ನಾನಲ್ಲ. ಒಂದ್ಸೇಳ್ತಿನಿ ಕೇಳಿ ನಮಪ್ಪ ಬರಾಗಂಟ ರಥ ಮುಂದಕ್ಕೋಗಕ್ ಬುಡಲ್ಲ.

ರಾಮಣ್ಣ : (ಸಿಂಗಾರಿಗೌಡನನ್ನು ಸಮಾಧಾನ ಪಡಿಸುತ್ತ) ಇದಕ್ಕೆಲ್ಲ ಯಾಕ್ ಬ್ಯಾಸ್ರಾ ಮಾಡ್ಕತಿಯ ಸಿಂಗಾರಿಗೌಡ, ನಿಮಪ್ಪ ಬರಾಗಂಟ ಕಾಯ್ಬೇಕು ಅಂದ್ರೆ ಕಾಯಣ್ಣ, ಇದ್ರಾಗ್ ನಂದೇನು ತಕ್ರಾರ್ ಇಲ್ಲ.

ಸಿಂಗಾರಿಗೌಡ : ಎಷ್ಟ್ದಾಗ ಮಾತ್ ಬಿದ್ದೋಗ್ಲಿ ಅಂತ ಮಾತಾಡ್ಬೇಡ ರಾಮಣ್ಣ. ಒಳಗಡೆ ವಿಷ ಇಟ್ಕಂಡು ಹೊರ್ಗಡೆ ವಯ್ಯಾರ ಮಾಡುದ್ರೆ ನಂಗೊತ್ತಾಗಲ್ಲ ಅನ್ಕಂಡ್ಯಾ?

ರಾಮಣ್ಣ : ಸುತ್ತೇಳಳ್ಳಿ ಜನ ಸೇರಿರೋವಾಗ ಕಡ್ಡಿನ ಗುಡ್ಡ ಮಾಡಿ ಒಳ್ಳೆ ಕೆಲ್ಸಕ್ ಕಲ್ ಹಾಕ್ಬೇಡ ಸಿಂಗಾರಿ.



ಸಿಂಗಾರಿಗೌಡ : ಯಾವ್ದೊಳ್ಳೇ ಕೆಲ್ಸಾ?

ಕಲ್ಲಪ್ಪ : ರಾಮಣ್ಣೋರೆ ರಥಾ ಎಳೆಯೋದೇ ಒಳ್ಳೇ ಕೆಲ್ಸಾ. ಅವ್ರೇ ರಥ ಎಳಿಲಿ ಬಿಡಿ.
(ಹೌದು ಹೌದು ಎಂದು ಜನ ಗಲಾಟೆ ಮಾಡಿ ರಾಮಣ್ಣನಿಗೆ ರಥ ಎಳೆಯುವಂತೆ ಸೂಚಿಸುತ್ತಾರ. ಶ್ರೀ ಮಹಾಲಕ್ಷ್ಮಿಗೇ ಜೈ ಎಂದು ಜೈಕಾರ ಹಾಕುತ್ತ ರಾಮಣ್ಣನ ಮುಂದಾಳತ್ವದಲ್ಲಿ ಎಲ್ಲರೂ ರಥವನ್ನು ಎಳೆಯುತ್ತಾರೆ. ಈ ಸಮಯದಲ್ಲಿ ಸಿಂಗಾರಿಗೌಡ, ತಮಡಪ್ಪನನ್ನು ಕರೆದು;)

ಸಿಂಗಾರಿಗೌಡ : ತಮಡಪ್ಪ, ರಾಮಣ್ಣ ರಥ ಎಳೆಯೋವಾಗ ನಮ್ಮೋರು ರಥದ್ ಕಡಾಣಿ ತೆಗಿಬೇಕು.

ತಮಡಪ್ಪ : ಅದು ಬಿಡಿ ನನಗೆ.
(ರಥ ಮುಂದೆ ಸಾಗುತ್ತಿರುವಾಗ ಸಿಂಗಾರಿಗೌಡನ ಕಡೆಯವನು ಯಾರಿಗು ತಿಳಿಯದ ಹಾಗೆ ರಥದ ಒಂದು ಚಕ್ರದ ಕಡಾಣಿಯನ್ನು ತೆಗೆಯುತ್ತಾನೆ. ರಥ ಅಲುಗಾಡಲು ಪ್ರಾರಂಭಿಸುವುದನ್ನು ಗಮನಿಸುವ ಕೃಷ್ಣ ರಥದ ಚಕ್ರದ ಬಳಿಗೆ ಬಂದು ನೋಡಿದಾಗ ಚಕ್ರದ ಕಡಾಣಿ ಇಲ್ಲದಿರುವುದು ತಿಳಿದು ಚಕ್ರವನ್ನು ಭದ್ರವಾಗಿ ಹಿಡಿದು ಮುಂದೆ ನಡೆಯುವಂತೆ ಮಾಡುತ್ತಾನೆ. ಸ್ನೇಹಿತರೆಲ್ಲ ಕೃಷ್ಣನ ಬಳಿ ಬರುತ್ತಾರೆ)



ಕೃಷ್ಣ : ಅಲ್ಲಾ, ಊರ್ ಮನೆ ಗಳಾ ಎಳೆಯೋ ಕೆಲ್ಸಾನ ಯಾವ್ ಹಲ್ಕಟ್ ನನ್‌ಮಗಾ ಮಾಡಿರ್ಬಹುದೂಂತ ಹೇಳು. ಹೋಗು ಯಾವ್ದಾದ್ರುಬಂಡಿ ಕಡಾಣಿ ಎತ್ಕಂಡ್ ಬಾ ಹೋಗು. (ಸ್ನೇಹಿತರಿಗೆ) ..ಲೋ ನೀವೆಲ್ಲ ಮುಂದೆ ಜೈ ಕಾರ ಹಾಕಿ.
(ಎಲ್ಲರನ್ನು ಮುಂದೆ ಕಳುಹಿಸುತ್ತಾನೆ. ಮಹದೇವ ಓಡಿ ಬಂದು ಒಂದು ಕಡಾಣಿಯನ್ನು ತಂದುಕೊಡುತ್ತಾನೆ. ಕೃಷ್ಣ ಅದನ್ನು ಹಾಕಿ ಜಯಕಾರ ಹಾಕುತ್ತ ಸಂಭ್ರಮಿಸುತ್ತಾನೆ. ಸಂಭ್ರಮದಿಂದ ರಥೋತ್ಸವ ಮುಂದುವರೆಯುತ್ತದೆ. ಕೃಷ್ಣ, ಕನಕಾಳನ್ನು ಹುಡುಕಿಕೊಂಡು ಅಲ್ಲಿಂದ ಬೇರ್ಪಡೆಯಾಗುತ್ತಾನೆ.)

**ನಿರ್ದೇಶಕರ ಟಿಪ್ಪಣಿ:**

ರಥದ ಕಡಾಣಿಯನ್ನು ತಗೆದು ಗೊಂದಲವಾಗಿದ್ದ ವಾತಾವರಣವನ್ನು ಮತ್ತೆ ಕಡಾಣಿ ಹಾಕುವ ಮೂಲಕ ಕೃಷ್ಣ, ತೇರು ಯಾವುದೇ ಅಡೆ ತಡೆಗಳಿಲ್ಲದೆ ಪ್ರದಕ್ಷಿಣೆಯನ್ನು ಹಾಕುವಂತೆ ಮಾಡುತ್ತಾನೆ. ಇಷ್ಟೆಲ್ಲ ಮಾಡಿಯೂ ತಾನು ತೊಟ್ಟಿಲ ಜೋಕಾಲಿಯಲ್ಲಿ ಕುಳಿತಾಗ ಭೇಟಿಮಾಡಿದ ಹುಡುಗಿಗಾಗಿ ಹುಡುಕುತ್ತ ಹೋಗುತ್ತಾನೆ

ಕೃಷ್ಣನ ಅಣ್ಣ ರಾಮಣ್ಣ ಹಾಗೂ ಈರೇಗೌಡರ ಮಗ ಸಿಂಗಾರಿಗೌಡ ಒಂದೇ ಊರಿನವರೆಂದು ಪರಿಚಯಿಸಲಾಗುತ್ತೆ. ಸಿಂಗಾರಿಯ ಕುತ್ಸಿತ ಬುದ್ಧಿ ರಾಮಣ್ಣನ ಹಿರಿತಹ, ಜಾತ್ರೆಯ ಕುತಂತ್ರವನ್ನ ವಫಲಿಸುವ ಕೃಷ್ಣನ ಸಾಹಸ ಈ ದೃಶ್ಯದ ಮುಖ್ಯಾಂಶಗಳು.

## ದೃಶ್ಯ–5ಅ

*ಹಗಲು – ಜಾತ್ರಾ ಸ್ಥಳ – ಹೊರಗೆ*

(ಕನಕ ತನ್ನ ಸ್ನೇಹಿತೆಯೊಂದಿಗೆ ಬರುತ್ತಿರುವುದನ್ನು ಸಿಂಗಾರಿಗೌಡ ನೋಡುತ್ತಾನೆ ನಂತರ ತಮಡಪ್ಪನನ್ನು ಕರೆದು;)

ಸಿಂಗಾರಿಗೌಡ : ಲೇ ತಮಡಪ್ಪ ಬರ್ಲಾ ಇಲ್ಲಿ. ಈ ಜಾತ್ರಗೆ ಕಳೆ ಕೊಡೋ ಥರ ನಿಂತವ್ಳಲ್ಲ ಯಾರ್ಲಾ ಆ ಹುಡ್ಗಿ?



ತಮಡಪ್ಪ : ಇವ್ಳಜ್ಜಿ ಎಕ್ಕಟ್ಟೋ್ೕಗ ಏನ್ ಚೆಂದಾಗವ್ಳೆ ಸಿಂಗಾರಿಗೌಡ. ಭಲೇ ಚೆಂದಾಗವ್ಳೆ. ಒಳ್ಳೆ ರಸಪುರಿ ಮಾವಿನಹಣ್ಣಂಥರ ಅವ್ಳೆ. ಅಲ್ಲಾ ಆ ಹಣ್ಣು ಯಾವ ಮರ್ದಾಗೆ ಯಾವ್ ತೋಪ್ನಾಗೆ ಬುಡ್ತು ಅಂತ ತಲಾಷ್ ಮಾಡ್ಕಂಡ್ ಬರ್ತಿನಿ.

(ಕನಕ ಮತ್ತು ಮಣಿಯ ಹತ್ತಿರ ತಮಡಪ್ಪ ಮತ್ತು ಸಿಂಗಾರಿಗೌಡ ಬರುತ್ತಾರೆ)

ತಮಡಪ್ಪ : ಯಾವ್ರೂರು?

ಮಣಿ : ಚಂದಾಪುರ

ತಮಡಪ್ಪ : (ಕನಕಳಿಗೆ) ಯಾರ್ ಮಗಳು?

ಕನಕ : ಬಾರೆ

(ಉತ್ತರಿಸದೆ ಅಲ್ಲಿಂದ ಹೋಗುತ್ತಾಳೆ. ಅವಳನ್ನು ಹಿಂಬಾಲಿಸಿಕೊಂಡು ಬರುತ್ತಿರುವ ಅವರನ್ನು ನೋಡಿ)

ಕನಕ : ಮಣಿ ಇವ್ರ್ಯಾರೆ ನಮ್ಮಿಂದೆನೆ ಬರ್ತಾವ್ರಲ್ಲ, ಊರಿಗ್ ಬಿಟ್ಟು ಬಸ್ವ ಬಂದ್ಹಂಗೆ. ಪಸಿ ಮೂಗ್ದಾರ ಹಾಕ್ಬೇಕ್ ನೋಡು ಇವರ್ಗೆ.



ಮಣಿ : ಬರೀ ಮೂಗ್ದಾರ ಅಲ್ಲ ಮೂತಿಗೊಂದು ಮಸಿ ಕುಡಿಕೇನು ಕಟ್ಬುಡ್ಬೇಕು.

ಕನಕ : ಏನೋ ನಮ್ಮ ಹಿರಿಯರು ಸುತ್ತೇಳಳ್ಳಿ ಜನ ಸಂತೋಷವಾಗಿರ್ಲಿ ಅಂತ ಜಾತ್ರೆ ಮಾಡಿದ್ರೆ ಈ ಮೂದೇವಿಗಳು ಮೂರುಬಿಟ್ಟವ್ರಂಗೆ ಹಿಂದೇನೆ ಬರ್ತಾವ್ರೆ.

ಮಣಿ : ಇಗೇನ್ಮಾಡೋದು? (ಇಬ್ಬರೂ ಮಾತಾಡಿಕೊಂಡು ಅಲ್ಲಿಂದ ಓಡಿ ಹೋಗುತ್ತಾರೆ)

ಸಿಂಗಾರಿಗೌಡ : ತಪ್ಪುಸ್ಕಂಡ್ ಓಡೋಗ್ಬುಟ್ವಲ್ಲೋ.

ತಮಡಪ್ಪ : ಅಯ್ಯೋ ನಮ್ ಕಣ್ಣಿಗ್ ಬಿದ್ದವ್ರು ಅಷ್ಟ್ ಸಲೀಸಾಗ್ ತಪ್ಪುಸ್ಕಳಕಾಗುತ್ತ. ನೀನೇನು ಯೋಚ್ನೆ ಮಾಡ್ಬೇಡ ಸುಮ್ನೀರು. ನಾನಿಲ್ವ.

(ಜಾತ್ರೆಯ ಗುಂಪಿನಲ್ಲಿ ಅವರಿಬ್ಬರನ್ನು ಹುಡುಕುತ್ತಾ ಸಾಗುತ್ತಾರೆ. ಜಾತ್ರೆ ಮುಕ್ತಾಯದ ಹಂತದಲ್ಲಿದೆ. ಸಂಜೆಯಾಗುತ್ತಿದೆ.)

## ದೃಶ್ಯ–5ಆ

*ಹಗಲು – ಜಾತ್ರೆ – ಹೊರಗೆ*

(ಎತ್ತಿನಗಾಡಿಯನ್ನು ಹತ್ತಿ ಕುಳಿತಿರುವ ಮಹಿಳೆಯರನ್ನು ಇಳಿಯುವಂತೆ ಒತ್ತಾಯಿಸುತ್ತಿರುವ ಕೃಷ್ಣ.)

ಕೃಷ್ಣ : ಇಳಿರೇ..

ಬಂಗಾರು : ಹೇ ಅವ್ನಷ್ಟೇಳೇದ್ರು ಕೇಳ್ತಾ ಇಲ್ವಲ್ಲ ಬಂದ್ ನನ್ ಗಾಡಿಗ್ ಹತ್ರಮ್ಮ.

ಕೃಷ್ಣ : ಬೇಗ್ ಬೇಗ ಇಳಿರಿ.
(ಹೆಣ್ಣು ಮಕ್ಕಳು ಗೊಣಗುತ್ತಾ ಇಳಿಯುತ್ತಾರೆ. ಇನ್ನೊಂದೆಡೆ ಸಿಂಗಾರಿಗೌಡ ಮತ್ತು ತಮಡಪ್ಪ ಎತ್ತಿನ ಗಾಡಿಯಲ್ಲಿ ಬರುತ್ತ, ರಸ್ತೆಯಲ್ಲಿ ಕನಕ ಮತ್ತು ಮಣಿ ನಡೆದು ಹೋಗುತ್ತಿರುವುದನ್ನು ನೋಡಿ)

ಸಿಂಗಾರಿಗೌಡ : ಲೇ ತಮ್ಡೀ..
(ಗಾಡಿಯನ್ನು ನಿಲ್ಲಿಸಿ, ಕನಕಳಿಗೆ)
ಲೇ ಹುಡ್ಗಿ, ಯಾಕ್ ಸುಮ್ನೆ ನಡ್ಕಂಡ್ ಹೋಯ್ತೀಯ? ನೀನು ನಿನ್ ಗೆಳ್ತಿ ಗಾಡಿ ಹತ್ತಿ, ಮನೆ ಬಾಗ್ಲಿಗೆ ಮಲ್ಗೆ ಹೂ ಥರ ಮುಡ್ಕೊಯ್ತಿನಿ.

ಕನಕ : ಏಯ್, ನಿನ್ ಮೈಯ್ಯಾಗೆ ದೆವ್ವಗಿವ್ವ ಹೊಕ್ಕೈತಾ ಹೆಂಗೆ?

ಸಿಂಗಾರಿಗೌಡ : ದೆವ್ವ ಹೊಕ್ಕಿಲ್ಲ ನಿನ್ನ್ ರೂಪ ಹೊಕ್ಕೈತೆ ರೂಪ ರೂಪ.

ಕನಕ : ನಿನ್ ನಾಲ್ಗೆ ಸೇದ್ಹೋಗ, ನೀನಿಲ್ಲೆ ನೆಗ್ದ್ ಬಿದ್ದ್ ಸಾಯ, ಮಾನ ಮರ್ವಾದೆ ಇಲ್ವೇನಯ್ಯ ನಿಂಗೆ.. ಹೋಗಯ್ಯ..
(ಸಿಂಗಾರಿಗೌಡ ಮತ್ತು ತಮಡಪ್ಪ ಪೆಚ್ಚಾಗಿ ಗಾಡಿ ಮುಂದೆ ಹೊಡೆಯುತ್ತಾರೆ)

ತಮಡಪ್ಪ : ಇವ್ಳಜ್ಜಿ ಎಕ್ಕುಟ್ಹೋಗ, ಇಷ್ಟ್ ವಯಸ್ಗೆ ಎಷ್ಟೊಂದ್ ಮಾತಾಡ್ತಾಳ್ವೆ.

ಕನಕ : ಬಂದ್ಬುಟ್ಟ ದೊಡ್ಡಾಗಿ ಕರಿಯಕೆ.
(ಮುಂದೆ ಬಂದ ನಂತರ)

ತಮಡಪ್ಪ : ಸಿಂಗಾರಿಗೌಡ ನೀನೇನು ಹೆದುರ್ಕೋಬೇಡ. ಹಿರಿಯರು ಹೇಳ್ವರಲ್ಲ ಮರಳಿ ಯತ್ನವ ಮಾಡು ಅಂತ ಮೊದ್ಲು ಮನೆಗೆ ಮರ್ಳವಾ ಆಮೇಲೆ ಯತ್ನ ಮಾಡವಾ ನಡೀ.

ಸಿಂಗಾರಿಗೌಡ : ಹೇಯ್ ಯತ್ನ ಮಾಡ್ತೀಯೊ, ಪ್ರಯತ್ನ ಮಾಡ್ತೀಯೊ, ನನ್ನ ಬುಟ್ ಏನಾನ ಮಾಡ್ಬುಟ್ಟಿಯ, ಮರೀಬೇಡ.



(ಕುಹಕವಾಗಿ ನಕ್ಕು ಗಾಡಿ ಬಿಡುತ್ತಾನೆ. ಹಿಂದೆಯೇ ಎತ್ತಿನ ಗಾಡಿಯಲ್ಲಿ ಬರುತ್ತಿರುವ ಕೃಷ್ಣ, ದಾರಿಯಲ್ಲಿ ಕನಕ ನಡೆದು ಹೋಗುತ್ತಿರುವುದನ್ನು ನೋಡಿ ಖುಷಿಪಟ್ಟು ಅವಳ ಹತ್ತಿರ ಬಂದು;)

ಕೃಷ್ಣ : ಹೇ ಹುಡ್ಗಿ, ಯಾಕ್ ಹಿಂಗ್ ನಡ್ಕೊಂಡ್ ಹೋಗ್ತಿಯ? ಹೊತ್ತ್ ಮುಳ್ಗೊ ಹೊತ್ತಾಯ್ತು. ನೀನು ನಿನ್ ಗೆಳ್ತಿ ಇಬ್ರು ಬಂದ್ ಗಾಡಿ ಹತ್ತಿ. ಜೋಪಾನ್ವಾಗ್ ಊರ್ ಸೇರ್ಸಿ ಹೋಗ್ತಿನಿ.

ಮಣಿ : ಏಯ್ ನಿನ್ ಮೈಯ್ಯಾಗೆ ದೆವ್ವ ಗಿವ್ವ ಹೊಕ್ಕೈತ ಹೆಂಗೆ?

ಕೃಷ್ಣ : ದೆವ್ವ ಹೊಕ್ಕಿಲ್ಲ ಹುಡ್ಗಿ, ಹೇಳೋಕಾಗ್ದೆ ಇರೋ ಅನುಭವ ಹೊಕ್ಕೈತೆ. ಒಳಗೆಲ್ಲ ಹೂವಿನ ಬಳ್ಳಿ, ಮಾತೆಲ್ಲ ಮೊಗ್ಗು. ಅದೇನಂತ ಹೇಳಕಾಗ್ತಿಲ್ಲ.

ಮಣಿ : ನಿನ್ ನಾಲ್ಗೆ ಸೇದ್ಹೋಗ, ನೀನಿಲ್ಲೆ ನೆಗುದ್ ಬಿದ್ ಸಾಯ
(ಎನ್ನುತ್ತಿದ್ದಂತೆ ಕನಕ)

ಕನಕ . ಛೆ ಛೆ ಹಂಗೆಲ್ಲ ಮಾತಾಡ್ಬಾರ್ದು ಮಣಿ. ವಸಿ ಮಾನ ಮರ್ವಾದೆ ಕೊಟ್ಟು ಮಾತಾಡ್ಬೇಕು. ಹೆಣ್ಣಮಕ್ಳು ಬಾಯ್ನಾಗೆ ಇಂಥ ಮಾತ್ ಬರ್ಬಾರ್ದು ಕಣೆ.

ಕೃಷ್ಣ : ಏನೋ ವಸಿ ಅವ್ಳ ಬಾಯಿ ಚಪಲ ತೀರ್ಸ್ಕಳ್ಳಿ ಬುಡು.

ಮಣಿ : ಯವ್ವಿ ಯವ್ವಿ ಯವ್ವಿ ನೀನಾ ಹಿಂಗ್ ಮಾತಾಡ್ತಾ ಇರೋದು? ಮೊದ್ಲಿಂಗೆಲ್ಲ ಬೈದಿದ್ದು ನೀನೆ ತಾನೆ.

ಕನಕ : ಆ ಮಾತೆಲ್ಲ ನಸ್ಗುನ್ನಿ ಕಾಯ್ ಥರ ಬಂದಿದ್ರಲ್ಲ ಅವರ್ಗೆ. ಇವರ್ಗಲ್ಲ. ಬಾ ಗಾಡಿ ಹತ್ತುವ. ಬಾ ಮಣಿ. ಬಾರೆ. (ಎಳೆದೊಯ್ಯುತ್ತಾಳೆ)

ಕೃಷ್ಣ : ಹತ್ತಿ ಹತ್ತಿ..
(ಕನಕಳ ವರ್ತನೆ ಮಣಿಗೆ ಆಶ್ಚರ್ಯ ತಂದರೂ ಹತ್ತಿ ಕೂರುತ್ತಾಳೆ. ಗಾಡಿ ಹೊರಡುತ್ತದೆ)

**ನಿರ್ದೇಶಕರ ಟಿಪ್ಪಣಿ:**
ಕನಕಳ ವರ್ತನೆ ಮಣಿಗೆ ಆಶ್ಚರ್ಯ ತಂದರೂ ಗಾಡಿ ಹತ್ತಿ ಕೂರುತ್ತಾಳೆ. ಗಾಡಿ ಹೊರಡುತ್ತದೆ. ಕೃಷ್ಣನ ಹುಡುಕಾಟಕ್ಕೂ ಒಂದು ಅಂತ್ಯ ಸಿಗುತ್ತದೆ. ಜಾತ್ರೆಯ ಮುಕ್ತಾಯದ ಹಂತದಲ್ಲಿ ಒಂದು ಪರಿಸರವನ್ನು ನಿರ್ಮಾಣ ಮಾಡಿದ ನಂತರ ಅದನ್ನು ಚಿತ್ರೀಕರಣದುದ್ದಕ್ಕೂ ನಿರ್ವಹಿಸುವ ಜವಾಬ್ದಾರಿಯನ್ನು ಸಹಾಯಕ ನಿರ್ದೇಶಕರುಗಳು ಮತ್ತು ಉಳಿದ ತಂತ್ರಜ್ಞರು ಸಮಂಜಸವಾಗಿ ನಿರ್ವಹಿಸಿದರು. ಸೂಕ್ಷ್ಮವಾಗಿ ಗಮನಿಸಿದರೆ ಪ್ರತಿ ಚಿತ್ರಿಕೆಯಲ್ಲೂ ಜಾತ್ರೆಯ ನಿರಂತರತೆಯನ್ನು ಕಾಣಬಹುದು.

## ದೃಶ್ಯ–6

*ಹಗಲು–ರಾತ್ರಿ–ಹೊರಾಂಗಣ–ಕನಕಾಳ ಊರಿನ ದಾರಿ*
*ಹಾಡು: ಮಣಿ ಮಣಿ ಮಣಿ*
*ಸಾಹಿತ್ಯ: ಬರಗೂರು ರಾಮಚಂದ್ರಪ್ಪ*
*ಹಾಡಿದವರು: ಶಿವರಾಜ್‌ಕುಮಾರ್ ಮತ್ತು ಮಂಜುಳಾ ಗುರುರಾಜ್*

(ಸಂಜೆಯ ನಸುಗೆಂಪಿನಲ್ಲಿ ಹೊರಟ ಗಾಡಿಗಳು, ಕೃಷ್ಣನಿಗೆ ಮಣಿ ಯಾರೆಂದು ತಿಳಿಯಿತು. ಅವಳ ಮಧ್ಯಸ್ತಿಕೆಯಲ್ಲಿ ತನ್ನ ಹುಡುಗಿಯ ಹೆಸರನ್ನು ತಿಳಿಯ ಬಯಸುತ್ತಾನೆ. ಹಾಡಿನ ಮುಖಾಂತರ)

ಕೃಷ್ಣ : ಮಣಿ ಮಣಿ ಮಣಿ ಮಣಿ ಮಣಿಗೊಂದು ದಾರ
ದಾರದ್ ಜೊತೆ ಮಣಿ ಸೇರಿ ಚಂದದೊಂದು ಹಾರ
ತಾನಿ ತಂದಾನ ತಂದಾನ
ತಂದಾನ ತಂದಾನ ತಂದಾನ ತಂದಾನ ತಂದಾನಾನ
ತಾನಿ ತಂದಾನ ತಂದಾನ
ತಂದಾನ ತಂದಾನ ತಂದಾನ ತಂದಾನಾನ

ಕೃಷ್ಣ : ನಿನ್ಹೆಸ್ರೇನೊ ಮಣಿಯಂತ ಗೊತ್ತಾಯ್ತು
ಆದ್ರೆ ಮಣಿ ಜೊತೆಯಿರೊ ದಾರದ ಹೆಸರೇ ಗೊತಾಗ್ಲಿಲ್ವಲ್ಲೇ
ಮಣಿ ಜೊತೆ ದಾರ ಇರಲ್ಲ
ದಾರದಲ್ಲಿ ಮಣಿ ಇರುತ್ತೆ ಅಂತಾ ಹೇಳೆ ಮಣಿ
ಕೃಷ್ಣ : ಗೊತ್ತಾಯ್ತು ಗೊತ್ತಾಯ್ತು ಆದ್ರೆ ದಾರಕ್ಕೊಂದ್ ಹೆಸ್ರಿರ್ಬೇಕಲ್ಲ
ವಸಿ ಉದಾರ್‍ವಾಗ್ ಹೇಳಿದ್ರೆ ಆಗಲ್ವ

ಕನಕ: ಹೆಣ್ಣು ಮಕ್ಕಳನ್ನ ಗಾಡಿಲ್ ಕೂರ್‍ಸ್ಕೊಂಡು
ಹಿಂಗೆಲ್ಲ ಆಡಬಾರ್‍ದು ಅಂತ ವಸಿ ಹೇಳೆ ಮಣಿ
ಕೃಷ್ಣ: ಏನೊ ಹೆಸ್ರು ಕೇಳಿದರೇ ಕೆಸ್ರಲ್ ಬಿದ್ದೋರ್‍ಥರ ಆಡಬಾರ್‍ದು ಅಂತ ಹೇಳೆ ಮಣಿ
ಕನಕ: ನನ್ನ್ ಹೆಸ್ರು ಮಾತ್ರ ಕೇಳಿ
ತಮ್ಮ ಹೆಸ್ರು ಹೇಳ್ದೇ ಇರೋದ್ ಬಲ್ ಮೋಸ ಅಂತಾ ಹೇಳೆ ಮಣಿ

ಕನಕ: ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣಾ ಕೃಷ್ಣಾ
ನನ್ನ ಹೆಸರು ಕೃಷ್ಣ ಅಂತ ಹೇಳಮ್ಮಾ ಮಣಿ
ನನ್ನ ಹೆಸರು ಕೃಷ್ಣ ಅಂತ ಹೇಳಮ್ಮಾ ಮಣಿ



ಕನಕ : ಹಂಗಾರೆ ಗೋಪಿಕಾಸ್ತ್ರೀಯರು ಇದಾರ ಅಂತ ಈಗ್ಲೇ ಕೇಳ್ಬಿಡೆ ಮಣಿ
ಕೃಷ್ಣ : ಛೆ ಛೆ ಅದೆಲ್ಲ ದ್ವಾಪರಯುಗಕ್ಕೆ
ಈ ಕಲಿಯುಗದಾ ಕೃಷ್ಣ ಯಾವ ಕನ್ನೆನೂ ಕಣ್ಣೆತ್ತಿ ನೋಡಲ್ಲ
ಯಾವ ಕನ್ನೆನೂ ಕಣ್ಣೆತ್ತಿ ನೋಡಲ್ಲ.
ಕನಕ : ನನ್ನೂ ನೋಡಲ್ವಾ..
ಕೃಷ್ಣ : ನೋಡ್ತಾನೆ ಇದೀನಲ್ಲಾ..

ಕೃಷ್ಣ : ಮಾತು ಮಾತಲ್ಲೇ ಮಾತು ಮರ್‍ಸ್ಬೇಡಾಂತ ಹೇಳೆ ಮಣಿ
ಇವಾಗಲ್ಲಾದ್ರು ಹೆಸ್ರನ್ನ ಹೇಳಲಿ ಕನ್ಯಾಮಣಿ
ಕನಕ : ನನ್ಹೆಸ್ರು ಒಂದು ಹೂವಿನ ಹೆಸ್ರಾಗೆ ಸೇರ್‍ಕೊಂಡೈತೆ ಅಂತ ಹೇಳೆ ಮಣಿ
ನನ್ಹೆಸ್ರು ಒಂದು ಹೂವಿನ ಹೆಸ್ರಾಗೆ ಸೇರ್‍ಕೊಂಡೈತೆ ಅಂತ ಹೇಳೆ ಮಣಿ

ಕೃಷ್ಣ : ಅದು ಯಾವ ಹೂವ್ರೂ.. ಅದು ಯಾವ ಹೂವ್ರೂ..
ನೆಲದ ಮ್ಯಾಲೈತೋ.. ಅಂಬರದಾಗೈತೋ..
ನೆಲದ ಮ್ಯಾಲೈತೋ.. ಅಂಬರದಾಗೈತೋ..
ಗೊತ್ತಾಗ್ಲಿಲ್ವಲ್ಲೇ ಮಣಿ ಕಣ್ಮಣಿ..

ಕನಕ : ನೆಲದ ಮ್ಯಾಲೆ ಹುಟ್ಟಿ ಅಂಬರದಾಗೆ ಚಾಚ್ಕೊಂಡೈತೆ
ನೆಲದ ಮ್ಯಾಲೆ ಹುಟ್ಟಿ ಅಂಬರದಾಗೆ ಚಾಚ್ಕೊಂಡೈತೆ
ಅಂತ ಹೇಳೆ ಮಣಿ.. ಬೇಗ ಹೇಳೆ ಮಣಿ..

ಕೃಷ್ಣ : ಅಂಬರಕ್ಕೆ ಚಾಚ್ಕೊಂಡೈತೆ
ಅಂಬರ ಅಂದ್ರೆ ಕನಕಾಂಬರ
ಓ ಗೊತ್ತಾಯ್ತು..
ಕನಕಾ ಕನಕಾ ಕನಕಾ ಕನಕಾ
ಕನಕ ಕನಕ ಎಷ್ಟು ಚೆಂದಾಗೈತೆ
ಕನಕ ಕನಕ ಆಹಾ ಮುದ್ದಾಗೈತೆ

ಮಣಿ : ಹೌದು ಹೌದು ಚೆಂದಾಗೈತೆ
ಈಗ ಊರು ಹತ್ರಕ್ ಬಂದೈತೆ
ಗಾಡಿ ನಿಲ್ಸು ಅಂತ ಹೇಳೆ ಕನಕ

(ಗಾಡಿ ನಿಲ್ಲಿಸಿ ಕೊಳಲನ್ನು ನುಡಿಸಲು ಪ್ರಾರಂಭಿಸುತ್ತಾನೆ. ಕನಕ ಅವನನ್ನೇ ನೋಡುತ್ತ ನಿರ್ಗಮಿಸುತ್ತಾಳೆ, ಕೃಷ್ಣನೂ ಕೊಳಲನ್ನೂದುತ್ತ ನಿರ್ಗಮಿಸುತ್ತಾನೆ)

**ನಿರ್ದೇಶಕರ ಟಿಪ್ಪಣಿ:**
ಛಾಯಾಗ್ರಾಹಕ ಗೌರಿಶಂಕರ್ ತಮ್ಮ ಛಾಯಾಗ್ರಹಣವನ್ನು ಹೇಗೆ ಬಳಸಿಕೊಂಡರೆಂದರೆ 15ದಿವಸ ಈ ಹಾಡಿನ ಭಾಗವನ್ನು ಮುಸ್ಸಂಜೆಯ ವೇಳೆ ಅಂದರೆ 6ರಿಂದ 6.30ರ ವೇಳೆಯಲ್ಲಿ ಚಿತ್ರೀಕರಿಸಿಕೊಳ್ಳುತ್ತಿದ್ದರು. ಹಾಡಿನ ಸಾಹಿತ್ಯವು ಸಂಭಾಷಣೆಯ ರೀತಿಯಲ್ಲೇ ಇದ್ದುದರಿಂದ ನಾಯಕ ಶಿವರಾಜ್‌ಕುಮಾರ್ ಅವರಿಂದಲೇ ಹಾಡಿಸಲಾಯಿತು. ಗ್ರಾಮ್ಯ ಭಾಷೆಯ ಒಗಟಿನ ಸಾಮರ್ಥ್ಯವನ್ನು ಹೇಳುತ್ತಾ ಸಂಜೆಯಿಂದ ರಾತ್ರಿಗೆ ಸರಿಯುವ ಕಾಲಮಾನ ಕೃಷ್ಣ ಕನಕರ ಹೃದಯದಲ್ಲಿ ಚಿರಸ್ಥಾಯಿಯಾಗುತ್ತದೆ.)



## ದೃಶ್ಯ–7

*ರಾತ್ರಿ –ಕೃಷ್ಣ ಮತ್ತು ಕನಕಳ ಮನೆಯ ಒಳಗೆ (ಇಂಟರ್‌ಕಟ್ಸ್)*

(ಕೃಷ್ಣ ಮನೆಯಲ್ಲಿ ಕನಕಾಳ ಬಗ್ಗೆ ಆಲೋಚಿಸುತ್ತಿದ್ದರೆ ಇತ್ತ ಕನಕ ಕೃಷ್ಣನ ಬಗ್ಗೆ ಯೋಚಿಸುತ್ತಾ ರಾಗಿ ಬೀಸುತ್ತಿದ್ದಾಳೆ. ಹಿನ್ನೆಲೆಯಲ್ಲಿ "ಇವನ್ಯಾರ ಮಗನೋ" ಗೀತೆಯ ವ್ಯಾದ್ಯ ಸಂಗೀತ ಬರುತ್ತದೆ. ಇಬ್ಬರ ಬಗೆಯಲ್ಲಿ ಏನೋ ಉತ್ಸಾಹ.. ಆನಂದ)

## ದೃಶ್ಯ–8

*ಹಗಲು – ಕೃಷ್ಣನ ಮನೆ – ಒಳಗೆ*

(ರಾಮಣ್ಣ ಮತ್ತು ಕೃಷ್ಣ ಇಬ್ಬರು ಊಟಕ್ಕೆ ಕುಳಿತುಕೊಳ್ಳುತ್ತಾರೆ. ರಾಮಣ್ಣನ ಪತ್ನಿ ಬಯ್ಯುತ್ತ ಹಿಟ್ಟು ಸಾರು ಬಡಿಸುತ್ತಿದ್ದಾಳೆ)

ಸುವರ್ಣ : ಓಹ್ ಏನ್ ಮಹಾರಾಜರ ಮೊಮ್ಮಕ್ಳು ಇವ್ರು. ಇವ್ರಗ್ ಹೇಳೋರು ಕೇಳೋರು ಯಾರು ಇಲ್ಲ್ದಂಗಾಗ್ಹೋಯ್ತು ಈ ಮನ್ಯಾಗೆ, ಜಾತ್ರೆ ಪಾತ್ರೆ ಅಂತ ಓಡಾಡ್ಕೊಂಡಿದ್ರೆ ಮನೆಗ್ ಅಕ್ಕಿ ತಂದ್ಕೊಡೋದ್ಯಾರು, ಬೇಳೆ ತಂದ್ಕೊಡೋದ್ಯಾರು, ರಾಗಿ ತಂದ್ಕೊಡೋದ್ಯಾರು. ಮೈ ಬಗ್ಸಿ ಕೆಲ್ಸ ಮಾಡುದ್ರೆ ನಮ್ ಹೊಲ್ದಾಗೆ ಚಿನ್ನ ಚಿನ್ನ ಬೆಳೀಬಹ್ದು. ಯಾರಿಗ್ ಬೇಕಾಗೈತೆ ಹೊಲ ಗದ್ದೆ ಎಲ್ಲ ಅನ್ನು. ಊರಿನ್ ಉಸಾಬರಿ ನೋಡದು ಅಣ್ಣನ್ ಕೆಲ್ಸ, ಮೂಗ್ದಾರ ಇಲ್ದೇರೋ ಹೋರಿಯಂಗೆ ಊರೆಲ್ಲ ಅಲ್ದಾಡದು ತಮ್ಮನ್ ಕೆಲ್ಸ. ಬಲು ಸಂದಾಗೈತೆ ಜೋಡಿ.

ರಾಮಣ್ಣ : ಅಯ್ಯಯ್ಯ.. ಅದ್ಯಾಕ್ ಬಾಯ್ ಹೋದಂಗೆ ಮಾತಾಡ್ತಿಯೇ, ಈ ನ್ಯಾಯದ್ ಕುಂಟೇಲಿ ನಮ್ ಮನೆತನ ಮುಂಚೆಯಿಂದ್ಲೂ ನ್ಯಾಯ ಪಂಚಾಯ್ತಿ ಮಾಡ್ಕಂಡ್ ಬಂದೈತೆ ಅದನ್ ನಾನ್ ಬುಡಕಾಯ್ತದ?

ಸುವರ್ಣ : ಬುಡ್ಬೇಡಿ, ಬುಡ್ಬೇಡಿ. ಕಟ್ಗೊಂಡು ಕಂತೆ ಪುರಾಣ ಹೇಳಿ ಹೊಟ್ಟೆ ತುಂಬ್ತೈತೆ. ನೀವಂತು ಹಿಂಗಾದ್ರಿ, ನಿಮ್ ತಮ್ಮಂಗಾದ್ರು ಬಿರ್ನೆ ಒಂದ್ ಮೂಗ್ದಾರ ಹಾಕಿ.

ರಾಮಣ್ಣ : (ನಗುತ್ತ) ನಾನು ಅದ್ನೇ ಯೋಚ್ನೆ ಮಾಡ್ತಾ ಇದ್ದೆ. ಇವ್ನ್ಗೊಂದ್ ಮದ್ವೆ ಮಾಡ್ಬಿಟ್ರೆ ಎಲ್ಲ ಸರಿಹೋಯ್ತದೆ.

ಸುವರ್ಣ : ಆಯ್ತೈತೆ ಆಯ್ತೈತೆ ಎಲ್ಲ ಗುಡ್ಸಿ ಗುಂಡಾಂತರ ಐತೈತೆ. ನಿಮ್ ಬುದ್ಧಿಗೇನ್ಬ್ಯಾಳನ. ನೀವು ಊರ್ನ್ಯಾಯ ಅಂತ ಅಲಿತಾ ಇರ್ತಿರಾ, ಅವ್ನು ಮದ್ವೆ ಮಾಡ್ಕಂಡ್ ಹೆಂಡ್ರು ಪಕ್ಕ ಬೆಚ್ಚಗಿರ್ತನೆ. ನಾನ್ಹೋಯ್ತಿನಿ ಉಳಕೆ ಗದ್ದೆನಾ.

(ಮನನೊಂದು ಕೃಷ್ಣ ಊಟವನ್ನೂ ಮಾಡದೆ ಹೊರಗೆ ಹೋಗುತ್ತಾನೆ)

ರಾಮಣ್ಣ : (ಹೋಗುತ್ತಿರುವ ಕೃಷ್ಣನಿಗೆ)
ಕೃಷ್ಣ.. ಹಿಟ್ಟುಂಡ್ಕೊಂಡೋಗೋ.. ಕೃಷ್ಣ, ಕೃಷ್ಣ
(ಬಾರದೆ ಹೊರಟುಹೋದಾಗ)



.. ನೋಡು ಅವ್ನೊಂಟೆ ಹೋದ. ಯಾಕೆ ಹಿಂಗ್ ಬ್ಯಾಸ್ರ ಮಾಡ್ತೀಯ. ನಿನ್ ಬಾಯ್ನಾ ವಸಿ ಹದ್‌ಬಸ್ತ್ನಲ್ ಇಡು.

(ಪತ್ನಿ ಮುಖ ಸಿಂಡರಿಸಿ ಒಳಗೆ ಹೋಗುತ್ತಾಳೆ. ರಾಮಣ್ಣನ ಚಿಂತಾಕ್ರಾಂತ ಮೊಗದ ಮೇಲೆ ಚಿತ್ರಿಕೆ ನಿಲ್ಲುತ್ತದೆ)

**ನಿರ್ದೇಶಕರ ಟಿಪ್ಪಣಿ:**
ಕೃಷ್ಣನ ಕುಟುಂಬದ ಏರುಪೇರುಗಳನ್ನು ಮತ್ತು ಮನೋಭಾವಗಳನ್ನು ತಿಳಿಸಲು ಅನುಕೂಲವಾಗುವಂತಹ ಕೇವಲ ಕೆಲವೇ ಸಂಭಾಷಣೆಯೊಂದಿಗೆ ಈ ದೃಶ್ಯವನ್ನು ಸೆರೆಹಿಡಿಯಲಾಗಿದೆ. ಅಲ್ಲಿಂದ ಹೊರಟ ಕೃಷ್ಣ ಏಕತಾರಿಯ ದನಿಯ ಹಾದಿ ಹಿಡಿಯುತ್ತಾನೆ. ಕಲ್ಲು ಮಂಟಪದಲ್ಲಿ ಉಳಿದಿದ್ದ ಅಯ್ಯನೋರ ಬಳಿ ಬಂದು ಕೂರುತ್ತಾನೆ)

## ದೃಶ್ಯ–9

***ರಾತ್ರಿ – ದೇವಸ್ಥಾನದ ಹೊರಗೆ***
***ಹಾಡು: ದೇಹವೆಂದರೆ ಓ ಮನುಜ***
***ಸಾಹಿತ್ಯ: ಎ. ಮನೋಹರ್***
***ಹಾಡಿದವರು: ಡಾ. ರಾಜ್‌ಕುಮಾರ್***

ಹಿರಿಯ ಶರಣನೊಬ್ಬ ಹಾಡುತ್ತಾ ಕುಳಿತಿದ್ದಾನೆ. ಗುಡಿಯಲ್ಲಿ ರಾತ್ರಿಯ ನೀರವಕೆಗೆ ಸಂವಾದಿಯಾಗಿ)

ಅಯ್ನೋರು :
ದೇಹವೆಂದರೆ ಓ ಮನುಜ
ಮೂಳೆ ಮಾಂಸಗಳ ತಡಿಕೆ ನಿಜ
ಮನಸು ಆಸೆ ತುಂಬಿದ ಕಣಜ
ಮೋಹದಿಂದ ದುಃಖವು ಸಹಜ

ನಶ್ವರ ಕಾಯ ನಂಬದಿರಯ್ಯ
ಈಶ್ವರನೇ ಗತಿ ಮರೆಯದಿರಯ್ಯ
ತ್ಯಾಗದಿ ಪಡೆಯೋ ಸುಖವು ಶಾಶ್ವತ



ದೇಹವೆಂದರೆ ಓ ಮನುಜ
ಮೂಳೆ ಮಾಂಸಗಳ ತಡಿಕೆ ನಿಜ
ಮನಸು ಆಸೆ ತುಂಬಿದ ಕಣಜ
ಮೋಹದಿಂದ ದುಃಖವು ಸಹಜ

(ಅಯ್ನೋರ ಹಾಡಿಗೆ ಹೊಂದಿಕೊಂಡಂತೆ ಖಂಜರ ನುಡಿಸುತ್ತಾ ಕೂರುತ್ತಾನೆ ಕೃಷ್ಣ. ರಾತ್ರಿಯ ನೀರವ ಮೌನದಲ್ಲಿ ಇವರ ಹಾಡು ಊರೆಲ್ಲ ಪ್ರತಿಧ್ವನಿಸುತ್ತದೆ.)



## ದೃಶ್ಯ–9ಅ

***ರಾತ್ರಿ – ದೇವಸ್ಥಾನದ ಹೊರಗೆ***

(ಹಾಡಿನಮಧ್ಯದಲ್ಲೇ.....ಚಿಂತಾಕ್ರಾಂತನಾಗಿದ್ದ ಕೃಷ್ಣನನ್ನು ಗಮನಿಸಿದ ಅಯ್ನೋರು ಹಾಡನ್ನು ನಿಲ್ಲಿಸಿ ಅವನಿಗೆ)

ಅಯ್ನೋರು : ಕೃಷ್ಣ.. ಹೇಯ್ ಕೃಷ್ಣ, ಯಾಕೋ ನಿನ್ನ ಮನಸ್ಸು ಇವತ್ತು ಅಷ್ಟ್ ಸರಿ ಇದ್ದಂಗ್ ಕಾಣುದಿಲ್ಲಪ್ಪ.

ಕೃಷ್ಣ : ಹಂಗೇನಿಲ್ಲ ಅಯ್ನೋರೆ ಎಲ್ಲ ಸರಿಯಾಗೆ ಐತೆ

ಅಯ್ನೋರು : ಮರೆಮಾಚ್ಬೇಡ ಕೃಷ್ಣ. ನೀ ಎಂದೂ ತಾಳ ತಪ್ಪಿದವಾ ಅಲ್ಲ, ಜಾತ್ರೆಗೆ ಹೋಗ್ಬಂದಾಗಿನಿಂದ ಯಾಕೋ ನಿನ್ನ ಮನಸ್ಸು ಬ್ಯಾರೆ ಆಗೇತಿ. ಏನ್ ಆಗೇತಿ ಹೇಳಪ್ಪ. ಹೇಳೊ.

ಕೃಷ್ಣ : ಅಂಥದ್ದೇನಿಲ್ಲ ಅಯ್ನೋರೆ.

ಅಯ್ನೋರು : ನನ್ನ ವಯಸ್ಸಿನವರಿಗೆ ಹೇಳ್ಬಾರ್ದಂಥಾ ವಿಷಯ ಇರ್ಬೇಕು ಅಲ್ಲಾ?

ಕೃಷ್ಣ : ಏನೂಂತ ಹೇಳ್ಲಿ ಅಯ್ನೋರೆ. ಹೇಳ್ಬೇಕಾದ್ದನ್ನ ಹೇಳೋಕೆ ಮಾತೆ ಸಿಗ್ತಾ ಇಲ್ಲ. ಅನ್ನಿಸಿದ್ದನ್ನ ಹಂಚ್ಕೊಳೋಕೆ ಆಗ್ತಾ ಇಲ್ಲ. ನನ್ನೊಳ್ಗಡೆ ಇರೋ ಮೊಗ್ಗು ಬೆಳಿಯೋಕು ಮುಂಚೆ ಬೂದಿಯಾಗಂಗನ್ನಿಸ್ತೈತೆ. ಯಾಕೆ, ಏನು ಒಂದು ಹೇಳಾಕಾಗ್ತಿಲ್ಲ.

ಅಯ್ನೋರು : ಅನ್ನಿಸಿದ್ದೆಲ್ಲಾ ಹೇಳೋ ಹಂಗಿದ್ರೆ, ಮಾತು ಮೌನದ ನಡುವೆ ಅಂತ್ರಾನೆ ಇರ್ತಿದ್ದಿಲ್ಲ. ನಿನ್ನೊಳಗಿನ ಬೆಂಕಿ ಆರಿದ ಮೇಲೆ ಮಾತಾಗಿ ತಾನಾ ಹೊರಗೆ ಬರ್ತೈತಿ. ಆಗ ನಿನ್ ಮನಸ್ಸಿಗ್ ಸಮಾಧಾನ ಸಿಕ್ಕತೈತಿ. ಅಲ್ಲಿತಂಕ ನಿನ್ನ ಮನಸ್ಸು ಬಿಗಿ ಹಿಡ್ಕೊ.

***(ಹಾಡು ಮುಂದುವರಿಸುತ್ತಾರೆ)***

ಅಯ್ನೋರು :
ಕಟ್ಟಿರುವ ಗುಡಿಯಲ್ಲಿ
ಉಟ್ಟಿರುವ ಮಡಿಯಲ್ಲಿ
ಸುಟ್ಟಧೂಪ ದೀಪದಿ ಶಿವನಿಲ್ಲ
ಬಗೆ ಬಗೆ ಮಂತ್ರದಲ್ಲಿ
ಯಾಗ ಯಜ್ಞಗಳಲ್ಲಿ
ಜಪ ತಪ ವ್ರತದಲ್ಲಿ ಅವನಿಲ್ಲ
ಮಣ್ಣ ಕಣಕಣದಲ್ಲೂ

ಜೀವಜೀವಗಳಲ್ಲೂ
ಒಳಗಿನ ಕಣ್ಣಿಗೇ ಕಾಣುವಾತನು

ದೇಹವೆಂದರೆ ಓ ಮನುಜ
ಮೂಳೆ ಮಾಂಸಗಳ ತಡಿಕೆ ನಿಜ
ಮನಸು ಆಸೆ ತುಂಬಿದ ಕಣಜ
ಮೋಹದಿಂದ ದುಃಖವು ಸಹಜ.

(ಇಬ್ಬರೂ ಹಾಡಿನಲ್ಲಿ ಲೀನವಾಗುತ್ತಾರೆ)

**ನಿರ್ದೇಶಕರ ಟಿಪ್ಪಣಿ:**
ಈ ದೃಶ್ಯದಲ್ಲಿ ಬರುವಂತಹ ಗುರುವಿನ ಪಾತ್ರವನ್ನ ಕಥೆ ಮತ್ತು ಚಿತ್ರಕಥೆ ಹಂದರದಲ್ಲೇ ಅದನ್ನು ಚರ್ಚಿಸುತ್ತಿರುವಾಗಲೇ ಅದರಲ್ಲಿ ಬರುವ ತತ್ವಪದಗಳನ್ನು ರಾಜಣ್ಣನವರೇ ಹಾಡುವುದೆಂದು ಖಚಿತವಾಗಿತ್ತು. ಆದರೆ ಈ ಪಾತ್ರವನ್ನು ಯಾರ್ ಮಾಡ್ತಾರೆ ಅನ್ನೋದು ಜಿಜ್ಞಾಸೆಯಾಗಿತ್ತು. ಕಾರಣ ಅಲ್ಲಿದ್ದಂತಹ ತತ್ವಪದಗಳು ಮತ್ತು ಆ ತತ್ವಪದಗಳನ್ನು ಹೇಳುವ ವ್ಯಕ್ತಿ ಇದು ಕೂಡ ಮುಖ್ಯವಾಗುತ್ತದೆ ಅನ್ನೋದು ನಮ್ಮ ಅನಿಸಿಕೆಯಾಗಿತ್ತು. ನಾನು ಸಾಕಷ್ಟು ಕಡೆ ಹುಡುಕ್ತಾ ಇದ್ದೆ ಆಮೇಲೆ ಸ್ವಲ್ಪ ದಿನದ ನಂತರ ಏಣಗಿ ಬಾಳಪ್ಪನವರನ್ನ ಈ ಪಾತ್ರಕ್ಕೆ ಸೂಚಿಸಿದರೆ ಹೇಗೆ ಎಂದು ರಾಜಣ್ಣ ಮತ್ತು ವರದಣ್ಣನವರಿಗೆ ಹೇಳಿದಾಗ ಅವರಿಗೆ ಬಹಳವಾಗಿ ಸಂತೋಷವಾಯಿತು. ರಾಜಣ್ಣ ಮತ್ತು ಬಾಳಪ್ಪನವರು ಇಬ್ಬರೂ ರಂಗಭೂಮಿಯಿಂದ ಬಂದವರು ಮತ್ತು ಸತತವಾಗಿ ವೃತ್ತಿರಂಗಭೂಮಿಯಲ್ಲಿ ಕೆಲಸಮಾಡುತ್ತಿದ್ದವರಾಗಿದ್ದರು ಮತ್ತು ಅವರ ಹಿರಿಮೆ ಇವರಿಗೆ, ಇವರ ಹಿರಿಮೆ ಅವರಿಗೆ ಪರಸ್ಪರ ಗೊತ್ತಿತ್ತು. ಇಬ್ಬರಿಗೂ ಬಹಳವಾದ ಒಂದು ಸುಂದರ ಸ್ನೇಹ ಆರಂಭವಾಯಿತು. ಎಷ್ಟರ ಮಟ್ಟಿಗೆ ಎಂದರೆ ರಾಜಣ್ಣನವರ ಧ್ವನಿಗೆ ಬಾಳಪ್ಪನವರು ನಟಿಸುತ್ತಿದ್ದುದನ್ನು ಬಾಳಪ್ಪನವರು ನನ್ನ ಅದೃಷ್ಟ ಎನ್ನುತ್ತಿದ್ದರು, ರಾಜಣ್ಣನವರು ಅವರ ಅಭಿನಯಕ್ಕೆ ಹಾಡಿದುದು ನನ್ನ ಅದೃಷ್ಟ ಎನ್ನುತ್ತಿದ್ದರು. ಒಟ್ಟಾರೆ ರಂಗಭೂಮಿಯ ಇಬ್ಬರು ದಿಗ್ಗಜರುಗಳ ಸಮ್ಮಿಲನವನ್ನ ಈ ಜನುಮದ ಜೋಡಿ ಹಾಡಿನ ಮೂಲಕ ನಾವು ಕಾಣಬಹುದು. ಬಾಳಪ್ಪನವರು ಈ ಚಿತ್ರದಲ್ಲಿ ಅದ್ಭುತವಾಗಿ ಪಾತ್ರದ ನಿರ್ವಹಣೆಯನ್ನು ಮಾಡಿದ್ದಾರೆ. ಪಾತ್ರದ ಘನತೆ, ತೂಕ ಮತ್ತು ಗೌರವವನ್ನು ಹೆಚ್ಚಿಸಿದ್ದಾರೆ. ಅಭಿನವ ಬಸವಣ್ಣನವರಾಗಿ ಅವರ ಮತ್ತೊಂದು ಮಜಲನ್ನು ನಾವಿಲ್ಲಿ ಕಾಣಬಹುದು. ತತ್ವಪದದ ಒಟ್ಟಾರೆ ಆಶಯವನ್ನು ಡಾ. ರಾಜ್‌ರವರು ಬಹಳ ಸೂಕ್ತವಾಗಿ ವಿ.ಮನೋಹರ್‌ರವರ ಸಂಗೀತ ನಿರ್ದೇಶನದಲ್ಲಿ ಹಾಡಿದ್ದಾರೆ. ಒಂದು ರೀತಿಯ ಕಲೆಗಳ ಸಂಗಮವನ್ನು ಸಂಭ್ರಮವನ್ನು, ಸೌಹಾರ್ದತೆಯನ್ನು ಮತ್ತು ಸಮತೋಲನವನ್ನು ನಾವಿಲ್ಲಿ ಕಾಣಬಹುದು.



## ದೃಶ್ಯ–10

*ಹಗಲು – ಕನಕಾಳ ಮನೆಯ ಹೊರಗೆ*

(ಮನೆಯ ಬಾಗಿಲಿನಲ್ಲಿ ಮಹಾದೇವ ತನ್ನ ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದಾನೆ. ಕನಕ ಬಿಂದಿಗೆ ನೀರು ಹಿಡಿದು ಬರುತ್ತಿದ್ದಾಳೆ. ಕ್ಷೌರ ಮಾಡಿಸಿಕೊಂಡು ಸುಮ್ಮನೆ ಹೋಗುತ್ತಿರುವ ವ್ಯಕ್ತಿಗೆ ಮಹಾದೇವ;)

ಮಹಾದೇವ : ದುಡ್ಡು?

ಮರಿಯಪ್ಪ : ನಮ್ಮಪ್ಪ ಕೊಡ್ತಾನೆ
(ಮಗಳು ನಿಂತಿರುವುದನ್ನು ಕಂಡು;)
.. ಇದ್ಯಾಕವ್ವ ಹಿಂಗ್ ನೋಡ್ತಿದ್ಯೆ? ಇದೆಲ್ಲ ಮಾಮೂಲಿ ಅಲ್ವ? ಒಳಕ್ ನಡಿಯವ್ವ.
(ಮಹಾದೇವನ ಎರಡನೇ ಹೆಂಡತಿ ಬಾಗಿಲ ಬಳಿ ಬಂದು)

ಚಿಕ್ಕವ್ವ : ಆಹಹಹಾ ಅಪ್ಪ ಮಗಳು ನಿಂತು ಕಥೆ ಮಾತಾಡ್ತಾ ಇರೋದ್ ನೋಡು. ಲೇ ಮೂದೇವಿ ನೀನ್ ರಾಜ್‌ಕುಮಾರಿಯಂಗ್ ನಿಂತ್ಬುಟ್ರೆ ಮನೆ ಕೆಲ್ಸ ಯಾರೇ ಮಾಡರು? ರಾಶಿ ಬಟ್ಟೆ ಬಿದ್ದೈತೆ, ಇನ್ನು ಪಾತ್ರೆ ತಿಕ್ಬೇಕು. ಅಲ್ವೇ ನೀನ್ ನೀರ್ಗೋಗ್ ಎಷ್ಟೊತ್ತಾಯ್ತು ಈಗ್ ಬತ್ತಾಯಿದ್ಯಲ್ಲ ಯಾವನ್ ನೋಡೋಕ್ಹೋಗಿದ್ದೆ. ಹಟ್ಟೀಲಿ ಒಂದ್ ತೊಟ್ ನೀರಿಲ್ಲ. ಇಲ್ಲ್ ಬಿನ್ನಾಣ ಮಾಡ್ತಾ ನಿಂತಿದ್ಯಲ್ಲ ಹೋಗ್ ತುಂಬ್ಕೋಗು.

ಕನಕ : ಆಗ್ಲೆ ಎರೆಡ್ ಬಿಂದ್ಗೆ ನೀರ್ ತಂದ್ಹಾಕಿವ್ನಿ ಚಿಕ್ಕಮ್ಮ.

ಮಹಾದೇವ : ಅದ್ಯಾಕಮ್ಮಿ. ಅವ್ಳ್ಮೇಲೆ ಹುಲಿಯಂಗ್ ಎಗ್ರಿಬೀಳ್ತೀಯಲ್ಲ.

ಚಿಕ್ಕವ್ವ : ಮಗ್ಳ ಪರ ವಹಿಸಿದ್ ಸಾಕು. ಸುಮ್ನೆ ಹೋಗ್ ಬಿದ್ಕೊ. ಹಿಟ್ ಮಾಡಿದ್ಮೇಲೆ ಎಬ್ಬಿಸ್ತೀನಿ ನುಂಗಿ ಮತ್ತೆ ಬಿದ್ಕಳಿವಂತೆ. ಅಷ್ಟೆ ತಾನೆ ನಿನ್ ಕೈಲ್ ಕಿಸಿಯಾಕ್ ಆಗದು. ಈ ಮನ್ಯಾಗ್ ಯಾರೂ ಹೇಳೋರಿಲ್ಲ ಕೇಳೋರಿಲ್ಲ ಇವ್ಳನಿಂಗೆ ಬಿಟ್ರೆ ಇವ್ಳ ನಮ್ ಕೈಗ್ ಸಿಗಾಕಿಲ್ಲ. ಹೆಂಗು ಹೆಣ್ತೀನ್ ಕಳ್ಕೊಂಡ್ ನಮ್ಮಣ್ಣ ಮನೆಗೆ ಬಂದ್ ಕೂತವ್ನೆ ಅವನಿಗ್ ಕಟ್ಬುಟ್ರೆ ಎಲ್ಲ ಸರಿಹೋಯ್ತದೆ.
(ಕನಕ ಮತ್ತು ಮಹಾದೇವಪ್ಪ ಬೇಸರದಿಂದ ನೋಡುತ್ತಿರುವಾಗ ಚಿಕ್ಕವ್ವಳ ಅಣ್ಣ ಕುಡುಕ ಬಂದು)

ಕುಡುಕ : ಸರ್‍ಯಾಗ್ ಹೇಳ್ದೆ ಕಣವ್ವ. ನಿನ್ ಮಗಳ್ನ ನನಿಗ್ ಕೂಡ್ಕೆ ಮಾಡ್ಕೊಟ್ಬುಡೂ ಅಂತ. ಅವಾಗ್ ಚೆನ್ನಾಗೆ ನೋಡ್ಕಂತೀನಿ. ಏಳೋನು ನಾನೆಯ, ಕೇಳೋನು ನಾನೆಯ.
(ಕುಡಿದ ಮತ್ತಿನಲ್ಲಿ ಆಯತಪ್ಪಿ ಕೆಳಗೆ ಕೂರುತ್ತಾನೆ. ಕನಕ ನಗುತ್ತಾಳೆ)

ಮಹಾದೇವ : ಮೊದ್ಲು ಕನ್ನಡಿಲಿ ಮುಸುಡಿ ನೋಡ್ಕೊ. ನಿಂತ್ಕಳಕೆ ತಾಕತ್ತಿಲ್ಲ. ಇವನ್ಗೆ ಕೂಡ್ಕೆ ಮಾಡ್ಬೇಕಂತೆ ಕೂಡ್ಕೆ. ಇವ್ನ ವಯಸ್ಸೇನು? ನನ್ ಮಗಳ್ ವಯಸ್ಸೇನು?



ಚಿಕ್ಕವ್ವ : ಅವನ್ಯಾಕ್ ಅಂದೀರಿ, ನನ್ ವಯಸ್ಸೇನು? ನಿಮ್ ವಯಸ್ಸೇನು? ಕಟ್ಕೊಂಡ್ ಈಗ್ ಅನ್‌ಭವ್ಸಾ್ತ ಇಲ್ವಾ? (ಕನಕಳಿಗೆ) .. ಏಯ್ ಏನ್ ಮೂದೇವಿಯಂಗ್ ನೋಡ್ತಾ ನಿಂತ್ಬುಟ್ಟೆ. ಹಿತ್ಲು ಕಸ ತೆಗಿ ಹೋಗು. ಹೋಗೆ.
(ಕನಕ ಒಳ ಬರುತ್ತ ಕೃಷ್ಣನ ನೆನಪು ಮಾಡಿಕೊಳ್ಳುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

ಕ್ಷೌರಿಕ ವೃತ್ತಿಯನ್ನು ಮಾಡುತ್ತಿರುವ ಮಹದೇವಪ್ಪನ ಕುಟುಂಬದ ಒಟ್ಟಾರೆ ವಸ್ತುಸ್ಥಿತಿಯನ್ನು ಹೇಳುತ್ತ, ಇಳಿ ವಯಸ್ಸಿನಲ್ಲಿ ಮದುವೆಯಾದ ಎರಡನೇ ಹೆಂಡತಿ ಮತ್ತು ಆಕೆಯ ಅಣ್ಣನನ್ನು ಪರಿಚಯಿಸುವುದರೊಂದಿಗೆ ಅವಳನ್ನು ತನ್ನ ಅಣ್ಣನಿಗೆ ಕೂಡಿಕೆ ಮಾಡುವ ಯೋಚನೆಯಲ್ಲಿರುವ ಚಿಕ್ಕಮ್ಮನ ಪಾತ್ರ ಮತ್ತು ಅವರ ಸಾಮಾಜಿಕ ಪರಿಸ್ಥಿತಿ ಹಾಗೂ ಸಾಂಸಾರಿಕ ಪರಿಸ್ಥಿತಿ ಎರಡನ್ನೂ ಕೂಡ ಈ ದೃಶ್ಯದಲ್ಲಿ ಹಿಡಿದಿಡಲಾಗಿದೆ. ಹಾಗೆಯೇ ನಾಯಕಿಯ ಮನಸ್ಸಿನಲ್ಲಿರುವ ಮತ್ತೊಂದು ಕನಸನ್ನು ಇಲ್ಲಿ ನಿಧಾನವಾಗಿ ತೋರಿಸಲಾಗುತ್ತದೆ.



## ದೃಶ್ಯ-11

*ಹಗಲು - ತೋಟ - ಹೊರಗೆ*

(ತಮಡಪ್ಪನನ್ನು ಯಾರೋ ಇಬ್ಬರು ಅಟ್ಟಿಸಿಕೊಂಡು ಬರುತ್ತಿರುತ್ತಾರೆ)

ತಮಡಪ್ಪ : ಅಯ್ಯಯ್ಯೋ ಅಯ್ಯಯ್ಯಪ್ಪೋ ಇವ್ರಜ್ಜಿ ಎಕ್ಕುಟ್ಕೋಗ ನನ್ನಿವ್ರ್ ಮುಗುಸ್ಬುಡ್ತಾರೆ ಕಣ್ರಪ್ಪೋ ಕಾಪಾಡ್ರೋ

ನಾಗರಾಜ : ಲೇ ತಮ್ಡಿ ಲೇ ನಿಂತ್ಕಳಲೇ.

ತಮಡಪ್ಪ : ಅಯ್ಯಯ್ಯಪ್ಪೋ ಅಯ್ಯಯ್ಯೋ ಯಾರಾದ್ರು ಕಾಪಾಡ್ರಪ್ಪೋ ಇವರ್ ಬುಡಲ್ಲ ನನ್ನ ಮುಗುಸ್ಬುಡ್ತಾರೆ ಇವತ್ತು

ಕುಮಾರ : ಲೇ ತಮ್ಡಿ.
(ಓಡುತ್ತಿರುವ ತಮಡಪ್ಪ, ಹಿಂಬಾಲಿಸುತ್ತಿರುವ ಇಬ್ಬರು)

## ದೃಶ್ಯ–11ಅ

*ಹಗಲು – ತೋಟ – ಹೊರಗೆ*

(ತಮಡಪ್ಪನನ್ನು ಅಟ್ಟಿಸಿಕೊಂಡು ಬರುವುದನ್ನು ನೋಡುವ ಕೃಷ್ಣ)

ಕೃಷ್ಣ : ಎಲಾ ಇವ್ನ, ನಮ್ ತಮಡಪ್ಪನ್ನ ಯಾರೋ ಅಟ್ಟುಸ್ಕೊಂಡ್ ಹೊಗ್ತಾವ್ರೆ (ಅವರನ್ನು ಹಿಂಬಾಲಿಸುತ್ತಾನೆ)

ತಮಡಪ್ಪ : ಯಾರಾದ್ರು ಕಾಪಾಡ್ರಪ್ಪೋ. ಅಯ್ಯಯ್ಯೋ.

ನಾಗರಾಜ : ಲೇ ತಮ್ಡಿ ನಿಂತ್ಕಳಲೇ.

ತಮಡಪ್ಪ : ನನ್ನ ಮುಗ್ಸ್ಬುಡ್ತಾರೆ ಇವತ್ತು ಬಿಡೊದಿಲ್ಲ ಸಾಯ್ಸ್ಬುಡ್ತಾರೆ ಇವತ್ತು ಬೇಗ್ ಯಾರಾದ್ರು ಬಂದ್ ಕಾಪಾಡ್ರಪ್ಪ.
(ತಮಡಪ್ಪನನ್ನು ಹಿಡಿದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಅವನನ್ನು ತಡೆದು ನಿಲ್ಲಿಸಿ)

ಕುಮಾರ : ಹೇಯ್ ತಮ್ಡಿ ಬೊಂಬ್ಡಿ ಬಾರ್ಸ್ದನ್ನೆಲ್ಲ ಬಿಟ್ಟು ಸುಮ್ನೆ ನಮ್ ದುಡ್ ಕಕ್ತೀಯೋ ಇಲ್ಲ ಗೂದೆ ಕಡ್ಕೊಳಂಗ್ ಒದಿಬೇಕೋ?

ತಮಡಪ್ಪ : ಬಿಡ್ರೋ, ಇದ್ರಲ್ ನಂದೇನು ತಪ್ಪಿಲ್ಲ ಕಣ್ರೋ.
(ಕೃಷ್ಣ ಮರದ ಸಂಧಿಯಲ್ಲಿ ನಿಂತು ನೋಡುತ್ತಿದ್ದಾನೆ)

ಕುಮಾರ : ಹೇಯ್ ನೀನ್ ಮೊದ್ಲೇ ಬುಟ್ರೆ ಸಿಕ್ಕ, ಇವತ್ ಬುಟ್ಬುಟ್ರೆ ನಾವ್ ಮಣ್ ಮುಕ್ಕ್ಬೇಕಾಯ್ತದೆ.

ನಾಗರಾಜ : ಲೇ ಅವತ್ತು ಜಾತ್ರೆಲಿ ಕೈ ಮುಗ್ದು ರಥದ್ ಕಟಾಣಿ ತೆಗಿರಯ್ಯ ದುಡ್ ಕೊಡ್ತಿನಿ ಅಂದ ಈಗ ನಮ್ಗೆ ಕೈಕೊಟ್ಟು ನಾಟ್ಕ ಆಡ್ತಿದ್ಯ

ತಮಡಪ್ಪ : ಮಾರಮ್ಮಾಣೆ ಹೇಳ್ತಿನಿ ಇದ್ರಲ್ ನನ್ದೇನು ಇಲ್ಲ ಕಣ್ರೋ. ಸಿಂಗಾರಿಗೌಡ ಯೋಳ್ದಂಗ್ ನಾನ್ ಕೇಳ್ದೆ. ಅವನ್ ದುಡ್ ಕೊಡ್ಲಿಲ್ಲ ನಾನ್ ಕೊಡ್ಲಿಲ್ಲ ಕಣ್ರೊ.
(ವಿಷಯ ತಿಳಿದ ಕೃಷ್ಣ ಅಲ್ಲಿಗೆ ಪ್ರವೇಶಿಸುತ್ತಾನೆ)

ಕೃಷ್ಣ : ಏನ್ ತಮಡಪ್ಪ ಸಮಾಚಾರ? ದೇವ್ರು ಮೈಮೇಲ್ ಬಂದೋರ್ತರ ಆಡ್ತಾಯಿದ್ಯಾ.

ತಮಡಪ್ಪ : ಹೇಯ್ ಬುಡ್ರೋ (ಬಿಡಿಸಿಕೊಂಡು) ಅಯ್ಯೊ ನನಗ್ ತೋಚ್ಲೇ ಇಲ್ವೆ, ದೇವ್ರು ನನ್ ಮೈಮೇಲ್ ಬಂದಿದ್ರೆ ಬಚಾವ್ ಆಗ್ಬೋದಿತ್ತು. ಈ ಕಳ್ಳ್ ನನ್ ಮಕ್ಳತ್ರ ಸಿಕ್ಕಾಕಂಬುಟ್ಟೆ.

ಕೃಷ್ಣ : ಅಂಥ ತಪ್ಪ್ ಏನ್ಮಾಡ್ದೆ ತಮಡಪ್ಪ.

ತಮಡಪ್ಪ : ಏ ಸುಮ್ಕಿರಪ್ಪ ಕೃಷ್ಣಪ್ಪ, ಏನ್ತಪ್ ಮಾಡ್ದೆ ಅಂತ ಇಂಥ



ಅಪದ್ದ ಮಾತಾಡ್ತಿದಿಯಾ? ನಾನ್ ತಪ್ ಮಾಡದಾ? ನಾನ್ ದೇವ್ರಗೇ ದುಡ್ ಕೊಟ್ಟಿಲ್ಲ ಇನ್ನ ಇವ್ರಿಗ್ ಕೊಡಕಾಯ್ತದಾ? ಎಲ್ಲ ಆ ಸಿಂಗಾರಿಗೌಡಂಗ್ ಸಂಬಂಧಪಟ್ಟಿದ್ದು.
(ನಾಗರಾಜ ಮತ್ತು ಕುಮಾರ ಮುಖ ಮುಖ ನೋಡಿ ಕೃಷ್ಣನಿಗೆ)

ಕುಮಾರ : ಎಲ್ಲ ಇವ್ನೇ ಮಾಡ್ಸಿದ್ದು ಇವನ್ ಮಾತ್ ನಂಬೇಡಿ.

ತಮಡಪ್ಪ : ಯಾಕೊ ಹಂಗ್ ಮಾತಾಡ್ತಿದಿಯಾ? ನಂಬ್ದೇರಂಥದ್ದು ಏನೋ ಮಾಡಿದಿನಿ ತಪ್ಪು ನಾನು. ಸಿಂಗಾರಿಗೌಡನ್ ತೋಟದಲ್ಲಿ ಕೆಲ್ಸ ಮಾಡಿದ್ದಕ್ಕೆ ದುಡ್ ಕೊಡ್ಸಿ ಅಂತ ಬೇಡ್ಕಂಡ್ರಿ
(ಸುಳ್ಳು ಹೇಳುತ್ತಿರುವನೆಂದು ತಿಳಿದು ಕೃಷ್ಣ ಅವನಕಡೆಗೆ ತಿರುಗಿ ನೋಡುತ್ತಾನೆ. ಇದನ್ನು ಗಮನಿಸುವ ತಮಡಪ್ಪ ತಾನು ಹೇಳುತ್ತಿರುವುದು ನಿಜವೆನ್ನುವಂತೆ ತನ್ನ ಕಟ್ಟುಕಥೆಯನ್ನು ಮುಂದುವರೆಸುತ್ತಾ)
.. ಏನೋ ಹೋಗ್ಲಿ ಪಾಪ ಅಂತ ನಾನು ಶಿಫಾರಸ್ಸ್ ಮಾಡುದ್ರೆ ನನ್ನೆ ಹಿಡ್ಕೊಂಡ್ಬಿಡೋದ?

ನಾಗರಾಜ : ಇದೇನಯ್ಯ ಹೊಸ ಮಾತ್ಹೇಳ್ತಾದ್ಯ?

ತಮಡಪ್ಪ : ಹ್ಞೂಂ, ಮೈಮೇಲ್ ದೇವ್ರ್ ಬರುತ್ತೆ ಅಂತ ನಾನ್ಹಿಂಗೆ ಮಾತಾಡದು.

ಕೃಷ್ಣ : (ಮಧ್ಯೆಪ್ರವೇಶಿಸಿ)
ಈಗದೆಲ್ಲ ಇರ್ಲಿ. ನಿಮಗ್ ದುಡ್ತಾನೆ ಬೇಕು?
(ನಾಗರಾಜ ಮತ್ತು ಕುಮಾರ ಹ್ಞೂಂ ಎಂದು ತಲೆ ಆಡಿಸುತ್ತಾರೆ)

ಕೃಷ್ಣ : ನನ್ ಜೊತೆ ಬನ್ನಿ, ನಾನ್ ಕೊಡ್ಸ್ತಿನಿ.

ಕುಮಾರ : ಹಂಗಾರ್ ಈ ತಮಡಪ್ಪ?

ಕೃಷ್ಣ : ಕತ್ತಾಳೆ ಗಿಡ್ದಾಗ್ ಕಿತ್ತಾಳೆ ಹಣ್ ಕೇಳುದ್ರೆ ಸಿಗುತ್ತೇನಯ್ಯ? ಸುಮ್ಕೆ ಬನ್ನಿ. (ಎಂದು ತಮಡಪ್ಪನನ್ನು ನೋಡುತ್ತಾನೆ)

ತಮಡಪ್ಪ : ಪುಣ್ಯಾತ್ಮ ಬಂದವ್ನೆ ಹೋಗ್ರಯ್ಯ. ಇಂತಪ್ರಿರೋದ್ರಿಂದಾನೆ ಕಾಲ ಕಾಲಕ್ಕೆ ಒಂದಿಷ್ಟು ಮಳೆ ಬೆಳೆ ಆಗ್ತಾ ಇರೋದು. ಕರ್ಕೊಂಡ್ ಹೋಗಪ್ಪ. ಅಯ್ಯೋ..
(ಎಲ್ಲರೂ ಹೋದ ನಂತರ ತಮಡಪ್ಪ ತನಗೆ ತಾನೆ)
.. ಸಿಂಗಾರಿ ಆ ಮಾರಮ್ನೇ ಕಾಪಾಡ್ಬೇಕು ನಿನ್ನ.
(ಎಂದು ದೇವರಿಗೆ ಕೈಮುಗಿದು ಗಾಬರಿಯಾಗಿ ನಿಲ್ಲುತ್ತಾನೆ)

## ದೃಶ್ಯ–12

***ಹಗಲು – ಸಿಂಗಾರಿಗೌಡನ ಮನೆ ಬೀದಿ ಮತ್ತು ಮನೆ – ಹೊರಗೆ***

(ಕೃಷ್ಣ, ನಾಗರಾಜ ಮತ್ತು ಕುಮಾರನೊಡನೆ ಸಿಂಗಾರಿಗೌಡನ ಮನೆ ಬೀದಿಯಲ್ಲಿ ನಡೆದುಬರುತ್ತಿದ್ದಾನೆ. ಮನೆಯ ಬಳಿ ಬಂದು)

ಕೃಷ್ಣ : ಸಿಂಗಾರಿಗೌಡ, ಯೋ ಸಿಂಗಾರಿಗೌಡ
(ಮನೆಯ ಬಾಗಿಲಬಳಿ ನಿಲ್ಲುತ್ತಾನೆ. ಸಿಂಗಾರಿಗೌಡ ಗತ್ತಿನಿಂದ ಪಂಚೆಯನ್ನು ಮೇಲೆ ಕಟ್ಟಿ ಹೊರಗೆ ಬಂದು)

ಸಿಂಗಾರಿಗೌಡ : ಏನು?

ಕೃಷ್ಣ : ಇವ್ರಿಗ್ ಕೊಡ್ಬೇಕಾದ್ ದುಡ್ಕೊಡು.

ಸಿಂಗಾರಿಗೌಡ : ಯಾವ್ ದುಡ್ಡು?

ಕೃಷ್ಣ : ಅದೇ ಕಡಾಣಿ ಬಾಬ್ತು.

ಸಿಂಗಾರಿಗೌಡ : ಕಡಾಣಿ ಬಾಬ್ತು (ಯೋಚಿಸಿ..) ಯಾವ್ ಕಡಾಣಿ.. ಏನ್ಕಥೆ?

ಕೃಷ್ಣ : ಜಾತ್ರೆಲಿ ರಥದ್ ಕಡಾಣಿ ತೆಗ್ದಿ ಘನಂಧಾರಿ ಕೆಲ್ಸ ಮಾಡ್ಸುದ್ಯಲ್ಲ ಆ ಬಾಬ್ತಿನ ಹಣ ಕೇಳೋಕೆ. ನೋಡಿಲ್ಲಿ ಈ ಪುಣ್ಯ ಪುರುಷರು ಬಂದಿದಾರೆ. ಬಿಸಾಕು ಅವರ್ ಹಣಾನ.

ಸಿಂಗಾರಿಗೌಡ : ಇಲ್ಲ, ನಾನ್ ಯಾರ್ಗೂ ಯಾವ್ ಹಣಾನು ಕೊಡ್ಬೇಕಾಗಿಲ್ಲ.

ಕೃಷ್ಣ : ಕಂಡೋರ್ ಮಕ್ಳನ್ನ ಹಾಳ್ ಬಾವಿಗ್ ತಳ್ಳಿ ಆಳ ನೋಡೋ ಹಲ್ಕಟ್ ಕೆಲ್ಸ ಮಾಡಿದ್ದೂ ಅಲ್ದೆ ಈಗ್ ಬಾಯ್ಬಡಿತಾ ಇದ್ಯಾ? ಬಿಸಾಕು ಅವರ್ ಹಣಾನ



ಸಿಂಗಾರಿಗೌಡ : ಬಿಸಾಕಕಿಲ್ಲ ಅಂದ್ರೆ ಏನ್ ಪಂಚಾಯ್ತಿ ಕಟ್ಟೆ ಹತ್ತುಸ್ತೀಯ?

ಕೃಷ್ಣ : ನಿನ್ ಗೋಮಾಳೆ ಕಿತ್ತು ಫೋರಿ ತೋಡುಸ್ತೀನಿ.



ಕೊನೆ ಸಾರಿ ಹೇಳ್ತಾಪ್ನಿ ಇವರ್ ದುಡ್ ಬಿಸಾಕು. ಗಂಡಾಗುಂಡಿ ಮಾಡಿ ಗಡಿಗೆ ತುಪ್ಪ ಕುಡಿಯೋ ಸಣ್ಣ ಬುದ್ಧಿ ಬುಟ್ಟು ನಾನ್ಹೇಳ್ದಂಗ್ ಕೇಳ್ತೀಯೋ ಇಲ್ಲ ನಾನೆ ನಿನ್ ಜೇಬಿಗ್ ಕೈ ಹಾಕ್ಬೇಕೊ?
(ಜೇಬಿಗೆ ಕೈ ಹಾಕಲು ಮುಂದಾಗುತ್ತಾನೆ)

ಸಿಂಗಾರಿಗೌಡ : (ಕೃಷ್ಣನ ಕೈಯನ್ನು ತಳ್ಳುತ್ತ)
ಹೋಗಲೇ, ಕಂಡಿವ್ನಿ. ಏನೊ ಕೈ ಹಾಕ್ತಾನಂತೆ ಕೈಯಿ. ಏನ್ ಅಷ್ಟೊಂದ್ ಸದ್ರಾ ಅನ್ಕಂಡ್ಯ ನನ್ ಜೇಬಿಗ್ ಕೈ ಹಾಕದು.

ಕೃಷ್ಣ : ಜೇಬಿಗ್ ಕೈ ಹಾಕದ್ ಬ್ಯಾಡ ಅಂದ್ರೆ ಮೈಮೇಲೆ ಕೈ ಹಾಕ್ತಿನಿ. ಊರು, ಊರಿನ್ ಜನ, ಊರಿನ್ ಕೆಲ್ಸಾ ಅನ್ನೋದ್ರು ಬಗ್ಗೆ ಸ್ವಲ್ಪಾನು ಗೌರವ ಇಲ್ದೇರೊ ನಿನ್ನಂಥೋರು ಇದ್ರೆಷ್ಟು, ಬುಟ್ರೆಷ್ಟು. ನೋಡ್ ಸಿಂಗಾರಿಗೌಡ, ನಿನ್ ಘನಂಧಾರಿ ಕೆಲ್ಸಾನ ತಮಡಪ್ಪ ಬಯಲ್ ಮಾಡವ್ನೆ. ಸುಮ್ಕೆ ಇವರ್ ದುಡ್ಕೊಟ್ಟು ಅಷ್ಟೊ ಇಷ್ಟೊ ಮರ್‍ಯಾದೆ ಉಳ್ಸೊಕ

ಸಿಂಗಾರಿಗೌಡ : (ಎಚ್ಚರಗೊಂಡವನಂತೆ)
.. ಏಯ್ (ನಾಗರಾಜ ಮತ್ತು ಕುಮಾರನನ್ನು ಕರೆದು) .. ಬರ್ರೋ ಇಲ್ಲಿ. ತಗಳ್ರೋ ನಿಮ್ ಹಣ. ನೋಡ್ರೋ ಈ ಕೃಷ್ಣ ಬಂದ್ ಬೆದ್ರುಸ್ದಾಂತ ನಿಮ್ ಹಣ ಕೊಡ್ತಾಯಿಲ್ಲ. ಇಂಥ ಮನುಷ್ಯನ್ನ ಮೈಟು ಮಾಡೋನಲ್ಲ ನಾನು. ಏನೋ ನಿಮ್ ಹೊಟ್ಟೆಗ್ಹೊಡಿಬಾರ್ದು ಅಂತ ಕೊಡ್ತಾವ್ನಿ ಹೊಗ್ರೊ.
(ಕೃಷ್ಣ ಮತ್ತು ಸಿಂಗಾರಿಗೌಡ ಒಬ್ಬರಿಗೊಬ್ಬರು ನೋಡಿ)

ಕೃಷ್ಣ : ಕಡಾಣಿ ತೆಗ್ದಿ ಪುಣ್ಯದ್ ಕೆಲ್ಸ ಮಾಡ್ಬುಟ್ಯಲ್ಲ ದೊಡ್ ಮನ್ಷ. ನೀನ್ ಕಡಾಣಿ ತೆಗ್ದಿದ್ದು ನಮ್ ಕಣ್ಣಿಗ್ ಬೀಳ್ದೆ ರಥ ಬಿದ್ಹೋಗಿದ್ರೆ ಎಷ್ಟೊಂದ್ ಹೆಂಗ್ಸ್ರು ಮಕ್ಳು ಪ್ರಾಣ ಹೋಗಿರೋದು. ಈಗ್ಲು ನಾನ್ ಏನಾದ್ರು ಬಾಯ್ಬುಟ್ರೆ ಚಿಂದಿ ಚಿಂದಿ ಮಾಡ್ಬುಡ್ತಾರೆ ಜನ. ನಿಮ್ಮಪ್ಪನ್ ಮುಖ ನೋಡ್ಕೊಂಡ್ ಸುಮ್ನೆ ಬಿಡ್ತಾಯಿದಿನಿ. ಹುಷಾರ್.
(ಕೃಷ್ಣ ಹೋದ ನಂತರ ಸಿಂಗಾರಿಗೌಡ)

ಸಿಂಗಾರಿಗೌಡ : ಎಲಾ ನನ್ ಮಗ್ನೆ, ನಮ್ಮಪ್ಪನ್ ಮುಖ ನೋಡ್ಬುಡ್ತಾಯಿದ್ಯ? ಇವನ್ಹಿಂಗೆ ಬೆಳಿಯಾಕ್ಬುಟ್ರೆ ನನಗ್ ಉಳಿಗಾಲ ಇಲ್ಲ.
(ಕೋಪದಿಂದ ಅವನನ್ನೇ ನೋಡುತ್ತಾ ನಿಲ್ಲುತ್ತಾನೆ)

## ದೃಶ್ಯ–12ಅ

*ಹಗಲು – ನದಿ ದಂಡೆ – ಹೊರಗೆ*

(ಮಾತನಾಡುತ್ತ ನಡೆದು ಹೋಗುತ್ತಿರುವ ನಾಗರಾಜ ಮತ್ತು ಕುಮಾರನನ್ನು ನದಿ ದಂಡೆಯಲ್ಲಿ ಗೋಲ್ಕದ ಜೊತೆ ಕುಳಿತಿರುವ ಕೃಷ್ಣ ಕರೆಯುತ್ತಾನೆ)

ಕೃಷ್ಣ : ಯೋ... ಏನ್ರಪ್ಪಾ, ದೇವ್ರು ದಿಂಡ್ರು ಅಂದ್ರೆ ಭಯಾ ಭಕ್ತಿ ಏನು ಇಲ್ವಾ? ಬನ್ನಿ, ಬಂದು ಗೋಲ್ಕಕ್ ದುಡ್ಡಾಕಿ.
(ನಾಗರಾಜ ಮತ್ತು ಕುಮಾರ ಬಂದು ಗೋಲ್ಕಕ್ಕೆ ಚಿಲ್ಲರೆಯನ್ನು ಹಾಕುವಾಗ ಅವರ ಕೈಯನ್ನು ಕೃಷ್ಣ ಹಿಡಿಯುತ್ತಾನೆ)
.. ಏಯ್, ಸಿಂಗಾರಿಗೌಡ ಕೊಟ್ಟಿದ್ ದುಡ್ನಾ ಈ ಗೋಲ್ಕಕ್ ಹಾಕಿ.

ನಾಗರಾಜ : ಇದ್ಯಾವ್ ನ್ಯಾಯಾನಪ್ಪ. ದುಡ್ ಕೊಡುಸ್ದೋನು ನೀನೆ ಅಲ್ವಾ?

ಕೃಷ್ಣ : ಆ ಸಿಂಗಾರಿಗೌಡಂಗೆ ಬುದ್ಧಿ ಕಲ್ಸ್ಬೇಕು ಅಂತ ನಿಮಗ್ ದುಡ್ ಕೊಡ್ಸಿದ್ದ. ಈಗ್ ನಿಮುಗ್ ಬುದ್ಧಿ ಕಲ್ಸೋಕ್ ಅಂತ ಯೋಳ್ತಿವ್ನಿ ಆ ದುಡ್ಡಿಲ್ಹಾಕಿ.

ಕುಮಾರ : ಅದ್ಹೆಂಗಾಯ್ತದೆ. ಕಷ್ಟಪಟ್ಟು ರಥದ್ ಕಡಾಣಿ ತೆಗಿಲಿಲ್ವ ನಾವು?

ಕೃಷ್ಣ : ಬ್ಹಾಳ ಕಷ್ಟ ಪಟ್ಟಿದೀರಿ ಕಣ್ರಯ್ಯ. ಕಷ್ಟ ಪಟ್ಟು ಏಳೇಳ್ ಜನ್ಮಕ್ಕಾಗಷ್ಟು ಪುಣ್ಯಾನ ಸಂಪಾದ್ನೆ ಮಾಡಿದಿರ. ಈಗೇನು, ಬಾಯ್ಮುಚ್ಕಂಡ್ ದುಡ್ಡಾಕ್ತಿರೋ ಇಲ್ವೊ?

ಕುಮಾರ : ಹಾಕ್ತಿದ್ರೆ ಏನ್ಮಾಡ್ತೀಯ?
(ಕೃಷ್ಣ ಕುಮಾರನಿಗೆ ಹೊಡೆಯುತ್ತಾನೆ. ಹೊಡೆದಾಟ ಶುರುವಾಗುತ್ತದೆ. ನಂತರ ಕುಮಾರ ಮತ್ತು ನಾಗರಾಜನಿಗೆ)

ಕೃಷ್ಣ : ಹಾಕ್ರೊ, ಇನ್ನೊಂದ್ಸಲ ನಮ್ಮೂರ್ಕಡೆ ತಲೆ ಹಾಕಿದ್ರಿ, ಚರ್ಮ ಸುಲ್ದ್‌ಬಿಡ್ತೀನಿ. ನಡೀರಿ, ನಡೀರೋ..
(ಹಣ ಹಾಕಿ ನಾಗರಾಜ ಮತ್ತು ಕುಮಾರ ಓಡಿ ಹೋಗುತ್ತಾರೆ)

**ನಿರ್ದೇಶಕರ ಟಿಪ್ಪಣಿ:**
ಸಿಂಗಾರಿಗೌಡ ಮತ್ತು ಅವನ ಕೃತ್ಯಗಳನ್ನು ಕಾದಂಬರಿಯ ಹೊರತಾಗಿಯೂ ಕೂಡ



ದೃಶ್ಯಗಳನ್ನು ಜೋಡಿಸಬೇಕಿತ್ತು. ಆ ದೃಷ್ಟಿಯಲ್ಲಿ ಸಿಂಗಾರಿಗೌಡ ಮತ್ತು ತಮಡಪ್ಪರ ಮೊದಲ ದೃಶ್ಯದಿಂದ ಅವರ ಅನೈತಿಕ ಸಂಬಂಧಗಳು, ಅವ್ಯವಹಾರಗಳ ಮೂಲಕ ಅವರ ವೈಯಕ್ತಿಕ ಅಭಿಲಾಷೆಗಳನ್ನು ಪೂರೈಸಿಕೊಳ್ಳುವುದು ಮತ್ತು ಅವರು ಯಾವುದೇ ರೀತಿಯ ಸಾಮಾಜಿಕ ಕಟ್ಟುಪಾಡುಗಳಿಗೆ ಕಟ್ಟುಬೀಳದೆ ಮಾಡುತ್ತಿದ್ದ ಕೆಲಸಗಳನ್ನು ಕೃಷ್ಣನ ಕಣ್ಣಿಗೆ ಬೀಳಿಸುವುದಕ್ಕೋಸ್ಕರವಾಗಿಯೇ ಈ ದೃಶ್ಯಗಳನ್ನು ಹೆಣೆಯಲಾಯಿತು. ಆದ್ದರಿಂದಾಗಿ ಕಡಾಣಿ ತಗೆದ ವಿಷಯ ಊರಿನವರ ಬಾಯಿಗೆ ಬೀಳದೆ ಕೃಷ್ಣನಿಗೆ ಮಾತ್ರ ಗೊತ್ತಾಗುವ ಹಾಗೆ ಮಾಡಿ ಈ ದೃಶ್ಯದ ಜೊತೆಗೆ ಒಂದು ಸಣ್ಣ ಸಾಹಸವನ್ನು ಆ್ಯಕ್ಷನ್ ಹೀರೋಗೆ ಯಾವ ಕೊರತೆಯಿಲ್ಲದಂತೆ ಅದನ್ನು ಮಾಡಲಾಗಿತ್ತು.

# ದೃಶ್ಯ–13

***ಹಗಲು – ಕೃಷ್ಣನ ಗದ್ದೆಯ ಅಟ್ಟ – ಹೊರಗೆ***
***ಹಾಡು: ಸೀರೆ ಸೀರೆ ಸೀರೆ***
***ಸಾಹಿತ್ಯ: ಶ್ರೀರಂಗ***
***ಹಾಡಿದವರು: ಸಂಗೀತಾ ಕಟ್ಟಿ***

(ಕೃಷ್ಣ ಜಮೀನಿನಲ್ಲಿರುವ ಅಟ್ಟಕ್ಕೆ ಹತ್ತಲು ಬರುತ್ತಾನೆ. ಬಂದಾಗ ಅಲ್ಲಿ ಹೆಣ್ಣಿನ ಕಾಲಿರುವುದನ್ನು ನೋಡಿ ಮತ್ತೊಂದೆಡೆಯಿಂದ ಹತ್ತಲು ಬರುತ್ತಾನೆ. ಆ ಕಡೆಯಿಂದ ಹತ್ತಲು ಹೋದಾಗ ಕೈ ಹಿಡಿದು ಮೇಲೆತ್ತಲು ಸಹಾಯಮಾಡಲು ಮೇಲಿಂದ ಕೈ ಬರುತ್ತದೆ. ಬೇಡವೆಂದು ಮುಖ್ಯದ್ವಾರದ ಏಣಿ ಹತ್ತಲು ಬಂದಾಗ ಅಲ್ಲಿ ಕಾಳಿ ಎದ್ದು ನಿಲ್ಲುತ್ತಾಳೆ. ಹಾಡು ಶುರುವಾಗುತ್ತದೆ)

ಕಾಳಿ:ಸೀರೆ ಸೀರೆ ಸೀರೆ ಎಲ್ಲೆಲ್ಲೊ ಹಾರ್‍ಯೆತೆ
ಸೂರೆ ಸೂರೆ ಸೂರೆ ಮನಸೂರೆ ಮಾಡ್ಯೆತೆ
ಮೆಚ್ಚಿ ಬಂದ ಹೆಣ್ಣು ನಾ ಮುಚ್ಚಿ ಬಂದ ತಿನ್ನೋ ಹಣ್ಣು
ನಿನ್ನ ಮ್ಯಾಲೆ ಬಿತ್ತು ನನ್ನ ಮಿಂಚಿನಂತ ಕಣ್ಣು
ಒಂದಾಗಿ ಸೇರೋಣ ಓಡಿ ಬಾ



ಮಾವು ಬೇವು ಚಿಗುರಿದರೆ ಚೈತ್ರ ವೈಶಾಖ
ಮಾವ ನಿನ್ನ ಕಂಡಾಗ ಬಂತು ಮೈಶಾಖ
ನೋಡು ಹೊಸ ಹರೆಯ.. ಮಾಡಿ ಮೈ ಬಿಸಿಯಾ..
ಉಟ್ಟ ಸೀರೆ ಮೈಮೇಲೆ ನಿಲ್ಲದೋ



ಸೆರಗು ಹಾರಿ ನೆರಿಗೆ ಜಾರಿ ಹೋಯಿತೋ
ನಡುವ ನೀ ಬಳಸಿ.. ಎದೆಯ ಬಿಸಿಗೆ ಪ್ರೇಮ ಬೆಸುಗೆ ಹಾಕುಬಾ

ಸೀರೆ ಸೀರೆ ಸೀರೆ ಎಲ್ಲೆಲ್ಲೊ ಹಾರ್‍ಯೆತೆ
ಸೂರೆ ಸೂರೆ ಸೂರೆ ಮನಸೂರೆ ಮಾಡ್ಯೆತೆ
ಮೆಚ್ಚಿ ಬಂದ ಹೆಣ್ಣು ನಾ ಮುಚ್ಚಿ ಬಂದ ತಿನ್ನೋ ಹಣ್ಣು
ನಿನ್ನ ಮ್ಯಾಲೆ ಬಿತ್ತು ನನ್ನ ಮಿಂಚಿನಂತ ಕಣ್ಣು
ಒಂದಾಗಿ ಸೇರೋಣ ಓಡಿ ಬಾ
ಸೀರೆ ಸೀರೆ ಸೀರೆ ಎಲ್ಲೆಲ್ಲೊ ಹಾರ್‍ಯೆತೆ
ಸೂರೆ ಸೂರೆ ಸೂರೆ ಮನಸೂರೆ ಮಾಡ್ಯೆತೆ

# ದೃಶ್ಯ–14

*ಹಗಲು – ಕೃಷ್ಣನ ತೋಟದ ಭಾವಡಿ – ಹೊರಗೆ*

(ಅಡ್ಡಾದಿಡ್ಡಿ ಎಳೆದಾಡುತ್ತಿರುವ ಕಾಳಿಗೆ ಕೃಷ್ಣ)

ಕೃಷ್ಣ : ಅಯ್ಯಯ್ಯ, ಯಾವ್ ಸೀಮೆ ಹೆಣ್ಣಿದು? ಹೆಣ್ಣೈಕ್ಳು ನಡ್ಕಳೋ ರೀತಿನಾ ಇದು, ತಗಾ, ಹಾಕೋ. ಬುಡು ಮೂದೇವಿ ಬುಡು.

ಕಾಳಿ : ಬುಡಾಕಲ್ಲ ನಿನ್ ಹಿಡ್ಕೊಂಡಿದ್ದು ನನ್ ಯಜಮಾನ

ಕೃಷ್ಣ : ಗಂಡ್ಬೀರಿ, ನಿನ್ ಮದ್ವೆ ಆದ್ರೆ ಅಷ್ಟೆ.

ಕಾಳಿ : ಯಾಕೊ ಮಾವ? ತೊಟ್ಲಾಗೆ ನಮ್ಮಿಬ್ರುಗೆ ಹೆಸ್ರಿಟ್ಟವ್ರೆ ಗೆಪ್ತಿ ಇರ್ಲಿ.

ಕೃಷ್ಣ : ಹ್ಹಾ ಅವರ್ಗ್ ಬುದ್ಧಿ ಇಲ್ಲ. ಕಾಳಿ, ಭದ್ರ ಕಾಳಿ. ಹೋಗ್ ಹೋಗು, ಬಡ್ಡೇತದೆ. (ಓಡಿ ಹೋಗುತ್ತಾನೆ)

ಕಾಳಿ : (ಓಡಿ ಹೋಗುತ್ತಿರುವ ಕೃಷ್ಣನಿಗೆ)
ಮಾವ.. ಮಾವ..

**ನಿರ್ದೇಶಕರ ಟಿಪ್ಪಣಿ:**
ನಾಯಕನಿಗೆ ಈಗಾಗಲೇ ಮದುವೆಯಾಗಬೇಕಾದ ಒಂದು ಹೆಣ್ಣಿದೆ ಮತ್ತು ಆಕೆ ಆತನಲ್ಲಿ ಅನುರಕ್ತಳಾಗಿದ್ದಾಳೆ ಎಂಬುದನ್ನು ತೋರ್ಪಡಿಸಲು ಒಂದು ಹಾಡು ಮತ್ತು ಒಂದು ದೃಶ್ಯವನ್ನು ಹೆಣೆಯಲಾಗಿತ್ತು. ಸಿದ್ಧ ಸೂತ್ರಗಳಲ್ಲಿ ಇದೂ ಒಂದಾದ್ದರಿಂದ ಅದರ ಪ್ರಯೋಜನ ಪಡೆದು ಮುಂದೆ ಕಾಳಿ ಪಾತ್ರವನ್ನು ಅತ್ಯಂತ ಕುತೂಹಲಕಾರಿಯಾಗಿ ಬಳಸಲಾಯಿತು.



# ದೃಶ್ಯ–15

*ಹಗಲು – ದೇವಸ್ಥಾನದ ಹೊರಗೆ ಮತ್ತು ಒಳಗೆ*

(ಮಹಾದೇವ ಮತ್ತು ರಾಮು ದೇವಸ್ಥಾನದಿಂದ ಹೊರಗೆ ಹೋಗುತ್ತಿದ್ದಾರೆ. ಲಕ್ಷ್ಮಿ, ದೇವಸ್ಥಾನದ ಒಳಗೆ ಹೋಗುತ್ತ ಯಾರು ನೋಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಹೋಗುತ್ತಿದ್ದಾಳೆ. ಹೊರಗೆ ಹೋದ ಮಹಾದೇವ ಮತ್ತು ರಾಮು ಹಿಂದೆ ಬಂದು ಗೋಡೆ ಮರೆಯಲ್ಲಿ ಅವಿತು ನೋಡುತ್ತಿದ್ದಾರೆ. ಲಕ್ಷ್ಮೀ ಒಳಗೆ ಬರುತ್ತಾಳೆ, ತಮಡಪ್ಪ ಬಾಗಿಲಲ್ಲೆ ಅವಳನ್ನು ಭೇಟಿ ಮಾಡುತ್ತಾನೆ. ಸುತ್ತಮುತ್ತ ಯಾರು ಇಲ್ಲವೆಂಬುದನ್ನು ನೋಡಿ ಲಕ್ಷ್ಮಿಗೆ..

ತಮಡಪ್ಪ : ಅಂತು ಬಂದೇಬುಟ್ಟಲ್ಲ ನನ್ ಚಿನಕುರ್ಳಿ.

ಲಕ್ಷ್ಮಿ : ಮತ್ತೇ ಬರ್ದೇ ಬುಡ್ತೀನ? ನಮ್ಮಪ್ಪ ನಂಗೆ ವರ ಹುಡುಕ್ಬೇಕು ವರ ಅಂತಾ ವರಾತ ಹಾಕ್ತಾವ್ನೆ. ನಾನೀಗ ಗುಡಿಗ್ ಬಂದು ನಿಂತವ ಬಂದು ವರ ಪಡಿತಾವ್ನಿ.

ತಮಡಪ್ಪ : ಅದ್ಕೆ ನಾನ್ ನಿನ್ನ ಚಿನ್ಕುರ್ಳಿ ಅಂತ ಕರಿಯೋದು. ಬಾ ನನ್ ಬಂಗಾರಿ, ನ್ಯಾಯದ್ ಗುಂಟೆ ಸಿಂಗಾರಿ.

ಲಕ್ಷ್ಮಿ : (ಹುಸಿ ಮುನಿಸಿನಿಂದ)
.. ಹೇ ಇಂತ ಹೊತ್ನಾಗು ಆ ಸಿಂಗಾರಿಗೌಡನ್ನೆ ಗೆಪ್ತಿ ಮಾಡ್ತೀಯಲ್ಲ

ತಮಡಪ್ಪ : ನಾನ್ಹೇಳಿದ್ದು ಆ ಸಿಂಗಾರಿಗೌಡ ಅಲ್ಲ ಕಣೆ.

ಲಕ್ಷ್ಮಿ : ಮತ್ತೆ

ತಮಡಪ್ಪ : ನೀನೆ ನನ್ ಸಿಂಗಾರಿ ಅಂತ
(ಇಬ್ಬರು ಸರಸದಲ್ಲಿ ಮುಳುಗುತ್ತಾರೆ, ಮಹಾದೇವ ಮತ್ತು ರಾಮು ನೋಡಿ ಕಳ್ಳನಗೆ ಬೀರುತ್ತಾರೆ)

## ದೃಶ್ಯ–16

*ಹಗಲು – ನದಿ ದಂಡೆ*

(ಕೃಷ್ಣ ಕೊಳಲನ್ನು ಊದುತ್ತ ಮೈಮರೆತಿದ್ದಾನೆ, ಅಲ್ಲಿ ಈಸಲು ಬಂದಿದ್ದ ಸ್ನೇಹಿತರಾದ ಮಹಾದೇವ, ರಾಮು, ಬಂಗಾರು ಮತ್ತು ನಂಜ ಕೇಳಿ ಆನಂದಿಸುತ್ತಿದ್ದಾರೆ. ನಂತರ ಬಂಗಾರು)

ರಾಮು : ಅಲ್ಲಾ ಕಲಾ ಬಂಗಾರು, ಇತ್ತೀಚ್ಗೆ ನಮ್ ಕೃಷ್ಣಂಗೆ ಏನೋ ಆಗೈತೆ. ಹೆಸ್ರಿಗ್ ತಕ್ಕಂತೆ ಏನಾರ ಎಡವಟ್ ಮಾಡ್ಕಂಬುಟ್ನೋ ಯಾಂಗ್ಲಾ ಅವ್ನು.

ಬಂಗಾರು : ಅದೇನೋ ನಂಗು ಗೊತ್ತಿಲ್ಲ ಕಣ್ಲಾ, ಜಾತ್ರೆಗ್ ಹೋಗ್ ಬಂದ್ಮೇಲೆ ಮೈಯಿ ಮನ್ಸೆಲ್ಲ ಬ್ಯಾರ್ ಬ್ಯಾರೆ ಇರ್ತೈತೆ. ಮೈ ಇಲ್ಲಿರ್ತೈತೆ, ಮನ್ಸ್ ಇನ್ನೆಲ್ಲೋ ಇರ್ತೈತೆ.

ನಂಜ : ಹ್ಹಾಂ ಇವತ್ತೇನಾರ ಆಗ್ಲಿ ಕೇಳೇಬಿಡವಾ, ಅದ್ಯಾವ್ ಗೋಪಿ ಇವನಿಗ್ ಮೋಡಿ ಮಾಡವ್ಳೆ ಅಂತ. ಲೇ..
(ಮುಂದೆ ಬರುತ್ತಾನೆ. ಬಂಗಾರು ವಿಷಯ ಪ್ರಸ್ತಾಪಿಸುತ್ತಾನೆ)

ಬಂಗಾರು : ಅಲ್ಲ ಕಣಪ್ಪಾ ಕೃಷ್ಣ ಪರಮಾತ್ಮ, ನೀನು ಮೊದ್ಲಂಥರಾ ಇಲ್ಲ. ನಿನ್ನ ನಗು ಮುಖದ್ಮೇಲೆ ಹೊಗೆ ತುಂಬೈತೆ. ಮಿಂಚ್ನಂಗ್ ಮಾತಾಡ್ತಿದ್ದಲ್ಲ ಆ ಮಾತಲ್ ಮೋಡ ಕವ್ದೈತೆ. ಇದೆಲ್ಲ ಯಾಕಪ್ಪ?

ಮಹಾದೇವ : ಯೋಳಣ್ಣೋ ಅದೇನಾಗದೇಂತ. ನಾವ್ ನಿನಗ್ ಪ್ರಾಣಕ್ ಪ್ರಾಣಾನೆ ಕೊಡ್ತೀವಿ. ಯೋಳು ಏನಾಗದೆ ಅಂತ.

ರಾಮು : ನೀನ್ಯೋಳ್ದೆ ಇದ್ಮೇಲೆ ಇನ್ಮುಂದುಕ್ಕೆ ನಮ್ಗು ನಿಂಗೂ ಯಾವ್ದೇ ಸಂಬಂಧ ಇಲ್ಲ. ತಿಳ್ಕ.

ಮಹಾದೇವ : ತಿಳ್ಕಾ (ತಾನೂ ಜೊತೆಗೂಡುತ್ತಾನೆ)

ಕೃಷ್ಣ : ಏನ್ಮಾತಾಡ್ತಿದಿರ ನೀವು? ನಿಮ್ ಸಂಬಂಧ ಕಳ್ಕೊಂಡು ನಾನೆಲ್ಹೋಗ್ಲಿ, ನಿಜ, ನೀವ್ಹೇಳ್ದಂಗೆ ನಾ ಮೊದ್ಲುಥರ ಇಲ್ಲ. ಯಾಕಂದ್ರೆ ನನ್ನೆದೆಯಾಗ್ ಒಂದ್ ಗೂಡ್ ಕಟ್ಟೈತೆ. ಆ ಗೂಡ್ನಾಗ್ ಒಂದ್ ಹಕ್ಕಿ ಕೂತು, ಹಾಡ್ಬಾಗ್ ಆಗ್ತೈತೆ. ಆ ಹಾಡು ನಂದಾಗ್ಲಿ ಅನ್ಕೊಳ್ವಾಗ ಹಕ್ಕಿನೇ ಹಾರ್ಹೋದಾಗ್ ಅನ್ಸ್ತೈತೆ ಈಗ್ಹೇಳಿ ನಾನೇನ್ಮಾಡ್ಲಿ.



ನಂಜ : ಏನ್ಮಾಡ್ಲಿ ಅಂದ್ರೆ? ಹಕ್ಕಿನ ಗೂಡ್ನಲ್ಲಿ ಜೋಪಾನ್ವಾಗ್ ಇಡ್ಬೇಕು.

ಕೃಷ್ಣ : ಅದಿಕ್ಕೆ ಹೇಳ್ತಾವ್ನಿ ಹಕ್ಕಿ, ಹಕ್ಕಿ ಹಾಡು ಎರೆಡು ನನ್ನಾದ್ಗೇನ್ಕೋದಾದ್ರೆ ನೀವೆಲ್ಲ ನನ್ ಜೊತೆಯಾಗಿರ್ಬೇಕು.

ಮಹಾದೇವ : ಯೋ. ನಾವ್ ಒಟ್ಗೇ ಬಾಳ್ತೀವಿ, ಒಟ್ಗೇ ಸಾಯ್ತೀವಿ. ಈಗ್ಹೇಳು ಅದೇನ್ ಆಗ್ಬೇಕು ಅಂತ.

ಕೃಷ್ಣ : ಈಗ, ಹಕ್ಕಿ ಎದ್ರುಗ್ ನಾವು ಹಾಡ್ಬೇಕು. ಕಂಡು ಕಾಣ್ದಂಗೆ ಹಾಡ್ತಾ ಕುಣಿತಾ ಆ ಹಕ್ಕಿನ ಬಾ ಬಾ ಅಂತ ಕರಿಬೇಕು.

ಬಂಗಾರು : ಹಂಗಾ, ಅದೆಂಗೆ.?

ಕೃಷ್ಣ : ಹೇಳ್ತಿನಿ...
(ಎಲ್ಲರೂ ಚಕಿತರಾಗಿ ಅವನನ್ನೇ ನೋಡುತ್ತಾರೆ)

# ದೃಶ್ಯ–17

*ಹಗಲು – ಕನಕಾಳ ಮನೆಯ ಹೊರಗೆ*
*ಹಾಡು: ಕೋಲು ಮಂಡೆ ಜಂಗಮ ದೇವರು*
*ಸಾಹಿತ್ಯ: ದೊಡ್ಡ ರಂಗೇಗೌಡ*
*ಹಾಡಿದವರು: ಎಲ್.ಎಸ್. ಶಾಸ್ತ್ರಿ ಮತ್ತು ಸಂಗಡಿಗರು*
(ಕಂಸಾಳೆ ದೇವರ ಗುಡ್ಡದ ವೇಶದಲ್ಲಿ ಕೃಷ್ಣ ಮತ್ತು ಗೆಳೆಯರು ಪದ ಹಾಡುತ್ತಾ ಮನೆಯ ಮುಂದೆ ಭಿಕ್ಷೆ ಬೇರುತ್ತಾರೆ)

ಉಘೇ ಮಹಂತ ಮಲ್ಲಯ್ಯ
ಉಘೇ ಮಹಂತ ಮಲ್ಲಯ್ಯ

ಕೋಲು ಮಂಡೇ ಜಂಗಮ ದೇವರು
ಗುರುವೇ ಕ್ವಾರಣ್ಯಕೆ ದಯೆ ಮಾಡಪ್ರೆ..
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ

ಕೊಡ್ವಾಗ್ಲೆಲ್ಲ ಕೊಡ್ತಾನೊ ನಮ್ಮಪ್ಪ ಶಿವ
ಅವನು ಒಲಿದ್ರೆ ಕೊರಡು ಕೊನರಿ ಬಂಗಾರ ಬಾಳವ್ವ
ಅಕ್ಕರೇ ಮಹತಾಯಿ ಭಿಕ್ಷೆ ಹಾಕವ್ವ ಅಂದವ್ನೇ ಮಾದೇವ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ

ತಾಯಿ ಅಂದ್ರೆ ತಾಯಾಗ್ಬೇಕಿಲ್ಲ ತಾಯಿ
ಲಗ್ನ ಆಗ್ದೇ ಇರೊ ಹೆಣ್ಣ್‌ಮಗಳು ತಾಯಿ
ಭಿಕ್ಷೆ ನೀಡುದ್ರೆ ಬಾಳು ಬಂಗಾರ ತಾಯಿ
ಬೈದು ದೂಡಿದ್ರೆ ಬಾಳು ಬೂದ್ಗುಂಬಳಕಾಯಿ ಅಂದವ್ನೇ ಮಾದೇವ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ

ಹುಡ್ಗಿ ಅಂದ್ರೆ ಚಿಕ್ ಹುಡ್ಗಿ ಅಲ್ಲ ತಾಯಿ
ಕಂಕಣಭಾಗ್ಯ ಬರೋ ಕನ್ಯಾಮಣಿ ತಾಯಿ
ಭಿಕ್ಷೆ ನೀಡಿದ್ರೆ ಸಿರಿಸಿಂಗಾರ ತಾಯಿ
ಬೈದು ದೂಡಿದ್ರೆ ಬಾಳು ಬೆಂಡೇಕಾಯಿ ಅಂದವ್ನೇ ಮಾದೇವ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ
ಕ್ವಾರಣ್ಯ ನೀಡವ್ವ ಕೊಡುಗಲ್ಲ ಮಾದೇವನಿಗೇ



ಶುಭವಾಗುತ್ತೈತಮ್ಮೋ ಶುಭವಾಗುತ್ತೈತಮ್ಮೋ
ಹತ್ತೋರ ಪುಣ್ಯವು ಮುತ್ತಾಗಿ ಬಂತಮ್ಮೋ
ಮುತ್ತಂಥ ಭಾಗ್ಯಾವ ಬಾಗಿಲಿಗೆ ತಂತಮ್ಮೋ
ದೇವರ ಗುಡ್ಡ ಬಂದು ಭಕ್ತಿಯಿಂದ ಶಿವನ ನೆನೆದು ಹಾಡೀ
ಭೂ ದೇವಿ ಕೈಯ ಚಾಚಿ ಆಕಾಶಾನಾ ಮುಟ್ಟೋ ತಾವು ನೋಡಿ
ಮಾತಾಡ್ಯಾವ್ರೋ ಲಿಂಗ ಮಾತಾಡ್ಯಾವ್ರೋ
ಶೆರಣೆಂದವ್ರೋ ಬನವೂ ಶರಣೆಂದವ್ರೋ



ಬನವೆಲ್ಲ ಹೂವಾದ್ರೋ. ಹೂವೆಲ್ಲ ಘಂ ಎಂದ್ರೋ
ಕೈ ಎತ್ತಿ ಕ್ವಾರುಣ್ಯ ಭಿಕ್ಷೇಯ ನೀಡವ್ವೋ
ಮಾದೇವ್ನ ಮನಸಾರೆ ರಕ್ಷೆಯ ಕೇಳವ್ವೋ
ನೆತ್ತಿಯ ಸೂರ್ಯಾ್‌ಸ್ವಾಮಿ ಕತ್ಲೆ ಮನೆಗೆ ಹೋಗೋ ಹೊತ್ತು ಹಾಡೂ
ಚಿತ್ತಾವ ಗಟ್ಟಿ ಮಾಡಿ ಹಿತ್ಲ ಹಾದಿ ತುಳಿದ್ರೆ ಮುತ್ತು ನೋಡು.
ಮಾತಾಡ್ಯಾವ್ರೋ ಲಿಂಗ ಮಾತಾಡ್ಯಾವ್ರೋ
ಶೆರಣೆಂದವ್ರೋ ಬನವೂ ಶರಣೆಂದವ್ರೋ

ಕಾದ್ರೋರ್‍ಗೆ ಕಾಣ್ತಾನೋ ಕಂಡ್ರೋರ್‍ಗೆ ನೀಡ್ತಾನೋ
ಮುಂಗಾರ ಮಳೆ ಬರಲು ಸ್ವೋಗೆಯು ಕುಣಿದಾವ್ರೋ
ಬಾಯಾರಿ ನೆಲದೊಡಲ ಕಣ ಕಣವೂ ಮಣಿದಾವ್ರೋ
ಕೋಡ್ಗಲ್ಲ ಗುಡ್ಡೆ ಮ್ಯಾಗೆ ಮಾದೇವ ಬಂದೆ ಬರುತಾನವ್ವೋ
ನಂಬಿದ ಭಕ್ತಾರಿಗೆಂದು ಪ್ರೀತಿಯ ಕೊಟ್ಟೆ ಕೊಡುತಾನವ್ವೋ
ಮಾತಾಡ್ಯಾವ್ರೋ ಲಿಂಗ ಮಾತಾಡ್ಯಾವ್ರೋ
ಶೆರಣೆಂದವ್ರೋ ಬನವೂ ಶರಣೆಂದವ್ರೋ

(ಹಾಡಿನ ಕೊನೆಯಲ್ಲಿ ಕೃಷ್ಣ ಹಾಗು ಕನಕ ನದಿ ದಂಡೆಯ ಬಳಿ ಸಂಧಿಸುತ್ತಾರೆ)

**ನಿರ್ದೇಶಕರ ಟಿಪ್ಪಣಿ:**
ನಾಯಕ ಮತ್ತು ನಾಯಕಿ ಇಬ್ಬರ ಮನಸ್ಸಿನ ತೊಳಲಾಟವನ್ನು ಸ್ಪಷ್ಟಪಡಿಸಿದ ಮೇಲ ಅವರಿಬ್ಬರ ಇನ್ನೊಂದು ಭೇಟಿಗಾಗಿ ಹುನ್ನಾರವನ್ನು ನಾಯಕ ರಚಿಸಿಕೊಳ್ಳುವುದರ ಮೂಲಕ ಪೀಠಿಕೆಯನ್ನು ರಚಿಸಿ ಮಾರುವೇಷವನ್ನು ಧರಿಸಿ ಅಂದರೆ ಕಂಸಾಳೆಯ ದಿರಿಸನ್ನು ಧರಿಸಿ ಕಂಸಾಳೆಯ ಹಾಡನ್ನು ಹಾಡುವುದರ ಮೂಲಕ ತಾನು ಹೇಳಬೇಕಾದಂತಹ. ತಾನು ಬಯಸಿದಂತಹ. ತನ್ನ ಭೇಟಿಗೆ ಅನುವಾಗುವಂತಹ ವಿಚಾರವನ್ನು ನಾಯಕಿಗೆ ತಿಳಿಸಿ ಆ ಮುಖಾಂತರ ಹಾಡಿಗೂ ಮತ್ತು ಅವರಿಬ್ಬರ ಭೇಟಿಗೂ ಜಾಗ ಕಲ್ಪಿಸುವ ಗ್ರಾಮ್ಯ ಜಾನಪದೀಯ ಅಂಶಗಳು ಹೇಗೆ ಬದುಕಿನ ಆಧಾರದಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅದು ಹೇಗೆ ಬದುಕಿನ ಪರ್ಯಾಯ ವ್ಯವಸ್ಥೆಯಾಗಿ ಕಾಣುತ್ತಿತ್ತು ಅನ್ನುವುದನ್ನ ನಾವಿಲ್ಲಿ ಕಾಣಬಹುದು. ಈ ಹಾಡು ಕಂಸಾಳೆ ಕಲೆಯ ಪ್ರೌಢಿಮೆಯನ್ನು ವ್ಯಕ್ತಪಡಿಸುತ್ತದೆ ಮತ್ತು ಈ ಹಾಡನ್ನು ದೊಡ್ಡರಂಗೇಗೌಡರು ಈ ಸಮಯಕ್ಕೆ ತಕ್ಕಂತೆ ಮಲೆಯ ಮಹದೇಶ್ವರನ ಕವನದ ಸಾಲುಗಳನ್ನು ಬೇರೇಯೇ ಆಗಿ ಬರೆದು ಸಾಹಿತ್ಯಿಕ ಪ್ರೌಢಿಮೆಯನ್ನು ಕಟ್ಟಿಕೊಟ್ಟಿದ್ದಾರೆ.



## ದೃಶ್ಯ–18

*ಹಗಲು – ನದಿ ದಂಡೆ*

(ಕನಕ ಮತ್ತು ಕೃಷ್ಣ ಒಬ್ಬರನ್ನೊಬ್ಬರು ನೋಡುವ ತವಕದಲ್ಲಿ ಓಡಿ ಬರುತ್ತಾರೆ)

ಕನಕ : (ಅತೀವವಾದ ಸಂತಸದಿಂದ)
ಅಲ್ಲಾ ನನ್ನೋಡಾಕೆ ಈ ಥರ ವೇಷ ಮರ್ಸ್ಕಂಡ್ ಬಂದ್ಬುಟ್ಯಾ?

ಕೃಷ್ಣ : (ಹ್ಞೂಂ ಎಂದು ತಲೆ ಆಡಿಸಿ)
ನಿನ್ನೋಸ್ಕರ ನಾ ಏನ್ಬೇಕಾದ್ರು ಮಾಡ್ತೀನಿ.

ಕನಕ : ಅಷ್ಟೊಂದ್ ಇಷ್ಟಾನ ನನ್ ಕಂಡ್ರೆ? (ನಾಚುತ್ತಾಳೆ)

ಕೃಷ್ಣ : ಹಾ.. ನಿನ್ ನೋಡ್ದಾಗಿಂದ ಊಟ, ನಿದ್ದೆ ಏನೇನು ಬ್ಯಾಡಾನ್ಸ್ತೈತೆ. ಮನಸು ಹಕ್ಕಿಯಂಗ್ ಹಾರಾಡ್ತೈತೆ.

ಕನಕ : ನನಗೂ ಹಂಗೆ ಆಗ್ತೈತೆ. ಕೂತ್ಕಡೆ ಕೂರಕ್ಕಾಗಲ್ಲ, ನಿಂತ್ಕಡೆ ನಿಲ್ಲಕಾಗಲ್ಲ.

ಕೃಷ್ಣ : ಅದ್ಕೆ ಗೂಡ್ ಸೇರ್ಕಳವಾ ಅಂತ ಹಾರ್ಕಂಡ್ ಬಂದೆ.

ಕನಕ : ನನ್ ಮನ್ಸು ಅದನ್ನೇ ಕೇಳ್ತಾ ಐತೆ.
(ಗೊಂದಲದಿಂದ ಪ್ರಶ್ನಾರ್ಥಕವಾಗಿ)
.. ನೀನು ಈ ಗೂಡ್ ಬಿಟ್ ಹಾರೋಗಲ್ಲ ಅಲ್ವಾ? ನನ್ ಕೈ ಬಿಡಲ್ಲ ಅಲ್ವಾ?

ಕೃಷ್ಣ : ಎಲ್ಲಾದ್ರು ಉಂಟಾ? ನಿನ್ ಬಿಡಾದು ಒಂದೇ, ನನ್ ಪ್ರಾಣ ಬಿಡಾದು ಒಂದೇ.



ಕನಕ : ಬುಡ್ತೂ ಅನ್ನು, ಹಂಗನ್ ಬ್ಯಾಡ, ಈ ದಿನ ಮುಗ್ಯಾದೆ ಬ್ಯಾಡ ಅನ್ಸ್ತೈತೆ. ಕೃಷ್ಣ ಅಲ್ ಮುಳುಗ್ತಿರೋ ಸೂರ್ಯನ್ನ

ನಿಲ್ಲುಸ್ತೀಯ?

ಕೃಷ್ಣ : ಅವನ್ ನಿಲ್ಸ್‌ಬುಟ್ರೆ ಕಾಲ ಮುಂದಕ್ಹೋಗಲ್ಲ. ನಾಳೆ ಬರ್ಬೇಕು ಅದ್ರಲ್ ನಾವಿಬ್ರು ಸೇರ್ಬೇಕು. ಬಾಳ್ ನಡ್ಸ್ಬೇಕು.
(ಕನಕ ಭಾವಪರವಶಳಾಗಿ ಹೌದು ಎನ್ನುವಂತೆ ಕೃಷ್ಣನನ್ನೇ ನೋಡುತ್ತಾಳೆ. ಕೃಷ್ಣನೂ ಅವಳನ್ನು ನೋಡುತ್ತ;)
ಆ.. ಮತ್ತೆ ನಿನ್ ನೋಡಾಕೆ ಯಾವ್ ವೇಷ್ದಲ್ ಬರ್ಲಿ? ಆಯ್ತಾವ್ರ ತಲಕಾಡ್ನಾಗೆ ಹರಿಗೋಲ್ನಾಟ ಐತೆ ನ್ಯಾಯದ್ ಕುಂಟೆಯಿಂದ ನಾವು ಬತ್ತೀವಿ. ನೀನು ಅಲ್ಲಿಗೇ ಬಂದ್ಬುಡು ಅಲ್ಲೇ ಮಾತಾಡವ.

ಕನಕ : ಬತ್ತೀನಿ. ನೀ ಎಲ್ಲಿಗ್ ಕರ್ದ್ರೂ ಬತ್ತೀನಿ.
(ಕನಕಳ ಕಣ್ಣಿನಲ್ಲಿರುವ ಪ್ರೀತಿಯನ್ನು ನೋಡುತ್ತಾ ನಿಲ್ಲುವ ಕೃಷ್ಣ)



# ದೃಶ್ಯ–19

*ಹಗಲು – ನದಿ ದಂಡೆ*

(ಊರಿನ ಹಿರಿಯ ಕರೀಗೌಡ, ಊರಿನ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ಸ್ಪರ್ಧೆಯ ಬಗ್ಗೆ ಪೀಠಿಕೆಯನ್ನು ಊರಿನ ಮತ್ತು ಸ್ಪರ್ಧಾಳುಗಳಿಗೆ ನೀಡುತ್ತಿದ್ದಾರೆ)

ಕರೀಗೌಡ : ಭಕ್ತಾದಿಗಳೇ ಪಟಾಲಮ್ಮನ ಹಬ್ಬದ ಪ್ರಯುಕ್ತ, ತಲಕಾಡ್ನಲ್ಲಿ ವರ್ಷಾ ವರ್ಷಾ ನಡ್ಕೊಂಡ್ ಬರ್ತಿರೋ ಹರಿಗೋಲ್ನಾಟಾನ ಈ ವರ್ಷ ಕೂಡ ಏರ್ಪಾಡ್ ಮಾಡಿದೀವಿ. ಸುತ್ತಳ್ಳಿ ಜನಾ ಎಲ್ಲ ಇಲ್ಬಂದ್ ಸೇರಿದಿರ. ನೀವೆಲ್ಲ ಸ್ಪರ್ಧಿಗಳಿಗೆ ಉತ್ಸಾಹ ಪ್ರೋತ್ಸಾಹ ಕೊಡ್ಬೇಕು. ಈ ವರ್ಷ ಆಟ್ದಲ್ಲಿ ಗೆದ್ದೋರ್ಗೆ ಸಿಂಗಾನಲ್ಲೂರ್ ಪುಟ್ಸ್ವಾಮಯ್ನೋರ್ ಮಗ ಮುದ್ದಪ್ನೋರು ಬೆಳ್ಳಿ ಕಡಗ ಕಳ್ಸವ್ರೆ, ಇನ್ನೇನ್ ಮಹಾಮಂಗ್ಳಾರ್ತಿ ಆಗ್ತೈತೆ, ಆಟ ಪ್ರಾರಂಭ ಆಗ್ತೈತೆ. ಆ.. ಮಂಗ್ಳಾರ್ತಿ ಮಾಡಪ್ಪ.
(ಭಕ್ತಪೂರ್ವಕವಾಗಿ ಪೂಜೆ ನೆರವೇರುತ್ತದೆ. ಭಕ್ತಾದಿಗಳೆಲ್ಲ ನಮ್ರತೆಯಿಂದ ಕೈ ಮುಗಿಯುತ್ತಿರುವ ಸಂಧರ್ಭದಲ್ಲಿ ಸಿಂಗಾರಿಗೌಡ ತಮಡಪ್ಪನಿಗೆ)

ಸಿಂಗಾರಿಗೌಡ : ತಮ್ಡಿ ಬಾಯ್ಲಿ. ವರ್ಷಾ ವರ್ಷಾ ಕಡ್ಗ ಗೆಲ್ತಿನಿ ಅನ್ನೊ ಕೊಬ್ಬಲ್ಲಿರೋ ಕೃಷ್ಣ ಈ ವರ್ಷ ಕಡ್ಗ ಗೆಲ್ಲೋದಿರ್ಲಿ ನೀರ್ನಿಂದ ಜೀವ್ ಸಹಿತಾನೆ ಎದ್ ಬರ್ಬಾರ್ದು.

ತಮಡಪ್ಪ : ಹೇಯ್ ನೀನ್ ಹುಟ್ಟಾಕ್ಕಂಡ್ ಮುಂದುಕ್ಕೋಗದ್ ನೋಡು ಸಿಂಗಾರಿ. ಅವನ್ ಮಟ್ಟ ಹಾಕೊ ವ್ಯವಸ್ಥೆ ನಾನ್ ಮಾಡ್ತಿನಿ.
(ಸ್ಪರ್ಧಿಗಳೆಲ್ಲ ಸಿದ್ಧರಾಗಿ ತಮ್ಮ ತಮ್ಮ ದೋಣಿ ಹತ್ತುತ್ತಾರೆ. ಸ್ಪರ್ಧಿಗಳಿಗೆ ನೆರೆದಿದ್ದ ಜನರೆಲ್ಲ ಉತ್ಸಾಹ ಪ್ರೋತ್ಸಾಹ ಜಯಕಾರಗಳನ್ನು ತುಂಬುತ್ತ ಹುರಿದುಂಬಿಸುತ್ತಾರೆ. ಹಿರಿಯರು ಆಟದ ಪ್ರಾರಂಭದ ನಿಶಾನೆ ತೋರಿಸಿ ಆಟ ಪ್ರಾರಂಭವಾಗುತ್ತದೆ.)

ಕಾಳಿ : ಕೃಷ್ಣಂಗೆ ಜೈ, ನ್ಯಾಯದ್‌ಕುಂಟೆಗೆ ಜೈ. ಬಿರ್ನೆ ಹೋಗು ಕೃಷ್ಣ ಬಿರ್ನೆ ಹೋಗು.
(ಅವಳನ್ನು ನೋಡಿ ಕನಕ ಮತ್ತು ಮಣಿ ಇವಳ್ಯಾರು ಎಂಬ ಭಾವನೆಯಲ್ಲಿ ಅವಳನ್ನು ನೋಡುತ್ತಾರೆ.)
.. ಹೋಗು ಕೃಷ್ಣ ಹೋಗು. ಕೃಷ್ಣಂಗೆ ಜೈ.

ಕನಕ : ಬಿರ್ನೆ ಹೋಗು ಕೃಷ್ಣ.
(ನದಿ ಮಧ್ಯದಲ್ಲಿ ಸಿಂಗಾರಿಗೌಡನ ಕಡೆಯವರು ಕೃಷ್ಣನಿಗೆ ತೊಂದರೆ ಮಾಡುತ್ತಾರೆ.. ಆಗ ಅವರೊಂದಿಗೆ ಹೊಡೆದಾಟವಾಗುತ್ತದೆ.. ನಂತರ ಕೃಷ್ಣನ ತೆಪ್ಪ ಸುಳಿಯಲ್ಲಿ ಸಿಲುಕುತ್ತದೆ.. ಇದನ್ನು ಕಂಡ ಕೃಷ್ಣನ ಗೆಳೆಯರು ಗಾಬರಿಗೊಳ್ಳುತ್ತಾ ಕೂಗಿಕೊಳ್ಳುತ್ತಾರೆ..)

ನಂಜ : ಅಯ್ಯಯ್ಯೋ.. ಅಯ್ಯಯ್ಯೋ.. ಕೃಷ್ಣ ಸುಳಿಯಲ್ಲಿ ಸಿಕ್ಕಾಕ್ಕೊಂಬಿಟ್ಟ.. ಕೃಷ್ಣ.. ಸುಳಿ.. ಅಯ್ಯಯ್ಯೋ..
(ಕೃಷ್ಣ ಸುಳಿಯಲ್ಲಿ ಸಿಲುಕಿರುವ ತೆಪ್ಪದಿಂದ ಜಾರಿ ನದಿಯೊಳಗೆ ಬೀಳುತ್ತಾನೆ.. ಇದನ್ನು ಕಂಡ ಸಿಂಗಾರಿಗೌಡ ಆನಂದ ಪಡುತ್ತಾನೆ. ನಂತರ ಕೃಷ್ಣ ಈಜಿಕೊಂಡು ಮತ್ತೆ ತನ್ನ ತೆಪ್ಪವನ್ನು ಹತ್ತುತ್ತಾನೆ. ಇದನ್ನು ಕಂಡ ಗೆಳೆಯರು ಸಂತಸ ಪಡುತ್ತಾ ಅವನನ್ನು ಹುರಿದುಂಬಿಸುತ್ತಾರೆ)

ನಂಜ : ಆ.. ಅದು.. ಅದು.. ಹತ್ತು..

ಕಾಳಿ : ಬಿರ್ನೆ ಬಾ ಕೃಷ್ಣ
(ಸಿಂಗಾರಿಗೌಡನ ಕುತಂತ್ರದಿಂದ ಪಾರಾಗುವ ಕೃಷ್ಣ ಅತ್ಯಂತ ರೋಚಕರೀತಿಯಲ್ಲಿ ಸ್ಪರ್ಧೆಯನ್ನು ಗೆಲ್ಲುತ್ತಾನೆ. ಗೆದ್ದು ಗುರಿಯ ಬಾವುಟವನ್ನು ಹಾರಿಸುತ್ತಾನೆ. ಎಲ್ಲರ ಚಪ್ಪಾಳೆ)

ಕಾಳಿ : ನನ್ ಕೃಷ್ಣ ಗೆದ್ಬುಟ್ಟ. ನನ್ ಕೃಷ್ಣ ಆಟ ಗೆದ್ಬಿಟ್ಟ. ನ್ಯಾಯದ್‌ಕುಂಟೆ ವೀರ ಆಟ ಗೆದ್ಬಿಟ್ಟ.
(ಸಂಭ್ರಮಿಸುತ್ತಾಳೆ)

ಕನಕ : ತಾಯಿ ಪಟಾಲಮ್ಮ, ಮೂರ್ದಿವ್ಸ ಉಪವಾಸ ಇದ್ದು ನಿನ್ ವ್ರತ ಮಾಡ್ತಿನಿ. ನನ್ ಕೃಷ್ಣಂಗೆ ವರ್ಷಾ ವರ್ಷಾ ಕಡ್ಗ ಗೆಲ್ಲೋ ಶಕ್ತಿಕೊಡು.

ಗೆಳೆಯರು : ಕೃಷ್ಣನಿಗೆ.. ಜೈ.. ಜೈ..
(ಎಂದು ಅತೀವ ಸಂಭ್ರಮದಿಂದ ಚಪ್ಪಾಳೆ ಹೊಡೆಯುತ್ತಾಳೆ. ವಿಜಯೋತ್ಸವದೊಂದಿಗೆ ಕೃಷ್ಣನನ್ನು ಹೊತ್ತುಕೊಂಡು ಬರುವ ಅವನ ಕಡೆಯವರನ್ನು ಊರಿನ ಹಿರಿಯ ಕರೀಗೌಡ ತಡೆದು;)

ಕರೀಗೌಡ : ಈ ಸಲಾನು ನ್ಯಾಯದ್ ಕುಂಟೆಯವ್ರ್ ಆಟಗೆದ್ದು ತಮ್ಮೂರಿನ್ ಗೌರ್ವಾನ ಹೆಚ್ಚಿಸ್ಕೊಂಡವ್ರೆ. ಗೆದ್ದ್ ಊರಿನ್ ಮಗ ಕೃಷ್ಣಂಗೆ ಈಗ ಈ ಕಡ್ಗಾ ತೊಡ್ಸ್ತೀನಿ.
(ಕರೀಗೌಡ್ರು ಕಡಗವನ್ನು ತೊಡಿಸುತ್ತಾರೆ. ಕೃಷ್ಣನನ್ನು ಅವನ ಕಡೆಯವರು ಎತ್ತಿಕೊಂಡು ವಿಜಯೋತ್ಸವವನ್ನು



ಮುಂದುವರೆಸುತ್ತಾರೆ. ಇತ್ತ ಸಪ್ಪಗೆ ನಿಂತಿರುವ ಸಿಂಗಾರಿಗೌಡನನ್ನು ಅಪ್ಪ ಹಿರೇಗೌಡ;)

ಹಿರೇಗೌಡ : ಅದ್ಯಕೊ ಒಳ್ಳೆ ಅಳ್ಳೆಣ್ಣೆ ಕುಡ್ದೋನ್ಥರ ಮೊಖಮಾಡ್ಕಂಡಿದಿಯ? ಗೆದ್ದಿರೋನು ನಮ್ ಹುಡ್ಗಾನೆ ಅಲ್ವಾ? ಗೆಲುವು ನ್ಯಾಯದ್ ಕುಂಟೇಗೇಯ. ಅವನ್ ನೋಡಿ ಸಂತೋಷಪಡು.
(ಗೆಳೆಯರು ಕೃಷ್ಣನನ್ನು ಹೊತ್ತುಕೊಂಡು ವಿಜಯೋತ್ಸವ ಆಚರಿಸುತ್ತಾರೆ..)

ಗೆಳೆಯರು : ಗೆದ್ದನಪ್ಪ ಗೆದ್ದನು. ನಮ್ಮ ಕೃಷ್ಣ ಗೆದ್ದನು
(ಕೃಷ್ಣ, ಕನಕಳನ್ನು ನೋಡುತ್ತ ಅವನಿಗೆ ತೊಡಿಸಿದ್ದ ಬೆಳ್ಳಿ ಕಡಗವನ್ನು ಪ್ರೀತಿ ಸಂಕೇತವಾಗಿ ಎಸೆಯುತ್ತಾನೆ. ಕನಕ ಅದನ್ನು ಪ್ರೀತಿಪೂರ್ವಕವಾಗಿ ತಗೆದುಕೊಳ್ಳುತ್ತಾಳೆ. ಅದನ್ನು ತಮಡಪ್ಪ ನೋಡುತ್ತಾನೆ. ಕೈಯಿಂದ ಜಾರಿಬಿದ್ದ ಬಳೆಯನ್ನು ತಗೆದುಕೊಳ್ಳಲು ಕನಕ ಮುಂದಾದಾಗ, ಕಾಳಿ ಮಧ್ಯ ಪ್ರವೇಶಿಸುತ್ತಾಳೆ)

ಕಾಳಿ : ಎಷ್ಟೇ ಪೊಗ್ರು ನಿಂಗೆ? ನನ್ ಕೃಷ್ಣ ಸಾಹಸ ಮಾಡಿ ಗೆದ್ಕೊಂಡಿರೋ ಬೆಳ್ಳಿ ಕಡ್ಗಾನೆ ನಿಂಗ್ ಬೇಕಾಯ್ತ? ಏನೋ ಕೈತಪ್ ಬಿದ್ದೋದ್ರೆ ನೀನೆ ಎತ್ತ್ ಅವ್ಕ್ಕೋದೆನೆ?

ಕನಕ : ನಾನೇನ್ ಅವ್ಕ್ಕೊಳ್ಳಿಲ್ಲ.

ಕಾಳಿ : ಏನಂದೆ ಬೋಸುಡಿ

ಕನಕ : ನಾನ್ಯಾಕೆ ಬೋಸುಡಿಯಾಗ್ಲಿ? ನೀನೆ ಕಣೆ ಲವ್ಡಿ.

ಕಾಳಿ : ಏನು ನನ್ನನ್ನೇ ಲವ್ಡಿ ಅಂತಿಯಾ?
(ತಮಡಪ್ಪ ಬಂದು)

ತಮಡಪ್ಪ : ಇದ್ಯಾಕಮ್ಮಿ ಕಾಳಿ ಹಿಂಗ್ ಜಗ್ಳ ಆಡ್ತಿದ್ಯೆ? ಬುಡ್ರವ್ವ ಬುಡಿ.

ಕಾಳಿ : ನೋಡು ನನ್ ಕೃಷ್ಣನ್ ಕಡ್ಗಾನ ಕದ್ಬುಟ್ಟವ್ಳೆ ಈ ಕಳ್ಳಿ.

ಕನಕ : ನಾನೇನ್ ಕದೀಲಿಲ್ಲ, ನಾನೇನ್ ಕಳ್ಳಿಯಲ್ಲ.

ತಮಡಪ್ಪ : ಆ.. ಮತ್ತಿನ್ನೇನ್ ಅವ್ನೇ ಕೊಟ್ನ?

ಕನಕ : (ತಬ್ಬಿಬ್ಬಾಗಿ) ಅದು ಅದು...

ತಮಡಪ್ಪ : ಛೀ ಛೆ ಛೆ ಎಲ್ಲಾದ್ರು ಉಂಟಾ, ದೇವ್ರ ಮುಂದೆ ಪೂಜೆ ಮಾಡ್ಸಿ ಅವನ್ ಕೈಗ್ಹಾಕಿರದು ಏನೋ ಅಪ್ಪಿ ತಪ್ಪಿ ಬಿದ್ದೋಗ್ಬಿಟ್ರೆ ಅದನ್ನ್ ನೀನ್ ಎತ್ಕೊಂಡ್ಬಿಡದಾ? ಅದನ್ನ್ ಮುಟ್ಬುಟ್ಯಾ? ನೀನೇನು? ನಿನ್ ಜಾತಿಯೇನು? ಕೀಳ್ ಜಾತಿಯವ್ಳಾಗಿ ಇದನ್ನ ಮುಟ್ಬಿಟ್ಟಲ್ಲಾ ಅವ್ನ್ಗೇನಾದ್ರು

ಹೆಚ್ಚು ಕಡ್ಮೆಯಾದ್ರೆ ಗತಿಯೇನು? ಅಯ್ಯೋ...
(ಸುತ್ತಮುತ್ತಲಿದ್ದವರೆಲ್ಲ ಕಳವಳಗೊಳ್ಳುತ್ತಾರೆ. ಕನಕ ದುಃಖಿಸುತ್ತಾಳೆ)



.. ಲೇ ಯಾರ್ರೋ ಆ ದೇವ್ರು ಮುಂದೆ ಇರೋ ತೀರ್ಥ ತಗಂಡ್ಬನ್ರೊ. ಇದ್ಕೊಂದಿಷ್ಟ್ ಪುಣ್ಯಾರ್ಚನೆ ಮಾಡಿ ಆಮೇಲ್ ಅವ್ನಂಗ್ ತೊಡ್ಸ್ಬೇಕು. ಯೇ ಒಳ್ಳೆ ಶಕುನ ಅಲ್ಲಾ ಬುಡು ನಿಂದು.
(ಎಲ್ಲರ ಮುಂದೆ ಅಪಮಾನಿತಳಾದ ಕನಕ ಅಲ್ಲಿಂದ ಅಳುತ್ತ ಓಡಿಹೋಗುತ್ತಾಳೆ. ತಮಡಪ್ಪ ತನ್ನ ಪೂಜೆ ಪುನಸ್ಕಾರಗಳನ್ನು ನೆರವೇರಿಸುತ್ತಾನೆ.)

ತಮಡಪ್ಪ : (ಕಾಳಿಗೆ) ನೋಡು ಜೋಪಾನ್ವಾಗ್ ತಗೊಂಡ್ಹೋಗ್ ಕೃಷ್ಣಂಗ್ ಕೊಡು. ಹಾ.. ನಡಿ.
(ಕಾಳಿ ಅದನ್ನು ತೆಗೆದುಕೊಂಡು ಹೋದ ಮೇಲೆ ತಮ್ಮಡಪ್ಪ ಯೋಚಿಸುತ್ತಾ ನಿಲ್ಲುತ್ತಾನೆ)



# ದೃಶ್ಯ–19ಅ

*ಹಗಲು – ನದಿ ದಂಡೆ*

(ಕಡಗವನ್ನು ತಗೆದುಕೊಂಡು ಕಾಳಿ, ಕೃಷ್ಣನ ಬಳಿ ಓಡಿಬರುತ್ತಾಳೆ. ಕೃಷ್ಣ ಮತ್ತು ಆತನ ಸ್ನೇಹಿತರೆಲ್ಲ ಮಾತನಾಡುತ್ತ ಕುಳಿತಿರುತ್ತಾರೆ)

ಬಂಗಾರು : ವರ್ಷಾ ವರ್ಷಾ ಗೆಲ್ತಾರೋ ಬೆಳ್ಳಿ ಕಡ್ಗಾನ ಇನ್ನೊಬ್ರು ಪಾಲಾಗಕ್ ಬುಡಕಾಯ್ತದ?

ಕಾಳಿ : ಕೃಷ್ಣ, ಕೃಷ್ಣ.

ಕೃಷ್ಣ : ಏನ್ ಕಾಳಿ? ಏನಾಯ್ತು?

ಕಾಳಿ : ಇಲ್ನೋಡು
(ಎಂದು ಕಡಗವನ್ನು ತೋರಿಸುತ್ತಾಳೆ, ಕೃಷ್ಣ ಆಶ್ಚರ್ಯಗೊಂಡವನಂತೆ)

ಕೃಷ್ಣ : ಅರೆ! ಇದು ನಿನ್ ಕೈಗ್ ಹೆಂಗ್ ಬಂತು?

ಕಾಳಿ : ಆ ಚಂದಾಪುರ್ದೋಳ್ ಮಾಯ್ಕಾರದ್ ಆಟ ನೋಡು? ಹೆಂಗೋ ಏನೋ ಈ ಕಡ್ಗಾ ಕದ್ಬುಟ್ಟವ್ಳೆ! ನಾನ್ ಬುಡ್ತೀನ, ಕಿತ್ಕೊಂಡ್ ಬಂದೆ ನೋಡು.

ಕೃಷ್ಣ : ಅಲ್ಲಾ ಕಾಳಿ ಅದು ನಾನೇ
(ಏನನ್ನೋ ಹೇಳಲು ಮುಂದಾದಾಗ ಕಾಳಿ ಹೇಳಲು ಬಿಡದೆ)

ಕಾಳಿ : ಅವ್ಳ್ ಕೀಳ್ಜಾತಿಲ್ ಹುಟ್ಟಿದ್ಕೆ ಸರ್ಯಾಗೆ ಮಾಡವ್ಳೆ. ನಾನೇ ಹೋಗಿ, ದ್ಯಾವರ್ ತೀರ್ಥ ಹಾಕ್ಸಿ, ಜೋಪಾನ ಮಾಡಿ ತಂದಿವ್ನಿ. ತಗೋ ಕೃಷ್ಣ ಕೈಗ್ ಹಾಕೋ. ಕಣ್ತುಂಬ ನೋಡ್ತಿನಿ.

ಕೃಷ್ಣ : ಕಾಳಿ.. ನಿನ್ಗ್ಯಾರ್ ಹೇಳಿದ್ದು ಕನಕ ಈ ಕಡ್ಗ ಕದ್ದೋಳೆ ಅಂತ? ನಾನೆ ಇದನ್ನ ಅವ್ಳಿಗ್ ಕೊಟ್ಟಿದ್ದು.

ಕಾಳಿ : (ಭಾವುಕಳಾಗಿ) ಏನಂದೆ..!?

ಕೃಷ್ಣ : ನಾನೆ ಇದನ್ನ ಕನಕಂಗೆ ಕೊಟ್ಟಿದ್ದು ಅಂದೆ.
(ಎಂದು ಕನಕಳನ್ನು ಹುಡುಕುತ್ತ ಹೋಗುತ್ತಾನೆ)

ಕಾಳಿ : ಕೃಷ್ಣ.. ಕೃಷ್ಣ...
(ಆಶ್ಚರ್ಯ ಮತ್ತು ಗೊಂದಲದಲ್ಲಿ ಅವನು ಹೋದ ಕಡೆ ನೋಡುತ್ತಾ ನಿಲ್ಲುತ್ತಾಳೆ)

## ದೃಶ್ಯ-19ಆ

*ಹಗಲು - ಚಂದಾಪುರದ ದಾರಿ*

(ಕೃಷ್ಣ, ಕನಕಳಿಗಾಗಿ ಹುಡುಕುತ್ತಿದ್ದಾನೆ)

ಕೃಷ್ಣ : ಕನಕಾ.. ಕನಕಾ..

(ಕನಕ ಒಂದು ಕಡೆ ಕುಳಿತು ದುಃಖಿಸುತ್ತಿರುತ್ತಾಳೆ. ಕೃಷ್ಣನ ಕೂಗುವಿಕೆಯನ್ನು ಗಮನಿಸುತ್ತಾಳೆ. ಕೃಷ್ಣ ಕನಕಾಳ ಹತ್ತಿರ ಓಡಿ ಬಂದು;)

ಕೃಷ್ಣ : ಕನಕಾ, ನಾನಿನ್ನ ಎಲ್ಲೆಲ್ಲ್ ಹುಡುಕ್ದೇ ಗೊತ್ತ?

ಕನಕ : ನನ್ನ್ಯಾಕ್ ಹುಡುಕ್ದೇ ಕೃಷ್ಣ. ನನ್ ಮರ್ತ್ಬುಡು.



ಕೃಷ್ಣ : ಏನು? ಮರ್ತ್ಬುಡ್ಬೇಕ? ಅದು ಈ ಜನ್ಮದಲ್ಲ್ ಸಾಧ್ಯಾನ? ಅದೂ ಅಲ್ದೆ ಏನಾಯ್ತು ಅಂತ ನಿನ್ನ ಮರಿಬೇಕು?

ಕನಕ : ಯಾಕಂದ್ರೆ ನಾನ್ ಕೀಳ್ಜಾತಿಯವ್ಳು, ನೀನ್ ಮೇಲ್ಜಾತಿಯವ್ನು.

ಕೃಷ್ಣ : ಯಾರಂದ್ರು ಹಾಗಂತ?

ಕನಕ : ಎಲ್ರು, ತಮಡಪ್ಪ, ಕಾಳಿ, ಎಲ್ರು.

ಕೃಷ್ಣ : ನಾನಿಂಗ್ ಅವತ್ತೇ ಹೇಳಿದಿನಿ ನಿನ್ ಮರ್ಯದು ಒಂದೇ ನನ್ ಪ್ರಾಣ ಬಿಡದು ಒಂದೇ.

ಕನಕ : ಆದ್ರೆ ಜನ ಹೇಳೋ ಮಾತ್ಗೇನಂತಿಯಾ?

ಕೃಷ್ಣ : ಕನಕ, ಜಾತಿಗ್ ಜಾತಿನೆ ವೈರಿ. ಅಯ್ನೋರ್ ಹೇಳ್ತಿರ್ತಾರೆ ಜಾತಿ ಕೀಳು, ಪ್ರೀತಿ ಮೇಲು ಅಂತ. ಇದ್ಕೊಂದ್ ಉಪಾಯ ಐತೆ.

ಕನಕ : ಏನು?



ಕೃಷ್ಣ : ನಾನು ನೀನು ಇಬ್ರು ಬೇರೆ ಬೇರೆ ಜಾತಿ ಅನ್ನೋದೆ ಜನಕ್ ಹಿಡ್ಸ್ದಿದ್ರೆ, ನಾವಿಬ್ರು ಒಂದೇ ಜಾತಿಯವ್ರಾಗ್ಬಿಡವ.

ಕನಕ : ಅದ್ಹೆಂಗೆ?

ಕೃಷ್ಣ : ನಾನ್ ನಿಮ್ ಜಾತಿಗ್ ಸೇರ್ಕಬುಡ್ತಿನಿ, ಇಲ್ಲಾ ನೀನ್ ನಮ್ ಜಾತಿಗ್ ಸೇರ್ಕಬುಡು ಅಷ್ಟೆ. ಕನಕ ನಾ ನಿನ್ಗೊಂದ್ ಮಾತ್ಕೊಡ್ತಿದಿನಿ, ಇವತ್ತಿಂದ ನಾನು ನೀನು, ನೀನು ನಾನು ಇಬ್ರು ಒಂದೇ ಜಾತಿ. ಇದಕ್ ಸಾಕ್ಷಿ ಈ ಕಡ್ಗ. ಕೊಡು.

(ಕನಕಾಳ ಕೈಗೆ ಕಡಗವನ್ನು ತೊಡಿಸುತ್ತಾನೆ. ಪ್ರೇಮಪೂರ್ವಕವಾಗಿ ನಮಸ್ಕರಿಸಿದಾಗ ಕೃಷ್ಣ ಅದಕ್ಕೊಂದು ಮುತ್ತನ್ನಿಡುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

ಊರಿನ ಹಲವು ಆಟಗಳಲ್ಲಿ ಒಂದು ಹರಿಗೋಲಾಟದ ಸ್ಪರ್ಧೆ. ಈ ಸ್ಪರ್ಧೆಯಲ್ಲಿ ಒಂದೇ ಊರಿನವರಾದ ಸಿಂಗಾರಿಗೌಡ ಮತ್ತು ಕೃಷ್ಣರಿಗೆ ನೇರವಾದ ಸ್ಪರ್ಧೆ ಏರ್ಪಡುತ್ತದೆ. ತನ್ನ ವಯಕ್ತಿಕ ಕಾರಣಗಳಿಂದ ಕುತಂತ್ರಮಾಡುವ ಸಿಂಗಾರಿಗೌಡ ತನ್ನ ಯಾವುದೇ ತಂತ್ರ ಫಲಿಸದೆ ಆಟದಲ್ಲಿ ಸೋಲುತ್ತಾನೆ. ಗೆದ್ದನಂತರ ವಿಜೇತನಿಗೆ ಕೊಡುವ ಬೆಳ್ಳಿಯ ಕಡಗವನ್ನು ನಾಯಕ ಪ್ರೀತಿಪೂರ್ವಕವಾಗಿ ಅದನ್ನು ನಾಯಕಿಗೆ ಕೊಡುತ್ತಾನೆ. ವಿಧಿಯ ಆಟವೆಂಬಂತೆ ಕೆಳಗೆ ಬಿದ್ದ ಅದನ್ನು ಕೃಷ್ಣನನ್ನು ಮದುವೆಯಾಗಬೇಕಿದ್ದ ಹುಡುಗಿ ಕಾಳಿಯ ಕೈಗೆ ಸಿಗುವಂತೆ ಮಾಡಿಬಿಡುತ್ತದೆ. ಇದರಿಂದಾಗಿ ಕನಕ ಮತ್ತು ಕಾಳಿಯ ನಡುವೆ ಬರುವ ಇರಿಸು ಮುರಿಸುಗಳು ಮತ್ತು ಕೃಷ್ಣ ಮತ್ತೆ ಅದನ್ನು ಕನಕಳಿಗೆ ವಾಪಾಸ್ ಕೊಡುವುದು ಅವರಿಬ್ಬರ ನಡುವೆ ಬೆಸೆಯುವ ಬಾಂಧವ್ಯ, ತಾವಿಬ್ಬರು ಬೇರೆ ಬೇರೆ ಜಾತಿಯವರಾದರೂ ಕೂಡ ನಮಗೆ ಪ್ರೀತಿಯೇ ಒಂದು ಜಾತಿ, ಧರ್ಮ ಎಂಬ ಅರಿವನ್ನು ಮೂಡಿಸಿಕೊಳ್ಳುವುದು. ಈ ಸಂಧರ್ಭದಲ್ಲಿ ಅದ್ಭುತವಾದ ಕವನವೊಂದು ಸಾಕ್ಷಿಯಾಗುತ್ತದೆ.

# ದೃಶ್ಯ–20

***ಹಾಡು: ಜನುಮದ ಜೋಡಿ ನೀನು ಕನಕ ಕನಕ***
***ಸಾಹಿತ್ಯ: ದೊಡ್ಡರಂಗೇಗೌಡ***
***ಹಾಡಿದವರು: ರಾಜೇಶ್ ಕೃಷ್ಣನ್ ಮತ್ತು ಮಂಜುಳಾ ಗುರುರಾಜ್***

(ಹೊರಾಂಗಣದಲ್ಲಿ ವಿವಿಧ ಸ್ಥಳಗಳಲ್ಲಿ ಕೃಷ್ಣ ಮತ್ತು ಕನಕ ಹಾಡಿ ನಲಿಯುತ್ತಾರೆ)

ಕೃ : ಜನುಮದ ಜೋಡಿ ನೀನು ಕನಕ ಕನಕ..
ಹುಡುಗಾನ ಪ್ರಾಣ ನೀನು ಕೊನೆಯ ತನಕ..
ಸುವ್ವಿ ಸುವ್ವಾಲೆ ಬಾಲೆ.. ಕುಸುಮ ಸಿರಿಗಂಧಮಾಲೆ
ಮಾಲೆ ಮಾಲೆ ಮಾಲೆ ಮಲ್ಲೇ ಹೂಮಾಲೆ
ಕ : ಜನುಮದ ಜೋಡಿ ನೀನೆ ಪ್ರಾಣ ಪದಕ..
ಉಸಿರಾದೆ ನೀನು ನನ್ನ ಕೊನೆಯ ತನಕ..

ಕ : ದೊರೆಯಂಗೆ ಬಂದೆ ನೀ ಜನಜಾತ್ರೆ ನಡುವೆ
ಕಣ್ಣಲ್ಲೇ ತೊಡಿಸಿದನೀ ಮುತ್ತಿನ ಒಡವೆ..
ಕೃ : ಒಡವೆ ತೊಡದೇನೆಯೂ ಚೆಲುವೇರ ಚೆಲುವೆ
ಎದೆ ತುಂಬಿಕೊಳ್ಳಲು ನಿನ್ನ ಪಡೆವೆ.
ಕ : ನಿನ್ನ ಪ್ರೀತಿ ಚಿಲುಮೆಯೇ ಎಂದೆಂದಿಗೂ
ಗೆಲುವು ತರುವ ವರವೇ..
ಕೃ : ಅದು ಯಾವ ಜನುಮದಲೋ ಆಗ್ಯೆತೆ..
ನನಗು ನಿನಗು ಮದುವೆ..
ಕ : ನಿನ್ನ ಜೋಡಿ ಮಾಡಿದ ಆ ದೇವಗೆ ಕೈ ಮುಗಿವೆ ಮುಗಿವೆ..
ಕೃ : ಜನುಮದ ಜೋಡಿ ನೀನು ಕನಕ ಕನಕ..
ಹುಡುಗಾನ ಪ್ರಾಣ ನೀನು ಕೊನೆಯ ತನಕ..





ಕೃ :ಮೊದಲನೆಯ ನೋಟದಾಗ ಸೆಳೆದೆ ನೀ ಮನಸಾ..
ಶಿವರಾತ್ರಿ ತಂದೆ ನೀ ದಿವಸಾ ದಿವಸಾ
ಕ :ನಂಗು ಹಂಗಾಗ್ಯೆತೆ ಕೇಳಯ್ಯ ಅರಸ..
ಒಳಗೊಳಗೆ ಹಾಡ್ಯೆತೆ ಹೃದಯ ಸರಸ
ಕೃ :ನೆಲ ಮುಗಿಲು ಸೇರಿದರು ಬೇರಾಗದು ನಮ್ಮ ಬಾಳ ಕಳಸ
ಕ :ಒಡಲಾಳ ಚಂದದಲಿ ಹೇಳ್ಯೆತೆ ಪ್ರೀತಿ ಕಥೆಯ ಸೊಗಸ
ನಮ್ಮ ಬದುಕ ಹರಕೆಯ ಪೂರೈಸಲು ದಿನವು ಹರುಷ ಹರುಷ..

ಜನುಮದ ಜೋಡಿ ನೀನೆ ಪ್ರಾಣ ಪದಕ..
ಉಸಿರಾದೆ ನೀನು ನನ್ನ ಕೊನೆಯ ತನಕ..
ಇದು ಯಾವ ದೈವ ಲೀಲೆ..
ಮನಸಾಯ್ತು ನಿನ್ನ ಮೇಲೆ..
ಇದು ಯಾವ ದೈವ ಲೀಲೆ..
ಮನಸಾಯ್ತು ನಿನ್ನ ಮೇಲೆ..
ಮೇಲೆ ಮೇಲೆ ಮೇಲೆ ಮೇಲೆ ತೇಲಿಹೋದೆ ನಾ..

ಜನುಮದ ಜೋಡಿ ನೀನು ಕನಕ ಕನಕ..
ಹುಡುಗಾನ ಪ್ರಾಣ ನೀನು ಕೊನೆಯ ತನಕ..

**ನಿರ್ದೇಶಕರ ಟಿಪ್ಪಣಿ:**
ಮೈಸೂರಿನ ಸುತ್ತಮುಲ್ಲತ ಕಾವೇರಿ ತಟದಲ್ಲಿ ಚಿತ್ರೀಕರಿಸಲಾದ ಈ ಹಾಡಿಗೆ ನೃತ್ಯ ಸಂಯೋಜಿಸಿದ ದೇವಿ ಮಾಸ್ಟರ್ ತಮ್ಮ ಕೌಶಲ್ಯವನ್ನು ಪ್ರಸ್ತುತಪಡಿಸಿದ್ದಾರೆ. ಗೌರಿಶಂಕರರ ಛಾಯಾಗ್ರಹಣ ರಮ್ಯತೆಯನ್ನು ಪರಾಕಾಷ್ಠೆಗೆ ಒಯ್ಯುತ್ತದೆ.)

## ದೃಶ್ಯ–21

*ಹಗಲು – ಕನಕಾಳ ಮನೆಯ ಒಳಗೆ*

(ಹಾಡಿನ ಗುಂಗಿನಲ್ಲೇ ಸಂತೋಷದಿಂದ ಓಡಿ ಬರುತ್ತಿರುವ ಕನಕಾಳನ್ನು ಆಕೆಯ ಚಿಕ್ಕಮ್ಮ ತಡೆದು)

ಚಿಕ್ಕಮ್ಮ : ಹೇಯ್ ಎಲ್ಲಿಗ್ಹೋಗಿದ್ಯೆ ಬಿಕನಾಸಿ? ಆಹಹಾ ದೊಡ್ಡ ಗೌಡ್ತಿ ಆ ಮಣಿ. ಅವ್ಳ್ಯಾವ ನಿಂಗೇನೆ ಕೆಲ್ಸಾ? ನೋಡು ಇನ್ನೊಂದಪ ಮನೆಯಿಂದಾಚೆಗ್ ಹೋದ್ರೆ ಈ ಕಾಲ್ ನಿಂದಲ್ಲ ಅಂತಿಳ್ಕೊ. ಹೋಗ್.

ಕನಕಳ ತಂದೆ : ಅಯ್ಯಯ್ಯಯ್ಯೋ ವಸಿ ಸುಮ್ಕಿರಮೀ. ಮೊಗ ಬಿಸಿಲ್ನಲ್ ದಣ್ಕೊ ಬಂದದೆ. ನೀ ಬೇರೆ ರೇಗ್ತೀಯಲ್ಲ. ಏನು ಮಾತಾಡ್ಬೇಡ ಕಣವ.

ಚಿಕ್ಕಮ್ಮ : ಏ ಸುಮ್ಕಿರು, ಪಟಾಲಮ್ಮನ್ ಹಬ್ಬಾನು ಆಯ್ತು. ಎಲ್ಲಾನು ಐತು. ದಿನ ಸಂದಾಗ್ಯೆತಂತೆ ನಾಳೆ ಬೇಸ್ತ್ವಾರ ಊರ್ನ್ನೋರ್ಗೆಲ್ಲ ವೀಳ್ಯ ಕೊಟ್ಬಿಡ್ವಿ. ನಮ್ಮಣ್ಣಂಗುನು ಕನಕಂಗುನು ಕೂಡ್ಕೆ ಮಾಡ್ಬುಟ್ರೆ ನಮ್ ಭಾರನೆಲ್ಲ ಕಳ್ಕಂಡಾಗಾಯ್ತದೆ. ಏನಂತೀಯ?

ಕನಕಳ ತಂದೆ : ಏನಮ್ಮಿ ಭಾರ ಹೊತ್ಕಂಡಿರದು? ಅಣ್ಣಾ ಅಣ್ಣಾಂತ ಏನೂ ಅರಿದ್ ಕಂದಮ್ಮನ್ನ ನನ್ಗಿಂತ್ಲೂ ವಯಸ್ಸಾಗಿರೋ ಆ ಕ್ವಾಡಂಗಿಗಾ ಗಂಟಾಕದು.

ಆನಂದ : ಅದ್ಯಾಕ್ ಮಾವಯ್ಯ ಆಟೊಂದ್ ಸದ್ರವಾಗ್ ಮಾತಾಡ್ತೀಯ? ನಾನು ಅಂದ್ರೆ ಏನನ್ಕಂಡಿದೀಯ? ಈ ಸುತ್ತಳ್ಳಿಯಾಗ್ ಯಾರು ನನ್ಹಂಗ್ ಕುಡಿಯಾಕಿಲ್ಲ ಗೊತ್ತ?

ಕನಕಳ ತಂದೆ : ಅದ್ಕೆ ಕಂಡ್ಲೆ, ನಿನ್ನಂಥಾ ಹೆಂಡ್ಗುಡುಕನಿಗೆ ಗಿಣಿ ಮರಿಯಂಥ ನನ್ನ ಮಗಳ್ನ ಕೊಡೋಕ್ ಒಪ್ದೇ ಇರದು.

(ತನ್ನ ಹೆಂಡತಿಗೆ) .. ಅಲ್ಲಾ ಕಣಮ್ಮಿ, ನಿನ್ನ ಮಗಳೇ ಆಗಿದ್ರೆ ಈ ಓತಿಕ್ಯಾತಂಗ್ ಕೊಡಾಕ್ ಒಪ್ತಿದ್ಯಾ? ಮೊದುಲ್ನೆ ಹೆಂಡ್ತಿ ಮಗ್ಳು ಅನ್ಬುಟ್ಟು ಯಾರ್ಗಂದ್ರೆ ಅವರ್ಗೆ ಕೊಟ್ಬುಟ್ರೆ ಊರಿನ್ ಜನ ಏನಂದಾರು ನಮ್ಮನ್ನ?

ಚಿಕ್ಕಮ್ಮ : ಏನಂದಾರು? ಮನೇಲಿದ್ ಪೀಡೆ ತೊಲುಗ್ಸುದ್ರು ಅಂತ ಹಂಡೆ ಹಾಲ್ಕುಡಿತಾರಷ್ಟೆಯಾ. ನೀ ಏನಾರು ಬಡ್ಕೊಂತಾ ಇರು. ಈ ಬೇಸ್ತ್ವಾರ ನಮ್ಮಣ್ಣಂಗೆ ಕೂಡ್ಕೆ ಮಾಡೆ ಮಾಡ್ತಿನಿ.



ಆನಂದ : ನಾನು ಅಷ್ಟೆ, ಈ ಸೇಂಧಿ ಕುಡ್ದಂಗೆ ಅವಳ್ ಕೂಡ್ಕೆ ಮಾಡ್ಕಳ್ಳಿಲ್ಲ ಅಂದ್ರೆ ನಿನ್ ಜೊತ್ಗುಟ್ದ್ ಅಣ್ಣಾನೆ ಅಲ್ಲ. (ತೂರಾಡುತ್ತಾ ಕೂರುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

ಪ್ರೇಮಕಥೆಯ ಸ್ವರೂಪಗಳಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಅದಕ್ಕೆ ಬೇಕಾದಂತಹ ಸಂಘರ್ಷಗಳನ್ನು. ಆ ರೀತಿಯ ಸಂಘರ್ಷಗಳನ್ನು ವೈಯಕ್ತಿಕವಾಗಿ, ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ನಾಯಕ ಮತ್ತು ನಾಯಕಿ ಎದುರಿಸಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಅವರ ಉತ್ಕಟ ಪ್ರೀತಿಯ ಕವನವೊಂದನ್ನು ಇಟ್ಟು ಬೆನ್ನಲ್ಲೆ ಕನಕಾಳ ಮನೆಯಲ್ಲಿ ಕೂಡಿಕೆಯ ನಿರ್ಧಾರಗಳನ್ನು ವ್ಯಕ್ತಪಡಿಸಿದಾಗ ಅವಳು ಕಂಗೆಡುವಂತೆ ಮಾಡುತ್ತದೆ. ಇತ್ತ ಜಾತಿ ಮತ್ತು ವಿಜಾತಿಯ ಸಂಘರ್ಷದ ಎಳೆ ಕೂಡ ನಿಧಾನವಾಗಿ ನಾಯಕನ ಸುತ್ತ ಬಿಚ್ಚಿಕೊಳ್ಳುತ್ತ ಸಾಗುತ್ತದೆ.

# ದೃಶ್ಯ–22

*ಹಗಲು – ದೇವಸ್ಥಾನ*

(ಕೃಷ್ಣ, ತನ್ನ ಪ್ರೀತಿಯ ವಿಷಯವನ್ನು ಅಯ್ನೋರ ಹತ್ತಿರ ಪ್ರಸ್ತಾಪಿಸಿದ್ದಾನೆ.)

ಅಯ್ನೋರು : ಕೃಷ್ಣ, ನಿಜವಾಗಿ ನೀನು ಆ ಹುಡ್ಗೀನ್ನೇ ಮದ್ವೆ ಮಾಡ್ಕೊಬೇಕಂತೀಯೆನಪ್ಪಾ?

ಕೃಷ್ಣ : ಹೌದು ಅಯ್ನೋರೆ. ಅವ್ಳು ಮೂರ್ ಮಕ್ಳು ತಂದೆ ಜೊತೆ ಕೂಡ್ಕೆ ಮಾಡ್ಬೇಕೂಂತ ಅವ್ಳ್ ಮಲ್ತಾಯಿ ಮಸ್ಲತ್ ಮಾಡವ್ಳೆ. ಈಗ್ ನಾನ್ ಸುಮ್ಕಿದ್ರೆ ಅವ್ಳ್ ಬಾಳೇ ಹಾಳಾಗುತ್ತೆ.

ಅಯ್ನೋರು : ಹಮ್ ಪಾಪ, ಮತ್ತೆ ನಿನ್ನ ಬಾಳು?

ಕೃಷ್ಣ : ನನ್ ಬಾಳು ಅಷ್ಟೇ ಅಯ್ನೋರೆ, ಜಾತಿ ಬೇರೆ ಆದ್ರು ಜೊತೆ ಬೇರೆಯಾಗ್ಬಾರ್ದು. ಮನಸ್ ಮಿಡಿತಾ ಇರೋ ಮಾತನ್ನ ಮಣ್ಣ್ ಮಾಡ್ಬಾರ್ದು. ಈಗ ನೀವೆ ನಮಗ್ ದಾರಿ ತೋರ್ಸ್ಬೇಕು.

ಅಯ್ನೋರು : ಕೃಷ್ಣ, ಮನಸ್ಸುಗಳು ಒಂದಾದ ಮೇಲೆ ವಿರೋಧ ಮಾಡಿ ಏನ್ಮಾಡೋದಪ್ಪ. ಆದ್ರ ನಿಮ್ಮಣ್ಣನ್ನ, ಊರಾಗಿನ್ ಹಿರಿಯರ್ನ ಒಂದ್ಮಾತ್ ಕೇಳಿ, ಅವರ್ನ ಒಪ್ಪಿಸಿ ಯಾಕ್ ಮದ್ವೆ ಮಾಡ್ಸ್ಬಾರ್ದು?

ಕೃಷ್ಣ : ಅಂದ್ರೆ ನಾವಿಬ್ರು ಮದ್ವೆನೆ ಆಗ್ಬಾರ್ದು ಅಂತಾನ?



ಅಯ್ನೋರು : ಛೆ ಛೆ ಬಿಡ್ತು ಅನ್ನು. ಏನ್ಮಾತಾಡ್ತಿ ನೀನು? ನೋಡು ಊರಿಗೊಂದು ನೀತಿ ನೀಮ ಅಂತ ಇರ್ತೈತಿ, ಅದಕ್ಕಾ



ಹೇಳ್ಬೇಕಾಯ್ತು ನೋಡು. ಕೃಷ್ಣಾ ನಾನು ನಿನಗಾ ಯಾವಾಗ್ಲು ಒಳ್ಳೇದನ್ನಾ ಬಯಸೀನಿ. ನೀನು, ನಿನ್ನ ಗೆಳೆಯರು ಕೂಡಿ ಮಾತಾಡಿ ಒಂದು ನಿರ್ಣಯಕ್ಕ ಬರ್ರಿ. ಆಮೇಲೆ ನಿನ್ನ ಮನಸ್ಸು, ನಿನ್ನ ಆತ್ಮ ಏನ್ಹೇಳ್ತೈತೊ ಅದು ಮಾಡು. ಆದ್ರೆ ಜವಾಬ್ದಾರಿ ಇರ್ಲಿ.

(ಕೃಷ್ಣ ಅಯ್ನೋರ ಕಾಲಿಗೆ ನಮಸ್ಕರಿಸಿ ಹೊರಡುತ್ತಾನೆ. ಅಯ್ನೋರು ಚಿಂತಿತರಾಗಿದ್ದಾರೆ.)

## ದೃಶ್ಯ–23


*ಹಗಲು – ಕೃಷ್ಣನ ಗದ್ದೆಯ ಬಳಿಯಿರುವ ಅಟ್ಟಣಿಗೆ.*

(ಕೃಷ್ಣ ಮತ್ತು ಆತನ ಸ್ನೇಹಿತರು ಕೃಷ್ಣನ ಪ್ರೇಮ ವಿಚಾರದ ಬಗ್ಗೆ ಚರ್ಚಿಸುತ್ತಾ ಕುಳಿತಿದ್ದಾರೆ)

ಬಂಗಾರಿ : ಹೌದು ಕಣ್ರುಲ, ನಾವು ಜವಾಬ್ದಾರಿಯಿಂದ ತೀರ್ಮಾನ ತಗಬೇಕು. ಕೃಷ್ಣ ಕನಕನ್ನ ಬಿಟ್ಟಿರಕ್ಕಾಗಲ್ಲ. ಅದ್ಕೆ ಮದ್ವೆ ಒಂದೇ ದಾರಿ ನೋಡಿ.

ನಂಜ : ಅದ್ ಸರಿ ಕಣ್ಲ. ಅದಕ್ಕೆ ನಾವೇನ್ಮಾಡ್ಬೇಕು ಅದುನ್ನ್ ಮೊದ್ಲ್ಹೇಳು.

ಮಹಾದೇವ : ಅಣ್ಣೋ, ನಾಳೆ ರಾತ್ರಿ ನಾವು ಗಾಡಿ ತಕ್ಕಂದು ಕನಕ್ನೂರಿಗ್ ಹೋಗ್ಬೇಕು. ಕೃಷ್ಣ ಮುಂಚೆಯೆ ಹೋಗಿ ಗಾಡಿ ನಿಲ್ಲೋ ಜಾಗ್ವಾ ಕನಕಂಗೆ ಹೇಳಿಟ್ಟಿರ್ಬೇಕು. ಕನಕ ಥಟಕ್ಕನೆ ಬಂದು ಗಾಡಿ ಹತ್ಕಬೇಕು, ನಾವ್ ಅವಳ್ನ ಕರ್ಕಬಂದು ಕೃಷ್ಣಜೊತೆಯಾಗ್ ಈಶ್ವರನ್ ಗುಡಿಯಾಗ್ ಮದ್ವೆ ಮಾಡ್ಬುಡ್ಬೇಕು.



ಕೃಷ್ಣ : ಆದ್ರೆ ಈ ವಿಷ್ಯಗುಟ್ಟಾಗಿರ್ಬೇಕು. ಮದ್ವೆಗ್ ಮುಂಚೆ ಯಾರ್ಗು ಗೊತ್ತಾಗ್ಬಾರ್ದು.

ರಾಮು : ಆ ವಿಷ್ಯಾ ನಮುಗ್ಬುಡು. ನೀನೇನು ಯೋಚ್ನೆ ಮಾಡ್ಬೇಡ. ನಾನೀಗ್ಲೆ ಹೋಗಿ ಕನಕನಿಗೆ ಸುದ್ದಿ ಮುಟ್ಸುಬುಟ್ ಬತ್ತೀನಿ.

ಕೃಷ್ಣ : ಹೇ ರಾಮ, ನೀ ಇಲ್ಲೇ ಇರ್ಲ, ನಾ ಹೋಗ್ ಹೇಳ್ಬುಟ್ ಬತ್ತಿನಿ.

ಮಹಾದೇವ : ಆಮೇಕ್ ನೀನೇನಾರ ಹೋಗಿ ಎಡವಟ್ ಮಾಡ್ಬುಟ್ಟೀಯ?



ಬಂಗಾರಿ : ಮಾವಿನ್ ಸೊಪ್ಪು, ಬಾಳೆ ಕಂದು ನನ್ ಜವಾಬ್ದಾರಿ ಕಣಯ್ಯ. (ಎಲ್ಲರು ನಕ್ಕು ಅಲ್ಲಿಂದ ಹೊರಡುವರು. ಅಟ್ಟದ ಮೇಲೆ ಮಲಗಿ ಎಲ್ಲವನ್ನು ಕೇಳಿಸಿಕೊಂಡ ಕಾಳಿ ಎಲ್ಲರೂ ಹೋದಮೇಲೆ ರೋಧಿಸುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

ಊರಿನವರ ಸಮ್ಮತಿಯಲ್ಲಿ ಕೃಷ್ಣ ತನ್ನ ಮದುವೆಯನ್ನ ಮಾಡಿಕೊಳ್ಳಬೇಕು ಎಂಬ ಗುರುಗಳ ಮಾತನ್ನು ಕೃಷ್ಣ ತಾತ್ವಿಕವಾಗಿ ಒಪ್ಪದಿದ್ದಾಗ ಕೃಷ್ಣ ಮತ್ತು ಆತನ ಸ್ನೇಹಿತರು ಚರ್ಚಿಸಿ ಒಂದು ಯೋಜನೆಯನ್ನು ರೂಪಿಸಿಕೊಳ್ಳುತ್ತಾರೆ ಆದರೆ ಆ ಸಂಚು ಉಪಾಯದ ಬದಲು ಅಪಾಯವಾಗುವುದು ಮಂಚಿಗೆಯ ಮೇಲೆ ಕುಳಿತು ಎಲ್ಲವನ್ನು ಕೇಳಿಸಿಕೊಳ್ಳುವ ಕಾಳಿಯಿಂದ. ಇದರಿಂದ ಆಗುವ ಅಪಾಯ ಬಹಳ ದೊಡ್ಡದೇ ಆಗಿರುತ್ತದೆ.

## ದೃಶ್ಯ–24

***ಹಗಲು – ಕನಕಾಳ ಮನೆ ವರಾಂಡ ಮತ್ತು ನದಿ ದಂಡೆ***

(ರಾಗಿಕಲ್ಲನ್ನು ಬೀಸುತ್ತಿರುವ ಕನಕಾಳಿಗೆ, ಕೃಷ್ಣನ ಕೊಳಲಿನ ನಾದ ಕೇಳಿಸಿ ಕೃಷ್ಣನ ಬಳಿಗೆ ಓಡಿ ಬರುತ್ತಾಳೆ)

ಕೃಷ್ಣ : ಬಾ ಕನಕ, ಇವತ್ತ್ ನಾನೊಂದ್ ತೀರ್ಮಾನ ತಕೊಂಡೆ ಬಂದಿದಿನಿ. ಇನ್ಮೇಲ್ ನಾವಿಂಗಿರಕಾಗಲ್ಲ.

ಕನಕ : ಅಂದ್ರೆ, ಏನ್ಹೇಳ್ತಿದ್ಯ ಕೃಷ್ಣ ನೀನು.

ಕೃಷ್ಣ : ಆಕಾಶಕ್ ಏಣಿ ಹಾಕ್ ಹಾಳಾಗಬದ್ಲು, ಈ ಭೂಮಿ ಮೇಲ್ ಬದುಕಿ ಬೆಳ್ಕಾಗ್ಬೇಕು ಅಂತಾನೆ ನನ್ನಾಸೆ.

ಕನಕ : ಅದಿಕ್ಕೇನ್ಮಾಡು ಅಂತೀಯ? ನಾನಿವಾಗ್ಲೇ ಕೆರೆನೊ ಬಾವಿನೊ ನೋಡ್ಕೊಳ್ಳ?

ಕೃಷ್ಣ : ಕೆರೆನೊ ಬಾವಿನೊ ನೋಡ್ಕೊಳೋಕಲ್ಲ ಕನಕ, ಈ ಕೃಷ್ಣನ್ ಜೊತೆ ಬಾಳಿ, ಬದುಕೋದನ್ನ ನೋಡ್ಕಳಕ್ಕೆ.

ಕನಕ : ಕೃಷ್ಣ ನೀನ್ ನಿಜ ಹೇಳ್ತಾಯಿದಿಯಾ? ಹೇಳು ಕೃಷ್ಣ ಹೇಳು.

ಕೃಷ್ಣ : ನನ್ಗಿರದ್ ಒಂದೇ ನಾಲ್ಗೆ. ನಾ ಆಡದ್ ಒಂದೇ ಮಾತು. ನಾಲ್ಗೆ ಮೇಲ್ ನಿಗಾ ಇಲ್ದೇ ಇರೋ ನರಸತ್ತ್ ಮನ್ಷಾ ಅಂತ ತಿಳ್ಕಬೇಡ. ಆಡದ್ದನ್ನೇ ಮಾಡ್ ತೋರಸ್ತೀನಿ, ಮಾಡದನ್ನೇ ಆಡ್ತಿನಿ.

ಕನಕ : ಕೃಷ್ಣ, ನನ್ಗೇನ್ಹೇಳ್ಬೇಕೊ ಗೊತ್ತೇ ಆಯ್ತಿಲ್ಲ. ನಂಗಿದೆಲ್ಲ ನಂಬಕೇ ಆಯ್ತಿಲ್ಲ. ಆ ದ್ಯಾವ್ರು ದೊಡ್ಡೋನು. ನನ್ಗೊಂದ್ ಬಾಳ್ಕೊಟ್ಟ. ದಾರಿ ತೋರ್ಸ್ದ.





ಕೃಷ್ಣ : ನಮುಗ್ ನಾವ್ ಮೋಸ ಮಾಡ್ಕಳ್ದಿದ್ರೆ, ದಾರಿ ಸಿಕ್ಕೇ ಸಿಗುತ್ತೆ ಕನಕ. ಈಗ್ ನಮ್ದಾರಿ ಯಾವ್ದು ಅಂತ ಹೇಳ್ತಿನಿ. ನಾಳೆ ರಾತ್ರಿ ಕೆರೆ ಏರಿ ಮ್ಯಾಗೆ ಕಲ್ ಮಂಟಪದ್ ತಾವ ನಮ್ದೊಂದ್ ಗಾಡಿ ಬಂದ್ ನಿಲ್ತೈತೆ. ನೀನ್ ಬಂದ್ ಹತ್ಕೊ. ಆಮೇಲ್ ನಮ್ಮೂರ್ ಗುಡಿನಾಗೆ ನಮ್ಮಿಬ್ರುಗು ಮದ್ವೆ.

(ಇಬ್ಬರೂ ತಬ್ಬಿಕೊಳ್ಳುತ್ತಾರೆ. ಕನಕಳಿಗೆ ಕೃಷ್ಣನ ಮಾತು ಧೈರ್ಯ ತಂದಿದೆ. ನೆಮ್ಮದಿಯ ನಿಟ್ಟುಸಿರು ಬಿಡುತ್ತಾಳೆ)

## ದೃಶ್ಯ–25

*ಹಗಲು – ದೇವಸ್ಥಾನದ ಒಳಗೆ*

(ಕೃಷ್ಣ ತೋಟದಲ್ಲಿ ತನ್ನ ಸ್ನೇಹಿತರೊಂದಿಗೆ ಚರ್ಚಿಸಿದ ಎಲ್ಲ ವಿಷಯವನ್ನು ಕಾಳಿ ತಮಡಪ್ಪನಿಗೆ ಹೇಳುತ್ತಾಳೆ)

ತಮಡಪ್ಪ : ಕನಕಾ, ಅದೇ ಆ ಕಡ್ಗ ಕದ್ದಿದ್ಲಲ್ಲ ಅವ್ಳು ತಾನೆ?

ಕಾಳಿ : ಅವ್ಳೆ, ಆ ಚಂದಾಪುರ್ದ್ದೋಳು.

ತಮಡಪ್ಪ : ಅವ್ಳು ಕೀಲ್ಜಾತಿಯವ್ಳಲ್ವ? ರಾಮಣ್ಣ ಏನಂದಾನು?

ಕಾಳಿ : ಅದಿಕ್ಕೆ, ಯಾರ್ಗು ಗೊತ್ತಾಗ್ದಂಗೆ ನಾಳೆ ಸರ್ಹೊತ್ನಾಗೆ ಚಂದಾಪುರಕ್ಕೆ ಗಾಡಿ ಕಳ್ಸ್ತಾರಂತೆ. ಅವಳದ್ರಾಗ್ ಹತ್ಕೊಂಡು ಬರ್ತಾಳಂತೆ. ಆಮೇಲ್ ಈಶ್ವರನ್ ಗುಡಿಯಾಗ್ ಮದ್ವೆಯಾಯ್ತರಂತೆ. ಇದಕ್ಕೇನಾರ ಮಾಡ್ಬೇಕಲ್ಲ. ಅವನ್ ನನ್ನೇ ಮದ್ವೆ ಆಗಂಗೆ ಒಂದ್ ತಾಯ್ತ ಕಟ್ಬೇಕಲ್ಲ.

ಕಾಳಿ : ನೀನ್ ಸಿಕ್ಕಿದ್ಮೇಲೆ ನಿನಗ್ ತಾಯ್ತ ಕಟ್ದೇ ಬುಡ್ತೀನ? ನಿಮ್ಮಂಥೋರ್ಗೆ ತಾಯ್ತ ಸಿದ್ಧಮಾಡಿಟ್ಟಿದಿನಿ. ಇರು ತಂದೆ.

(ಒಳಗೆ ಹೋದ ತಮ್ಮಡಪ್ಪನ ತಲೆಯಲ್ಲಿ ಕುಯುಕ್ತಿಯೊಂದು ಸುಳಿಯುತ್ತದೆ.)



## ದೃಶ್ಯ–26

*ಹಗಲು – ಸಿಂಗಾರಿಗೌಡನ ತೋಟ*

(ಅಂದಾನಿಯಿಂದ ತನ್ನ ಗಡ್ಡ ತೆಗೆಸಿಕೊಳ್ಳುತ್ತಿರುವ ಸಿಂಗಾರಿಗೆ ತಮಡಪ್ಪ ಎಲ್ಲ ವಿಷಯ ತಿಳಿಸುತ್ತಾನೆ. ಸಿಂಗಾರಿಗೌಡ ಏನನ್ನೋ ಯೋಚಿಸಿ)

ಸಿಂಗಾರಿಗೌಡ : ಏ ಅಂದಾನಿ, ನಿಂಗೊಂದ್ ಹೆಣ್ಣ್ ನೋಡಿಟ್ಟಿವ್ನಿ. ಒಳ್ಳೆ ರಸ್ಪುರಿ ಮಾವ್ನಣ್ಣದು. ಮದ್ವೆಯಾಯ್ತಿಯೇನ್ಲಾ?

ಅಂದಾನಿ : (ರೋಮಾಂಚನಗೊಂಡು)
ಮದ್ವೇ.. ಬುಡಣ್ಣೋ ನಿಂದೊಳ್ಳೆ ಮಾತಾಯ್ತು.

ಸಿಂಗಾರಿಗೌಡ : ಅಯ್ಯೋ ಪೆಕ್ರ ಬಡ್ಡಿಮಗ್ನೆ ನಿಂಗೆ ಕಣ್ಲಾ ಹೇಳ್ತಾಯಿರದು. ನೀ ಹ್ಞೂ ಅನ್ನು ನಾಳೆ ಸರ್ರಂತ ಮದ್ವೆ ಮಾಡಿ ಸ್ವರ್ಗಕ್ಕಳ್ಸ್ಬುಡ್ತಿನಿ.

ಅಂದಾನಿ : ಸ್ವರ್ಗ ಅಂದ್ರೆ ಅದ್ಹೆಂಗ್ ಇರ್ತದ್ ಸಿಂಗಾರಣ್ಣ?

ಸಿಂಗಾರಿಗೌಡ : ನಿನ್ನ ಮುಖ ಇದ್ದಂಗ್ ಇರ್ತೈತೆ.

ಅಂದಾನಿ : ಹಂಗಾರ್ ನೋಡಾಕಾಗಕಿಲ್ಲ ಅನ್ನು.

ಸಿಂಗಾರಿಗೌಡ : ಥೂ ನಿನ್ನ ಬುದ್ಗಿಷ್ಟು ಬೆಂಕಿ ಇಟ್ರು. ನೀ ಹ್ಞೂ ಅನ್ನೊ ನರ್ಸತ್ ನನ್ ಮಗ್ನೆ. ಒಳ್ಳೆ ಚೆಂದುಳ್ಳಿ ಚೆಲ್ವೇನ್ ತಂದು ಕಣ್ಮುಚ್ ಬುಡದ್ರಾಗೆ ಮದ್ವೆ ಮಾಡ್ಸ್ಬುಡ್ತಿನಿ.

ಅಂದಾನಿ : ಹಂಗಾರೆ ವಸಿ ನಮ್ಮವ್ವನ್ ಕೇಳ್ಕಂಡ್ ಬರ್ಲಾ?

ತಮಡಪ್ಪ : ಅವ್ವನ್ ಕೇಳ್ಕಂಡ್ ಬರೊದ್ರೊಳ್ಗೆ ಆ ಹುಡ್ಗಿ ಅಜ್ಜಿ ಆಗ್ಹೋಗಿರ್ತಾಳೊ ಅದ್ರುದೊಮ್ಮೆ. ಗುಂಡ್ಗೆ ಗಟ್ಟಿ ಮಾಡ್ಕಂಡ್ ಒಂದೆ ಮನಸ್ನಾಗ್ ಹ್ಞೂ ಅನ್ನೊ.

ಅಂದಾನಿ : ಏನೋ ನಮ್ ಸಿಂಗಾರಣ್ಣ ಧೈರ್ಯಕೊಟ್ರೆ ನಾನು ನೋಡೆ ಬುಡವಾಂತ ಮದ್ವೆ ಆಗೇಬುಡ್ತೀನಿ.

ಸಿಂಗಾರಿಗೌಡ : ಸದ್ಯ, ಅಷ್ಟಾದ್ರು ಧೈರ್ಯವಾಗ್ ಹೇಳ್ದಲ್ಲ. ಹೋಗು ಎಲ್ಲ ಸಿದ್ಧ ಮಾಡ್ಕೊ. ನಾಳೆ ರಾತ್ರಿಗೆ ಮದ್ವೆ, ಮರ್ತ್ ಮಲ್ಕಂಬುಟಿಯ.

ಅಂದಾನಿ : ಎಲ್ಲಾರ ಉಂಟಾ, ಬತ್ತೀನ್ ಸಿಂಗಾರಣ್ಣೋ. ಹ್ಞಾ ವಸ ಬಟ್ಟೆ ಗಿಟ್ಟೆ ತಗಬೇಕ?

ಸಿಂಗಾರಿಗೌಡ : ಹ್ಞೂ.. (ಸೂಚನೆ ಕೊಡುತ್ತಾನೆ)

ಅಂದಾನಿ : ನಾನೊಂದು ಮದುವೆಯ ಮಾಡ್ಕಬೇಕು, ಅದ್ರಾನಂದ ಸೊಬಗ ನೋಡ್ಕಂಬೇಕು.

(ಹಾಡುತ್ತಾ ಸಂತೋಷದಿಂದ ಹೋಗುವ ಅಂದಾನಿಯ

ಬೆನ್ನ ಹಿಂದೆ ಸಿಂಗಾರಿಗೌಡ, ತಮ್ಮಡಪ್ಪ ನಗುತ್ತಾ ನಿಲ್ಲುತ್ತಾರೆ)

**ನಿರ್ದೇಶಕರ ಟಿಪ್ಪಣಿ:**
ಕಾಳಿಯ ಮುಗ್ಧತೆಯೋ ಅಥವಾ ಅವಳ ದೂರದೃಷ್ಟಿಯೋ ಒಟ್ಟಿನಲ್ಲಿ ಈ ಸುದ್ಧಿ ತಮಡಪ್ಪ, ತಮಡಪ್ಪನಿಂದ ಸಿಂಗಾರಿ ಮತ್ತು ಅಲ್ಲಿಂದ ಮತ್ತೊಂದು ಪ್ರತಿಸಂಚು ಸೃಷ್ಟಿಯಾಗಿ ಕನಕಾಳ ಜಾತಿಯವನೇ ಆದ ಅಂದಾನಿಗೆ ಮದುವೆ ಮಾಡಿಸುವ ಯೋಚನೆಯನ್ನು ಸಿಂಗಾರಿ ಮಾಡುತ್ತಾನೆ. ಇವರ ದುರಾಲೋಚನೆ ಬಹಳ ಸ್ಪಷ್ಟವಾಗಿರುತ್ತದೆ. ಇಡೀ ಚಿತ್ರದಲ್ಲಿ ಚಿತ್ರಕಥೆಯ ದೊಡ್ಡ ತಿರುವು ಇದಾಗುತ್ತದೆ.



# ದೃಶ್ಯ–27

*ರಾತ್ರಿ – ಈಶ್ವರ ದೇವಸ್ಥಾನದ ಹೊರಗೆ*

(ಕೃಷ್ಣನ ಮದುವೆಗೆ ಸ್ನೇಹಿತರೆಲ್ಲ ದೇವಸ್ಥಾನವನ್ನು ಸಿಂಗಾರ ಮಾಡುತ್ತಿದ್ದಾರೆ)

ಕೃಷ್ಣ : ಮಾದೇವ, ಇದೆಲ್ಲ ಯಾಕ್ಲಾ?

ಮಹಾದೇವ : ಅಣ್ಣೋ, ನೀನ್ ಸರಿ ಕಣ್ಣಣ್ಣ. ಅಲ್ಲ ಕಣಣ್ಣ ವರ್ಷಕೊಂದ್ ಹಬ್ಬ, ತಿಂಗ್ಳುಗೊಂದ್ ಹುಣ್ಮೆ, ಜನುಮದಾಗ್ ಒಂದ್ ಲಗ್ನ. ಈ ಲಗ್ನಾನ ಜುಮ್ಮಂತ ಮಾಡ್ಬೇಕ್ ಕಣಣ್ಣ.

ಕೃಷ್ಣ : ಹಂಗಲ್ಲ ಕಲ ನಾನ್ಹೇಳಿದ್ದು. ನಾವೇನ್ ಅದ್ದೂರಿ ಮದ್ವೇನ ಮಾಡ್ತಿದಿವಿ? ಸರೀಕರ್ಗೆ ಹಿರೀಕರ್ಗೆ ಗೊತ್ತಿಲ್ದಂಗ್ ಮಾಡ್ತಿದಿವಿ.

ನಂಜ : ಅಯ್ಯೋ ನಾವಿಲ್ವ? ಕೃಷ್ಣ, ನೋಡು ನಾವೆ ವಾಲ್ಗದವ್ರು, ನಾವೆ ಗಂಡಿನ್ ಕಡೆಯವ್ರು, ನಾವೆ ಹೆಣ್ಣಿನ್ ಕಡೆಯವ್ರು. (ವಾಲ್ಗದ ಶಬ್ದವನ್ನು ಮಾಡುತ್ತಾ ಹಾಡುತ್ತಾರೆ)

ಕೃಷ್ಣ : ಮಾದೇವ, ಬಂಗಾರು ಕನಕನ್ ಕರ್ಕಂಡ್ ಬರಕೆ ಹೋಗವ್ನಲ್ವ?

ಮಹಾದೇವ : ಹ್ಞೂ ಕಣಣ್ಣೋ. ಇಷ್ಟೊತ್ತಾಗ್ಲೆ ಆ ಚಂದಾಪುರದ್ ಏರಿನಾಗೆ ಕಾಯ್ತಾ ಇರ್ತಾಳೆ.
(ಆದರೂ ಕೃಷ್ಣನ ಎದೆಯ ತಳಮಳ ಕಮ್ಮಿ ಆಗುವುದಿಲ್ಲ.)

## ದೃಶ್ಯ–28

*ರಾತ್ರಿ – ಚಂದಾಪುರದ ದಾರಿ*

(ಬಂಗಾರು, ರಾಮು ಜೊತೆ ಎತ್ತಿನಗಾಡಿಯನ್ನು ಹೊಡೆದುಕೊಂಡು ಚಂದಾಪುರದ ಹಾದಿಯಲ್ಲಿ ಬರುತ್ತಿದ್ದಾನೆ. ದಾರಿಯಲ್ಲಿ ಯಾರ್ಗೋ ಚಪ್ಪಡಿಕಲ್ಲುಗಳನ್ನು ಅಡ್ಡಲಾಗಿ ಹಾಕಿರುವುದನ್ನು ನೋಡಿ ಬಂಗಾರು ಗಾಬರಿಯಾಗುತ್ತಾನೆ)

ಬಂಗಾರು : ಲೋ, ರಾಮು?!

ರಾಮು : ಹೇ ಎದ್ರುಕಬೇಡ ಸುಮ್ನಿರ್ಲ.
(ಎಂದು ಹೇಳಿ ಇಬ್ಬರೂ ಸುತ್ತಮುತ್ತ ಪರಿಶೀಲಿಸುತ್ತಾರೆ)



## ದೃಶ್ಯ–28ಅ

*ರಾತ್ರಿ – ಚಂದಾಪುರದ ನದಿ ದಂಡೆ*

(ನದಿ ದಂಡೆಯ ಬಳಿ ಒಂದು ಎತ್ತಿನಗಾಡಿ ಬಂದು ನಿಲ್ಲುತ್ತದೆ. ಮಣಿ ಅದನ್ನು ಗಮನಿಸಿ ಕನಕಳಿಗೆ ಬರುವಂತೆ ಸೂಚಿಸುತ್ತಾಳೆ)

ಮಣಿ : (ಆತಂಕದಲ್ಲಿರುವ ಕನಕಳನ್ನು ನೋಡಿ)
ಕೃಷ್ಣಾನೆ ಬಂದವ್ನೆ ಯಾಕ್ ಹೆದ್ರುತೀಯ? ನಡಿ.

## ದೃಶ್ಯ–28ಆ

*ರಾತ್ರಿ – ಚಂದಾಪುರದ ದಾರಿ*

(ಅಡ್ಡಲಾಗಿ ಹಾಕಲಾಗಿದ್ದ ಕಲ್ಲು ಮರದ ದಿಮ್ಮಿಗಳನ್ನು ಬಂಗಾರಿ ಮತ್ತು ರಾಮು ಎತ್ತಿಹಾಕುತ್ತ:)

ರಾಮು : ಪಾಪ ಆ ಹೆಣ್ಣುಮಗ ಅದೆಷ್ಟೊತ್ತಿಂದ ದಾರಿ ಕಾಯ್ತಾಯಿದ್ದೋ ಏನೋ ಅಲ್ಲಿ ನಮಗಾಗಿ.

## ದೃಶ್ಯ–28ಇ

*ರಾತ್ರಿ – ಚಂದಾಪುರದ ನದಿ ದಂಡೆ*

(ಎತ್ತಿನಗಾಡಿಯ ಹತ್ತಿರ ಕೃಷ್ಣ ಇಲ್ಲದಿರುವುದನ್ನು ಕಂಡು)

ಮಣಿ : ಕೃಷ್ಣ ಎಲ್ಲಿ?

ಗಾಡಿಯವ : ನಿಮ್ಗೋಸ್ಕರ ದೇವಸ್ಥಾನ್ತಾವ ಕಾಯ್ತಾವ್ನೆ ಕಣವ್ವ
(ದುಃಖಿಸುತ್ತ ಒಬ್ಬರಿಗೊಬ್ಬರು ಬೀಳ್ಕೊಡುತ್ತ)

ಮಣಿ : ಹೋಗ್ಬುಟ್ಟಾ. ದೇವ್ರೊಳ್ಳೆದ್ ಮಾಡ್ಲಿ.

ಕನಕ : ಬರ್ಲಾ..
(ಗಾಡಿ ಹತ್ತಿ ಹೊರಡುತ್ತಾಳೆ. ಮಣಿ ಆತಂಕದಿಂದ ಕನಕಳನ್ನೇ ನೋಡುತ್ತ ನಿಲ್ಲುತ್ತಾಳೆ.)

## ದೃಶ್ಯ–28ಈ

***ರಾತ್ರಿ – ಚಂದಾಪುರದ ದಾರಿ***

(ರಾಮು ಮತ್ತು ಬಂಗಾರಿಯ ಗಾಡಿ ಕೃಷ್ಣ ಹೇಳಿದ್ದ ಜಾಗಕ್ಕೆ ಬರುತ್ತದೆ. ಬಂದು ಕನಕ ಇಲ್ಲದಿರುವುದನ್ನು ನೋಡಿ)

ರಾಮು : ಇಷ್ಟೊತ್ತಿಗ್ ಬಂದಿರ್ಬೇಕಿತ್ತಲ್ಲ ಬಂಗಾರಿ

ಬಂಗಾರಿ : ಅವ್ನ್ಹೇಳಿದ್ ಇದೇ ಜಾಗನಾ ಅಥ್ವಾ ಅಲ್ವಾ ಅಂತಾ?

ರಾಮು : ಏ ಇದೇ ಜಾಗ ಕಲಾ, ನಂಗ್ ಚೆನ್ನಾಗ್ ಗೊತ್ತು.

ಬಂಗಾರಿ : ಹಂಗಾರೆ ಕಾಯವಾ ಬುಡು.
(ಗಾಡಿಯಲ್ಲೇ ಕುಳಿತು ಆತಂಕದಿಂದ ಸುತ್ತಲೂ ಕಣ್ಣು ಹಾಯಿಸುತ್ತಾರೆ.)

## ದೃಶ್ಯ–28ಉ

***ರಾತ್ರಿ – ದೇವಸ್ಥಾನ***

(ಕನಕ ಹತ್ತಿದ್ದ ಎತ್ತಿನ ಗಾಡಿ ಒಂದು ದೇವಸ್ಥಾನದ ಹತ್ತಿರ ಬಂದು ನಿಂತಾಗ ಇಬ್ಬರು ಮಹಿಳೆಯರು ಅವಳನ್ನು ಬರಮಾಡಿಕೊಂಡು ದೇವಸ್ಥಾನದ ಒಳಗೆ ಕರೆದುಕೊಂಡು ಹೋಗುತ್ತಾರೆ)

## ದೃಶ್ಯ–28ಊ

***ರಾತ್ರಿ – ಚಂದಾಪುರದ ನದಿ ದಂಡೆ***

(ರಾಮು ಮತ್ತು ಬಂಗಾರಿ ಕನಕಾಳಿಗಾಗಿ ಕಾಯುತ್ತಿದ್ದಾರೆ)

## ದೃಶ್ಯ–28ಋ

***ರಾತ್ರಿ – ಹೊರಾಂಗಣ–ದೇವಸ್ಥಾನ***

(ಕನಕಳಿಗಾಗಿ ಕೃಷ್ಣ ಕಾಯುತ್ತಿದ್ದಾನೆ)



## ದೃಶ್ಯ–29

***ರಾತ್ರಿ – ದೇವಸ್ಥಾನದ ಒಳಗೆ***

(ಕನಕಾಳನ್ನು ಅಲಂಕಾರ ಮಾಡಿ ಮದುವೆ ಮಂಟಪದ ಬಳಿ ಕರೆತರುತ್ತಾರೆ. ಕನಕ ಕೃಷ್ಣನಿಗಾಗಿ ಹುಡುಕುತ್ತಿರುತ್ತಾಳೆ. ಆಗ ಪುರೋಹಿತರು)

ಪುರೋಹಿತರು : ಗಂಡು ಬರ್ಲಿ ಗಂಡು.
(ಅಂದಾನಿ ಮದುಮಗನಾಗಿ ಬಂದು ಕನಕಾಳ ಪಕ್ಕದಲ್ಲಿ ಕೂರುತ್ತಾನೆ. ಪುರೋಹಿತರು ತಾಳಿ ಕಟ್ಟುವಂತೆ ಸೂಚನೆ ನೀಡುತ್ತಾರೆ, ಅಂದಾನಿ ತಾಳಿ ಕಟ್ಟಲು ಬಂದಾಗ ಕನಕ ಅಂದಾನಿಯನ್ನು ನೋಡಿ ದಿಗ್ಭ್ರಮೆಗೊಂಡು ಕಿರುಚಿಕೊಳ್ಳುತ್ತಾಳೆ)



ಕನಕ : ಕೃಷ್ಣ.. ಕೃಷ್ಣ... ಮೋಸ ಮೋಸ, ನಾನ್ ಇವನ್ಜೊತೆ ಮದ್ವೆ ಮಾಡ್ಕಳಂಗಿಲ್ಲ.
(ಅಲ್ಲಿಂದ ಏಳಲು ಪ್ರಯತ್ನಿಸುತ್ತಿರುವಾಗ ಸಿಂಗಾರಿಗೌಡನ ಕಡೆಯ ಮಹಿಳೆಯರು ಆಕೆಯನ್ನು ಬಲವಂತವಾಗಿ ಹಿಡಿದುಕೊಳ್ಳುತ್ತಾರೆ)
.. ನಾನ್ ಇವನ್ಜೊತೆ ಬಾಳ್ವೆ ಮಾಡಾಕಿಲ್ಲ.

ಅಂದಾನಿ : ನೋಡು ಸಿಂಗಾರಣ್ಣ, ಇವ್ಳು ನನ್ಜೊತೆ ಬಾಳ್ವೆ ಮಾಡಾಕಿಲ್ಲ ಅಂತಾಳೆ.

ಸಿಂಗಾರಿಗೌಡ : ಅಂಗಂತಾವ್ಳೆ ಅಂತ ಸುಮ್ನಿರಕಾಯ್ತದೇನೊ.
(ಸಿಂಗಾರಿಗೌಡನನ್ನು ನೋಡಿ ಕನಕ ಆಶ್ಚರ್ಯದಿಂದ)

ಕನಕ : ನೀವಾ? (ಅಂದಾನಿಯತ್ತ ತಿರುಗಿ)
.. ಥೂ ನಿನ್ನ.. ನೀನು ಒಬ್ಬ ಗಂಡ್ಸಾ? ಮೋಸ ಮಾಡಿ

ಮದ್ವೆ ಮಾಡ್ಕಳವ್ನು. ನೀನು ಒಬ್ಬ ಮನ್ಸಾನ? ಬುಡು ನನ್ನ.. ಕೃಷ್ಣಾ..

ಸಿಂಗಾರಿಗೌಡ : ಬುಡಬ್ಯಾಡ್ರ ಅವಳ್ನ ಹಿಡ್ಕಳಿ. ಕಟ್ಲಾ ತಾಳಿ.

ಕನಕ : ಬುಡಿ ನನ್ನ ಬುಡಿ.. ದಮ್ಮಯ್ಯ ಅಂತೀನಿ..
(ಕನಕ ರೋಧಿಸುತ್ತಿರುವಾಗ ತಮಡಪ್ಪ ಮಧ್ಯ ಬಂದು ಅವಳನ್ನು ಹಿಡಿದು)

ತಮಡಪ್ಪ : ಹೇಯ್ ಹಿಡ್ಕಳಿ.. ಹಿಡ್ಕಳಿ..

ಕನಕ : ಕಾಪಾಡಿ..

ತಮಡಪ್ಪ : (ಅಂದಾನಿಗೆ) .. ಕಟ್ಟೋ..

ಕನಕ : ಕಾಪಾಡಿ..

ತಮಡಪ್ಪ : ಕಟ್ಟೋ ಬೇಗ..
(ಅಂದಾನಿ ತಾಳಿಯನ್ನು ಕಟ್ಟುತ್ತಾನೆ. ಕನಕ ರೋಧಿಸುತ್ತಾಳೆ)

ಕನಕ : ಕೃಷ್ಣ..
(ಅವರ ಹಿಡಿತದಲ್ಲಿರುವ ಕನಕ ಅಸಹಾಯಕಳಾಗಿ ರೋಧಿಸುತ್ತಾಳೆ)



## ದೃಶ್ಯ-30

*ರಾತ್ರಿ - ದೇವಸ್ಥಾನದ ಆವರಣ*

(ಕನಕಳನ್ನು ನೆನೆದು ಕೃಷ್ಣ ಗಾಬರಿಯಿಂದ ಎದ್ದು ನಿಲ್ಲುತ್ತಾನೆ. ಇದನ್ನು ನೋಡಿ ಮಹಾದೇವ, ನಂಜ ಓಡಿಬರುತ್ತಾರೆ)

ನಂಜ : ಏನಾಯ್ತು ಕೃಷ್ಣ?

ಕೃಷ್ಣ : ಯಾಕೊ ಮನ್ಸಿಗ್ ತುಂಬ ಸಂಕ್ಟ ಆಗ್ತೈತೆ. ಬಂಗಾರು ಗಾಡಿ ತಿರ್ಗಿ ಬತ್ತಾ ಇರ್ಬೇಕಲ್ಲಾ?

ಮಹಾದೇವ : ಕೃಷ್ಣ, ಗಾಡಿ ಬಂದೇ ಬತ್ತದೆ ನೀನೇನು ಯೋಚ್ನೆ ಮಾಡ್ಬೇಡ. ಕನಕನು ಬಂದೇ ಬತ್ತಳೆ.
(ಸ್ನೇಹಿತರಿಗೆ) .. ಗಾಡಿ ಬತ್ತದೆ ಅಲ್ವೇನ್ರುಲ?

ನಂಜ : ಬಂದೆ ಬತ್ತದೆಕಣ್ಲಾ.
(ಇದ್ದಕ್ಕಿದ್ದ ಹಾಗೆ ಅವರ ಮನಸ್ಸಿನಲ್ಲಿ ಸಂಶಯದ ಸುಳಿಯೊಂದು ಸುಳಿಯುತ್ತದೆ.)

## ದೃಶ್ಯ–31

*ರಾತ್ರಿ – ದೇವಸ್ಥಾನ*

(ತಾಳಿ ಕಟ್ಟಿಸಿ ಹೊರಗೆ ಕರೆತರುತ್ತಿರುವಾಗ ಕನಕ ರೋಧಿಸುತ್ತಿದ್ದಾಳೆ)

ಕನಕ : ಬುಡಿ ನನ್ನ. ನಾನ್ ಅವ್ನೊಟ್ಟೆ ಬಾಳ್ವೆ ಮಾಡಾಕಿಲ್ಲ. ನಿಮ್ ದಮ್ಮಯ್ಯ ಅಂತಿನಿ. ಬುಡಿ ನನ್ನ, ಕೃಷ್ಣ..
(ಅಂದಾನಿ, ಸಿಂಗಾರಿಗೌಡನ ಕಾಲಿಗೆ ಬೀಳುತ್ತಾನೆ)

ಅಂದಾನಿ : ಸಿಂಗಾರಣ್ಣ, ನೀನ್ ಮಾಡಿರೋ ಉಪ್ಕಾರ್ವ ನನ್ ಜನ್ಮ ಜನ್ಮಾಂತ್ರುಕ್ಕು ಮರಿಯಕ್ಕಿಲ್ಲ.

ಸಿಂಗಾರಿಗೌಡ : ಆಯ್ತಾಯ್ತು ಏಳ್ಳ ಮ್ಯಾಕೆ.

ತಮಡಪ್ಪ : ಲೋ ಅದ್ರುದೆಮ್ಮೆ. ಇಲ್ ಬಂದು ಹೆಂಡ್ತಿನ ಸಂಭಾಳ್ಸು ಅಂದ್ರೆ ಅಲ್ಲೇನೊ ಗಪ್ಪ ಹೂಡಿತಿದಿಯಾ?

ಸಿಂಗಾರಿಗೌಡ : ಋಣ ತೀರ್ಸ್ಬುಟ್ವೆ.

ತಮಡಪ್ಪ : ಇಷ್ಟಕ್ಕೆ ತೀರ್ಹೊಯ್ತದ?
(ಕನಕ ಅಲ್ಲಿಂದ ತಪ್ಪಿಸಿಕೊಂಡು ಓಡತೊಡಗುತ್ತಾಳೆ)

ಅಂದಾನಿ : ಸಿಂಗಾರಣ್ಣ, ನನ್ ಹೆಂಡ್ತಿ.

ಸಿಂಗಾರಿಗೌಡ : (ಅವನ ಕಡೆಯವರಿಗೆ)
.. ಹೇಯ್ ಹಿಡ್ಕಳ್ರೊ, ಬುಡ್ಬ್ಯಾಡ್ರಿ. ಹಿಡ್ಕೊಳ್ರೋ.
(ಕನಕಳನ್ನು ಸಿಂಗಾರಿಗೌಡನ ಕಡೆಯವರು ಅಟ್ಟಿಸಿಕೊಂಡು ಬರುತ್ತಾರೆ)



## ದೃಶ್ಯ – 31ಅ

*ರಾತ್ರಿ – ಚಂದಾಪುರಕ್ಕೆ ಹೋಗುವ ದಾರಿ*

(ಸಿಂಗಾರಿಗೌಡನ ಕಡೆಯವರಿಂದ ತಪ್ಪಿಸಿಕೊಂಡು ಕನಕ ತನ್ನ ಊರಿನ ಕಡೆಗೆ ಓಡತೊಡಗುತ್ತಾಳೆ. ಸಿಂಗಾರಿಗೌಡನ ಆಳುಗಳು ಆಕೆಯನ್ನು ಹಿಂಬಾಲಿಸುತ್ತಾರೆ. ಮಾರ್ಗ ಮಧ್ಯದಲ್ಲಿ ಅವರಿಂದ ತಪ್ಪಿಸಿಕೊಂಡ ಕನಕ ತನ್ನ ಮನೆಯ ಕಡೆಗೆ ಓಡುತ್ತಾಳೆ)

# ದೃಶ್ಯ–32

*ರಾತ್ರಿ –ಚಂದಾಪುರದ ಬೀದಿ*

(ಕನಕ ತನ್ನೂರಿನ ಕಡೆಗೆ ಬಂದಾಗ ಕನಕಾಳ ಮಲತಾಯಿ ಆಕೆಗಾಗಿ ಹುಡುಕುತ್ತಿರುವುದು ತಿಳಿಯುತ್ತದೆ)

ಮಲತಾಯಿ : ಸೂಳೆ ಮುಂಡೆ, ಯಾವನ್ನೊತೆನಾದ್ರು ಹೋಗಿರ್‍ಲಿ. ನಾನವಳ್ನ ಸುಮ್ನೆ ಬುಡಾಕಿಲ್ಲ. ಅವ್ಳ ಮೈಯಾಗಿರೋ ರಕ್ತಾನೆಲ್ಲ ಗಟಾ ಗಟಾಂತ ಹೀರಿ ಕುಡ್ಕ್‌ಬುಡ್ತೀನಿ. ಲಪ್ಡಿ ಮುಂಡೆ. ಇವ್ಳ್ನ ನಂಬ್ಕೊಂಡು ನಮ್ಮಣ್ಣಂಗ್ ಭಾಷೆ ಕೊಟ್ಬುಟ್ಟೆ. ಮದ್ವೆ ಮಾಡ್ಕೊಡ್ತೀನೀಂತ, ನನ್ ಮಾನ ಮರ್‍ವಾದೆ ಎಲ್ಲ ಹರಾಜಾಕ್ಬುಟ್ಳು. ಅವ್ಳ್ ನನ್ ಕೈಗ್ ಸಿಗ್ಲಿ ಸಿಗ್ಲು ತೋರ್‍ಣ ಕಟ್ಬುಡ್ತೀನಿ.

(ಮಲತಾಯಿ ಮತ್ತು ಕೆಲವರು ಕನಕಳನ್ನು ಹುಡುಕಲು ಹೊರಡುತ್ತಾರೆ. ಪರಿಸ್ಥಿತಿ ಅರಿತ ಕನಕ ಅಲ್ಲಿಂದಲೂ ತಪ್ಪಿಸಿಕೊಂಡು ಓಡತೊಡಗುತ್ತಾಳೆ)

**ನಿರ್ದೇಶಕರ ಟಿಪ್ಪಣಿ :**

ಕನಕಳ ದುರ್ವಿಧಿ ಎಂತದು ಎಂಬುದು ನೋಡುಗರ ಮನ ಕಲಕುತ್ತದೆ. ಬದುಕಿನ ಆನಂದದ ಕನಸು ಕಂಡ ಅವಳ ಬಾಳು ಕ್ರೂರ ವಕ್ರತೆಗಳನ್ನು ಕಾಣುತ್ತದೆ. ಯಾವ ಆಸರೆಯೂ ಇಲ್ಲದೆ ಕೃಷ್ಣನೊಬ್ಬನನ್ನೇ ನೆಚ್ಚಿಕೊಳ್ಳುತ್ತದೆ ಮನಸ್ಸು. ಈ ದೃಶ್ಯಗಳ ಚರ್ಚೆ ನಡೆದಾಗಲೆಲ್ಲಾ ಡಾ ರಾಜ್ ಅವರ ಶಬ್ದಗಳು ಹನಿದುಂಬುತ್ತಿದ್ದವು.



# ದೃಶ್ಯ–32ಅ

*ರಾತ್ರಿ – ಚಂದಾಪುರದ ಬೀದಿ*

(ಕನಕ ಮತ್ತೊಂದು ಬೀದಿಯ ಬಳಿ ಬಂದಾಗ ಕನಕಾಳ ಅಪ್ಪ ಮಹಾದೇವ;)

ಮಹಾದೇವ : ಎಲ್ಲಯ್ಯ ಹಾಳಾಗ್ಹೋದ್ಲು ಇವ್ಳು. ನಾನ್ ಬದುಕಿದ್ದಾಗ್ಲೆ ನನ್ನ ಸಾಯಿಸ್ಬುಟ್ಲಲ್ಲಯ್ಯ. ಅಯ್ಯೋ ನನ್ ಮಾನ ಮರ್‍ಯಾದೆ ಎಲ್ಲ ಊರ್‍ನಾಗ್ ಹರಾಜಾಕ್ಬುಟ್ಲಲ್ಲಯ್ಯ. ಇವ್ಳು ನನ್ ಮಗಳಲ್ಲ. ಸಿಕ್ಲಿ, ಎಲ್ಹೋಯ್ತಾಳೆ ಅವ್ಳು.

(ತನ್ನ ತಂದೆಯೂ ತನ್ನ ಸಹಾಯಕ್ಕಿಲ್ಲವೆಂದು ತಿಳಿದು ಕನಕ ಅಧೀರಳಾಗುತ್ತಾಳೆ)

# ದೃಶ್ಯ–32ಆ

*ರಾತ್ರಿ – ಚಂದಾಪುರದ ಬೀದಿ*

(ಮತ್ತೊಂದು ಬೀದಿಯಲ್ಲಿ)

ಕಲ್ಲಪ್ಪ : ಕೋಡ್ಕಯೋ, ಪಾಡ್ಕೆಯೋ ಮನೆಯವ್ಕ್ಳೆಳ್ಗಂಗೆ ಕೇಳ್ಕಂಡ್ ಬಿದ್ದಿರ್ಬೇಕು. ಅದ್ಬುಟ್ಬುಟು ಊರ್ಬಿಟ್ ಒಂಟೋದ್ರೆ ಊರ್ ಮರ್ವಾದೆ ಉಳಿತದಾ? ವಯಸ್ಸಿಗ್ ಬಂದ್ ಹೆಣ್ಣೈಕ ಮನ್ಸಿಗ್ ಬಂದಂಗ್ ನಡ್ಕಂಡ್ರೆ ಊರು ಅಂತ ಯಾಕಿರ್ಬೇಕು, ಕೇರಿ ಅಂತ ಯಾಕಿರ್ಬೇಕು. ಅವಳ್ನ ಒಂದೊಂದೇ ಇಂಚ್ಗೆ ಕತ್ರಸಾಕ್ಬೇಕು. ಏನ್ರುಲಾ?

ಎಲ್ಲರು : ಹೂ ಕಣಣ್ಣ

ಕಲ್ಲಪ್ಪ : ಅವ್ಳ್ ಈ ಊರಿಗ್ ಬಂದ್ರೆ ಕೈ ಕಾಲ್ ಕತ್ರಿಸ್ಹಾಕಿ. ಈ ಹಲ್ಕಟ್ ಹುಡ್ಗಿನ ಊರೊಳ್ಗೆ ಬಿಟ್ಕಾಬಾರ್ದು.
(ಇದನ್ನು ಕೇಳಿಸಿಕೊಂಡು ನಿಂತಿದ್ದ ಕನಕಳನ್ನು ಸಿಂಗಾರಿಗೌಡನ ಕಡೆಯವರು ಹಿಡಿದು ಎತ್ತೊಯ್ಯುತ್ತಾರೆ)



# ದೃಶ್ಯ–33

*ರಾತ್ರಿ – ದೇವಸ್ಥಾನದ ಆವರಣ*

(ಚಿಂತಾಕ್ರಾಂತನಾಗಿ ನಿಂತಿರುವ ಕೃಷ್ಣ ದೂರದಲ್ಲಿ ಬರುತ್ತಿರುವ ಎತ್ತಿನಗಾಡಿಯ ಶಬ್ದವನ್ನು ಕೇಳಿಸಿಕೊಳ್ಳುತ್ತಾನೆ)

ಕೃಷ್ಣ : ಮಾದೇವ, ನಂಜ ಎಲ್ಲೋ ಗಾಡಿ ಸದ್ದು ಕೇಳಿಸ್ತಾಯಿಲ್ಲ?
(ಎತ್ತಿನಗಾಡಿ ಬರುತ್ತಿರುವುದು ಕಾಣಿಸಿ ಸಂತೋಷ ಗೊಂಡು ಗಾಡಿಯ ಹತ್ತಿರ ಓಡಿ ಬರುತ್ತಾರೆ)
.. ಬಂಗಾರು
(ಗಾಡಿಯ ಹಿಂದೆ ಬಂದು)
.. ಕನಕ
(ಕನಕಳನ್ನು ಹುಡುಕಿ, ಅವಳಿಲ್ಲದಿರುವುದನ್ನು ನೋಡಿ ಗಾಬರಿಗೊಂಡು ಬಂಗಾರುಗೆ)
.. ಬಂಗಾರು ಎಲ್ಲಿ ನನ್ ಕನಕ? ಏನಾಯ್ತವ್ಳಿಗೆ? ಬಂಗಾರು ಯಾಕೆ?

ಬಂಗಾರು : ಅವಳ್ ಬರ್ಲಿಲ್ಲ ಕೃಷ್ಣ.

ಕೃಷ್ಣ : (ದಿಗ್ಭ್ರಮೆಗೊಂಡು)
.. ಬಂಗಾರು, ಸುಳ್ ಬೊಗ್ಳುಬೇಡ. ಅವ್ಳು ಬರ್ದೆ ಇರೋಕೆ ಸಾಧ್ಯಾನೆ ಇಲ್ಲ.
(ಮತ್ತೆ ಹಿಂದೆ ಹೋಗಿ)
.. ಕನಕ (ಆಕೆ ಇಲ್ಲದಿರುವುದನ್ನು ನೋಡಿ)
.. ಕನಕಂಗೆ ನನ್ನ ಬಿಟ್ಟು ಬದ್ಕಕಾಗಕ್ಕಿಲ್ಲ. ಹೇಳು ಬಂಗಾರು ಏನಾಯ್ತ್ ನನ್ ಕನಕಂಗೆ ಹೇಳು ಬಂಗಾರು? ಹೇಳು.

ರಾಮು : ಸಮಾಧಾನ ಮಾಡ್ಕೊ ಕೃಷ್ಣ, ನಾವು ಕನಕನಿಗೇ ಅಂತ್ಲೇ ಇಷ್ಟೊತ್ತ್ ವರ್ಗೂ ಕಾಯ್ತಾ ಇದ್ವಿ. ಯಾಕೋ ಏನೋ ಅವಳ್ ಬರ್ಲೇ ಇಲ್ಲ.

ಬಂಗಾರು : ಅವ್ರೂರಲ್ ಗಲಾಟೆ ಶುರು ಆಯ್ತು. ಯಾತ್ತಿಕ್ಕೆ ಅನ್ನದೇ ಗೊತ್ತಾಗ್ಲಿಲ್ಲ. ಗಾಡಿ ತಿರ್ಗಸ್ಕಂಡ್ ಬಂದ್ಬುಟ್ವಿ, ನಮ್ಮನ್ನಂಬು ಕೃಷ್ಣ.

ಕೃಷ್ಣ : ನಾ ಯಾರನ್ ನಂಬ್ಲಿ? ಯಾರನ್ ಬಿಡ್ಲಿ? ನಂಗೊಂದು ತಿಳಿತಾಯಿಲ್ಲ. ನಂಗೀಗ್ ಕನಕನ್ ಬಿಟ್ಟು ಬೇರೇನು ಹೊಳಿತಾಯಿಲ್ಲ. ಎಲ್ಲಿ ನನ್ ಕನಕ? ನನ್ ಕನಕ ಎಲ್ಲಿ?

ಕನಕ ಎಂಥ ಕೆಲ್ಸ ಮಾಡ್ಬಿಟ್ಟೆ. ಆಸೆ ಅರಳಿದ್ ಬಳ್ಳಿ ಬುಡಾನ ಕತ್ತರಿಸ್ಬುಟ್ಟೆ. ಕಣ್ಣಾಗಿರೋ ಕನಸನ್ನ ಮಣ್ ಮಾಡ್ಬಿಟ್ಟೆ. ಯಾಕಿಂಗ್ ಮಾಡ್ದೆ ಕನಕ, ಯಾಕಿಂಗ್ ಮಾಡ್ದೆ.

ಮಹಾದೇವ : ಕೃಷ್ಣ, ನೀ ಯೋಚ್ನೆ ಮಾಡ್ಬೇಡ ಕೃಷ್ಣ, ಕನಕ ಯಾವತ್ತೂ ನಿನ್ನವ್ಳೆ. ಅವಳ್ ಮೈಯಾಗ್ ಏನೋ ಆಗಿರ್ಬೈದು ಇಲ್ದಿದ್ರೆ ಅಪ್ಪಿಂಗ್ ಮಾಡ್ತಿರ್ನಿಲ್ಲ.

ನಂಜ : ಕೃಷ್ಣ.. ಕೃಷ್ಣ.. ಬೆಳಕರಿಯೋ ಹೊತ್ತಾಯ್ತು ಏನಾಯ್ತು ಅಂತ ಆಮೇಲ್ ವಿಚಾರ ಮಾಡವ ಬಾ.
(ಕುಸಿದು ಕುಳಿತಿರುವ ಕೃಷ್ಣನನ್ನು ಸ್ನೇಹಿತರೆಲ್ಲರು ಎಳಿಸತೊಡಗುತ್ತಾರೆ)




## ದೃಶ್ಯ–34

*ಹಗಲು – ಊರಿನ ಬೀದಿ*

(ದಿಬ್ಬಣದ ಗಾಡಿಯಲ್ಲಿ ನಿರಾಶರಾಗಿ ಊರ ಕಡೆ ಬರುತ್ತಿರುವಾಗ ವಾದ್ಯಗಳ ಸದ್ದನ್ನು ಕೇಳಿದ ಬಂಗಾರು)

ಬಂಗಾರು : ಲೋ ಏನ್ರುಲ ಸಬ್ಕಸ್ದನ್ ಸದ್ ಕೇಳ್ತೈತೆ?

ರಾಮು : ನೆನ್ನೆ ನೋಡುದ್ರೆ ಯಾವ್ ಸುದ್ದಿನು ಇರ್ನಿಲ್ಲ. (ಮದುಮಕ್ಕಳನ್ನ ನೋಡಿ)
.. ಲೋ ಅಲ್ನೋಡ್ರುಲ! ಕನಕನ್ ಜೊತೆ ಅಂದಾನಿ ಮೆರವಣಿಗೆ!
(ದಿಗ್ಭ್ರಮೆಗೊಂಡ ಕೃಷ್ಣ ಹೊರಗೆ ಬಂದು ಅಂದಾನಿ ಮತ್ತು ಕನಕಳ ಮೆರವಣಿಗೆ ನೋಡುತ್ತಾನೆ.)



ಕೃಷ್ಣ : ಏನ್ ನೋಡ್ತಾಯಿದಿನಿ ನಾನು, ಕನಕ ಏನಾಯ್ತು ನಿನ್ಗೆ? ನಂಜ ಅಲ್ನೋಡು. ಇಲ್ಲ ನಾನ್ ಬುಡಾಕಿಲ್ಲ. ಈ ಮೆರವಣಿಗೆ ನಡಿಯಾಕ್ ಬುಡಾಕಿಲ್ಲ. ಒಬ್ಬಬ್ಬೊಬ್ರನು ಕೊಚ್ಚಾಕಿ, ಇವರ್ ಚೆಂದಾನೆಲ್ಲ ಸುಟ್ಟು ಬೂದಿ ಮಾಡ್ತಿನಿ.
(ಕುಪಿತನಾಗಿ ಗಾಡಿಯಲ್ಲಿದ್ದ ಮಚ್ಚನ್ನು ತಗೆದುಕೊಳ್ಳುತ್ತಾನೆ)
ನನ್ ಕನಸುಗಳ್ಗೆ ಕೊಳ್ಳಿ ಇಟ್ಟ ಆ ಕಳ್ಳಿ ನಾಲ್ಗೆನ ಕತ್ರಿಸಿ ನಾಯಿ ನರಿಗ್ ಎಸಿತಿನಿ.

ನಂಜ : ಬೇಡ ಬೇಡ ಕೃಷ್ಣ, ಆತ್ರ ಪಡ್ಬೇಡ. ಈಗ್ಲೇ ಒಂದ್ಹೋಗ್ ಇನ್ನೊಂದಾಗೈತೆ. ಮೊದ್ಲು ಏನಾಗೈತೆ ಅಂತ ಯೋಚ್ನೆ ಮಾಡನ ಸುಮ್ಕಿರು ಕೃಷ್ಣ.

ಕೃಷ್ಣ : ನಾ ಸುಮ್ಕಿರಕಿಲ್ಲ, ಒಬ್ಬೊಬ್‌ರನ್ನು ಸಿಗ್ದಾಕಿ ತೋರ್ಣ ಕಟ್ಬುಡ್ತೀನಿ. ನಾನ್ ಬದುಕ್ಬೇಕು ಇಲ್ಲ ಅವ್ಳು ಅವ್ಳ್ ಗಂಡ ಬದುಕ್ಬೇಕು. ಬುಡಿ ನನ್ನ. (ಬಿಡಿಸಿಕೊಂಡು ಹೋಗುವಾಗ ಬಂಗಾರು ಅವನನ್ನು ತಡೆದು)

ಬಂಗಾರು : ಕೃಷ್ಣ.. ನಿನ್ಗೇನ್ ಬುದ್ಧ್ ಗಿದ್ಧಿ ಐತೋ ಇಲ್ವೋ? ಊರ್‍ನೆಲ್ಲ ಗಬ್ಬೆಬ್ಸಿ ಆಮೇಲ್ ಅರ್ಮನೆ ಕಟ್ಟೇಕು ಅಂತಿದ್ಯ? ಈಗ್ ಸುಮ್ನಿರು ಅಂದ್ರೆ ಸುಮ್ನಿರ್ಬೇಕು.



ಕೃಷ್ಣ : ಒಳ್ಗಡೆ ಕೊಳ್ಳಿ ಕುಣಿತಾಯಿರ್ಬೇಕಾದ್ರೆ ಸುಮ್ಕಿರು ಸುಮ್ಕಿರು ಅಂತೀರಲ್ಲ ಅದೆಂಗ್ರೋ ಸುಮ್ಕಿರ್ಲಿ ನಾನು? ನನ್ ಪಾಡಿಗ್ ನನ್ನ ಬುಟ್ಬುಡಿ, ಒಬ್ಬೊಬ್ರುನು ಹುಟ್ಲಿಲ್ಲ ಅನ್ಸ್‌ಬುಡ್ತೀನಿ. ನಾನು ನನ್ನ ಕನಕನ್ನ ಕೇಳ್ಬೇಕು, ಏನಾಯ್ತು ನಿಂಗೆ ಅಂತ ಜಗ್ಗಸ್ಬೇಕು. ಒಟ್ಗೆ ಬದುಕ್ಬೇಕು ಇಲ್ಲ ಒಟ್ಗೆ ಸಾಯ್ಬೇಕು. ಬಿಡಿ ನನ್ನ
(ಬಿಡಿಸಿಕೊಂಡು ಮಚ್ಚನ್ನು ಹಿಡಿದುಕೊಂಡು ಓಡುತ್ತಾನೆ. ಸ್ನೇಹಿತರೆಲ್ಲರು ಅವನನ್ನು ಹಿಂಬಾಲಿಸುತ್ತಿದ್ದಾರೆ. ಹೀಗೆ ಓಡುತ್ತಿರುವ ಸಂಧರ್ಭದಲ್ಲಿ ಕೃಷ್ಣನಿಗೆ ಅಯ್ನೋರು ಎದುರಾಗುತ್ತಾರೆ)

ಅಯ್ನೋರು : ಬ್ಯಾಡ ಕೃಷ್ಣ, ನಿನ್ನ ಕನಕ ಈಗ ಅಂದಾನಿ ಹೆಂಡತಿ. ಮಾಂಗಲ್ಯ ಕಟ್ಟಿಕೊಂಡಿರೊ ಮುತ್ತೈದೆ. ಅಂದ್ಮೇಲೆ ನಿಂದು ಆಕಿದು ಸಂಬಂಧ ಕಡಿದು ಹೋಗಿಬಿಡ್ತು. ಸಮಾಧಾನ ಮಾಡ್ಕೊಳ್ಳಪ್ಪ, ಸಮಾಧಾನ ಮಾಡ್ಕೊ.

ಕೃಷ್ಣ : ಸಮಾಧಾನ ಹೆಂಗ್ ಮಾಡ್ಕೊಳ್ಲಿ ಅಯ್ನೋರೆ? ಹೆಂಗ್ ಮಾಡ್ಕೊಳ್ಲಿ. ಬೆಳದಿಂಗ್ಳು ಅಂತ ಬಂದ್ ನಿಂತಾಗ ಬಿಸಿಲಿನ್ ಝಳ ಬಡುದ್ರೆ ಹೆಂಗ್ ತಾಳ್ಕೊಳ್ಳೋದು.



ಬೆಳಕ್ ನೀಡೋ ದೀಪ, ಬೆಂದು ಬೂದಿ ಮಾಡೋ ಬೆಂಕಿಯಾದ್ರೆ ಹೆಂಗ್ ಸುಮ್ಕಿರೋದು ಹೇಳಿ ಅಯ್ನೋರೆ ಹೇಳಿ. ಕನಕ ಯಾಕ್ಹಿಂಗ್ ಮಾಡ್ದೆ.

ಅಯ್ನೋರು : ಕೃಷ್ಣ, ಒಂದೆಜ್ಜೆ ಮುಂದಿಟ್ರೆ ನನ್ನಾಣೆ.
(ಕೃಷ್ಣ ಸ್ತಬ್ಧನಾಗಿ ಮಚ್ಚನ್ನು ಬಿಸಾಕಿ ಅಲ್ಲೇ ನಿಲ್ಲುತ್ತಾನೆ. ಹಾಗೆ ಕುಸಿಯುತ್ತಾನೆ. ದಿಬ್ಬಣ ಮುಂದುವರೆಯುತ್ತದೆ. ಕೃಷ್ಣನ ಅಸಹಾಯಕ ಮುಖದ ಮೇಲೆ ದೃಶ್ಯ ಕೊನೆಯಾಗುತ್ತದೆ)

**ನಿರ್ದೇಶಕರ ಟಿಪ್ಪಣಿ:**

ಕಾದಂಬರಿಯ ಮೂಲಕೃತಿ ಮತ್ತು ಅನುವಾದಿತ ಕೃತಿ ಎರೆಡರಲ್ಲಿಯೂ ಕೂಡ ಈ ಭಾಗ ಬಹಳ ಸ್ಪಷ್ಟವಾಗಿ ಆ ಜಾತಿ ಸಮಸ್ಯೆಯನ್ನು ವಿಷದೀಕರಿಸಿ ಅದರಿಂದಾಗಿ ತಾನು ಪ್ರೀತಿಯನ್ನು ಪಡೆಯುವ ಧ್ಯೇಯದಿಂದ ಕೃಷ್ಣ ದೂರವಾಗುತ್ತಾನೆ. ಇದಕ್ಕೆ ಗುರುಗಳು ಮತ್ತು ಹಿರಿಯರು ಕಾರಣರಾಗುತ್ತಾರೆ. ಅವಳ ನೆನೆಪಿನಲ್ಲಿಯೇ ಕಾಲಕಳೆಯುವುದು ಕಾದಂಬರಿಯಲ್ಲಿನ ಅದ್ಭುತ ಭಾಗ. ಆದರೆ ಚಲನಚಿತ್ರದ ಚೌಕಟ್ಟಿನಲ್ಲಿ ಅದು ಅಷ್ಟು ಸಮಂಜಸವಾಗಿರುವುದಿಲ್ಲ ಎಂಬ ಕಾರಣದಿಂದಾಗಿ ಮತ್ತು ಸಿಂಗಾರಿಗೌಡನ ಕುತಂತ್ರವನ್ನು ಸ್ಪಷ್ಟಪಡಿಸುತ್ತ ಅಂದಾನಿಯ ಮದುವೆಯ ಸಂಧರ್ಭದಲ್ಲಿ ಎತ್ತಿನ ಗಾಡಿಗಳ ಬದಲಾವಣೆ, ಕನಕಾಳನ್ನು ಇಲ್ಲಿಗೆ ಕರೆದುಕೊಂಡು ಬರುವುದು ಇವೇ ಮುಂತಾದ ಅಂಶಗಳು ನಾಟಕೀಯವಾಗಿ ಅದ್ಭುತವಾಗಿ ಮೂಡಿಬಂದಿವೆ. ಪ್ರೇಕ್ಷಕರ ಒಳಗಿನ ಬೇಗುದಿಯನ್ನು ಹೆಚ್ಚಿಸುವುದರಲ್ಲಿ ಈ ದೃಶ್ಯ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಮೃಚ್ಛಕಟಿಕದಲ್ಲಿ ವಸಂತಸೇನೆಯನ್ನ, ಶಕಾರ ತನ್ನ ಸಾರೋಟಿನಲ್ಲಿ ಕರೆದುಕೊಂಡು ಹೋಗುವ ರೀತಿಯಲ್ಲಿ ಈ ದೃಶ್ಯವನ್ನು ಕಲ್ಪಿಸಲಾಗಿದೆ.

# ಮಧ್ಯಂತರ

# ದೃಶ್ಯ–35

*ಹಗಲು – ಊರಿನ ಬೀದಿ*

(ಊರಿನ ಕೊಳಗೇರಿಯ ಮನೆಗಳ ಬಳಿ ಕಾಳಿ ಓಡಿ ಬಂದು)

ಕಾಳಿ : ಕರಿಯಮ್ಮ, ಇವತ್ತು ಕನಕಂಗು, ಅಂದಾನಿಗೂ ಪ್ರಸ್ಥ ಕಣ್ರವ್ವೋ. ಎಲ್ರು ಹೋಗ್ಬೇಕು, ಅಮೇಕೆ ಮರ್ತು ಮಲ್ಕಂಬುಟಿರಾ.

ಕರಿಯಮ್ಮ : ಅದ್ನ ಅಂದಾನಿಗ್ಹೇಳ್ದಿ ನಂಗ್ಯಾಕ್ ಹೇಳ್ತಿದ್ಯಾ?

ಕಾಳಿ : ಅಂದಾನಿಗೆ ಅದ್ನ ನಾನ್ಹೇಳ್ಕೊಡ್ಬೇಕ? ನಿಮ್ದೊಳ್ಳೆ ಕಥೆ ಆಯ್ತು. ಕರಿಯಮ್ಮ ಆರ್ತಿ ಗೀರ್ತಿಯೆಲ್ಲ ನೀವೆ ಮಾಡ್ಬೇಕು. ಕನಕ ನಿಮ್ ಜಾತಿಯವ್ನಾಗ್ನೆ.

(ಅಲ್ಲಿಗೆ ಬಂದ ಎಲ್ಲ ಮಹಿಳೆಯರಿಗೆ)

.. ಹ್ಞಾಂ ಎಲ್ರುಗು ಯೋಳ್ತಿವ್ನಿ ಇವತ್ತು ರಾತ್ರಿ ಎಲ್ರು ಅಂದಾನಿ ಮನೆಗ್ಹೋಗ್ಬೇಕು, ಪ್ರಸ್ಥ ಐತೆ ಪ್ರಸ್ಥ.

ಒಬ್ಬಾಕೆ : ಇದೇನೆ ಕಾಳಿ, ನಿಂಗೆ ಪ್ರಸ್ತ ಇರಂಗ್ ಆಡ್ತಿದಿಯಾ? ಇವತ್ತ್ ಏನಾಗೈತೆ ನಿಂಗೆ.

ಕಾಳಿ : ಸಂತೋಷ ಆಗೈತೆ.

ಕರಿಯಮ್ಮ : ಅವ್ರಿಗ್ ಪ್ರಸ್ಥ ಆದ್ರೆ ನಿಂಗ್ಯಾಕವ್ವ ಸಂತೋಷ?

ಕಾಳಿ : ಯಾಕೆ ಅಂದ್ರೆ ಕನಕ, ಕೃಷ್ಣನ್ನ ಬ್ಯಾರೆ ಮಾಡಿದ್ದಾಯ್ತಲ್ಲ ಅದುಕ್ಕೆ ಸಂತೋಷವಾಗಿದ್ದೀನಿ.

ಎಲ್ಲರು : ಏನೋ ಹೊಸ ಸುದ್ದಿ ಹುಟ್ಟಾಕಂತೈತೆ ನಮ್ಮೂರ್ನಾಗೆ.

(ಕಾಳಿಯಿಂದಾಗಿ ಊರಿನವರಿಗೆಲ್ಲ ಕನಕ, ಕೃಷ್ಣರ ವಿಷಯ ತಿಳಿಯುತ್ತಾ ಹೋಗುತ್ತದೆ.)

## ದೃಶ್ಯ–36

*ಹಗಲು – ಕೃಷ್ಣನ ತೋಟ*

(ಬಂಗಾರು ಮತ್ತು ರಾಮು ಆತುರದಲ್ಲಿ ಓಡಿ ಬಂದು)

ಬಂಗಾರು : ಕೃಷ್ಣ, ಅಂದಾನಿಗ್ ಮದ್ವೆ ಮಾಡ್ಸಿದ್ ಯಾರ್ ಗೊತ್ತ ಕೃಷ್ಣ?

ರಾಮು : ಇದಕ್ಕೆಲ್ಲ ಕಾರ್‍ಣ ಆ ಸಿಂಗಾರಿಗೌಡ.

ಕೃಷ್ಣ : (ಕೋಪಗೊಂಡು)
.. ಸಿಂಗಾರಿಗೌಡ (ಮಚ್ಚನ್ನು ತಗೆದುಕೊಂಡು)
.. ಎಲ್ಲಿದಾನವ್ನು?

ಬಂಗಾರು : ಅವ್ನ್ ತೋಟುದ್ ಮನೆಯಾಗೆ.
(ಕೋಪದಲ್ಲಿ ಹೋಗುತ್ತಿರುವ ಕೃಷ್ಣನನ್ನು ತಡೆಯುವ ಪ್ರಯತ್ನ ಮಾಡುತ್ತಾನೆ.)
.. ಕೃಷ್ಣ

ಕೃಷ್ಣ : ಬಿಡ್ರೋ
(ಅವರಿಂದ ಬಿಡಿಸಿಕೊಂಡು ಹೋಗುತ್ತಾನೆ. ಅವನ ರೋಷ ತಪ್ತ ಮುಖವನ್ನು ಕಂಡ ಬಂಗಾರು ಗಾಬರಿಯಾಗುತ್ತಾನೆ.)



## ದೃಶ್ಯ–37

*ಹಗಲು – ಸಿಂಗಾರಿಗೌಡನ ತೋಟದ ಮನೆ*

(ಕೃಷ್ಣನಿಗು ಸಿಂಗಾರಿಗೌಡನಿಗು ಹೊಡೆದಾಟವಾಗುತ್ತದೆ. ಆಯುಧವನ್ನು ತಗೆದುಕೊಂಡು ಕೃಷ್ಣ ಇನ್ನೇನು ಸಿಂಗಾರಿಗೌಡನಿಗೆ ಹೊಡೆಯಬೇಕೆನ್ನುವಷ್ಟರಲ್ಲಿ ರಾಮಣ್ಣ, ಬಂಗಾರು ಮತ್ತು ರಾಮು ಸಮೇತ ಅಲ್ಲಿಗೆ ಬಂದು ಕೃಷ್ಣನನ್ನು ತಡೆಯುತ್ತಾನೆ)


ರಾಮಣ್ಣ : ನಿಲ್ಲು.. ನಿಲ್ಲು.. ಬಿಡು ಸಿಂಗಾರಿಗೌಡನ್ನ. ನಾನ್ಹೇಳ್ತಾ ಇದೀನಿ ಬಿಡು.

ಕೃಷ್ಣ : ಇಲ್ಲಣ್ಣ, ಇವತ್ತ್ ಈ ಕಳ್ ನನ್ ಮಗನ್ ಹಲ್ ಕಿತ್ತು ಹಳ್ಳಕ್ಕೆಸಿತಿನಿ.

ರಾಮಣ್ಣ : ಏನಾಗಿದೆ ನಿನಗಿವತ್ತು. ಬುಡೋ. ಯಾರ್‍ಗಾನ, ಏನಾದ್ರು ಮಾಡಿದ್ರೆ ಊರ್‍ನೋಡ್ಕಂತ್ಯತೆ. ಅದುನ್ ಬುಟ್ಟು ಎಲ್ಲ ನಾನೆ ಮಾಡ್ತಿನಿ ಅನ್ನೋದು ಮರ್‍ವಾದೆ ಇಷ್ಯಾನ?

ಕೃಷ್ಣ : ಮೂರು ಬಿಟ್ಟರೋ ಈ ಬಡ್ಡಿಮಗನ್ ಮುಂದೆ ಮರ್‍ವಾದೆ ಇಷ್ಟ ಯಾಕಣ್ಣ ಮಾತಾಡ್ತೀಯ?

ಸಿಂಗಾರಿಗೌಡ : ಮರ್‍ವಾದೆ ಅಂತೆ ಮರ್‍ವಾದೆ, ಎಂಥ ಒಳ್ಳೆ ಕೆಲ್ಸ ಮಾಡಿಪ್ಪಿ. ಅಂದಾನಿಗು ಕನಕನಿಗೂ ಮದ್ವೆ ಮಾಡ್ಸಿ ಅನ್ಯಾಯವಾಗಿ ಜಾತಿ ಕಟ್ಟೋಯ್ತಿದ್ ನಿನ್ ತಮ್ಮನ್ನ, ಮರ್‍ವಾದೆ ಉಳ್ಸುದ್ನಲ್ಲ ಅದಕ್ಕ



ರಾಮಣ್ಣ : (ಸಿಂಗಾರಿಗೆ) ..ಏನೂ? ಏನಂದೆ ನೀನು?

ಸಿಂಗಾರಿಗೌಡ : ಏ ಕೇಳಯ್ಯ, ನ್ಯಾಯಸ್ಥ ರಾಮಣ್ಣ. ಆ ನಿನ್ ತಮ್ಮನ್ ಕೇಳು. ಅವ್ನು ಎಂಥ ಘನಂಧಾರಿ ಕೆಲ್ಸ ಮಾಡಿದ್ದಾಂತ.

ಕೀಳ್ಜಾತಿ ಕನಕನ್ನ ಮದ್ವೆ ಮಾಡ್ಕಬೇಕು ಅಂತ ಸಂಚ್ ಮಾಡಿದ್ದ. ಪಾಪ ಅನ್ಯಾಯವಾಗ್ ನಮ್ಮುಡ್ಗ ಕೆಟ್ಟೋಗ್ತಾನಲ್ಲ ಅನ್ಬುಟ್ಟು ಒಂದೆ ಜಾತಿಯವರ್ಗ್ ಮದ್ವೆ ಮಾಡ್ಸಿ ನಿನ್ ಮರ್ವಾದೆ ಉಳ್ಸಿದ. ಅದ್ ತಪ್ಪಾಂತ ಕೇಳು, ಓ.. ದೊಡ್ಡ ಮಾನ್ವಸ್ಥ.

ರಾಮಣ್ಣ : ನಾನ್ಕೇಳಿದ್ದೆಲ್ಲ ನಿಜಾನ?

(ಕೃಷ್ಣ ಹೌದೆನ್ನುವಂತೆ ಏನನ್ನೂ ಮಾತನಾಡದೆ ಹೋಗುತ್ತಾನೆ. ವಿಷಯ ತಿಳಿದ ರಾಮಣ್ಣ ಚಿಂತಿತ-ನಾಗುತ್ತಾನೆ.)

**ನಿರ್ದೇಶಕರ ಟಿಪ್ಪಣಿ:**

ಕೃಷ್ಣನ ಜೀವನದ ಅತಿ ದೊಡ್ಡ ತಿರುವು ಕನಕಾಳ ಮದುವೆಯ ನಂತರ, ಆ ಮದುವೆ ಮಾಡಿಸಿದ್ದು ಸಿಂಗಾರಿಗೌಡ ಎಂದು ಆತನಿಗೆ ಗೊತ್ತಾದಾಗ ಅವನನ್ನು ಶಿಕ್ಷಿಸುವಾಗ ಅಡ್ಡಬರುವ ಅಣ್ಣನಿಗೆ ತನ್ನ ಮನಸ್ಸಿನಲ್ಲಿರುವ ಬೇಗುದಿಯನ್ನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳುತ್ತಾನೆ. ಇದರಿಂದ ಅಣ್ಣ ರಾಮಣ್ಣ ಚಿಂತಿತನಾಗುತ್ತಾನೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಕಟ್ಟುಪಾಡುಗಳಲ್ಲಿ ಜಾತಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುವಾಗ ಅದರ ಕೆಲವು ನಿರ್ದಿಷ್ಟ ರೂಪುರೇಷೆಗಳನ್ನು ಮೀರುವುದು ಆ ಹಳ್ಳಿಯ ಸಂಕೀರ್ಣ ವ್ಯವಸ್ಥೆಯಲ್ಲಿ ಕಷ್ಟಸಾಧ್ಯವಾಗುತ್ತದೆ. ಕೃಷ್ಣ ಅಂತಹ ದುರ್ಭರ ಸ್ಥಿತಿಯತ್ತ ಹೆಜ್ಜೆಹಾಕುತ್ತಿದ್ದಾನೆ.



## ದೃಶ್ಯ–38

*ರಾತ್ರಿ – ಅಂದಾನಿ ಮನೆಯ ಒಳಗೆ*

(ಮಹಿಳೆಯರು ಕನಕಳಿಗೆ ಅಲಂಕಾರ ಮಾಡಿ ಅಂದಾನಿ ಕೋಣೆಗೆ ತಳ್ಳಿ ಹೋಗುತ್ತಾರೆ)

ಅಂದಾನಿ : ನಿಂಗ್ ಬ್ಯಾಸ್ರಾನ ನನ್ ಮ್ಯಾಲೆ? ಇದ್ರಾಗ್ ನಂದೇನು ತೆಪ್ಪಿಲ್ಲ. ಸಿಂಗಾರಣ್ಣ ಮದ್ವೆ ಆಗು ಅಂದ ಆದೆ. ನಮ್ ತಾಯಾಣೆಗು ಯೋಳ್ತಿನಿ ಇದ್ರಾಗ್ ನಂದೇನು ತೆಪ್ಪಿಲ್ಲ. ಎಲ್ಲ ಅವರ್ದೇಯ.

ಕನಕ : ಎಲ್ಲ ಅವರ್ದ ಆದ್ಮೇಲೆ ನೀನ್ ಯಾಕ್ ಇಲ್ಲಿದ್ಯ? ಅವರ್ತಾಕೆ ಹೋಗ್ ಬಿದ್ಕಬಾರ್ದ.

ಅಂದಾನಿ : ಆಹಹ.. ನಿಂದೊಳ್ಳೆ ಚಂದಾಗದೆ ಮಾತು. ಈ ಚಂದಾಪುರದ್ ಚೆಲುವೇನ ಮದ್ವೆ ಮಾಡ್ಕಂಡಿರೋನ್ ನಾನು, ಅವ್ರಲ್ಲ.

ಕನಕ : ಮದ್ವೆ ಅಂದ್ರೆ ನಿಂಗೇನಾರ ಗೊತ್ತ?

ಅಂದಾನಿ : ಪ್ರಸ್ಥ ಮಾಡ್ಕತಾಯಿರೊನ್ಗೆ ಮದ್ವೆ ಅಂದ್ರೆ ಗೊತ್ತಿಲ್ವ?

ಕನಕ : ಇಲ್ಲ, ಪ್ರಸ್ಥ ಮಾಡ್ಕಳೋರ್ಗೆಲ್ಲ ಮದ್ವೆ ಅರ್ಥ ಗೊತ್ತಿರಕಿಲ್ಲ.

ಅಂದಾನಿ : ನಿನ್ಗೆಲ್ಲೋ ಬೆಪ್ಪು. ನಾ ಹೇಳ್ತಿನಿ ತಿಳ್ಕ, ಮದ್ವೆ ಅಂದ್ರೆ ಪ್ರಸ್ಥ, ಪ್ರಸ್ಥ ಅಂದ್ರೆ ಮದ್ವೆ ಅಷ್ಟೆ.

ಕನಕ : ಮದ್ವೆ ಅಂದ್ರೆ ಬರಿ ಮೈಗೆ ಸಂಬಂಧಿಸಿದ್ದಲ್ಲ, ಮೈಗಿಂತ ಮೊದ್ಲು ಮನಸ್ಸಿಗ್ ಸಂಬಂಧಿಸಿದ್ದು. ಕಳ್ತನ್‌ದಿಂದ ಕರ್‍ಕೊಂಡ್ ಬಂದು ಮದ್ವೆ ಮಾಡ್ಕೊಂಡಿರೋರಿಗೆ ಮನ್ಸಿನ್ ವಿಷ್ಯ ಹೆಂಗ್ ಅರ್ಥ ಆಗ್ತೈತೆ.

ಅಂದಾನಿ : ಏನ್ ಹಿಂಗ್ ಮಾತಾಡ್ತಿಯ? ಹಿಂಗೆಲ್ಲ ಮಾತಾಡುದ್ರೆ ನಾ ಸುಮ್ಕಿರಕಿಲ್ಲ.

ಕನಕ : ಸುಮ್ಕೆ ಇರ್ದೆ ಏನ್ ಮಾಡ್ತಿಯ?

ಅಂದಾನಿ : ಮತ್ತೆ, ಮತ್ತೆ ಸಿಂಗಾರಣ್ಣಂಗ್ ಯೋಳ್ತಿನಿ.

ಕನಕ : ನೀನ್ ಯಾರ್ಗಾರ ಯೋಳ್ಕ, ನೀನ್ ನನ್ ಮನಸ್ನಾಗೆ ಗಂಡ ಅಲ್ಲ.

ಅಂದಾನಿ : ಇದೊಳ್ಳೆ ಕಥೆಯಾಯ್ತಲ್ಲ, ಮನ್ಸಗೊಬ್ ಗಂಡ, ಮೈಗೊಬ್ ಗಂಡ ಇರ್ತಾನ?

ಕನಕ : ನೀನ್ ಯಾವತ್ತು ನನ್ ಮೈ ಮುಟ್ಟಂಗಿಲ್ಲ.

ಅಂದಾನಿ : ಅದ್ಯಾಕೆ? ನಿನ್ ಮೈ ಏನಾರ ಹಸ್ಗೆಟ್ಹೋಗೈತ?

ಕನಕ : ಥೂ ನಿನ್ನಾಯಿಗ್ ಮಣ್ಣಾಕ. ಕೇಳು, ನೋಡ ಜನಕ್ ಮಾತ್ರ ನಾವ್ ಗಂಡಾ ಯೆಡ್ತಿ. ಇಲ್ಲ್ ಗಂಡ ಯೆಡ್ತಿ ಅಲ್ಲ. ನನ್ ಮೈ ಮುಟ್ಟಾಕೆ ನಿನ್ ಬುಡಲ್ಲ.

ಅಂದಾನಿ : ಅಂಗಂದ್ರೆಂಗೆ. ಇವತ್ ನಾನ್ ನಿನ್ ಜೊತೆ ಬಾಳ್ ಮಾಡ್ಲೇಬೇಕು. ಸಿಂಗಾರಣ್ಣ ನಿನ್ ಮೈ ಮುಟ್ಲೇಬೇಕು ಅಂತ ಯೋಳ್ ಕಳ್ಸವ್ನೆ. ವತಾರೆ ಕೇಳುದ್ರೆ ಯೋನೇಳ್ಲಿ?

ಕನಕ : ಮುಟ್ತೆಯ? ಹಂಗಾರೆ ಎಲ್ಲಿ ಮುಟ್ಟು ನೋಡ್ತಿನಿ?



(ಅಂದಾನಿ ಮುಟ್ಟಲು ಬಂದಾಗ ಕನಕ, ಕುಡುಗೋಲು ಹಿಡಿದು ತನ್ನ ಕತ್ತನ್ನು ಕುಯ್ದುಕೊಳ್ಳುತ್ತಾಳೆ)

ಅಂದಾನಿ : ಬ್ಯಾಡ, ಬುಟ್ಬುಡು. ನಾನ್ ನಿನ್ ಮಗನಾಗ್ ಇರ್ತಿನಿ. (ಓಡಿ ಹೋಗುತ್ತಾ) ..ಯವ್ವಾ ರಕ್ತ

(ಕತ್ತಲಲ್ಲಿ ರಕ್ತ ಸೋರುತ್ತಿದ್ದರೂ ಕನಕ ಹಾಗೇ ನಿಲ್ಲುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**


ಕಾದಂಬರಿಯ ಭಾಗಗಳಲ್ಲಿ ಕನಕಾಳ ಮೂಲ ಹೆಸರು 'ಜೀವಿ'. ಜೀವಿ ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿಕೊಂಡು ತನ್ನ ಬದುಕನ್ನು ಸಾಗಿಸುತ್ತಿರುತ್ತಾಳೆ. ಕಾದಂಬರಿಯಲ್ಲಿ 'ಕಾನಯ್ಯ ಮತ್ತು ಜೀವಿ'ಯರ ಬದುಕು ಒಳಗುದಿಯೊಂದಿಗೆ ಬೇಯುತ್ತಾ ಹೋಗುತ್ತದೆ. ದೃಶ್ಯಮಾಧ್ಯಮದಲ್ಲಿ ಈ ರೀತಿ ಕಥೆ ಕಟ್ಟುವಿಕೆ ಸಾಧ್ಯವಾಗದ್ದರಿಂದ, ಒಳತೋಟಿಗಳನ್ನು ಚಿತ್ರಿಕೆಗಳಲ್ಲಿ ತೋರಿಸಲು ಸಾಧ್ಯವಿಲ್ಲದ್ದರಿಂದ ಇಲ್ಲಿ ಕನಕ, ಅಂದಾನಿಯ ಜೊತೆ ಪ್ರಸ್ಥವನ್ನು ಹೇಗೆ ನಿಭಾಯಿಸಿಕೊಳ್ಳುತ್ತಾಳೆ ಎಂಬುದು ಒಂದು ಹೊಸ ರೀತಿಯ ದೃಶ್ಯವೊಂದಕ್ಕೆ ಸಾಕ್ಷಿಯಾಗುತ್ತದೆ. ತನ್ನ ಮನಸ್ಸಿನ ಬಗ್ಗೆ, ಮದುವೆಯ ಬಗ್ಗೆ ತನ್ನದೇ ರೀತಿಯಲ್ಲಿ ವ್ಯಾಖ್ಯಾನ ಮಾಡುವ ಕನಕ, ತನ್ನನ್ನು ತಾನು ಹಿಂಸಿಸಿಕೊಳ್ಳುವುದರ ಮೂಲಕ ಅಂದಾನಿಯನ್ನು ದೈಹಿಕ ಸಂಬಂಧದಿಂದ ದೂರವಿರಿಸುತ್ತಾಳೆ. ಮತ್ತು ಅವನೊಂದಿಗೆ ಬಾಳುವುದು ಎಂದರೆ ಕೇವಲ ಬದುಕುವುದು ಎನ್ನುವ ಮಟ್ಟಕ್ಕೆ ಅದನ್ನು ಇರಿಸಿಕೊಳ್ಳುತ್ತಾಳೆ.



## ದೃಶ್ಯ-39

*ರಾತ್ರಿ - ಕೃಷ್ಣನ ತೋಟ*

(ತೋಟದಲ್ಲಿ ಕೃಷ್ಣ ಭಾರವಾದ ಮನಸಿನಿಂದ ಕೊಳಲನ್ನು ನುಡಿಸುತ್ತಿರುವ ಚಿತ್ರಿಕೆಗಳ ಮಾಂಟೇಜಸ್)



## ದೃಶ್ಯ–40

*ಹಗಲು – ಕೃಷ್ಣನ ತೋಟದ ಅಟ್ಟ*

(ಮಲಗಿದ್ದ ಕೃಷ್ಣ ಬೆಳಗಾದೊಡನೆ ಎದ್ದು ಅಟ್ಟದಿಂದ ಕೆಳಗಿಳಿಯುವಾಗ, ಕೆಳಗೆ ತನ್ನ ಅಣ್ಣ ರಾಮಣ್ಣ ಕುಳಿತಿರುವುದನ್ನು ನೋಡುತ್ತಾನೆ)

ರಾಮಣ್ಣ : ಅಲ್ಲಾ ಕಣೋ, ಹಿಂಗ್ ಊರು ಮನೆ ಬಿಟ್ ಬಂದ್ ಹೊಲ ಸೇರ್ಕೊಂಡ್ರೆ ನೋಡ್ದೋರ್ ಏನಂದಾರು? ಸ್ವಲ್ಪನಾದ್ರು ಅಳುಕ್ ಬೇಡ್ವಾ ನಿಂಗೆ.

ಕೃಷ್ಣ : ನೋಡ್ದೋರ್‌ಗೆದ್ರುಕೊಂಡು ಬಾಳ್ವೆ ಮಾಡಕಾಗುತ್ತ ಅಣ್ಣ. ನಮಗ್ಯಾವದ್ ಸರಿ ಅನ್ಸುತ್ತೊ ಹಂಗ್ ನಡ್ಕೊಬೇಕು. ಅಷ್ಟೆ ನಂಗೊತ್ತಿರದು.

ರಾಮಣ್ಣ : ಹಂಗಂತ ಅಡ್ಡಾದಿಡ್ಡಿ ನಡಕೊಂಡ್ರೆ ಯಾರ್ ಸರಿ ಅಂದಾರೊ? ನಮ್ಗಂತು ಅಕ್ಕಾ ಪಕ್ಕದೋರಿಗ್ ಸಬೂಬ್ ಹೇಳಿ ಸಾಕಾಗ್ಯತೆ. ನಿನ್ ಕೈ ಮುಗಿತಿನಿ ಕಣಪ್ಪ ಮನೆಗೋಗನ ಬಾ.

ಕೃಷ್ಣ : ಇಲ್ಲಣ್ಣ, ನಾ ಬರಾಕಿಲ್ಲ. ನನ್ನಿಂದ ಯಾರ್ಗು ಕಷ್ಟ ಆಗ್ಬಾರ್ದು. ಯಾರ್ಗು ಅವಮಾನ ಆಗ್ಬಾರ್ದು. ನೀ ಹೇಳ್ದಾಗೆ ನಾ ಬದುಕ್ಬೇಕು ಅಂದ್ರೆ ನಾ ಇಲ್ಲೆ ಇರ್ಬೇಕು.

ರಾಮಣ್ಣ : ಅವಮಾನ ಆಗೋದ್ನ ತಡೆಯೋಕ್ ಆಗ್ದನೆ ನೀನಿಲ್ಲಿಗ್ ಬಂದಿರೋದು ಅಂತ ಜನ ಅಂತಾವ್ರೆ. ನಿನ್ ಕೈ ಮುಗ್ದು ಬೇಡ್ಕಂತಿನಿ ಮನೆಗೋಗನ ಬಾಪ್ಪ. ಸುತ್ತ್ಮುಳ್ಳಿಗೆ ನ್ಯಾಯ ಹೇಳೋ ನಂಗೆ ಸ್ವಂತ ತಮ್ಮನ್ನ ಹಾದಿಗ್ ತರಕಾಗ್ನಿಲ್ಲ ಅಂತ ಜನ ಅನ್ಬಾರ್ದು ಕಣಪ್ಪ.

ಕೃಷ್ಣ : ಅಣ್ಣ, ನಾನಿಂಗ್ ಮಾತ್ ಕೊಡ್ತಿನಿ. ನಿನ್ ಮರ್ವಾದೆ, ಈ ಊರಿನ್ ಮರ್ವಾದೆ ಕೆಡೋಂತ ಯಾವ್ ಕೆಲ್ಸಾನು ನಾ ಮಾಡಲ್ಲ. ವಂಶದ್ ಮರ್ವಾದೆ ಮುಕ್ಕಾಗೊ ಅಂತ ಯಾವ್ದೆ ಪರಿಸ್ಥಿತಿ ಬರ್ಬಾರ್ದು ಅಂತ್ಲೇ ನಾ ಇಲ್ಲಿಗ್ ಬಂದಿರೋದು. ದಯುವಿಟ್ಟು ನನ್ನ ಬಲವಂತ ಮಾಡ್ಬೇಡ. ನನ್ ಪಾಡಿಗ್ ನನ್ನ ಬಿಟ್ಬಿಡು

(ಅಣ್ಣನ ಕಾಲಿಗೆ ಬೀಳುತ್ತಾನೆ. ಅಣ್ಣ ಅವನನ್ನು ಬಿಗಿದಪ್ಪಿ)

ರಾಮಣ್ಣ : ಕೃಷ್ಣ, ಯಾಕಪ್ಪ? ಯಾಕೊ ಹಿಂಗ್ ಮಾಡ್ಕಂಡೆ ಕಂದ. ನೀನ್ಹಂಗೆಲ್ಲ ಬದುಕ್ಬೇಕು ಅಂತ ಕನಸ್ ಕಾಣ್ತಾ ಇದ್ದೆ. ಎಲ್ಲ ಕೈಯಾರ ಹಾಳ್ ಮಾಡ್ಕಂಬುಟ್ಟಲ್ಲಪ್ಪ.

(ಇಬ್ಬರೂ ಮೌನವಾಗಿ ರೋಧಿಸುತ್ತಾರೆ)



## ದೃಶ್ಯ–41

*ಹಗಲು – ಅಂದಾನಿ ಮನೆಯ ಒಳಗೆ*

(ಕೃಷ್ಣನ ಅತ್ತಿಗೆ ಸುವರ್ಣ ಕನಕಳ ಮನೆ ಮುಂದೆ ಬಂದು ಕನಕಳನ್ನು ಬೈಯ್ಯುತ್ತಾಳೆ)

ಸುವರ್ಣ : ಲೇ ಹಾದರಗಿತ್ತಿ ಇನ್ನದೆಷ್ಟ್ ಜನ ಹುಡುಗ್ರುನ ನಮ್ ಹಳ್ಳಿ ಬಿಟ್ಟು ಆಚೆ ಕಳ್ಸ್ತೀಯೆ? ನಿನ್ ಬಾಯಿಗ್ ಮಣ್ಣಾಕ, ನೀನ್ ಎಕ್ಕುಟ್ಹೋಗ, ನಿನ್ ನೆಗುದ್ ಬಿದ್ಹೋಗ. ಗಂಗವ್ವ, ನೋಡ್ದೇನವ್ವ, ಮೋಟ್ ಗೋಡೆ ಹಾರೊ ಹಾದರಗಿತ್ತೀರೆಲ್ಲ ನಮ್ ಹಳ್ಳೀಗ್ ಬಂದ್ ಸೇರ್ಕೊಂಡ್ರೆ ನಮ್ ಹಳ್ಳಿ ಹಾಳಾಗ್ದೆ ಇನ್ನೇನ್ ಆಗ್ತೈತೆ. ಕೀಳ್ಜಾತಿಯಾಗ್ ಹುಟ್ಟಿದ್ರೊ ಇವ್ಳು ಮೇಲ್ಜಾತಿಯವನ್ನ ಮದ್ವೆ ಆಗ್ಬೇಕಂತೆ. ಎಲ್ಲಾದ್ರು ಕೇಳಿದಿಯಾ? ಎಲ್ಲಾದ್ರು ಉಂಟೇ? ಸುಪ್ನಾತಿಗೆಂತಾ ಆಸೆಯ್ಯತೆ ನೋಡು.

ಒಬ್ಬಾಕೆ : ಕೃಷ್ಣ ಇಷ್ಟಿಂದಾನೆ ಊರ್ ಬಿಟ್ಟು ಹೊಲ ಸೇರ್ಕೊಂಡ್ಯಂತೆ?

ಇನ್ನೊಬ್ಬಾಕೆ : ಇನ್ನೇನ್ ಮಾಡ್ತಾರೆ ಇಂಥಾ ಬಚ್ಚಾಲಿರು ಊರೊಳಗ್ ಸೇರ್ಕೊಂಡ್ರೆ.

ಒಬ್ಬಾಕೆ : ನಮ್ ಕೃಷ್ಣ ದ್ಯಾವ್ರಂತ ಮಗ, ಅವ್ನಿಂಗ್ ಮಾಡವ್ನೆ ಅಂದ್ರೆ ನಂಬಕೇ ಆಗಕಿಲ್ಲ.

ಸುವರ್ಣ . ಇವ್ಳವ್ಳಲ್ಲ ಇವ್ಳು ಪಂಚರಂಗಿ, ಅವ್ನಗದೇನ್ ಮಾಟ ಮಾಡುದ್ಳೋ ಏನೊ ಆ ಹುಡ್ಗ ಮನೆ ಬುಟ್ಟೇ ಹೋಂಟೋದ.

(ಮನೆ ಬಿಟ್ಟು ಹೊಲ ಸೇರಿಕೊಂಡಿರುವ ಕೃಷ್ಣನ ವಿಷಯ ತಿಳಿದ ಕನಕಳ ಪ್ರತಿಕ್ರಿಯೆಯ ಮುಖದ ರಿಯಾಕ್ಷನ್ ಮೇಲೆ ದೃಶ್ಯ ಮುಗಿಯುತ್ತದೆ.)

# ದೃಶ್ಯ–42

*ರಾತ್ರಿ – ಕೃಷ್ಣನ ತೋಟದ ಗುಡಿಸಲು*

(ಎತ್ತಿನಗಾಡಿಯ ಮೇಲೆ ಮಲಗಿರುವ ಕೃಷ್ಣನಿಗೆ ಯಾರೋ ಬಂದಂತೆ ಭಾಸವಾಗಿ ನೋಡಿದರೆ ಕನಕ ಬಂದು ನಿಂತಿರುತ್ತಾಳೆ)

ಕೃಷ್ಣ : ಕನಕಾ, ನೀನು?

ಕನಕ : ಹೌದು. ನಾನೆ, ಯಾಕೆ ನಾನ್ ಬರ್ಬಾರ್ದಿತ್ತ?

ಕೃಷ್ಣ : ಹಂಗೇನಿಲ್ಲ, ಇಷ್ಟೊತ್ನಲ್ಲಿ ನೀ ಒಬ್ಳೆ ಇಲ್ಲಿಗ್ ಬರೋದಂದ್ರೆ.

ಕನಕ : ನಾ ಇರೋದು ಒಬ್ಳೆ, ಬರೋದು ಒಬ್ಳೆ.

ಕೃಷ್ಣ : ಕನಕ, ನೀನ್ ಮದ್ವೆ ಆಗಿರೋ ಹೆಂಗ್ಸು ಒಬ್ಳೇ ಅಲ್ಲ.

ಕನಕ : ಯಾವ್ದು ಮದ್ವೆ? ಕಣ್ಮುಚ್ಚಿ ಕರ್ಕೊಂಡ್ ಬಂದು, ಬಲವಂತ್ವಾಗಿ ತಾಳಿ ಕಟ್ಬುದ್ರೆ ಅದ್ ಮದ್ವೆನ?

ಕೃಷ್ಣ : ಕನಕ, ನೀನು ನಾನು ಏನಾದ್ರು ಹೇಳ್ಕೋದು ಆದ್ರೆ ಊರು ಅಂತ ಒಂದ್ ಇದ್ಯಲ್ಲ

ಕನಕ : ಊರ್ಹೇಳುತ್ತೆ ಅಂತ ಮನಸ್ಸ್ ಹೇಳಿದ್ದಕ್ಕೆ ಅನ್ಯಾಯ ಮಾಡೋಕಾಗುತ್ತ?

ಕೃಷ್ಣ : ಬೇಡ ಕನಕ, ಹಳೆದೆಲ್ಲ ಜ್ಞಾಪಿಸ್ಬೇಡ. ಎಲ್ಲ ಮರ್ತ್‌ಬಿಡು.

ಕನಕ : ಮರ್ತ್‌ಬಿಡು! ಎಷ್ಟು ಸುಲಭವಾಗ್ ಹೇಳ್ತಿದ್ಯಾ ಕೃಷ್ಣ. ನಿಜಾ ಹೇಳು ನಿನಗ್ ನನ್ ಮರ್ಯೋಕ್ ಸಾಧ್ಯಾನ?

ಕೃಷ್ಣ : ಕನಕ, ಇಷ್ಟೊತ್ತಲ್ ಇಲ್ಲಿಗ್ಯಾಕ್ ಬರೋಕ್ಹೋದೆ.

ಕನಕ : ನೀನಿಲ್ಲಿಗ್ಯಾಕೆ ಬಂದೆ ಅಂತ ಕೇಳೋಕಿಲ್ಲಿಗ್ ಬಂದಿದಿನಿ.

ಕೃಷ್ಣ : ಇದು ನಮ್ ಗದ್ದೆ, ನಾ ಬಂದಿದಿನಿ.

ಕನಕ : ಕೃಷ್ಣ, ಇದು ನಿಮ್ ಗದ್ದೆ ಅಂತ ನಂಗೊತ್ತು. ಅದೇ ರೀತಿ ಆ ಊರು ನಿಂದೆ ಅಲ್ವಾ? ಅಲ್ಲೆ ಯಾಕ್ ಇರ್ಬಾರ್ದು. ನಾ ಬಂದು ನಿನ್ನ ಊರಿಂದ ಹೊಲಕ್ಕಳುಸ್ದೆ ಅಂತ ಕಂಡ್ ಕಂಡ್ವರೆಲ್ಲ ಕಂಡಾಪಟ್ಟೆ ಮಾತಾಡ್ತಿದಾರಲ್ಲ ಅದುನ್ ಯಾಕ್ ತಪ್ಪಿಸ್ಬಾರ್ದು.

ಕೃಷ್ಣ : ಕಂಡೋನ್ಜೊತೆ ನಿನ್ ಮದ್ವೆ ಆಗಿದ್ದೆ ತಪ್ಸೋಕಾಗ್ಲಿಲ್ಲ ನನಗೆ. ಇನ್ನ ಇದನ್ನ ತಪ್ಸಿ ಇನ್ಯಾವ್ ರಾಜ್ಯನ ಆಳ್ಬೇಕ್ ನಾನು.

ಕನಕ : ಹಂಗಂತ ನನ್ನ ಊರ್ನೊಳ್ಗೆ ಉರ್ಕೋಗು ಅಂತೀಯ?

ಕೃಷ್ಣ : ಹಂಗಲ್ಲ ಕನಕ. ಇವತ್ತ್ ನಾನು ನೀನು ಏನಾಗಿದಿವಿ



ಅಂತ ತಿಳ್ಕ. ಇರೋ ಮನೆ ಹಾಳ್ಮಾಡ್ಕೋಬೇಡ. ನನ್ ಪಾಡಿಗ್ ನನ್ ಬಿಟ್ಬು. ನಿನ್ ಪಾಡಿಗ್ ನೀನ್ ಇದ್ಬುಡು.

ಕನಕ : ಹಂಗಾರೆ. ಈ ಗದ್ದೆ ಬಿಟ್ಬು ಬರಾಕಿಲ್ವ?

ಕೃಷ್ಣ : ಇಲ್ಲ ಬರಲ್ಲ ಕನಕ. ಬಂದು ಬೀದ್ಬೀದಿಲಿ ಬೆಂಕಿ ಬೀಜ ಬಿತ್ತೋಕೆ ನಂಗಿಷ್ಟ ಇಲ್ಲ.

ಕನಕ : ಬೆಂಕಿ. ಬೀದಿಲ್ ಬಿತ್ತೋ ಬೆಂಕಿ ಬೀಜ ನನ್ ಬದುಕ್ನಾಗ ಬಂದಿರ್ಬಾಗ ಏನ್ಹೇಳ್ಲಿ. ಇದನ್ನೆಲ್ಲ ನಿಂಗೆ ಹಂಗೇಳ್ಲಿ.
(ಅಳುತ್ತ ಹೋಗುತ್ತಿರುತ್ತಾಳೆ)

ಕೃಷ್ಣ : ಕನಕ.. (ದೀಪ ತಗೆದುಕೊಂಡು)
.. ನಡಿ, ನಿನ್ನ ಊರೂರ್ಗ ಬಿಟ್ ಬತ್ತಿನಿ.
(ಊರಿನ ಹತ್ತಿರ ಬಂದಾಗ ಕೃಷ್ಣ ಕೈಲಿದ್ದ ದೀಪವನ್ನು ಕನಕಳಿಗೆ ಕೊಟ್ಟು ಹೊರಡುತ್ತಾನೆ. ಕನಕ ಊರಿನ ಬೀದಿಯಲ್ಲಿ ಒಬ್ಬಳೇ ಹೋಗುತ್ತಿರುವಾಗ ಸಿಂಗಾರಿಗೌಡ ಎದುರಾಗುತ್ತಾನೆ)

ಸಿಂಗಾರಿಗೌಡ : ಎಲ್ಹೋಗಿದ್ದೆ ಚಿನ್ನ ಈ ಸರಿ ಹೊತ್ನಾಗೆ?

ಕನಕ : ಅದ್ ನಿಂಗ್ಯಾಕ್ ಬೇಕು?

ಸಿಂಗಾರಿಗೌಡ : ನೀನು ನನಿಗ್ಬೇಕು ಅದಿಕ್ಕೆ ನಿನ್ ವಿಷ್ಯಾನು ನನಿಗ್ಬೇಕು.

ಕನಕ : ನನ್ ವಿಷ್ಯಾ ಕಟ್ಕೊಂಡು ನಿನ್ಗೇನು ಆಗ್ಬೇಕಾಗಿಲ್ಲ. ದಾರಿ ಬುಡು.

ಸಿಂಗಾರಿಗೌಡ : ನನ್ ಮಾತ್ಕೇಳು. ನೀನ್ ತೆಪ್ಪಗೆ ನನ್ನಂಥ ಮಾನ್ವಸ್ಥನ್ ಜೊತೆ ಬಂದ್ ಮಗ್ಗಲಾದ್ರೆ ನಿನ್ನ ಮಾನ ಉಳಿಯುತ್ತೆ. ನಾನಿನ್ ಎಷ್ಟ್ ಹಚ್ಕೊಂಡಿವ್ನಿ ಗೊತ್ತ. ನೀನಿಲ್ದೇ ಹೋದ್ರೆ ಸತ್ತೇ ಹೋಗ್ತೀನಿ.

ಕನಕ : ಸದ್ಯ, ಬೇಗ ಆ ಕೆಲ್ಸಾ ಮಾಡು.

ಸಿಂಗಾರಿಗೌಡ : ನೀನ್ಹೇಳುದ್ರೆ ನಾನ್ ಸಾಯೋಕು ಸಿದ್ಧ ಚಿನ್ನ. ಆದ್ರೆ ಒಂದು ನಾನ್ ಸಾಯೋಕ್ ಮುಂಚೆ ನಿನ್ ಜೊತೆಯಾಗ ಒಂದ್ಸಲ ಸುಖ ಪಡ್ಬೇಕು. ಯಾಕ್ ಗೊತ್ತ? ಯಮ ಯಾಕಯ್ಯ ನರಕಕ್ ಬಂದೆ ಅಂತ ಕೇಳುದ್ರೆ ಮೊದ್ಲು ಸ್ವರ್ಗ ಕಂಡೆ ಆಮೇಲ್ ನರಕಕ್ಕೆ ಬಂದೆ ಅಂತ ಹೇಳ್ಬೋದಲ್ಲ. ಅದುಕ್ಕಾದ್ರು ಒಂದ್ಸಲ ಸ್ವರ್ಗ ತೋರ್ಸೇ ನನ್ ಬಂಗಾರಿ.

ಕನಕ : ಥೂ ನಿನ್ನ ನಿನಗ್ ನಾಚ್ಕೆ ಆಗಲ್ವ? ನಿನ್ನಂಥ ಕೀಚಕನ್ನ ಕಣ್ಣೆತ್ತಿ ಸಹಿತ ನೋಡಲ್ಲ ನಾನು. ಚೆನ್ನಾಗ್ ತಿಳ್ಕ.

ಸಿಂಗಾರಿಗೌಡ : ಕೀಚ್ಕ ಅಂತೀಯೇನೆ ಕಳ್ಳ್ ಬೋಸುಡಿ. ಈಗ ಕೀಚ್ಕನ್ ಜೊತೆ..
(ಕನಕ ಸಿಂಗಾರಿಯನ್ನು ತಳ್ಳಿ ಓಡಿಹೋಗುತ್ತಾಳೆ.

ಓಡುತ್ತಿರುವ ಕನಕಳಿಗೆ ಕೃಷ್ಣ ಎದುರಾಗುತ್ತಾನೆ. ಕೃಷ್ಣನಿಗು ಸಿಂಗಾರಿಗೌಡನಿಗು ಹೊಡೆದಾಟವಾಗುತ್ತದೆ)

ಕೃಷ್ಣ : ಹೇಯ್ ಸಿಂಗಾರಿ, ಬೆಂಕಿ ಜೊತೆ ಸರ್ಸ ಆಡ್ತಿದ್ಯ. ಸುಟ್ಟು ಕರಕ್ಲಾಗೋಗ್ತಿಯ ಗೆಪ್ತಿ ಇಲ್ಲಿ.
(ಕನಕಳ ಹತ್ತಿರ ಬಂದು)
.. ಏನೋ ಆಗ್ಬಾರ್ದಾಗೋಯ್ತು. ಇನ್ಮೇಲ್ ಊರ್ಗ್ಹೋಗೋದ್ ಸರಿ ಇರಲ್ಲ. ರಾತ್ರಿ ಅಟ್ಟಣಿಗೆ ಮೇಲ್ ಮಲ್ಗಿದ್ದು ಬೆಳಿಗ್ಗೆ ಹೋಗುವಂತೆ.
(ಎಂದು ಆಕೆಯನ್ನು ತೋಟಕ್ಕೆ ಕರೆತಂದು ಅಟ್ಟಣಿಗೆ ಮೇಲೆ ಮಲಗುವಂತೆ ಹೇಳಿ ತಾನು ಎತ್ತಿನ ಗಾಡಿಯ ಮೇಲೆ ಮಲಗುತ್ತಾನೆ)

**ನಿರ್ದೇಶಕರ ಟಿಪ್ಪಣಿ:**
ಕೃಷ್ಣ ಮತ್ತು ಸಿಂಗಾರಿಗೌಡನ ಮಧ್ಯೆ ಇರುವ ವ್ಯಕ್ತಿತ್ವದ ವ್ಯತ್ಯಾಸವನ್ನು ಸೂಕ್ಷ್ಮವಾಗಿ ನಿಲ್ಲಿಸುವ ಪ್ರಕ್ರಿಯೆಯಲ್ಲಿ ಕನಕ ಕೃಷ್ಣನನ್ನು ಹುಡುಕಿಕೊಂಡು ಬಂದ ಆ ರಾತ್ರಿಯಲ್ಲೂ ಕೃಷ್ಣ ಅವಳನ್ನು ಊರಿನವರೆಗೆ ತಲುಪಿಸುವ ಪ್ರಯತ್ನಮಾಡಿದರೆ ಸಿಂಗಾರಿಗೌಡ ಅದೇ ಸಮಯಕ್ಕೆ ಕಾದು ಅವಳ ಮೇಲೆರಗುವುದು ಕೃಷ್ಣ ಅವಳ ಸಹಾಯಕ್ಕೆ ಬರುವುದು ಈ ಹಿನ್ನಲೆಯಲ್ಲೂ ಕೂಡ ಸಿದ್ಧಸೂತ್ರ ಸಿನಿಮಾಗಳ ವ್ಯಾಕರಣವನ್ನು ನಾವು ಗಮನಿಸಬಹುದು. ಆದರೆ ಆ ಸೂತ್ರಗಳಲ್ಲಿಯೂ ಒಂದು ಹೊಸತನವನ್ನು ಮೂಡಿಸಲು ಸಾಧ್ಯ ಎನ್ನುವುದು ಬರಗೂರು ರಾಮಚಂದ್ರಪ್ಪನವರ ಸಂಭಾಷಣೆಯಲ್ಲಿ ಎದ್ದು ಕಾಣುತ್ತದೆ.



## ದೃಶ್ಯ–43

*ರಾತ್ರಿ – ಕೃಷ್ಣನ ತೋಟ*
*ಹಾಡು: ಜನುಮ ಜೋಡಿಯಾದರೂ ಏಕೆ ಅಂತರ*
*ಸಾಹಿತ್ಯ: ವಿ. ಮನೋಹರ್*
*ಹಾಡಿದವರು: ಡಾ. ರಾಜ್‌ಕುಮಾರ್*

(ಕನಕ, ಕೃಷ್ಣರ ಭಾರವಾದ ಮನಸ್ಸುಗಳು ಹೇಳಿಕೊಳ್ಳಲಾರದೆ ಮೂಕವಾಗುತ್ತವೆ. ಭಾವನೆಗಳ ತಾಕಲಾಟವನ್ನು ಹಿನ್ನೆಲೆಯ ಹಾಡೊಂದು ಧ್ವನಿಸುತ್ತದೆ.

ಜನುಮ ಜೋಡಿಯಾದರೂ ಏಕೆ ಅಂತರ
ಜೀವ ಜೀವ ನಡುವಲಿ ಏಕೆ ಕಂದರ
ಮಧುರಗೀತೆ ಕೂಡ ಹೀಗೇಕೆ ಘೋರ
ಜನುಮ ಜೋಡಿಯಾದರೂ ಏಕೆ ಅಂತರ
ಜೀವ ಜೀವ ನಡುವಲಿ ಏಕೆ ಕಂದರ

ಕಡಲೀನ ಒಡಲು ಮುಗಿಲೀನ ಸಿಡಿಲು
ಮಳೆ ಮಿಂಚು ಸೆಳೆತ ಬಾಳೆಲ್ಲವೂ
ಎಲೆ ಮೇಲೆ ಹನಿಯು ಮುತ್ತಂಥ ಮಣಿಯೂ
ಬಿರುಗಾಳಿ ಬೀಸಿ ಸುಳಿಯಾದವು
ನೆರೆ ಬಂದು ಸೆರೆಯಾಯ್ತು ಎದೆಯಾಳದಿ
ಕಣ್ಣೀರೆ ಮಾತಾಯ್ತು ಮನಯಾಳದಿ
ಹೊರಗೆ ನಗೆಯ ಲೀಲೆ, ಒಳಗೆ ಜ್ವಾಲೆ

ಜನುಮ ಜೋಡಿಯಾದರೂ ಏಕೆ ಅಂತರ
ಜೀವ ಜೀವ ನಡುವಲಿ ಏಕೆ ಕಂದರ

ಕನಸೆಲ್ಲ ಬೆಂದು ಬರಿದಾಗೊ ಬದಲು
ನನಸಾಗೊ ವೇಳೆ ಬರಬಾರದೆ
ಈ ಜೀವವೆರೆಡೂ ಒಂದೊಂದು ತೀರ
ದಡ ತೋರೊ ದೋಣಿ ಸಿಗಬಾರದೆ
ಶುಭದಾ ಶಕುನವೇ ವರವಾಗು ಬಾ
ಅಂಗೈಯ ಗೆರೆಯೇ ಬದಲಾಗಿ ಬಾ
ಕರಗಲೀಗ ಬೇಗ ಕರಿಮುಗಿಲು ದೂರ

ಜನುಮ ಜೋಡಿಯಾದರೂ ಏಕೆ ಅಂತರ
ಜೀವ ಜೀವ ನಡುವಲಿ ಏಕೆ ಕಂದರ
ಮಧುರಗೀತೆ ಕೂಡ ಹೀಗೇಕೆ ಘೋರ

**ನಿರ್ದೇಶಕರ ಟಿಪ್ಪಣಿ:**
ಕನಕ ಮತ್ತು ಕೃಷ್ಣರ ಜೀವನ ವಿಧಾನವನ್ನು ಯಾವುದೇ ಶಾರೀರಿಕ ಸಂಬಂಧ ಇಲ್ಲದೆ ಹೇಳುವ ಅದ್ಭುತವಾದ ದೃಶ್ಯವೊಂದನ್ನು ಕಟ್ಟಿಕೊಡಲು ಸಾಧ್ಯವಾದದ್ದು ರಾತ್ರಿ ಕನಕ ಮನೆಗೆ ಹೋಗಲು ಸಾಧ್ಯವಾಗದೆ ಕೃಷ್ಣನ ಅಟ್ಟಣಿಗೆಯಲ್ಲಿ ಮಲಗುವುದು ಮತ್ತು ಆ ಸಂಧರ್ಭದಲ್ಲಿ ಅವರಿಬ್ಬರ ಮನಸ್ಸು ತಮ್ಮ ತಮ್ಮ ಭಾವನೆಗಳನ್ನು ಮೌನವಾಗಿ ವಿನಂತಿಸಿಕೊಳ್ಳುವ ವಿಧಾನದಲ್ಲಿ ಮತ್ತು ವಿ. ಮನೋಹರ್‌ರವರ ಸಂಗೀತ ಮತ್ತು ಸಾಹಿತ್ಯದಲ್ಲಿ, ಅಣ್ಣಾವ್ರ ಧ್ವನಿಯಲ್ಲಿ ಮೂಡಿಬಂದ ಆ ಅದ್ಭುತ ಕಾವ್ಯ ಮತ್ತು ಗೌರಿಶಂಕರ್‌ರವರ ಛಾಯಾಗ್ರಹಣದ ಮೂಲಕ ದೃಶ್ಯವು ಅದ್ಭುತವಾಗಿ ಮೂಡಿಬಂದಿದೆ.



# ದೃಶ್ಯ-44

*ಹಗಲು – ಸಿಂಗಾರಿಗೌಡನ ಮನೆ*

(ಒದೆ ತಿಂದಿದ್ದ ಸಿಂಗಾರಿಗೌಡ, ಮೈಗೆ ಉಪಚಾರ ಮಾಡಿಸಿಕೊಳ್ಳುತ್ತ ಮಲಗಿರುವ ಜಾಗಕ್ಕೆ ಅಂದಾನಿ ಮತ್ತು ಅವನ ತಾಯಿ ಬರುತ್ತಾರೆ)

ತಮಡಪ್ಪ : ಆ ಅಂದಾನಿನು ಅವ್ರವ್ವ ನಿನ್ಹತ್ರ ಏನೊ ಹೇಳ್ಕೊಬೇಕು ಅಂತ ಬಂದವ್ರೆ ಕೇಳು.
(ಅಂದಾನಿ ತಾಯಿಗೆ)
..ಅದೇನೊ ಹೇಳ್ಕೊಬೇಕು ಅಂದಲ್ಲವ್ವ ಹೇಳ್ಕೊಳವ್ವಾ.

ಅಂದಾನಿ ತಾಯಿ : ನನ್ ಮಗುಂಗ್ ಒಂದ್ ಮದ್ವೆ ಆದ್ರೆ ಸಾಕು ಅಂತ ಕಂಡ್ ಕಂಡ್ ದೇವ್ರಲ್ಲಿ ಕೈ ಮುಗಿತಿದ್ ಕಾಲ್ದಾಗೆ ದೇವ್ರಂಗ್ ನಿಂತು ಮದ್ವೆ ಮಾಡ್ಸಿದ್ದ ಸಿಂಗಾರಣ್ಣಾ. ಆದ್ರೆ ಆ ಬಜ್ಜಾಲಿ ಜೊತೆ ಬಾಳ್ವೆ ಮಾಡಕಾಗ್ದೆ ನನ್ ಮಗ ಕೊರುಗ್ತೈತೆ. ಅದು ಅಲ್ದೆ ಹಟ್ಟಿಬುಟ್ಟು ಕೃಷ್ಣನ್ ಹೊಲ್ದಾಗೆ ರಾತ್ರಿಯೆಲ್ಲ ಇದ್ದ್ ಬಂದವ್ಳೆ.

ಸಿಂಗಾರಿಗೌಡ : ರಾತ್ರಿಯೆಲ್ಲ ಅವನ್ಜೊತ್ಯಾಗೆ ಇದ್ಲು ಅಂದ್ಮೇಲೆ ನ್ಯಾಯವಾಗೆ ಇದ್ಲು ಅಂತ ಹೆಂಗೇಳದು.

ಅಂದಾನಿ : ಏನ್ ಮಾಡಿರ್‍ಬೋದು ಅಂತಿಯ?
(ತಮಡಪ್ಪ ಮತ್ತು ಸಿಂಗಾರಿ ಅಪಹಾಸ್ಯ ಮಾಡಿ ನಗುತ್ತಾರೆ)

ತಮಡಪ್ಪ : ದೇವಸ್ಥಾನಕ್ ಬಾ ಕಣಿ ಹೇಳ್ತಿನಿ. ಅಯ್ಯೊ ನಿನ್ನ, ನಿನೆಣ್ತಿ ಒಳ್ಳೆವ್ಳೆ ಕಣೋ ಅವ್ನೇನು ಮಾಡಿರಕಿಲ್ಲ. ಆದ್ರೆ ಅವನ್ ಸುಮ್ನೆ ಬುಟ್ಟಿರ್ತಾನ?

ಅಂದಾನಿ : ಏನಾದ್ರು ಆಗ್ಲಿ, ನಾನ್ ಪಂಚಾಯ್ತಿಗ್ ಹಾಕೆ ಬುಡ್ತೀನಿ.
(ಇದನ್ನು ಕೇಳಿ ಸಿಂಗಾರಿಗೌಡ ಗಾಬರಿಗೊಳ್ಳುತ್ತಾನೆ)

ಸಿಂಗಾರಿಗೌಡ : ಏಯ್ ಏಯ್ ಯಾವ್ ಸೀಮೆ ಪಂಚಾಯ್ತೀನ್ಲ? ಅದೆಲ್ಲ ಬ್ಯಾಡ ಕಣಲೇ, ನಾವ್ ನಾವೇ ಸರಿ ಮಾಡ್ಕಳವ. ಇಲ್ದಿದ್ರೆ ಎಲ್ಲ ನಿನ್ ಮ್ಯಾಗೆ ಬಂದ್ ಬುಡ್ತೈತೆ. ನೀನ್ ಅವ್ಳ ಸರ್ಯಾಗ್ ಬಾಳ್ಸ್ಕಂಡಿದ್ರೆ ಅವ್ಳಾಕ್ ಅವನ್ತಾವ್ ವೋಯ್ತಿದ್ಲು.

ಅಂದಾನಿ : ನಾಯೇನ್ ಮಾಡ್ಲಿ? ಮೈ ಮುಟ್ಟಕ್ಹೋದ್ರೆ ಕುಡ್ಗೋಲ್ ತಕ್ಕತ್ತಾಳೆ.

ಸಿಂಗಾರಿಗೌಡ : ಅವ್ಳ ತಕಂಡಿರೋ ಕುಡುಗೋಲ್ ಬಿಸಾಕಿ, ನಾವ್ಹೇಳ್ದಂಗ್

ಕೇಳ್ಬೇಕು ಅಂದ್ರೆ ಆ ಕುಡುಗೋಲ್ ಹಿಡಿಯಾಗಿರೋ ಕೃಷ್ಣನ್ನ ಕಣ್ಣಿಗ್ ಕಾಣ್ದಂಗ್ ಮಾಡ್ಬೇಕು.

ತಮಡಪ್ಪ : ನಿನೇನು ಯೋಚ್ನೆ ಮಾಡ್ಬೇಡ ಅಂದಾನಿ, ನಮ್ ಕೊಂತಮ್ಮನ್ ಹಬ್ಬ ಮುಗಿತಿದ್ದಾಂಗೆ ನಿನಗ್ ಕಂಟಕನಾಗಿರೋ ಆ ಕೃಷ್ಣನ್ನ ಊರಿನ್ ಜನಾನೆ ಬಹಿಷ್ಕಾರ ಹಾಕಂಗ್ ಮಾಡ್ತಿನಿ.



(ಸಿಂಗಾರಿಗೌಡನಿಗೆ) .. ಆ ಹೊಲ್ದಿಂದಾನೆ, ನಮ್ಮೂರ್ನಿಂದಾನೆ, ನಮ್ ಬಾಳ್ತಿಂದಾನೆ ಅವನ್ನ ಓಡ್ಸ್ಬೇಕು. ಅದಕ್ಕೇನ್ ಮಾಡ್ಬೇಕೊ ಏರ್ಪಾಟು ನಾನ್ ಮಾಡ್ತಿನಿ.

(ಬೇರೆಯವರಿಗೆ ಏನೂ ಅರ್ಥವಾಗುವುದಿಲ್ಲ. ಆದರೆ ತಮಡಪ್ಪನ ತಲೆಯಲ್ಲಿ ಸಂಚೊಂದು ಮಿಂಚುತ್ತದೆ.)



# ದೃಶ್ಯ-45

*ಹಗಲು - ಕೃಷ್ಣನ ಹೊಲ*

(ಕೃಷ್ಣ ಹೊಲದಲ್ಲಿ ಉಳುಮೆ ಮಾಡುತ್ತಿರುವ ಸಂದರ್ಭದಲ್ಲಿ, ಅಣ್ಣ ರಾಮಣ್ಣನ ಜೊತೆಗೂಡಿ ಈರೇಗೌಡರು ಅಲ್ಲಿಗೆ ಬಂದು)

ಈರೇಗೌಡ : ಏನಪ್ಪಾ ಕೃಷ್ಣ, ವಸಿ ಇಲ್ ಬರ್ತೀಯಾ

ಕೃಷ್ಣ : ಓ ಬಂದೆ ಗೌಡ್ರೆ
(ಉಳುಮೆ ಮಾಡುತ್ತಿದ್ದನ್ನು ಅಲ್ಲೇ ನಿಲ್ಲಿಸಿ ಬಂದು)
.. ಬನ್ನಿ ಗೌಡ್ರೆ, ಇದೇನಣ್ಣಾ ಎಲ್ರು ಒಟ್ಟಿಗೆ ಬಂದ್ಬುಟಿದಿರ? ಲೋ ನಂಜ ಹೋಗ್ ಎಳ್ನೀರ್ ಕಿತ್ಕಂಬಾರ್ಲಾ.

ಈರೇಗೌಡ : ಏನೂ ಬ್ಯಾಡಪ್ಪ, ಎಲ್ಲ ಮುಗ್ಸ್ಕಂಡೆ ಬಂದಿದಿವಿ. ಕೃಷ್ಣ, ನಿನ್ನನ್ನೇ ನೋಡವ ಅಂತ ಬಂದಿದಿವಿ. ನಿಂತಾವ ಒಂದ್ ಕೋರ್ಕೆ ತಂದಿದೀವಪ್ಪ.

ಕೃಷ್ಣ : ಈ ಊರ್ಗೆ ಹಿರಿಯರು ನೀವು, ನನ್ಹತ್ರ ಕೋರ್ಕೆ ತಗಂಡ್ ಬರ್ಬೇಕ?

ರಾಮಣ್ಣ : ಕಾಲ ಒಂದೇ ಥರ ಇರಾಕಿಲ್ವಲ್ಲಪ್ಪ.

ಈರೇಗೌಡ : ಇದು ನಮ್ ಕಾಲ ಅಂತ ಹೆಮ್ಮೆ ಪಡ್ತಾಯಿರೋವಾಗ, ಹೊಸ ಕಾಲ ಹುಮ್ಮಸ್ಸಿಂದ ಬಂದ್ಬುಡ್ತೈತೆ. ಅಲ್ಲಿ ನಾವು ಕಾಲದ್ ಮಧ್ಯ ಕಳ್ದೋಗ್ತಿವೇನೊ ಅನ್ಸುತ್ತೆ. ಆಗ ನಾವು ಕೋರ್ಕೆ ಸಲ್ಸ್ಬೇದೆ ಹೊರ್ತು ಆದೇಶ ನೀಡೋಕಾಗುತ್ತ? ಹೇಳು

ಕೃಷ್ಣ : ಇದ್ಯಾಕ್ ನನ್ನೆದೆಯೋಳ್ಗೆ ಗಾಣ ಹಾಕಿ ತಿರ್ಗುಸ್ತಾಯಿದಿರಿ ಗೌಡ್ರೆ, ನಾನೇನ್ ತಪ್ ಮಾಡ್ದೆ ಅಂತ ಹೇಳ್ಬಾರ್ದೆ?

ರಾಮಣ್ಣ : ನಿಂದು ತಪ್ಪು ಅಂತ ಅಲ್ಲ ಕೃಷ್ಣ, ಮನ್ಸ್ ಕೆಡ್ಸ್ಕೊಂಡು ಊರಿಂದ ದೂರ ಆಗೋದ್ ಒಳ್ಳೇದಲ್ಲಾ ಅಂತ್ಹೇಳಿ ನಿನ್ನ ಕೊಂತಮ್ಮನ್ ಹಬ್ಬಕ್ ಕರ್ಕೊಂಡ್ ಹೋಗಕ್ ಬಂದಿದಿವಿ. ಸುಮ್ಕೆ ಹಟ ಮಾಡ್ಬೇಡ.

ಕೃಷ್ಣ : ಇದ್ರಲ್ಲಿ ಹಟದ್ ವಿಷ್ಯಾನೆ ಇಲ್ಲಣ್ಣ. ನನ್ನಿಂದ ಈ ಊರ್ನೆಸ್ರು ಕೆಡ್ಬಾರ್ದು, ಮನೆತನದ್ ಮರ್ವಾದೆ ಮುಕ್ಕಾಗ್ಬಾರ್ದು. ಯಾರ್ಗು ಕಷ್ಟ ಆಗ್ಬಾರ್ದು ಅಂತ ಎಲ್ಲ ಯೋಚ್ನೆ ಮಾಡಿ ಈ ಹೊಲ ಸೇರ್ಕಂಡೆ.

ಹಿರಿಯರು : ಏನೂ ಆಗ್ಬಾರ್ದ್ ಆಗ್ಹೋಯ್ತು. ಅದೆನ್ನೆಲ್ಲ ಮರ್ತು ಸುಮ್ಕೆ ಊರುಗ್ಬಾ. ನೋಡು ನೀನು ಅಂದ್ರೆ ಊರು,

ಊರು ಅಂದ್ರೆ ನೀನು. ಕೃಷ್ಣ ನೀನತ್ರೆ ಊರೆ ಅಳುತ್ತೆ. ನೀನಕ್ರೆ ಊರೆ ನಗುತ್ತೆ. ಎಂಥಾ ಅದೃಷ್ಟಾನಪ್ಪ ನಿಂದು.

ಕೃಷ್ಣ : ನನ್ ಅದೃಷ್ಟ, ಈ ನನ್ ಅದೃಷ್ಟ ನನ್ ವೈರಿಗಳ್ಗು ಬ್ಯಾಡ ಗೌಡ್ರೆ. ನನ್ ಆಶೋತ್ರಗಳೆಲ್ಲ ಮಣ್ಣಾಲಾಯ್ತು. ಅದಿಕ್ಕೆ ಅವುಗಳ್ನ ಹುಡುಕ್ತ ಈ ಮಣ್ಣಿನ್ ಜೊತೆ ಬೆರ್ತೋಗಿದಿನಿ. ದಯವಿಟ್ಟು ನನ್ ಕರಿಬೇಡಿ.

ರಾಮು : ನೀ ಬರಾಕಿಲ್ಲ ಅಂದ್ಮೇಲೆ ನಾವೀಸಾರ್ತಿ ಕೊಂತಮ್ಮನ್ ಹಬ್ಬಾನೆ ಮಾಡಕಿಲ್ಲ ತಿಳ್ಕೊ.

ನಂಜ : ನಮ್ ಕೃಷ್ಣ ಇಲ್ದಿರೋ ಹಬ್ಬ, ಹಬ್ಬ ಅಂತಾನೆ ಅನ್ಸ್ಕಳಕಿಲ್ಲ.

ಮಹಾದೇವ : ಅಷ್ಟೇ ಅಲ್ಲ, ನೀ ಇಲ್ಲಾಂದ್ರೆ ನಮ್ ಹಳ್ಳಿ, ಹಳ್ಳೀನೆ ಅನ್ಸ್ಕಳಕಿಲ್ಲ.

ಈರೇಗೌಡ : ನೋಡ್ದ್ಯಾ ಕೃಷ್ಣ, ಊರ್ಗೂರೆ ನಿನಗೋಸ್ಕರ ಕಾಯ್ತಾ ಐತೆ. ನಮ್ಮ ಸಂತೋಷಕ್ಕೋಸ್ಕರ ಬದುಕೋದು ಇದ್ದೇ ಇದೆ. ಆದ್ರೆ ಬೇರೆಯವರ್ ಸಂತೋಷಕ್ ಬದುಕೋದು ಮನುಷ್ಯರ್ ದೊಡ್ಡ ಗುಣ ಅಂತ ಅಯ್ನೋರ್ ಹೇಳಿರೋದ್ ಕೇಳಿಲ್ವ? ಸುಮ್ಕೆ ಹ್ಞೂ ಅನ್ನು.

ಕೃಷ್ಣ : ಆಯ್ತು ಗೌಡ್ರೆ.

(ಸ್ನೇಹಿತರೆಲ್ಲ ಕೃಷ್ಣನನ್ನು ಎತ್ತಿಕೊಂಡು ಸಂಭ್ರಮಿಸುವರು)



## ದೃಶ್ಯ–46

*ಹಗಲು – ಕೊಂತೆಮ್ಮನ ಜಾತ್ರೆ*
*ಹಾಡು: ಆರತಿ ಅಣ್ಣಮ್ಮಂಗೆ..*
*ಸಾಹಿತ್ಯ: ದೊಡ್ಡರಂಗೇಗೌಡ*
*ಹಾಡಿದವರು: ರಾಜೇಶ್ ಕೃಷ್ಣನ್, ಮಂಜುಳಾ ಗುರುರಾಜ್ ಮತ್ತು ಸಂಗಡಿಗರು*

(ಊರ ಹೆಂಗೆಳೆಯರು ಪ್ರಾರಂಭಿಸಿದ ಹಾಡಲ್ಲಿ ನಂತರ ಕೃಷ್ಣ ಹಾಗೂ ಕಾಳಿ ಯಾರೂ ಸೇರಿದಂತೆ. ದೇವರನ್ನು ಹೊತ್ತ ಕೃಷ್ಣನೂ ಭಾಗಿಯಗಿ ಮೆರವಣಿಗೆ ಗರೆಯುತ್ತದೆ ಊರ ತುಂಬ)

ಹೆಂಗಳೆಯರು:
ಆರತಿ ಅಣ್ಣಮ್ಮಂಗೆ.. ಆರತಿ ಮಾರಮ್ಮಂಗೆ..
ಊರಿನ ನಾರೀರೆಲ್ಲ ಪೂಜೆಗೆ ಬನ್ನಿರೇ.. ಓ..
ಆರತಿ ಗಂಗಮ್ಮಂಗೆ.. ಆರತಿ ಗೌರಮ್ಮಂಗೆ
ಹೊಂಬಾಳೆ ಕಳಸಾನೆಲ್ಲ ಹೊತ್ತು ತನ್ನೀರೇ.. ಓ..
ಸೋ ಎನ್ನೀರೇ.. ಸೋ ಎನ್ನೀರೇ..
ಸೋಬಾನ ಎನ್ನೀರೇ.. ಸೋಬಾನ ಎನ್ನೀರೇ..
ಸುವ್ವೀ ಎನ್ನೀರೇ.. ಸುವ್ವೀ ಎನ್ನೀರೇ..
ಸುವ್ವಾಲಿ ಎನ್ನೀರೇ.. ಸುವ್ವಾಲಿ ಎನ್ನೀರೇ..
ಆರತಿ ಅಣ್ಣಮ್ಮಂಗೆ.. ಆರತಿ ಮಾರಮ್ಮಂಗೆ..
ಊರಿನ ನಾರೀರೆಲ್ಲ ಪೂಜೆಗೆ ಬನ್ನಿರೇ.. ಓ..

ಕೃಷ್ಣ :
ಓ ತಾಯಿ ಚಾಮುಂಡಿ ಅಡ್ಡ ಬಿದ್ದೆವಮ್ಮ
ಮಾತಾಯಿ ಕ್ವಂತೆಮ್ಮ ಎಡೆ ತಂದೆವಮ್ಮ
ತಂಬಿಟ್ಟಿನಾರತಿ ಮಾಡಿಕೊಂಡು ಬಂದು



ಕಣಗಿಲೆ ಹೂ ಬತ್ತಿ ಹಣ್ಣುಕಾಯಿ ತಂದು
ನಡೆ ಮುಡಿ ಕಣಿ ಹಾಸಿರೋ..
ದೇವಿಗೆ ಅಗ್ರದಲೆ ಎಡೆಹಾಕಿರೋ
ಓ ತಾಯಿ ಚಾಮುಂಡಿ ಅಡ್ಡ ಬಿದ್ದೆವಮ್ಮ
ಮಾತಾಯಿ ಕ್ವಂತೆಮ್ಮ ಎಡೆ ತಂದೆವಮ್ಮ

ತಮಡಪ್ಪ :
ತಾಯೇ ಜಗದಂಬೆ ಕಾಪಾಡವ್ವೋ ಕಾಪಾಡು

ಕಾಳಿ :
ಹರಕೆ ಹೊತ್ತು ಬಂದೇವ್ರೋ
ಹರಸು ತಾಯಿ ಎಂದೇವ್ರೋ
ವರವ ಬೇಡಿ ನಿಂದೇವ್ರೋ
ಕರವ ಮುಗಿದು ಹಾಡ್ಯೇವ್ರೋ
ನಿನ್ನನ್ನೇ ನಂಬಿನಿಂತ ನಮ್ಮನ್ನು ಕಾಪಾಡವ್ವೋ
ಭಯ ಬೀತಿ ದೂಡಿ ನಮಗೆ ದಿಟದಾರಿ ತೋರವ್ವೋ
ನೀ ನೀಡೋ ಮರುಗಾ ಮಲ್ಗೆ ವರವೆಂದೆ ತಿಳಿದೇವ್ರೋ
ನೀ ಮೆಟ್ಟೋ ಈ ಮಣ್ಣ ಭಂಡಾರ ತಲೆಗಿಟ್ಟೆವ್ರೋ

ಹಣ್ಣು ಕಾಯಿ ಮಣಿವಿಕ್ಕಿರೋ.. ಎಲ್ಲರಿಗೆ ತರಪಿನ ಸಿಹಿ ಹಂಚಿರೋ..
ದಂಡಿನಾ ಮಾರಮ್ಮನ ವ್ಯನಾಗಿ ಮೂರ್ಹೊತ್ತು ನೀವ್ ನೆನೆಯಿರೋ

(ಊರಿಗೆ ಊರೇ ಸಂಭ್ರಮಿಸುವ ಈ ದೃಶ್ಯದಲ್ಲಿ ಕೃಷ್ಣ ಊರಿಗೆ ಬಂದದ್ದಕ್ಕೆ ಕಾಳಿಯಷ್ಟೇ ಕನಕಳು ಆನಂದ ಪಡುತ್ತಾಳೆ. ಆಯಾ ಸಮುದಾಯಕ್ಕೆ ಒಪ್ಪಿಸಿದಂತೆ ಜಾತ್ರೆಯ ಆಚರಣೆಯಲ್ಲಿ ಭಾಗಿಯಾಗುತ್ತಾರೆ)



## ದೃಶ್ಯ–47

***ಹಗಲು – ಕೊಂತೆಮ್ಮನ ಗುಡಿ ಮುಂಭಾಗ.***

(ಹಾಡು ಮುಗಿಯುತ್ತಿದ್ದಂತೆ ತಮಡಪ್ಪನಿಗೆ ಮೈಮೇಲೆ ದೇವರು ಬರುತ್ತದೆ)

ತಮಡಪ್ಪ : ಕೇಳ್ರೋ ಕೇಳ್ರಿ, ನನ್ನ ಮಾತ್ ಗಮನ ಇಟ್ಟು ಕೇಳಿ, ನ್ಯಾಯದ್ಮುಂಟೇಲಿ ಅನ್ಯಾಯ ಅಟ್ಟ ಹತ್ತ್ ಮೆರೀತಾಯ್ತೆ. ಕಳ್ಳರ ಕೈ ಮೇಲಾಗ್ತೈತೆ, ಸುಳ್ಳು ಸಂತೆ ಸೇರ್ತಾವ್ರೆ. ಆಗ್ಬಾರ್ದ್ ಆಗಿ ಹೋಗ್ಬಾರ್ದ್ ಹೋಗಿ ಈ ಊರ್ಗೆ ಬರ್ಗಾಲ ಬಡಿತಾಯ್ತೆ.

ಈರೇಗೌಡ : (ಭಯ ಭಕ್ತಿಯಿಂದ)
ನಾವಂಥದ್ ಏನ್ ಮಾಡಿದಿವಿ ಮಾರವ್ವ? ನಮ್ಮೇಲೆ ನಿಂಗ್ಯಾಕವ್ವ ಸಿಟ್ಟು?

ತಮಡಪ್ಪ : ಯಾಕೆ ಅಂತಂದ್ರೆ, ಈ ಊರ್ಗೆ ಗ್ರಾಚಾರ ವಕ್ರಸ್ತೈತೆ. ಬೆತ್ತ ಬಾಯ್ ಬಿಡ್ತೈತೆ. ಭೂಮಿ ಬೆದ್ರುತ್ತೈತೆ. ಈ ಊರ್ಗ್ ರಾವ್ ಬಡ್ದು ಬೀದ್ ಬೀದ್ಬೀಲಿ ಹೆಣಾ ಬೀಳ್ತೈತೆ.

ರಾಮಣ್ಣ : ಹಿಂಗಾದ್ರೆ ನಮ್ಮೂರ್ ಗತಿಯೇನ್ ಮಾರಮ್ಮ? ಇದಕ್ ನೀನೆ ಏನಾರ ಮಾಡ್ಬೇಕು ತಾಯಿ. ಇದ್ಕೆಲ್ಲ ಏನೆ ಕಾರ್ಣ ಆದ್ರು ನಾವ್ ಸರಿ ಮಾಡ್ತಿವಿ. ಏನ್ ಮಾಡ್ಬೇಕು ಅಂತ ಅಪ್ಪಣೆ ಕೊಡ್ಸು ತಾಯಿ.

ತಮಡಪ್ಪ : ಕೇಳ್ರೋ ಮುತ್ಕಾಳ್ರಾ, ಹೇಳ್ತಿನಿ ಕೇಳ್ರೊ, ಈ ಊರಾಗ್ ಒಬ್ಬ ಪಾಪಿ ಇದಾನೆ, ಅವ್ನ್ ಈ ಊರಿನ್ ನೀತಿ ನಿಯಮಾನೆಲ್ಲ ಸದ್ರಾ ಮಾಡ್ಕಂಡು, ಬೇಕಾಬಿಟ್ಟಿ ಬಾಳ್ವೆ ಮಾಡ್ತವ್ನೆ. ಬಲಿ.. ಬಲಿ.. ಊರಾಗ್ ಊರ್ನೆ ಬಲಿ ತಗಾತಾವ್ನೆ ಅವ್ನು.

ರಾಮಣ್ಣ : ಅದ್ಯಾರ್ ಆ ಪಾಪಿಷ್ಠ ಹೇಳಮ್ಮ, ಊರ್ಗೊಳ್ಳೆದ್ ಆಗ್ಬೇಕಾದ್ರೆ ನಾವೆಲ್ಲ ಏನ್ಬೇಕಾದ್ರು ಮಾಡ್ತಿವಿ.

ತಮಡಪ್ಪ : ಹೇಳ್ತಿನಿ, ಈ ಊರ್ಗೆ ಕೇಡ್ಗಾಲ್ ಬರುವಂಗ್ ಮಾಡಿರೋರು ಬೇರೆ ಯಾರು ಅಲ್ಲ, ಕೃಷ್ಣ.. ಕೃಷ್ಣ..
(ಎಲ್ಲರು ದಿಗ್ಭ್ರಮೆಗೊಳ್ಳುತ್ತಾರೆ)

ಕೃಷ್ಣ : ಸುಳ್ಳು.. ಸುಳ್ಳು.. ನಂಗೆ ಈ ಊರಂದ್ರೆ ಪ್ರಾಣ. ಈ ಊರಿನ್ ಜನಾನೆ ನನ್ ಜೀವ. ಈ ಊರಿನ್ ಮಣ್ಣೇ ನನ್ ಕಾಲು. ಈ ಊರಿನ್ ಮರ ಗಿಡ, ನನ್ ಮನಸ್ಸು. ಇಲ್ಲಿರೋ ಒಂದೊಂದ್ ಮನೇನು ನಂಗ್ ದೇವ್ರ್ ಗುಡಿ.

ಹೀಗಿರ್ವಾಗ ನನ್ನಿಂದ ಕೇಡ್ಗಾಲ ಬರುತ್ತನ್ನೋದು ಸುಳ್ಳು. ಹಸಿ ಹಸಿ ಸುಳ್ಳು.

ತಮಡಪ್ಪ : ಹೇಯ್ ಕೃಷ್ಣ, ಯಾರ್ ಮುಂದೆ ಮಾತಾಡ್ತಿದ್ಯ ನೀನು? ನಾನು ಮಾರಮ್ಮ, ಊರ್ಮಾರಿ, ಕಾಡ್ಮಾರಿ. ಬೆಟ್ಟದ ಮಾರಿ, ಘಟ್ಟದ ಮಾರಿ, ಎಲ್ಲಾ ಸೇರ್ಕೊಂಡಿರೋ ಮಾರಮ್ಮ. ನಾನ್ ಸುಳ್ಹೇಳ್ತಾ ಇದೀನಿ ಅಂತ ಬೆದ್ರುಸ್ತಾಯಿದ್ಯೆನೊ? ನಾನ್ ಮನಸ್ ಮಾಡುದ್ರೆ ನಿನ್ನಿಲ್ಲೆ ಸುಟ್ಟು ಭಸ್ಮ ಮಾಡ್ಬುಡ್ತಿನಿ.

ಕೃಷ್ಣ : (ಈರೇಗೌಡ್ರಿಗೆ)
.. ಗೌಡ್ರೆ ಈದನ್ನೆಲ್ಲ ಕೇಳೊದಿಕ್ ನನಿಲ್ಲಿಗ್ ಕರ್ಕೊಂಡ್ ಬಂದ್ರ? ನಾನ್ ದ್ರೋಹ ಮಾಡ್ತಿನ ಈ ಊರ್ಗೆ? ನಾನ್ಯಾವತ್ತು ಈ ಊರ್ಗೆ ಕೇಡ್ ಬಗ್ದಿಲ್ಲ, ಬಗ್ಯಲ್ಲ. ನಾ ಈ ಊರಿನ್ ಅನ್ನ ತಿಂದ್ ಬೆಳ್ದಿವ್ನಿ. ಈ ಊರಿನ್ ಗಾಳಿ ಕುಡ್ದು ಬಾಳ್ತಾ ಬಂದಿವ್ನಿ. ಈ ಊರಿನ್ ಧೂಳಿ ನಂಗೆ ಧೂಪ ಇದ್ದಂಗೆ. ನಾ ಈಗ್ಲು ಹೇಳ್ತಾಯಿದಿನಿ, ಈ ಮಾರಮ್ಮ ಹೇಳದೆಲ್ಲ ಸುಳ್ಳು.

ತಮಡಪ್ಪ : ಹೇಯ್, ಮಾರಮ್ಮಂಗ್ ಅವಮಾನ ಆಗ್ತಾಯಿದ್ರು ಸುಮ್ನಿದಿರೇನ್ರೋ ಭಕ್ತಾದಿಗಳಾ?

ಸಿಂಗಾರಿಗೌಡ : ತಪ್ಪಾಯ್ತವ್ವಾ, ತಪ್ಪಾಯ್ತು, ಕ್ವಾಪ ಮಾಡ್ಕಬ್ಯಾಡ. ಅವ್ನ್ಯಾವನೋ ತಲೆ ಕಟ್ಟೋನ್ ಈ ಥರ ಮಾತಾಡ್ದ, ನಾವೆಲ್ಲ ಭಕ್ತಯಿಂದ ಬೇಡ್ಕತಿವಿ. ಅರಿದ್ ಹುಡ್ಗ ಏನೋ ಹೇಳ್ಬುಟ್ಟ. ಕ್ಷಮ್ಸ್ಬುಡು ತಾಯಿ. ಕಿರ್ಬೋ
(ತಮಡಪ್ಪನಿಗೆ ಇನ್ನೂ ಜೋರಾಗಿ ನಾಟಕವಾಡುವಂತೆ ಹೇಳುತ್ತಾನೆ, ಇದನ್ನು ಕೃಷ್ಣ ಗಮನಿಸುತ್ತಾನೆ)

ತಮಡಪ್ಪ : ಭಯಾ ಭಕ್ತಿ ಇಲ್ಲ.

ಕೃಷ್ಣ : ಯಾವ್ದ್ ಭಕ್ತಿ? ಭಯಾ ಬೀಳ್ಸದ್ ಭಕ್ತಿನಾ? ದೇವ್ರ್ಹೆಸ್ರನಾಗೆ ದಬ್ಬಾಳ್ಕೆ ಮಾಡೋದ್ ಭಕ್ತಿನಾ? ಮನ್ಸ್ನಾಗಿರೋ ಕೊಳ್ಕ್ನೆಲ್ಲ ತೊಳ್ಕೊಂಡು ಬೆಳ್ಳಿ ಬೆಳ್ಕಿಂಥರಾ ಆದ್ರೆ ಅದೇ ಭಕ್ತಿ. ಒಬ್ಬೊಬ್ರು ಎದೆಗೂಡು ದೇವ್ರ್ಗುಡಿ ಇದ್ದ್ಹಂಗೆ. ಅದನ್ ಚೆನ್ನಾಗಿ ಇಟ್ಕಂಡ್ರೆ ಅಲ್ಲೇ ದೇವ್ರು ಕಾಣುತ್ತೆ, ಭಕ್ತಿನು ಇರುತ್ತೆ ಅಂತ ಅಯ್ನೋರ್ ಹೇಳ್ತಾರೆ. ಆದ್ರೆ ಈಗ ಈ ತಮಡಪ್ಪ ಹೇಳ್ತಾಯಿರೋ ಭಕ್ತಿ ವಿಷ್ಯದಾಗೆ ಏನೋ ಮೋಸ ಐತೆ. ಅವ್ರಿವ್ರ ಹೆಂಡ್ರು ಕೆಡ್ಸೋದು ಭಕ್ತಿನಾ?

ರಾಮಣ್ಣ : ಕೃಷ್ಣ.. (ನಿಲ್ಲಿಸುವಂತೆ ಕೂಗುತ್ತಾನೆ)




ಕೃಷ್ಣ : ಆಗ್ ನಿನ್ ಮಾರಮ್ಮಂಗೆ ಗೊತಾಗ್ಲಿಲ್ವೇನಯ್ಯ?

ತಮಡಪ್ಪ : ಏಯ್, ಮೋಸ್ಗಾರ ಅಂತ್ಹೇಳೋರ್ ಮೈಯಿ ಸಾವ್ರಾರ್ ಹೋಳಾಗುತ್ತೆ. ಅಷ್ಟೆ ಅಲ್ಲ ಈ ಊರ್ನಲ್ಲಿ ರಕ್ತದ ಹೊಳೆನೆ ಹರಿಯುತ್ತೆ. ಈ ಪಾಪಿಷ್ಠನಿಗೆ ಪಾಪಾಸ್ ಕಳ್ಳಿಲ್ ಹೊಡಿಬೇಕು ಅಂತ ಮಾರಮ್ಮನ್ ಆಜ್ಞೆ.

ಕೃಷ್ಣ : ಏಯ್, ನೀನ್ ಪಾಪಾಸ್ ಕಳ್ಳಿಲ್ ಹೊಡಿಯೋವರ್ಗು ನಾನೇನ್ ಕಳ್ಳೆ ಬೇಳೆ ತಿಂತಿರ್ತಿನ? ಏ ಕೂಸೆ ಜಾಡ್ಸ್ ಒದ್ದೇ ಅಂದ್ರೆ ರಕ್ತ ಕಕ್ಬುಡ್ಬೇಕು.
(ಎಂದು ತಮಡಪ್ಪನಿಗೆ ಹೊಡೆಯುತ್ತಾನೆ. ಸಿಂಗಾರಿಗೌಡನ ಕಡೆಯವರಿಗೂ ಕೃಷ್ಣನಿಗೂ ಹೊಡೆದಾಟವಾಗುತ್ತದೆ. ಸಿಂಗಾರಿಗೌಡ ತನ್ನ ಕಡೆಯವರಿಗೆ ಖಡ್ಗವನ್ನು ಕೊಟ್ಟು ಕೃಷ್ಣನಿಗೆ ಹೊಡೆಯುವಂತೆ ಕೊಡುವುದನ್ನು ನೋಡುವ ಕನಕ, ಜಗಳವಾಡುತ್ತಿರುವ ಕೃಷ್ಣನನ್ನು ತಡೆದು)

ಕನಕ : ದ್ಯಾವ್ರನ್ ಎದ್ರಾಕಂಡು ಅನಾಹುತ ಮಾಡ್ಕಬ್ಯಾಡ. ಬ್ಯಾಡ ಕೃಷ್ಣ..
(ಎಂದು ಆತನನ್ನು ತಬ್ಬಿ ಹಿಡಿಯುತ್ತಾಳೆ. ನಂತರ ತನ್ನ ತಪ್ಪಿನ ಅರಿವಾಗಿ ಅಲ್ಲಿಗೆ ಬರುವ ಅಯ್ನೋರಿಗೆ ಕೈ ಮುಗಿದು ಹೊರಟು ಹೋಗುತ್ತಾಳೆ)



ತಮಡಪ್ಪ : ನೋಡುದ್ರೇನ್ರಪ್ಪ, ನೋಡುದ್ರ. ನಮ್ ಕಣ್ಣೆದ್ರುಗೆ ಎಂಥ ಘನಂದಾರಿ ಕೆಲ್ಸ ಮಾಡ್ತಾಯಿದಾರಿಬ್ರೂ
(ಮಾತು ಮುಂದುವರೆಸುತ್ತಿದ್ದ ತಮಡಪ್ಪನನ್ನು ಅಯ್ನೋರು ತಡೆದು)

ಅಯ್ನೋರು : ತಡೀರಿ, ಏನ್ ನಡ್ಸಿದೀರಿ ನೀವಿದನ್ನೆಲ್ಲ? ದೇವ್ರಲ್ಲಿ ದಯಾ ಇರ್ತದ ಹೊರ್ತು, ದೌರ್ಜನ್ಯ ಇರೋದಿಲ್ಲ. ಯಾವ್ದೇ ದೇವ್ರಾಗ್ಲಿ ಭಕ್ತೀನ ಕಾಡಿ ಬೇಡಿ ಪಡೆಯೋದಲ್ಲ. ದೇವ್ರು

ಯಾವಾಗ್ಲು, ಎಲ್ಲರಿಗೂ ಒಳ್ಳೆಯದನ್ನೇ ಮಾಡ್ತಿರ್ತಾನೆ ಹೊರ್ತು ಕೆಡಕು ಬಯಸೋದಿಲ್ಲ. ಅಂತಹ ಮಹಾಶಕ್ತಿಯೇ ಈ ತಾಯಿ. ಈ ಬೇಧ ಭಾವ ಎಲ್ಲ ಹುಟ್ಟೋದು ನಿಮ್ಮಂಥವ್ರಿಂದ. ಯಾವ್ದನ್ನ ನಂಬಬೇಕು, ಯಾವ್ದನ್ನ ನಂಬಬಾರ್ದು, ಯಾವ್ದು ಒಳ್ಳೇದು, ಯಾವ್ದು ಕೆಟ್ಟದ್ದು ಅನ್ನೋದನ್ನ ನಿಮ್ಮ ನಿಮ್ಮ ಎದೆಮ್ಯಾಲೆ ಕೈ ಇಟ್ಕೊಂಡು ಕೇಳ್ಕಳ್ರಿ. ಹಬ್ಬ ಮಾಡೋದು ಎಲ್ಲಾರು ಕೂಡಿ ಸುಖ ಹಂಚಿಕೊಳ್ಳೋದಕ್ಕೆ, ಬೆಂಕಿ ಹಚ್ಚೋದಕ್ಕಲ್ಲ. ಎಲ್ಲರನ್ನು ಪ್ರೀತಿಸೋದನ್ನು ಕಲ್ತ್‌ಕೊಳ್ರಿ. ಹೋಗ್ರಿ. ಹೊಂಟೋಗ್ರಿ.

(ಎಲ್ಲರೂ ನಿರ್ಗಮಿಸುತ್ತಾರೆ. ಕುಸಿದು ಕುಳಿತಿದ್ದ ತಮ್ಮಡಪ್ಪನ ಬಳಿ ಸಿಂಗಾರಿಗೌಡ ಬಂದಾಗ)

ತಮಡಪ್ಪ : ಅವನ್ನ ಕೊಂದಾಕ್ಬಿಡ್ಬೇಕಾಗಿತ್ತು ಸಿಂಗಾರಿ, ಕೊಂದಾಕ್ಬಿಡ್ಬೇಕಾಗಿತ್ತು.

(ಎನ್ನುತ್ತಾ ಭುಸುಗುಟ್ಟುತ್ತಾನೆ. ಸಿಂಗಾರಿಯೂ ಯೋಚಿಸತೊಡಗುತ್ತಾನೆ.)

**ನಿರ್ದೇಶಕರ ಟಿಪ್ಪಣಿ:**

ಕೊಂತಮ್ಮನ ಹಬ್ಬದ ಪ್ರಕರಣ, ಇಡೀ ಹಳ್ಳಿಗಾಡಿನ ವಿವಿಧ ಮುಖಗಳನ್ನು ಕಾಣುವ ಒಂದು ಪ್ರಯತ್ನ. ದೇವರು, ಧರ್ಮ, ಭಕ್ತಿ, ಶ್ರದ್ಧೆ ಇವುಗಳೆಲ್ಲದರ ತಾಕಲಾಟವನ್ನು ನಂಬಿಕೆ ಮತ್ತು ಮೂಢನಂಬಿಕೆಗಳ ನೆಲೆಗಟ್ಟಿನಲ್ಲಿ ಯೋಚಿಸುವಂತೆ ಮಾಡುವ ಒಂದು ದೃಶ್ಯ. ತಮ್ಮ ತಮ್ಮ ವಿಕಾರಗಳನ್ನು ವಿಕೃತಿಗಳನ್ನು ಸಾಧನೆ ಮಾಡಿಕೊಳ್ಳುವತ್ತ ಮತ್ತು ತಮ್ಮ ಮೂಗಿನ ನೇರಕ್ಕೆ ಈ ದೇವರು ಮತ್ತು ಧರ್ಮಗಳನ್ನು ಉಪಯೋಗಿಸಿಕೊಳ್ಳುವಂತಹ ಹಲವಾರು ಮುಖವಾಡವುಳ್ಳ ಜನರನ್ನು ದ್ಯೋತಕವಾಗಿ ಸೂಚಿಸುತ್ತದೆ. ಆದರೆ ಅಲ್ಲೂ ಕೂಡ ಕೃಷ್ಣ ಮತ್ತು ಅಯ್ನೋರರಂತಹ ಜೀವಗಳು ಮನುಷ್ಯನಲ್ಲಿ ಪ್ರೀತಿಯ ಸೆಲೆಯನ್ನು ಬೆಳೆಸಲು ಪ್ರಯತ್ನಿಸುತ್ತಿರುತ್ತಾರೆ. ಈ ಸಮಯದಲ್ಲಿ ತಮಡಪ್ಪ ಮತ್ತು ಸಿಂಗಾರಿಗೌಡನ ಪಿತೂರಿಯನ್ನು ಮತ್ತು ಪಿತೂರಿಯಿಂದ ನೋವಿಗೊಳಗಾಗುವ ಕನಕ ಮತ್ತು ಕೃಷ್ಣನನ್ನು ನಾವು ಕಾಣಬಹುದು. ಮೂಲ ಕೃತಿಯಲ್ಲಿ ಈ ರೀತಿಯ ದೃಶ್ಯ ಜೋಡಣೆ ಇಲ್ಲದಿರುವುದು ಹಾಗೂ ಈ ಎಲ್ಲ ದೃಶ್ಯಗಳ ಮುಖಾಂತರ ಒಂದು ಹಳ್ಳಿಯ ಸಾಂಸ್ಕೃತಿಕ ಬದುಕಿನ ಹಲವು ಮಗ್ಗಲುಗಳನ್ನು ಪರಿಚಯಿಸುವುದು ಕೂಡ ಈ ಚಿತ್ರದ ಮೂಲ ಆಶಯಗಳಲ್ಲಿ ಒಂದಾಗಿತ್ತು.



# ದೃಶ್ಯ-48

*ರಾತ್ರಿ – ದೇವಸ್ಥಾನ*
*ಹಾಡು: ದೇಹವೆಂದರೆ ಓ ಮನುಜ (ಮುಂದುವರೆದ ಭಾಗ)*
*ಸಾಹಿತ್ಯ: ವಿ. ಮನೋಹರ್*
*ಹಾಡಿದವರು: ಡಾ. ರಾಜ್‌ಕುಮಾರ್*

(ಕನಕ ಮತ್ತು ಕೃಷ್ಣ ಇಬ್ಬರು ಪ್ರತ್ಯೇಕವಾಗಿ ಬಂದು ದೇವಸ್ಥಾನದಲ್ಲಿ ಒಬ್ಬರಿಗೊಬ್ಬರು ಎದುರಾಗಿ ಕೂರುತ್ತಾರೆ. ಅಯ್ನೋರು ಹಾಡನ್ನು ಹಾಡುತ್ತಿದ್ದಾರೆ)

ಅಯ್ಯನವರು :
ಮೇಲು ಕೀಳಿನ ನಡತೆ
ಹಾದಿ ತಪ್ಪಿದ ಜಡತೆ
ಕುಲ ವ್ಯಾಕುಲಗಳು ಸರಿಯೇನು..

ರೋಷ ದ್ವೇಷದ ಉರಿಯೂ
ಲೋಭ ಮೋಸದ ಪರಿಯೂ
ಸಾಗುವ ದಾರಿಗೆ ಬೆಳಕೇನು..

ಅನ್ಯರ ಗುಣದಿ ಸನ್ಮತಿ ಹುಡುಕು
ಸತ್ಯದ ಪಥವೇ ಬೆಳ್ಳಿ ಬೆಳಕು

ಕರುಣೆ ಪ್ರೇಮವೇ ಉಲ್ಲಾಸ
ನಿತ್ಯ ಕಾಯಕವೇ ಕೈಲಾಸ..
ಚಿತ್ತ ನಿರ್ಮಲದಿ ಸಂತೋಷ
ನೀತಿ ಮಾರ್ಗವೇ ಭವನಾಶ..

(ಕೃಷ್ಣ ಕನಕರು ಅಯ್ಯನವರ ವಚನದಲ್ಲಿ ಶಾಂತಿಯನ್ನರಸುತ್ತ ಕುಳಿತಿರುತ್ತಾರೆ. ರಾತ್ರಿ ಎಲ್ಲ ಅಲ್ಲೆ ತಪಸ್ಸು ಮಾಡದವರಂತೆ ಇರುತ್ತಾರೆ. ಒಬ್ಬೊಬ್ಬರು ಒಂದೊಂದು ಮನಃಸ್ಥಿತಿ)

# ದೃಶ್ಯ-49

*ಹಗಲು -ಊರಿನ ಬೀದಿ*

(ಬೀದಿಯಲ್ಲಿ ತಮಡಪ್ಪನ ಹೆಣವನ್ನು ಮಲಗಿಸಲಾಗಿದೆ. ಊರಿನ ಜನರೆಲ್ಲ ಅಲ್ಲಿ ಸೇರಿದ್ದಾರೆ)

ಸಿಂಗಾರಿಗೌಡ : ಎಂಥ ಒಳ್ಳೆ ಮನ್ಸಂಗೆ ಎಂಥ ಕೆಟ್ಟ್ ಸಾವು ಬಂತು ಅಂದಾನಿ. ಯಾವತ್ತು ಹೆಂಗಸ್ರುನ ಕಣ್ಣೆತ್ ಸಹ ನೋಡ್ದೋನಲ್ಲ, ಒಂದಿವ್ಸ ಕೂಡ ಸೇಂಧಿ ಕುಡ್ದವ್ನಲ್ಲ. ಯಾರೊ ಕಳ್ ಸೂಳೆ ಮಕ್ಳು ಹೊಡ್ದ್ ಕೊಂದಾಕ್ಬುಟಾವ್ರೆ.

ಊರಿನವ : ಅಲ್ಲಾ, ದೇವ್ರು ಮೈಮೇಲ್ ಬಂದವ್ನೇ ನೆಗುದ್ ಬಿದ್ದವ್ನಲ್ಲ. ಏನ್ ಸೋಜ್ಗಾನಪ್ಪ ಇದು.

ಅಂದಾನಿ : ಸಿಂಗಾರಣ್ಣ, ತಮಡಪ್ಪನ್ ಸಾಯ್ಸ್ದೋರ್ನ ಸುಮ್ನೆ ಬುಡ್ಬಾರ್ದು.

ಸಿಂಗಾರಿಗೌಡ : ಸುಮ್ನೆ ಬುಡಕಾಯ್ತದೆನೂ ಅಂದಾನಿ. ಅಂಗೈ ಹುಣ್ಣಿಗೆ ಕನ್ನಡಿ ಬೇಕ? ಈ ಕೊಲೆ ಯಾರ್ ಮಾಡವ್ರೆ ಅಂತ ಗೊತ್ತಿಲ್ವ? ನೆನ್ನೆ ಜಗ್ಳದಾಗೆ ಏನಾಯ್ತು ಅಂತ ಗೊತ್ತಿಲ್ವ? ಹೇಳ್ರಿ? ಈ ಊರ್ನಾಗೆ ಯಾರಿಗ್ ಗೊತ್ತಿಲ್ಲ ಇದು?

ಅಂದಾನಿ : ಪಂಚಾಯ್ತಿಗಾಕ್ಬುಡವ ಸಿಂಗಾರಣ್ಣ.

ಸಿಂಗಾರಿಗೌಡ : ಈ ಊರ್ನಾಗೆ ಎಂಥ ಘನಂದಾರಿ ನ್ಯಾಯ ಮಾಡ್ತಾರೆ ಅಂತ್ ಗೊತ್ತಿಲ್ವ? ಅದೆಲ್ಲ ಇಲ್ಲಿ ಬಗೆ ಹರಿಯಾಕಿಲ್ಲ.
(ಹೆಣದ ಮುಂದೆ)
.. ಅಯ್ಯೋ ತಮ್ಮಿ. ಎಂಥವ್ನಗ್ ಎಂಥಾ ಸಾವ್ ಬಂತಪ್ಪ.
(ಸ್ವಲ್ಪ ಹೊತ್ತಿನ ಬಳಿಕ ಊರಿನ ಎಲ್ಲ ಪ್ರಮುಖರು ಬಂದ ನಂತರ ಒಂದು ಕಡೆ ಕುಳಿತಿರುವ ರಾಮಣ್ಣ, ಈರೇಗೌಡರಿಗೆ)

ರಾಮಣ್ಣ : ಇದ್ಯಾಕ್ ಹಿಂಗಾಡ್ತಾವ್ನೆ ಸಿಂಗಾರಿಗೌಡ?

ಈರೇಗೌಡ : ಇಷ್ಹೊತ್ಗೆ ಹೆಣ ಎತ್ತಬುಟಿದ್ರೆ ಚೆಂದಾಗಿರ್ತಿತ್ತು.
(ಆಗ ಅಲ್ಲಿಗೆ ಪೋಲೀಸರು ಕುದುರೆ ಮೇಲೆ ಬರುತ್ತಾರೆ. ಸಿಂಗಾರಿಗೌಡ ಮುಂದೆ ಬಂದು ಪೋಲೀಸರಿಗೆ ಕೃಷ್ಣನ ವಿರುದ್ಧ ದೂರು ನೀಡುತ್ತಾನೆ)

ಸಿಂಗಾರಿಗೌಡ : ನಮಸ್ಕಾರ ಬುದ್ಧಿಯೋರ. ಅಡ್ಡಬಿದ್ದೆ.

ಪೋಲೀಸ್ : ಯಾರ್ರೀ ನೀವು? ಕಾಲಿಗ್ ಯಾಕ್ರಿ ಬೀಳ್ತೀರಿ?



(ಈರೇಗೌಡ ಧಾವಿಸಿಬಂದು)

ಈರೇಗೌಡ : ನನ್ ಮಗ ಸ್ವಾಮಿ. ಸಿಂಗಾರಿಗೌಡ ಅಂತ.

ಪೋಲೀಸ್ : ನೀವೆ ಅಲ್ವೇನ್ರಿ ನಮುಗ್ ಸುದ್ಧಿ ಕೊಟ್ಟೋರು. ಏನ್ರಿ ಇದು? ಹೇಗಾಯ್ತು?

ಈರೇಗೌಡ : (ತನ್ನ ಮಗನಿಗೆ) ಏನೋ ಇದೆಲ್ಲಾ?

ಸಿಂಗಾರಿಗೌಡ : ನೆನ್ನೆ ನಮ್ಮೂರ್ ಹಬ್ಬದಾಗೆ, ಈ ನಮ್ ತಮಡಪ್ಪನ್ಗೂ, ರಾಮಣ್ಣನ್ ತಮ್ಮ ಕೃಷ್ಣಂಗು ಜಗ್ಳ ಆಗಿತ್ತು ಸ್ವಾಮಿ. ಅವ್ನು ರಾತ್ರಿ ನಮ್ ತಮ್ಡಪ್ಪನ್ ಮುಗ್ಸ್ಬುಟ್ಟವ್ನೆ. ಹೇಳ್ ಕಳ್ಸಿದ್ನಲ್ಲ ಸ್ವಾಮಿ.

ಪೋಲೀಸ್ : ಯಾರ್ರೀ ಅವ್ನು ಕೃಷ್ಣ, ಹೋಗ್ ಎಳ್ಕೊಂಡ್ ಬನ್ರಿ. ಏಯ್ ತೋರ್ಸಯ್ಯ
(ಊರಿನವನೊಬ್ಬನನ್ನು ಜೊತೆ ಮಾಡಿ ಕಳುಹಿಸುತ್ತಾನೆ. ಉಳಿದವರಿಗೆ ಈ ಮಾತಿನಿಂದ ಆಘಾತವಾಗುತ್ತದೆ. ಚಿಂತಾಕ್ರಾಂತರಾಗುತ್ತಾರೆ)

# ದೃಶ್ಯ–50

*ಹಗಲು –ಲಕ್ಷ್ಮೀ ಮನೆಯ ಒಳಗೆ*

(ಮಹಾದೇವ ಮತ್ತು ರಾಮು ಲಕ್ಷ್ಮೀ ಮನೆಗ ಬಂದಾಗ ಲಕ್ಷ್ಮೀ ಒಂದು ಮೂಲೆಯಲ್ಲಿ ಅವಿತು ಕುಳಿತಿರುತ್ತಾಳೆ.)

ಮಹಾದೇವ : ಲಕ್ಷ್ಮೀ, ಇಲ್ಲಿದೀಯ ನೀನು? ಅಲ್ಲಿ ತಮಡಪ್ಪನ್ ಹೆಣ ಬಿದ್ದದೆ ಬಾ.

ಲಕ್ಷ್ಮೀ : ನಾ ಬರಾಕಿಲ್ಲ.

ರಾಮು : ಹಂಗಂದ್ರೆಂಗವ್ವ. ಪೋಲೀಸ್ನೋರು ಅಲ್ಲಿ ಕೃಷ್ಣಾನೆ ಕೊಲೆ ಮಾಡ್ದ ಅಂತ ಅವನ್ ಎಳ್ಕೊಂಡೊಯ್ತಾರೆ ಹೇಯ್ ಬಾ.

ಲಕ್ಷ್ಮೀ : ಅಯ್ಯಯ್ಯೋ ಕೃಷ್ಣ ಕೊಲೆ ಮಾಡಿಲ್ಲ
(ಅಚಾನಕ್ಕಾಗಿ ಬಾಯಿ ಬಿಡುತ್ತಾಳೆ, ಮಹಾದೇವ ಮತ್ತು ರಾಮು ಆಶ್ಚರ್ಯಗೊಳ್ಳುತ್ತಾರೆ)

ರಾಮು : ಹಂಗಾರೆ, ಎಲ್ಲ ನಿನಗ್ ಗೊತ್ತದೆ ಅಂತಾಯ್ತು.
(ಲಕ್ಷ್ಮೀ ಇಲ್ಲ ಇಲ್ಲ ಎಂದು ಭಯಭೀತಳಾಗಿ ನುಡಿಯುತ್ತಿರುತ್ತಾಳೆ)
.. ಹೇಯ್ ಬಾಮ್ಮ, ಎಲ್ಲ ಹೇಳ್ವಂತೆ ಅಲ್ಲಿ. .. ಹೇಯ್ ಬಾಮ್ಮಿ..
(ಮಹಾದೇವ ಮತ್ತು ರಾಮು ಆಕೆಯನ್ನು ಎಳೆದೊಯ್ಯುತ್ತಾರೆ)



# ದೃಶ್ಯ–51

*ಹಗಲು – ಊರಿನ ಬೀದಿ*


(ಕೃಷ್ಣನನ್ನು ಪೋಲೀಸರು ಎಳೆದೊಯ್ಯುತ್ತಿರುವಾಗ ಕನಕ ಮತ್ತು ಕಾಳಿ ಓಡಿ ಬರುತ್ತಾರೆ)

ಕನಕ : ಕೃಷ್ಣ, ಏನಿದೆಲ್ಲ? ಏನಾಯ್ತು ಕೃಷ್ಣ.. ಕೃಷ್ಣ..)
(ಎಂದು ಕೂಗುವಾಗಲೇ ಪೋಲೀಸರು ಅವನನ್ನು ಎಳೆದೊಯ್ಯುತ್ತಾರೆ)

ಕಾಳಿ : ನಮ್ ಕೃಷ್ಣನ್ ಬುಟ್ಬುಡಿ.
(ಕೃಷ್ಣನನ್ನು ಕರೆತಂದಾಗ ಪೋಲೀಸ್)

ಪೋಲೀಸ್ : ನೀನೆ ಏನಯ್ಯ ಈ ತಮಡಪ್ಪನ್ ಕೊಂದಿದ್ದು?
(ಕೃಷ್ಣ ಏನನ್ನೂ ಹೇಳದೆ ಸುಮ್ಮನೆ ನಿಂತಿರುತ್ತಾನೆ)

ರಾಮಣ್ಣ : ಹೇಳಪ್ಪ, ಬಾಯ್ ಬುಡಪ್ಪ. ಯಾಕೊ ಸುಮ್ಕೆ ನಿಂತ್ಕಂಬುಟ್ಟೆ ಯೇಲೋ.



(ಕೃಷ್ಣ ಮೌನವಾಗಿರುವುದನ್ನು ನೋಡಿ)

ಈರೇಗೌಡ : ಕೃಷ್ಣ, ನೀನ್ ಮೌನವಾಗಿದ್ರೆ, ನೀನೆ ಅಪರಾಧಿ ಅಂತ ಆಗ್ಬಿಡುತ್ತೆ. ಬಾಯ್ ಬುಡಪ್ಪ.

ಕೃಷ್ಣ : ನಾನ್ ಈ ಕೊಲೆ ಮಾಡಿಲ್ಲ.

ಪೋಲೀಸ್ : ಏಯ್ ಮುಚ್ಕೋ ಬಾಯ್. ಎಲ್ರು ಹೀಗೆ ಬೊಗ್ಳೋದು. ತಪ್ ಮಾಡ್ದೋರೆಲ್ಲ ತಕ್ಷಣ ನಿಜ ಒಪ್ಕೊಂಡ್ರೆ ಪ್ರಪಂಚ ಹೀಗಾಗ್ತಾನೆ ಇರ್ಲಿಲ್ಲ. ನಿನ್ ಕೈಲ್ ಹ್ಯಾಗ್ ಬಾಯ್ ಬುಡ್ಸ್ಬೇಕು ಅಂತ ನಮುಗ್ ಚೆನ್ನಾಗ್ ಗೊತ್ತು. (ಪೇದೆಗಳಿಗೆ) ..ಹೇಯ್ ಹಾಕೋ ಕೈಗ್ ಕೋಳ.
(ಆಗ ಕನಕ ಮಧ್ಯ ಪ್ರವೇಶಿಸುತ್ತಾಳೆ)

ಕನಕ : ಬ್ಯಾಡ ನಿಲ್ಸಿ. ಪೌಜ್ದಾರ್ರ ನನ್ ಮಾತ್ಕೇಳಿ.

ಸಿಂಗಾರಿಗೌಡ : ಅದೇನಂತ ಬೇಗ್ ಬೊಗ್ಳು.

ಕನಕ : ತಮಡಪ್ಪನ್ ಕೊಲೆಯಾಗಿದ್ದು ನೆನ್ನೆ ರಾತ್ರಿನಾಗೆ, ನೆನ್ನೆ ರಾತ್ರಿ ಕೃಷ್ಣ ತಮಡಪ್ಪನ್ ಮುಖ ನೋಡಿರೋಕ್ ಸಾಧ್ಯಾನೆ ಇಲ್ಲ.

ಪೋಲೀಸ್ : ಅದ್ಹೇಗ್ ಗೊತ್ತು ನಿಂಗೆ?

ಕನಕ : ಕೃಷ್ಣ ಎಲ್ಲಿದ್ದ ಅಂತ ನನ್ಗೊಬ್ಳುಗೆ ಗೊತ್ತಿರೋದು.



ಪೋಲೀಸ್ : ಏನು? ನಿನ್ಗೊಬ್ಳುಗೆ ಗೊತ್ತಿರೋದ? ಅದ್ಹ್ಯಾಗೆ?

ಕನಕ : ಅದ್ಹೆಂಗೆ ಅಂದ್ರೆ ಕೃಷ್ಣ ನನ್ಹತ್ರಾನೆ ಇದ್ದ.
(ಅಂದಾನಿ ಮಧ್ಯ ಪ್ರವೇಶಿಸಿ)

ಅಂದಾನಿ : ಲೇ ಲೇ ನಿನ್ಗೇನೆ ಬಂತು ಬೋಸುಡಿ, ಹೆಂಗ್ಸೇಳೋ ಮಾತೇನೆ ಇದು?

ಪೋಲೀಸ್ : (ಅಂದಾನಿಗೆ) .. ಹೇಯ್ ಯಾವನೊ ನೀನು?
(ಎಂದು ದೂಡುತ್ತಾನೆ)

ಅಂದಾನಿ : (ಕೈ ಮುಗಿಯುತ್ತ)
.. ನಾನ್ ಸ್ವಾಮಿ ಅಂದಾನಿ. ನನ್ಹೆಂಡ್ರು ಸ್ವಾಮಿ
(ಕನಕಳನ್ನು ತೋರಿಸುತ್ತಾನೆ)

ಸಿಂಗಾರಿಗೌಡ : ನಾ ಮುಂಚೆನೆ ಹೇಳಿದ್ನಲ್ಲ ಸ್ವಾಮಿ, ಅವ್ಳೆ ಇವ್ಳು.

ಪೋಲೀಸ್ : ಓ ಇವ್ಳೇನ ಅವ್ಳು. ಪರ್ವಾಗಿಲ್ಲ ಕಣಯ್ಯ ಈ ಊರ್ನಾಗೆ ಏನೇನೋ ಗಮ್ಮತ್ತಿದೆ.
(ಎನ್ನವಷ್ಟರಲ್ಲಿ ರಾಮು ಮತ್ತು ಮಹಾದೇವ ಲಕ್ಷ್ಮಿಯನ್ನು ಪೋಲೀಸ್‌ರ ಮುಂದೆ ಎಳೆದು ತರುತ್ತಾರೆ)

ರಾಮು : ಈ ಕೊಲೆ ಮಾಡ್ದವ್ರ್ ಯಾರು ಅಂತ ಈ ಲಕ್ಷ್ಮಿ ಅವ್ಳಲ್ಲ ಅವ್ಳನ್ ಕೇಳಿ ಸ್ವಾಮಿ. ಸತ್ಯ ಯಾವ್ದು ಅಂತ ಗೊತ್ತಾಯ್ತದೆ.



ಪೋಲೀಸ್ : ಅದೆಷ್ಟು ಸತ್ಯಾನಯ್ಯ ನಿಮ್ಮೂರ್ನಾಗ್ ಇರದು? ಅದೇನ್ ನಿಂದು ಒದ್ರು.

ಮಹಾದೇವ & ರಾಮು : ಹೇಳು ಲಕ್ಷ್ಮಿ ಹೇಳು

ಲಕ್ಷ್ಮೀ : ತಮಡಪ್ಪನ್ ಕೊಲೆ ಮಾಡಿದ್ದು ನಮ್ಮಪ್ಪನೆ.

ಪೋಲೀಸ್ : ಹ್ಹಾ, ಇದು ನಿಜ್ವಾಗ್ಲು ಕಟು ಸತ್ಯ. ಆಯ್ತು ನಿಮ್ಮಪ್ಪಾನೆ ಕೊಲೆ ಮಾಡಿದ್ದು ಅಂತ ಇಟ್ಕೊಳಣ. ಆದ್ರು ಸಾಕ್ಷಿ ಬೇಕಲ್ಲ. ಸಾಕ್ಷಿ ತೋರ್ಸು ಮೊದ್ಲು.

ರಾಮು : ಈ ಸಿಂಗಾರಿಗೌಡ ಭೀಮಪ್ಪನ್ನ ಅವ್ಸಿಟ್ಟವ್ನೆ. ಬನ್ನಿ ತೋರ್ಸ್ತಿನಿ.

ಸಿಂಗಾರಿಗೌಡ : ಸುಳ್ಳು ಸ್ವಾಮಿ. ಅವನ್ ಮಾತ್ ನಂಬೇಡಿ. (ರಾಮುಗೆ).. ಹೇಯ್ ಹಾಕ್ದೆ ಅಂದ್ರೆ
(ಮುಂದೆ ಬಂದಾಗ ಪೋಲೀಸ್ ಅವನನ್ನು ತಡೆದು)

ಪೋಲೀಸ್ : ಈ ಊರ್ನಲ್ ಯಾರ್ ಸತ್ಯ ಹೇಳ್ತಿರೊ, ಯಾರ್ ಸುಳ್ ಹೇಳ್ತಿರೋ ನಂಬಕಾಗ್ತಿಲ್ಲ. ಆದ್ರು ಅವರ್ ತೋರ್ಸ್ತಿನಿ ಅಂದಾಗ ನೋಡ್ಬೇಕಾದ್ದು ನಮ್ ಕರ್ತವ್ಯ. ಹೇಯ್ ಅದೇನ್ ತೋರ್ಸ್ತಿಯೋ ತೋರ್ಸೋಗೊ. ಹೋಗೊ ಇವ್ರಪ್ಪನ್ ಎಳ್ಕೊಂಡ್ಬಾರೊ.

ಮಹಾದೇವ : ಬನ್ನಿ ಸ್ವಾಮಿ. ಬನ್ನಿ.

ಈರೇಗೌಡ : ನಿನ್ನ್ ನೆಗದ್ ಬಿದ್ದ್ ಸಾಯ. ಅದಿಕ್ಕೆ ನನಗೊಂದ್ಮಾತು ಹೇಳ್ದೆ ಪೌಜ್ದಾರ್ರುಗ್ ಹೇಳ್ಕಳ್ಸಿದಿಯ? ಅಷ್ಟು ದೊಡ್ ಮನ್ಸನಾಗ್ಬಿಟ್ಯಲ್ಲ ನೀನು. ನಿನ್ನಾ.. ನಿನ್ನಾ..
(ಹೊಡೆಯಲು ಮುಂದಾದಾಗ ರಾಮಣ್ಣ ತಡೆದು)

ರಾಮಣ್ಣ : ಅಣ್ಣ ಅಣ್ಣ, ಸಮಾಧಾನ ಮಾಡ್ಕೊ. ಭೀಮಣ್ಣ ಬರ್ಲಿ, ವಿಷ್ಯ ಏನು ಅಂತ ತಿಳಿತದೆ. ಅಷ್ಟ್ರಾಗೆ ಅವನ್ನ ಮುಕ್ಕೇಡಿ ಮಾಡ್ತಿದಿಯಾ? ಸಮಾಧಾನ ಮಾಡ್ಕೊ ಸಮಾಧಾನ ಮಾಡ್ಕೊ.
(ಸಿಂಗಾರಿಗೌಡ ತನ್ನ ಯೋಜನೆ ತಲೆಕೆಳಗಾಗಿದ್ದಕ್ಕೆ ಪೆಚ್ಚಾಗಿ ನಿಲ್ಲುತ್ತಾನೆ)

## ದೃಶ್ಯ–52

*ಹಗಲು – ಊರಿನ ಬೀದಿ*

(ಪೋಲೀಸರು ಭೀಮಪ್ಪನನ್ನು ಎಳೆದು ತರುತ್ತಾರೆ)

ಪೋಲೀಸ್ : ಹೇಯ್ ಭೀಮಪ್ಪ, ಹೇಳು ನೀನ್ ಈ ಕೊಲೆ ಮಾಡಿದ್ ನಿಜಾನ?

ಭೀಮಪ್ಪ : ನಿಜ ಸ್ವಾಮಿಯೋರ

(ಸತ್ಯ ತಿಳಿದು ಕೆಲವರಿಗೆ ಸಂತಸ ಕೆಲವರಿಗೆ ಆಶ್ಚರ್ಯವಾಗುತ್ತದೆ)

ಪೋಲೀಸ್ : ಯಾಕೆ? ಯಾಕ್ ಕೊಲೆ ಮಾಡ್ದೆ? ಬೊಗಳು

ಭೀಮಪ್ಪ : ಹೇಳ್ತಿನಿ. ಹೇಳ್ತಿನಿ. ತಾಯಿ ಇಲ್ದೇದ್ ತಬ್ಬಲಿ ಮಗ್ಳು ಅಂತ ಲಕ್ಷ್ಮಿನ ಬ್ಲೋ ಚೆಂದಾಗ್ ನೋಡ್ಕಬುಟ್ಟೆ, ಯಾವ್ದುಕ್ಕ ಊನಾಗ್ದಂತೆ ಜೋಪಾನ ಮಾಡ್ದೆ. ನೆನ್ನೆ ನಮ್ ಕೊಂತಮ್ಮನ್ ಹಬ್ಬ ಮುಗ್ಸ್ಕಂಡು ನನ್ ಮಗ್ಳಿಗ್ ಗಂಡ್ ಗೊತ್ತ್ ಮಾಡ್ಕಂಡ್ ಬರಾವಾಗ ಪಕ್ಕದಳ್ಳೀಲ್ ಹೋಗಿ ಮದ್ವೆ ವಿಷ್ಯ ಮಾತಾಡ್ಕಂಡ್ ಬಂದೆ ಹಟ್ಟಿತಾವ್ ಹೋಗ್ ನೋಡ್ತಿನಿ....

(ಕಳೆದ ಘಟನೆ ಬಿಚ್ಚಿಕೊಳ್ಳುತ್ತದೆ)



## ದೃಶ್ಯ–52ಅ

*ರಾತ್ರಿ – ಲಕ್ಷ್ಮೀ ಮನೆಯ ಒಳಗೆ ಮತ್ತು ಹೊರಗೆ*
*ಹಿಂದಿನ ಘಟನೆ/ಫ್ಲ್ಯಾಶ್ ಬ್ಯಾಕ್*

(ಭೀಮಪ್ಪ ಮನೆ ಬಾಗಿಲು ಬಡಿಯಬೇಕೆನ್ನುವಷ್ಟರಲ್ಲಿ ಒಳಗಿನಿಂದ ಲಕ್ಷ್ಮೀ ಯಾರ ಜೊತೆಗೋ ಇರುವಂತೆ ಶಬ್ದ ಕೇಳಿ ಭೀಮಪ್ಪ ಕಿಟಕಿಯಲ್ಲಿ ಬಂದು ನೋಡಿದಾಗ ಲಕ್ಷ್ಮೀ ತಮಡಪ್ಪನೊಂದಿಗೆ ಸರಸವಾಡುತ್ತಿರುವುದನ್ನು ನೋಡಿ ಕೆಂಡಾಮಂಡಲವಾಗುತ್ತಾನೆ)

ಭೀಮಪ್ಪ : (ರೋಷಾವೇಷದಿಂದ) .. ಏ ತಮ್ಡಿ

(ತಮ್ಮಡಪ್ಪ ಮತ್ತು ಲಕ್ಷ್ಮಿ ಭೀಮಪ್ಪನನ್ನು ನೋಡಿ ಗಾಬರಿಗೊಳ್ಳುತ್ತಾರೆ. ತಮ್ಮಡಪ್ಪ ಹಿಂದಿನ ಬಾಗಿಲಿನಿಂದ ಓಡಲು ಪ್ರಾರಂಭಿಸುತ್ತಾನೆ. ಅವನನ್ನು ಹಿಂಬಾಲಿಸುವ ಭೀಮಪ್ಪ ಕಲ್ಲನ್ನ ಎತ್ತಿಹಾಕಿ ತಮಡಪ್ಪನನ್ನು ಕೊಲೆ ಮಾಡುತ್ತಾನೆ)

## ದೃಶ್ಯ–52ಆ

*ಹಗಲು – ಊರಿನ ಬೀದಿ*
*(ಲೈವ್)*

(ಹಿಂದಿನ ಘಟನೆಯನ್ನು ಹೇಳಿದ ನಂತರ)

ಭೀಮಪ್ಪ : ಆಮೇಲ್ ಭಯ್ ಆಗ್ಬೋಯ್ತು. ಒಳಗೇ ಒದ್ದಾಡ್ದೆ. ಇದ್ರಿಂದ ಪಾರಾಗದ್ ಹೆಂಗೆ ಗೊತ್ತಾಗ್ದೆ ಹಿರೇಗೌಡಂಗ್ ಹೇಳವ ಅಂತ ಅಪ್ಪಟ್ಟಿತಾವ್ ಹೋದೆ ಅಲ್ಲಿ ಸಿಂಗಾರಿಗೌಡ್ರಿದ್ರು..



## ದೃಶ್ಯ–52ಇ

*ರಾತ್ರಿ – ಸಿಂಗಾರಿಗೌಡನ ಮನೆಯ ಒಳಗೆ*
*ಹಿಂದಿನ ಘಟನೆ/ಫ್ಲ್ಯಾಶ್ ಬ್ಯಾಕ್*

(ಗಾಬರಿಗೊಂಡಿದ್ದ ಭೀಮಣ್ಣನಿಗೆ)

ಸಿಂಗಾರಿಗೌಡ : ನೀನೇನು ಹೆದರ್ಕೋಬೇಡ ಭೀಮಣ್ಣ. ತಮ್ಮಪ್ಪಂಗ್ ದೇವ್ರ್ ಬಂದಾಗ ಕೃಷ್ಣ ತಿರುಗ್ ಬಿದ್ದಿದ್ದು ಊರ್ಗ್ಗೂರೆ ನೋಡವ್ರೆ. ಅವ್ನೆ ಕೊಲೆ ಮಾಡಿದ್ದು ಅಂತ ನಾನ್ಹೇಳಿ ಎಲ್ಲ ಸರಿ ಮಾಡ್ತಿನಿ. ಆ ಬಡ್ಡಿ ಮಗನಿಗೆ ಬುದ್ಧಿ ಕಲ್ಸ್ತೀನಿ. ಅಲ್ಲಿಗಂಟ ನೀ ಇಲ್ಲೇ ಅವ್ಸ್ಕಂಡಿರು.
(ಎಂದು ಅವನಿಗೆ ಜಾಗ ತೋರಿಸುತ್ತಾನೆ)

## ದೃಶ್ಯ–52ಈ

*ಹಗಲು – ಊರಿನ ಬೀದಿ*
*(ಲೈವ್)*

(ಭೀಮಪ್ಪ ನಡೆದ ಘಟನೆ ಮುಂದುವರೆಸುತ್ತಾನೆ)

ಭೀಮಪ್ಪ : ನನ್ನ ಅವ್ವಟ್ಟಿಯಾಗ್ ಬಚ್ಚಿಟ್ರು, ನಾನ್ ಕೈಯಾಗ್ ಜೀವ ಹಿಡ್ಕಂಡು ಅಲ್ಲೇ ಕಾಲ ಹಾಕ್ತಾ ಇದ್ದೆ ಸ್ವಾಮಿಯಾರ.

ಪೋಲೀಸ್ : ಕೊಲೆ ಮಾಡ್ದೋನೆ ಒಪ್ಕೊಂಡಿರೋವಾಗ, ಆ ಕೃಷ್ಣನ್ ಕರ್‍ಕೊಂಡ್ಹೋಗೊ ಅವಶ್ಯಕತನೇ ಇಲ್ಲ.
(ಪೇದೆಗಳಿಗೆ) .. ಏಯ್ ಆ ಕೃಷ್ಣನ್ ಬಿಟ್ಬಿಡ್ರೊ.
(ಕೃಷ್ಣನ ಸ್ನೇಹಿತರು ಬಂದು)

ನಂಜ : ಎದ್ದೇಳು ಕೃಷ್ಣ, ಎದ್ದೇಳು.. ನಿಜವಾಗ್ಲು ದೇವ್ರ್ ದೊಡ್ಡೋನು.

ಪೋಲೀಸ್ : ಭೀಮಪ್ಪಂಗೆ ಕೋಳ ಹಾಕಿ.. ಹಾಗೆ ಈ ಸಿಂಗಾರಿಗೌಡಂಗು ಕೋಳ ಹಾಕಿ.

ಸಿಂಗಾರಿಗೌಡ : ಸ್ವಾಮಿ, ನಾನ್ ಕೊಲೆ ಮಾಡಿಲ್ಲ ಸ್ವಾಮಿ.

ಪೋಲೀಸ್ : ನೀನ್ ಕೊಲೆ ಮಾಡ್ದೆ ಇದ್ರು ಕೊಲೆಗಾರನ್ನ ಬಚ್ಚಿಟ್ಟಿದ್ದು ದೊಡ್ ಅಪರಾಧ. ಈಗದ್ನೆಲ್ಲ ಕಥೆ ಹೇಳ್ತ ಕೂತ್ಕೊಳಕಾಗಲ್ಲ ಏ ಏನ್ರೋ ನೋಡ್ತಾಯಿದಿರ? ಹಾಕ್ರೋ ಕೋಳ ಇವನ್ಗೆ.

ಬಂಗಾರು : ನಮ್ ಕೃಷ್ಣನ್ ದೇವ್ರು ಕಾಪಾಡ್ದ

ನಂಜ : ನಿಜ ಕಣ್ರೋ ಮಗ.
(ಊರವರಿಗೆ ನಿರಾಳ. ಕೃಷ್ಣ, ಕನಕ ಒಬ್ಬರಿಗೊಬ್ಬರು ಪ್ರತಿಕ್ರಿಯಿಸುತ್ತಾರೆ)

**ನಿರ್ದೇಶಕರ ಟಿಪ್ಪಣಿ:**

ಊರಿನ ವೈಮನಸ್ಸಿನ ಒಳ ಮನಸ್ಸುಗಳು ತಮ್ಮ ತಮ್ಮಲ್ಲೆ ಕಿಚ್ಚುಹತ್ತಿಕೊಂಡ ಸಂಧರ್ಭದಲ್ಲಿ ತಮಡಪ್ಪನ ಸಾವು ಇನ್ನೊಂದು ರೀತಿಯ ತಿರುವನ್ನು ಚಿತ್ರದ ಕಥೆಗೆ ಕೊಡುತ್ತದೆ. ತಮಡಪ್ಪನ ಸಾವನ್ನು ಸಿಂಗಾರಿಗೌಡ ತನ್ನ ಸ್ವಾರ್ಥಕ್ಕೆ ಬಳಸುವ ಯೋಜನೆ ಹಾಕಿ ಕೃಷ್ಣನನ್ನು ಸಿಕ್ಕಿಸುವ ಕುತಂತ್ರವೊಂದನ್ನು ರೂಪಿಸುತ್ತಾನೆ. ಆದರೆ ಅದು ನಿಧಾನವಾಗಿ ಸಿಂಗಾರಿಗೌಡನನ್ನೇ ಆವರಿಸಿಕೊಳ್ಳುತ್ತದೆ. ತಮಡಪ್ಪನ ಕೊಲೆಯನ್ನು ಆತನ ಪ್ರೇಯಸಿಯ ಅಪ್ಪ ಭೀಮಪ್ಪನೇ ಮಾಡಿರುವುದು ಖಚಿತಗೊಂಡಾಗ ಪೊಲೀಸಿನವರು ಭೀಮಪ್ಪನನ್ನು ಮತ್ತು ಸಾಕ್ಷಿಯನ್ನು ಮುಚ್ಚಿಹಾಕಿದ್ದರಿಂದ ಸಿಂಗಾರಿಗೌಡನನ್ನೂ ಎಳೆದೊಯ್ಯುತ್ತಾರೆ.



## ದೃಶ್ಯ–53

*ಹಗಲು – ರಾಮಣ್ಣನ ಮನೆಯ ಒಳಗೆ*

(ಅಯ್ನೋರು, ಕೃಷ್ಣನ ಸ್ನೇಹಿತರು ಮತ್ತು ಕೃಷ್ಣ ಮನೆಯಲ್ಲಿ ಸೇರಿದ್ದಾರೆ)

ರಾಮಣ್ಣ : ಇವ್ನಗೆ, ನೀವಾರ ವಸಿ ಬುದ್ಧಿ ಯೋಳಿ ಅಯ್ನೋರೆ? ಚಿಕ್ಕ್ ಮಕ್ಳಾದ್ರೆ ವಡ್ದು ಬಡ್ದು ಬುದ್ಧಿ ಹೇಳ್ಬಹುದು. ದೊಡ್ ಹುಡುಗ್ರುಗೆ ಏನ್ಮಾಡಕಾಯ್ತದೆ? ಕನಕ ಈಗ ಮದ್ವೆ ಆಗಿರೋ ಹೆಣ್ಣು. ಅವ್ಳು ಮರ್‍ತು ಬೇರೆ ಮದ್ವೆ ಮಾಡ್ಕಳದೆ ಈಗಿರೋ ದಾರಿ. ಅದುನ್ ಬಿಟ್ಟು ಯೋನೊ ಯೋಳ್ತಾರಲ್ಲ ನಂಟು ನೋಡ್ದೆ ಹೋಯ್ತು, ಗಂಟು ಕೇಳ್ದೆ ಹೋಯ್ತು ಅಂತ ಹಂಗ್ ಮಾಡ್ಕಂಡ್ ಕುಂತ್ಕಂಡ್ರೆ ಆಗ್ತದ ಅಯ್ನೋರೆ.

ಅಯ್ನೋರು : ನೋಡ್ ರಾಮಣ್ಣ, ನಾನು ನಿನಗ ಇದನ್ನ ಹೇಳ್ಬೇಕಂತ ಮಾಡೀನಿ. ಊರಿಗೊಂದು ಒಳ್ಳೆ ಹಾದಿ ಅಂತ ಇರ್‍ತೈತಿ. ನಾವು ಆ ಹಾದಿ ಒಳಗ ಹೋಗ್ಬೇಕ ಹೊರ್ತು, ಬ್ಯಾರೆ ಹಾದಿಲ್ ಹೋಗ್ತೀವನ್ನೋದು ಬಹಳ ಕಷ್ಟ. ನೋಡು ಕೃಷ್ಣ. ನಿನ್ನ ನೋವು ನಮಿಗ್ ಅರ್ಥ ಆಗ್ತೈತಪ್ಪ. ತನುವರಿಯದ ನೋವಿಲ್ಲ, ಮನವರಿಯದ ಪಾಪವಿಲ್ಲ, ಶಿವನರಿಯದ ಸಾವಿಲ್ಲ ಅಂತ ಬಲ್ಲವರು ಹೇಳ್ತಾರಪ್ಪ. ಈಗಾದ್ರು ನಿನ್ನ ನೋವು ಮರೆತು ನಿಮ್ಮಣ್ಣ ಹೇಳೀದ್ಹಂಗ್ ಕೇಳಿಕೊಂಡು ಮದುವೆ ಮಾಡಿಕೊಂಡು ಹೊಸ ಜೀವ್ನ ಪ್ರಾರಂಭ ಮಾಡಪ್ಪ.

ರಾಮಣ್ಣ : ಹ್ವಾ ಅನ್ನಲ್ಲ ಹ್ವೂ ಅನ್ನಲ್ಲ. ಹಿಂಗ್ ಸುಮ್ನೆ ಕುಂತ್ರೆ ಏನ್ಬಂತೋ. ಮಾತಾಡೋ.
(ಆಗ ಕನಕ ಅಳುತ್ತಿರುವ ಶಬ್ಧ ಕೇಳುತ್ತದೆ. ಅಂದಾನಿ ಕನಕಳಿಗೆ ಹೊಡೆಯುತ್ತಿರುವಂತೆ ಅನಿಸುತ್ತದೆ.)

ಅಂದಾನಿ : ಇವತ್ತ್ ನಿನ್ನ ಹುಟ್ಲಿಲ್ಲ ಅನ್ಸುಬ್ಡ್ತೀನಿ ಎಷ್ಟೇ ದೈರ್ಯ ನಿಂಗೆ

ಅಂದಾನಿ ತಾಯಿ : ಊರ್ ಜನ ಏನಂದಾರು ಅನ್ನೋ ಜ್ಞಾನ ಬೇಡ್ವಾ ನಿಂಗೆ
(ಇದನ್ನು ಕೇಳಿಸಿಕೊಂಡ ಕೃಷ್ಣ ರೋಷದಿಂದ ಹೊರಗೆ ಬರುತ್ತಾನೆ. ಎಲ್ಲರು ಅವನನ್ನು ಹಿಂಬಾಲಿಸುತ್ತಾರೆ)

## ದೃಶ್ಯ–54

*ಹಗಲು – ಅಂದಾನಿ ಮನೆಯ ಹೊರಗೆ*

(ಅಂದಾನಿ ಮತ್ತು ಅವನ ತಾಯಿ, ಕನಕಾಳಿಗೆ ಹೊಡೆಯುತ್ತಿರುತ್ತಾರೆ)

ತಾಯಿ : ಏನೆ ಏನೇ ಮಾಡ್ತಿದ್ರಿ? ರಾತ್ರಿಯೆಲ್ಲ ಎಲ್ಲೇ ಸೇರ್ಕಂಡಿದ್ರಿ, ಥೂ ಹಾದ್ರಗಿತ್ತಿ, ಊರ್ನೋರ್ ಎದ್ರುಗೆಲ್ಲ ರಾತ್ರಿ ಕೃಷ್ಣ ನನ್ ಜೊತೆಲಿದ್ದ ಅಂತ ಹೇಳ್ಕೊಂಡ್ಯಲ್ಲ ನಾಚ್ಕೆ ಆಗ್ಲಿಲ್ವೇನೆ ನಿಂಗೆ.



ಅಂದಾನಿ : ಇವತ್ತೆಳ್ಡ್ರಾಗ್ ಒಂದ್ ತೀರ್ಮಾನ ಆಗ್ಬೇಕು. ಗಂಡಾಂತ ನನ್ತಾವ ಬಿದ್ದಿರ್ಬೇಕು ಇಲ್ಲಾ ಸತ್ ಮಸಾಣ ಸೇರ್ಕಂಬೇಕು.

(ಕನಕಳಿಗೆ ಹೊಡೆಯುತ್ತಿದ್ದಂತೆ ಕೃಷ್ಣ ಓಡಿಬಂದು ಅಂದಾನಿಗೆ ಹೊಡೆಯಲು ಪ್ರಾರಂಭಿಸುತ್ತಾನೆ ಅಂದಾನಿ ತಾಯಿ ರೋಧಿಸುತ್ತಾಳೆ)

ಅಂದಾನಿ ತಾಯಿ : ಅಯ್ಯೋ ಯಾರಾದ್ರು ಬನ್ರಪ್ಪೋ. ನನ್ ಮಗನ್ನ ಕೊಂದಾಕ್ಬುಡ್ತಾನೆ ಈ ಕೃಷ್ಣಪ್ಪ, ಯಾರಾರು ಕಾಪಾಡಿ ನನ್ ಮಗನ್ನ.

ಕೃಷ್ಣ : ಹೇಯ್ ಅಂದಾನಿ. ನೀ ಅನ್ಕೊಂಡಿರಂಗೆ ನನ್ನ ಕನಕನ್ ಮಧ್ಯ ಏನು ಆಗಿಲ್ಲ. ಅವ್ಳು ಬೆಂಕಿ.. ಇನ್ನೊಂದ್ಸಲ ಅವ್ಳ್ಮೇಲ್ ಕೈ ಮಾಡುದ್ರೆ ನಿನ್ನ ಸಿಗ್ದು ಊರ್ಬಾಗ್ಲಿಗ್ ತೋರ್ಣ ಕಟ್ಬುಡ್ತೀನಿ ಹುಷಾರ್.

ಅಂದಾನಿ : ಅಯ್ಯಯ್ಯೋ ಬುಡಪ್ಪ

(ರಾಮಣ್ಣ ಸ್ಥಳಕ್ಕೆ ಬರುತ್ತಾನೆ. ಕೃಷ್ಣ ಹೋಗುತ್ತಿರುವ ಸಂದರ್ಭದಲ್ಲಿ ಕನಕ)



ಕನಕ : ಕೃಷ್ಣ, ಯೇಳು, ಈಗ್ಲಾದ್ರು ಯೇಳು. ಜೀದಿಲೆಲ್ಲ ಬಡ್ದು ಬಾಸುಂಡೆ ಬರ್ಸೋ ಈ ಗಂಡ ಅನ್ನೋ ಅಂದಾನಿ ಜೊತೆ ನಾನ್ ಬಾಳ್ಬೇಕ?

(ಆಗ ಅಲ್ಲಿಗೆ ಕಾಳಿ ಬರುತ್ತಾಳೆ)

ರಾಮಣ್ಣ : ಹೌದು. ಬಾಳ್ಬೇಕು. ತಾಳಿ ಕಟ್ಟುದ್ಮೇಲೆ ಅವ್ನೆಂಥಾವ್ನಾದ್ರು ಗಂಡಾನೆ.

ಕನಕ : ನೀನೇಳು ಕೃಷ್ಣ, ಬಲವಂತವಾಗ್ ತಾಳಿ ಕಟ್ಬುಸ್ಕೊಂಡ್ ಒಂದೇ ತಪ್ಪಿಗೆ ಜನ್ಮ ಪೂರ್ತಿ ಹೀಗೆ ಜೀವ ತೇಯ್ಬೇಕ?

ರಾಮಣ್ಣ : ಜೀವ ತೇಯ್ಬೇಕು. ತಾಳಿ ಅನ್ನೋದು ತಾಳ್ಮೆ ಕಲ್ಸ್ಬೇಕು. ಪತಿಯೇ ಪ್ರತ್ಯಕ್ಷ ದೈವ ಅಂತ ಬಾಳ್ವೆ ಮಾಡ್ಬೇಕು.

ಕನಕ : ಪತಿಯೇ ಪ್ರತ್ಯಕ್ಷ ದೈವ ಅಂತ ಬಾಳ್ವೆ ಮಾಡಕೆ ನಾನ್ ಅವನ್ ಸತಿಯಾಗಿರ್ಬೇಕಲ್ವ? ಕೃಷ್ಣ ಇವತ್ತ್ ನನ್ ಒಳ್ಗಡೆ ಇರೋ ಬೆಂಕಿ ಬಾಯಿಗ್ ಬಂದ್ ಕೇಳ್ತಿದಿನಿ. ನನ್ನ ಕೈ ಬಿಡ್ಬೇಡ ಕೃಷ್ಣ ನನ್ನ ಕೈ ಬಿಡ್ಬೇಡ.

ರಾಮಣ್ಣ : ಕೃಷ್ಣ, ಇವ್ಳ್ ಕಣ್ಣೀರ್ಗೆ ಕರ್ಗ್ಬೇಡ. ಮದ್ವೆ ಆಗಿರೋ ಹೆಂಗುಸ್ರು ಆಡೋ ಮಾತಾ ಇದು? ಮರ್ಯಾದಸ್ತ್ ಹೆಂಗುಸ್ರು ಇಂಗಾಡ್ತಾರ?

ಕನಕ : ಯಾರ್ಗ್ ಮರ್ಯಾದಸ್ತ್ರು? ಮನಸಾರ ಮೆಚ್ಚದವ್ನೊತ್ತೆ ಮದ್ವೆ ಆಗ್ಬುಂಗ್ ಮಾಡ್ದವ್ರ್ ಮರ್ಯಾದಸ್ತ್ರ? ಇಲ್ಲ ಮನಸಿಲ್ದಮ್ಯಾಲೆ ಮೈ ಮುಟ್ಬುಸ್ಕಳಲ್ಲ ಅಂತ ಆವತ್ತಿಂದ ಇವತ್ತಿನ್‌ವರ್ಗು ಹಂಗೆ ಬದುಕ್ತಿರೊ ನಾನ್ ಮರ್ಯಾದಸ್ಥಳಾ? ಬಲವಂತವಾಗ್ ಮಾಡಿದ್ ಮದ್ವೆ ವಿಷ್ಯ ಗೊತ್ತಿದ್ದು ಮಾತಾಡ್ದೆ ಇರೋರ್ ಮರ್ಯಾದಸ್ಥ್ರ? ಮನಸ್ಸಿಗ್ ಮೋಸ ಮಾಡ್ದೆ ಬದುಕ್ತಾಯಿರೋ ನಾನ್ ಮರ್ಯಾದಸ್ಥಳಾ? ಹೇಳು ಕೃಷ್ಣ ಹೇಳು. ಇವತ್ತಲ್ಲ ನಾಳೆ ನೀ ನನ್ ಕೈ ಹಿಡಿತೀಯ ಅಂತ ಕಾಯ್ತಾ ಬಂದಿವ್ನಿ. ನನ್ ಬಾಳಿಗ್ ಬೆಳಕಾಗು, ಬೆಳಕಾಗು ಕೃಷ್ಣ.

ರಾಮಣ್ಣ : ಈ ಕತ್ತಲೆ ಬೆಳಕಿನ ಆಟಕ್ಕೆ ಬಲಿಯಾಗ್ಬೇಡ ಕೃಷ್ಣ. ನಡಿ. ಇವ್ಳೆದ್ರುಗ್ ನಿಂತ್ಕೊಬೇಡ. ಇವ್ಳ್ ಮಾಯದ ಮಾತಿಗ್ ಮರ್ಳಾಗ್ಬೇಡ. ಮನೆ ಮನೆತನ ಮರ್ತು ಹಾಳಾಗ್ಬೇಡ. ನಡಿ ಇಲ್ಲಿಂದ.

ಕನಕ : (ತೀವ್ರವಾಗಿ ರೋಧಿಸುತ್ತ)

.. ಆಯ್ತು, ಹೋಗು ಕೃಷ್ಣ ಹೋಗು. ನನ್ ಬಾಳಗ್ ಬೆಳಕಾಗಕಾಗ್ದೆ ಇದ್ಮೇಲೆ ಎದ್ರುಗ್ನಿಂತು ಯಾಕ್ ಸಂಕ್ಟ ಕೊಡ್ತೀಯ? ಊರ್ನಾಗ್ ಇದ್ಕಂಡು ನನ್

ಮನಸ್ನಾಗೆಲ್ಲ ಸುಂಟರಗಾಳಿ ಯಾಕ್ ಎಬ್ಬುಸ್ತೀಯ? ಹೋಗು, ಎಲ್ಲಿಗ್ ಬೇಕಾದ್ರು ಹೋಗು. ನಾನೇನಾದ್ರೆ ನಿನ್ಗೇನಂತೆ. ಒಂಟೋಗು.
(ಕೃಷ್ಣ ದುಃಖಿತಪ್ತನಾಗಿ ಹೊರಟು ಹೋಗುತ್ತಾನೆ. ಕನಕ ಅಲ್ಲೇ ರೋಧಿಸುತ್ತ ನಿಲ್ಲುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

ತಮಡಪ್ಪನ ಸಾವಿನ ನಂತರದ ಹಳ್ಳಿಯ ಚಿತ್ರ ಕನಕ ಮತ್ತು ಕೃಷ್ಣರ ಜೀವನದಲ್ಲಿ ಬೇರೆಯದೇ ಆಗುತ್ತದೆ. ಕೃಷ್ಣ ತನ್ನ ದೈನಂದಿನ ಕ್ರಿಯೆಗಳನ್ನು ಮುಂದೂಡಿಸಿಕೊಂಡು ಹಳ್ಳಿಯಲ್ಲಿ ಒಂದಾಗಬೇಕು ಎಂಬುದು ಎಲ್ಲರ ಆಶಯವಾದರೂ ಆತನಿಗೆ ಕನಕಾಳನ್ನು ಮರೆಯಲಸಾಧ್ಯ ಎನ್ನುವ ನೋವಿನೊಂದಿಗೆ ಅದನ್ನು ಒಪ್ಪಲು, ಒಪ್ಪದಿರಲೂ ಆಗದ ಪರಿಸ್ಥಿತಿಯಲ್ಲಿ ಕನಕ ಪೋಲೀಸರ ಮುಂದೆ ಆಡಿದ ಮಾತುಗಳು ಅಂದಾನಿಗ ಕೆರಳುವಂತೆ ಮಾಡುತ್ತದೆ ಮತ್ತು ಆತ ತನ್ನ ಗಂಡನ ಸ್ಥಾನವನ್ನು ತೋರಿಸುವ ಸಲುವಾಗಿ ಆಕೆಗೆ ಹೊಡೆಯುತ್ತಿರುತ್ತಾನೆ. ಇದರಿಂದ ಕೆರಳುವ ಕೃಷ್ಣ ಅವನನ್ನು ತಡೆದಾಗ ಎರಡು ಸಾಕ್ಷಿಪ್ರಜ್ಞೆಗಳ ನಡುವೆ ಕೃಷ್ಣನ ಹೊಯ್ದಾಟ ಪ್ರಾರಂಭವಾಗುತ್ತದೆ. ಒಂದು ಅಣ್ಣ ಮತ್ತು ಅಣ್ಣನ ಮೂಲಕ ಇಡೀ ಊರು ಮತ್ತು ಊರಿನ ಸಂಪ್ರದಾಯ, ಕನಕ ಮತ್ತು ಕನಕಾಳ ಮೂಲಕ ಪ್ರೀತಿ ಮತ್ತು ಪ್ರೀತಿಯ ಸ್ಥಿತ್ಯಂತರಗಳು. ಇವುಗಳ ಮಧ್ಯೆ ವಾಗ್ವಾದಗಳು ನಡೆದು ಹೋಗುತ್ತವೆ. ಎಲ್ಲಾ ಹಳ್ಳಿಯ ಹೆಣ್ಣುಮಕ್ಕಳಂತೆ ಆ ಕೋಪದ ಭರದಲ್ಲಿ ತನ್ನ ಪ್ರಿಯಕರನಿಗೆ ಹೋಗು ನಿನ್ನ ಇಷ್ಟ ಬಂದ ಹಾಗೆ ನೀನಿರು ಎನ್ನುವ ಮಾತುಗಳು ಕೃಷ್ಣನನ್ನು ನಿಜವಾಗಿಯೂ ಜರ್ಝರಿತನನ್ನಾಗಿಸುತ್ತದೆ. ಅವಳಿಗಾಗಿ ತೋಟವನ್ನು ಬಿಟ್ಟು ಊರಿಗೆ ಬಂದವನು ಇನ್ನೊಂದು ನಿರ್ಧಾರದತ್ತ ಮುಖಮಾಡುತ್ತಾನೆ.



## ದೃಶ್ಯ–55

*ರಾತ್ರಿ – ಕೃಷ್ಣನ ತೋಟ*

(ರಾತ್ರಿ ಒಬ್ಬನೇ ಯೋಚಿಸುತ್ತ ನಿಂತಿದ್ದಾನೆ. ಅವನಿಗೆ ಕನಕ ಆಡಿದ ಒಂದೊಂದೇ ಮಾತು ಜ್ಞಾಪಕವಾಗುತ್ತದೆ. ಅದೇ ಸಮಯದಲ್ಲಿ ಅವನ ಕೊಳಲು ಸಹ ಮುರಿಯುತ್ತದೆ)

## ದೃಶ್ಯ–55ಅ

*ರಾತ್ರಿ – ದೇವಸ್ಥಾನದ ಹೊರಗೆ*

(ಕೃಷ್ಣ, ದೇವಸ್ಥಾನದ ಬಳಿ ಮಲಗಿರುವ ಅಯ್ನೋರ ಹತ್ತಿರ ಬಂದು ಅವರಿಗೆ ಎಚ್ಚರವಾಗದಂತೆ ಆಶೀರ್ವಾದ ತಗದುಕೊಂಡು, ಊರಿನ ಮಣ್ಣನ್ನು ಕೈಯಲ್ಲಿ ತಗದುಕೊಂಡು ತನ್ನ ಚೌಕದಲ್ಲಿ ಹಾಕಿಕೊಂಡು ಅಲ್ಲಿಂದ ಹೊರಟು ಹೋಗುತ್ತಾನೆ)





## ದೃಶ್ಯ–56

*ಹಗಲು – ದೇವಸ್ಥಾನದ ಕೊಳ*

(ಬಂಗಾರು ಮತ್ತು ರಾಮು ಬಹಳ ಆತಂಕದಿಂದ ಓಡಿ ಬರುತ್ತಿದ್ದಾರೆ)

ಬಂಗಾರು & ರಾಮು : ಅಯ್ನೋರೆ ಅಯ್ನೋರೆ, ಸುದ್ದಿ ಗೊತ್ತಾಯ್ತ?

ಅಯ್ನೋರು : ಏನು?

ಬಂಗಾರು : ಊರ್ನಾಗ್ ಕೃಷ್ಣ ಕಾಣ್ತಾ ಇಲ್ಲ.

ಅಯ್ನೋರು : ಹುಚ್ಚುಕೋಡಿ ಏನು ಮಾಡ್ಕಂತೊ ಏನೊ? ಹೋಗ್ರೆಪ್ಪ ಎಲ್ಲಕಡೆ ಹುಡುಕಾಡ್ರಿ ಹೋಗ್ರಿ.

## ದೃಶ್ಯ–56ಅ

*ಹಗಲು – ಹಳ್ಳಿಯ ಸುತ್ತಮುತ್ತಲ ಪ್ರದೇಶಗಳು*

(ನಂಜ ಮತ್ತು ಮಹಾದೇವ ಕೃಷ್ಣನಿಗಾಗಿ ಹುಡುಕುತ್ತಾರೆ)

ನಂಜ & ಮಹಾದೇವ : ಕೃಷ್ಣಾ.. ಕೃಷ್ಣಾ..

(ಕನಕ, ಕೃಷ್ಣನ ತೋಟದ ಮನೆಯಲ್ಲಿ ಅವನನ್ನು ಹುಡುಕಲು ಬರುತ್ತಾಳೆ)

(ಬಂಗಾರು ಮತ್ತು ರಾಮು ನದಿ ತೀರದಲ್ಲಿ ಕೃಷ್ಣನಿಗಾಗಿ ಹುಡುಕಾಡುತ್ತಾರೆ)

(ಕಾಳಿ ಊರಿನ ಬೀದಿಗಳಲ್ಲಿ ಕೃಷ್ಣನನ್ನು ಹುಡುಕುತ್ತಾಳೆ)



## ದೃಶ್ಯ–57

*ಹಗಲು – ಹಳ್ಳಿಯ ಅರಳೀಮರದ ಕಟ್ಟೆ*

(ಕೃಷ್ಣನನ್ನು ಹುಡುಕುತ್ತ ಬರುವ ಕನಕಳನ್ನು ತಡೆದು ಊರಿನವ;)

ಒಬ್ಬ : ಏನವ್ವ ಕನಕವ್ವ, ಈಗ್ ನಿಂಗ್ ಒಂದ್ ಹಂಡೆ ಹಾಲ್ಕುಡ್ದಷ್ಟ್ ಸಂತೋಷ ಆಯ್ತು. ಅಂತು ನಮ್ ಕೃಷ್ಣನ್ನ ಊರ್ ಬುಟ್ ಓಡ್ಸ್ಬುಟ್ಯಲ್ಲ.

ಮತ್ತೊಬ್ಬ : ಥೂ ನಿನ್ ಮುಖಕ್ ಇಷ್ಟ್ ಬೆಂಕಿ ಹಾಕ್ತು. ಊರ್ನಲ್ಲಿರೋ ಹೆಣ್ ಮಕ್ಳುಗೆಲ್ಲ ನಿನ್ಥರದ್ ಬುದ್ಧಿನೆ ಕಲ್ಸ್ಬುಟಯಿ. ಹೂ ಹುಷಾರು

ಇನ್ನೊಬ್ಬ : ಮೂರೂ ಬುಟ್ಟೋಳ್ ಮಾತು ನಮ್ಗ್ಯಾಕೆ ಸುಮ್ಕಿರ್ಲ.

ಮಗದೊಬ್ಬ : ಮಾಡ್ದೋರ್ ಪಾಪ ಆಡ್ದೋರ್ ಬಾಯಲ್ಲಿ ಅಂದಂಗೆ ನಮಗ್ಯಾಕೆ.

(ಆದರೆ ಅವರ ಮಾತುಗಳು ಕನಕನನ್ನು ಈಟಿಯಂತೆ ಇರಿಯುತ್ತದೆ)

## ದೃಶ್ಯ–58

*ಹಗಲು – ನದಿ ದಂಡೆ*

(ನದಿ ದಂಡೆಯಲ್ಲಿ ಕನಕ ಅಳುತ್ತಿದ್ದಾಳೆ ಅಲ್ಲಿಗೆ ಅಯ್ನೋರು ಬರುತ್ತಾರೆ)

ಅಯ್ನೋರು : ಅಳ್ಬ್ಯಾಡ ಕನಕ ಅಳಬ್ಯಾಡವ್ವ. ಜೀವನ್ದಾಗ ಇದೆಲ್ಲ ಇದ್ದದ್ದು. ನಮಗ ಬೆಳಕ್ ಬೇಕು ಅಂದಾಗ ಕತ್ತಲು ಬಂದು ಕುತ್ತಿಗೆ ಹಿಸುಕ್ತೈತಿ. ಅದ್ರು ಬೆಳಕಿನ ಬೆನ್ ಹತ್ತುದಾ ಜೀವ್ನ. ಅದಕ್ಕಾಗಿ ಅಳ್ಬ್ಯಾಡವ್ವ. ಸಮಾಧಾನ ಮಾಡಿಕೋ

ಕನಕ : ಅದೇನೋ ಸರಿ ಅಯ್ನೋರೆ. ಆದ್ರೆ ಜನ ಆಡ್ಕೊಳಾದು ನನ್ಕೈಲಿ ತಡ್ಕಳಕಾಗಲ್ಲ.



ಅಯ್ನೋರು : ತಂಗಿ, ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜದೊಡೆಯಂತವ್ವ ಅಂತ ಅಕ್ಕ ಮಹಾದೇವಿ ಹೇಳಿ ಎಷ್ಟು ದಿವ್ಸಾ ಆಯ್ತು. ಅದಿಕ್ಕೆ ಅವ್ನೆಲ್ಲ ನಾವ್ ತಡ್ಕೋ ಬೇಕವ್ವ. ಅಲ್ನೋಡು ಆ ಗಿಡ ಗೊತ್ತಲ್ಲ ನಿನಗೆ? (ದತ್ತೂರಿ ಗಿಡ ತೋರಿಸಿ)

ಕನಕ : ಅದು ದತ್ತೂರಿ ಗಿಡ.

ಅಯ್ನೋರು : ಹೌದು! ಆ ದತ್ತೂರಿ ಗಿಡದ ಬೀಜ, ಬೇರು ಎರಡೂ ವಿಷಾನೆ ಹಂಗೆ ಆಡಿಕೊಳ್ಳವ್ರ ಮನಸ್ಸು ಕೂಡ. ನಾವೇನ್ಮಾಡ್ಬೇಕು ಅದನ್ನ ಬೇರ್ ಸಮೇತ ಕಿತ್ತೊಗೆದು ಆ ಜಾಗದಾಗ ಹೂವಿನ ಗಿಡ ಬೆಳ್ಸಬೇಕವ್ವ. ಹೂವಿನ್ಗಿಡ. ಬಾ.
(ಅವಳನ್ನು ಎಬ್ಬಿಸತೊಡಗುತ್ತಾರೆ. ಆದರೆ ಕನಕ ದತ್ತೂರಿ ಗಿಡದ ಕಡೆಯೇ ನೋಡತೊಡಗುತ್ತಾಳೆ.)



## ದೃಶ್ಯ–59

*ಹಗಲು – ಅಂದಾನಿ ಮನೆಯ ಒಳಗೆ*

(ಕನಕ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುತ್ತಾಳೆ. ತಾನು ಕೃಷ್ಣನಿಗೆ ಅಂದ ಮಾತುಗಳನ್ನು, ಅವನ ಜೊತೆ ಇದ್ದ ನೆನಪುಗಳನ್ನು ನೆನೆಸಿಕೊಳ್ಳುತ್ತ ದತ್ತೂರಿ ಗಿಡದ ಬೀಜವನ್ನು ಅರೆಯುತ್ತಾಳೆ. ಅರೆದ ನಂತರ ಅದನ್ನು ರೊಟ್ಟಿಯೊಂದಿಗೆ ಬೆರೆಸಿ ತಿನ್ನುವಷ್ಟರಲ್ಲಿ..)



ಕನಕ : (ಸ್ವಗತ)
.. ಕೃಷ್ಣ ಎಲ್ಲಿಪ್ನೆ ಅಂತ ಅಯ್ನೋರಿಗ್ ಗೊತ್ತಿಲ್ದೆ ಇರ್ತೈತ. ಅವನ್ಹರಿಗ್ ಯೋಳಿ ಯೋಳಿರ್ತಾನೆ. ಅವ್ನೆಲ್ಲೊ ಒಂದ್ಕಡೆ ಸಂದಾಗವ್ನೆ ಅಂತ ತಿಳ್ದ್ಬುಟ್ರೆ ಸಾಕು ನೆಮ್ದಿಯಿಂದ ಜೀವ ಬುಡ್ಬಹುದು. ಅಯ್ನೋರ್ ಒಂದ್ ಮಾತ್ ಕೇಳ್ಕಂಡ್ ಬಂದ್ಬುಡದೇ ಒಳ್ಳೇದು.
(ತಟ್ಟೆಯನ್ನು ಅಲ್ಲೇ ಬಿಟ್ಟು ಅಯ್ನೋರನ್ನು ನೋಡಲು ಹೊರಡುತ್ತಾಳೆ)

## ದೃಶ್ಯ–60

*ಹಗಲು – ದೇವಸ್ಥಾನ*

(ಕನಕ, ದೇವಸ್ಥಾನಕ್ಕೆ ಬಂದು ಅಯ್ನೋರ ಬಳಿ ಕೃಷ್ಣನ ಬಗ್ಗೆ ವಿಚಾರಿಸುತ್ತಾಳೆ)

ಕನಕ : ಅಯ್ನೋರೆ, ನಂಗನ್ಸುತ್ತೆ ಕೃಷ್ಣನ್ ವಿಷ್ಯ ಯಾರಿಗ್ ಗೊತ್ತಿಲ್ದೆ ಇದ್ರು ನಿಮಗ್ ಗೊತ್ತೇ ಇರ್ತೈತೆ ಅಂತ. ಒಂದ್ವೇಳೆ ನಿಮಗ್ ಗೊತ್ತಿದ್ರೆ ಯೋಳಿ ಅಯ್ನೋರೆ. ಒಂದೇ ಒಂದ್ಸಲ ನನ್ ಕೃಷ್ಣನ್ ನೋಡಿ, ಮಾತಾಡಿ, ನನ್ ದಾರಿ ನಾನ್ ಹಿಡಿತಿನಿ.

ಅಯ್ನೋರು : ನಿಜವಾಗಿ ನನಿಗ್ ಗೊತ್ತಿಲ್ಲವ್ವ, ಅವ ಇಲ್ಲಿಗೂ ಬಂದಿಲ್ಲ ಅದಾ ಆಶ್ಚರ್ಯ..

(ಇಬ್ಬರೂ ಚಿಂತಿತರಾಗುತ್ತಾರೆ)



## ದೃಶ್ಯ–61

*ಹಗಲು – ಅಂದಾನಿ ಮನೆಯ ಒಳಗೆ*

(ಮನೆಯ ಒಳಗೆ ಬಂದ ಅಂದಾನಿ..)

ಅಂದಾನಿ : ಅವ್ವಾ

ತಾಯಿ : ಹೇಯ್ ನನ್ಯಾಕ್ ಕೂಗಿಯೇ?

ಅಂದಾನಿ : ಇನ್ಯಾರ್ ಕೂಗ್ಲಿ? ಅವ್ವ್ ಕೂಗಕಾಯ್ತದ?

ತಾಯಿ : ಅವ್ಳಿದ್ರಲ್ವ ನೀನ್ ಕೂಗಾಕೆ.

ಅಂದಾನಿ : ಎತ್ತಾಗಾಳಾಗ್ ಹೋದ್ಲು ಆ ಹಾದ್ರಗಿತ್ತಿ.

ತಾಯಿ : ಎಲ್ಹೋದ್ಲೋ, ಏನ್ಕತ್ಯೋ ಯಾರಿಗ್ ಗೊತ್ತು. ನನ್ಗೇನಾರ ಹೇಳಿ ಕೇಳಿ ಹೊಯ್ತಾಳ? ಕ್ವಾಣೆಲಿ ಏನೋ ಮಾಡ್ತಾಯಿದ್ದಂಗಿತ್ತು.

ಅಂದಾನಿ : ಹೆಂಗಾರ ಹಾಳಾಗ್ಹೋಗ್ಲಿ. ನಂಗೆ ಹೊಟ್ಟೆ ಹಸಿತ್ಯೆತೆ ಏನಾರ ಮಾಡವ್ವ ನೋಡ್ತಿನಿ.

(ಅಡುಗೆ ಕೋಣೆಯೊಳಗೆ ಬಂದಾಗ ಕನಕ ವಿಷ ಬೆರಸಿಟ್ಟಿದ್ದ ರೊಟ್ಟಿಯನ್ನ ನೋಡುತ್ತಾನೆ)

.. ವ್ಹೋ ರೊಟ್ಟಿ ಮಾಡವ್ಳೆ. ಮದ್ವೆ ಆಗಿದ್ದುಕ್ಕು ಸಾರ್ಥಕ ಆಯ್ತು. ಆ ಬಡ್ಡೈದ ಊರ್ ಬುಟ್ ಹೋದ್ಮ್ಯಾಕೆ ಇವ್ಳ್ಗಾಸಿ ಬುದ್ಧಿ ಬಂದ್ಹಂಗ್ ಕಾಣ್ತದೆ.

ತಾಯಿ : ಇದೇನ್ಲಾ ಒಬ್ನೆ ತಿಂತಿದ್ಯೆ? ನನ್ಗೇನ್ ಹೊಟ್ಟೆಯಿಲ್ಲ ಅನ್ಕಂಡ್ಯಾ?

ಅಂದಾನಿ : ಇಲ್ಕಣವ್ವೋ, ಒಂದೆ ಒಂದ್ ರೊಟ್ಟಿ ಮಾಡವ್ಳೆ. ಇದೇ ಬುದ್ಧಿ ಸಂಸಾರದ್ ಇಷ್ಟದಾಗ್ ಇರ್ಬಾರ್ದ. ತಿನ್ನಕೊಂದೆ ರೊಟ್ಟಿ, ಬಾಳಕೊಬ್ನೆ ಗಂಡ ಅಂತಿದಿದ್ರೆ ಇವ್ಳ್ ಗಂಟೇನ್ ಹೊಯ್ತಿತ್ತು.

(ಎಂದು ರೊಟ್ಟಿ ತಿನ್ನತೊಡಗುತ್ತಾನೆ)

## ದೃಶ್ಯ–62

*ಹಗಲು – ದೇವಸ್ಥಾನ*

ಕನಕ : ನನ್ ಕೊನೆ ಆಸೆನು ಕಣ್ ಮುಚ್ಚೋಯ್ತು ಅಯ್ನೋರೆ. ನಾನ್ ವೋಯ್ತಿನಿ ಆಶಿರ್ವಾದ ಮಾಡಿ.
(ಆಶಿರ್ವಾದ ಮಾಡಿದ ನಂತರ ಅಯ್ನೋರು)

ಅಯ್ನೋರು : ಹೋಗಿ ಬಾರವ್ವ, ದೇವ್ರು ನಿನಗ್ ಒಳ್ಳೇದ್ ಮಾಡ್ಲಿ.
(ಭಾರವಾದ ಮನಸ್ಸಿನಿಂದ ಕನಕ ಅಲ್ಲಿಂದ ಹೊರಡುತ್ತಾಳೆ.)



## ದೃಶ್ಯ–63

*ಹಗಲು – ಅಂದಾನಿ ಮನೆಯ ಒಳಗೆ*

(ರೊಟ್ಟಿ ತಿಂದು ಕೈತೊಳೆಯಲು ಬರುವ ಅಂದಾನಿಗೆ ವಿಷದ ಪರಿಣಾಮ ಶುರುವಾಗುತ್ತದೆ. ವಿಪರೀತವಾಗಿ ಒದ್ದಾಡುತ್ತ ಅಂದಾನಿ ಪ್ರಾಣ ಬಿಡುತ್ತಾನೆ.)

ತಾಯಿ : ಅಯ್ಯೋ ಅಂದಾನಿ, ಮಾತಾಡ್ಲ ಮಗ, ಏನಾಯ್ತ್ಲು ನಿಂಗೆ.
(ತಾಯಿ ಸಹಾಯಕ್ಕಾಗಿ ಕಿರುಚಾಡುತ್ತಾಳೆ)

## ದೃಶ್ಯ–64

*ಹಗಲು – ಊರಿನ ಬೀದಿ*

(ದೇವಸ್ಥಾನದಿಂದ ವಾಪಾಸಾಗುತ್ತಿರುವ ಕನಕಳಿಗೆ ಅಂದಾನಿಯ ಮನೆಯ ಮುಂದೆ ರೋಧಿಸುತ್ತಿರುವ ಸದ್ದು ಕೇಳಿ ಗಾಬರಿಗೊಂಡು ಒಳಬಂದು ನೋಡಿದಾಗ ಅಂದಾನಿ ಸತ್ತು ಬಿದ್ದಿರುವುದು ಕಾಣಿಸುತ್ತದೆ)

ತಾಯಿ : ಸಾಯಿಸ್ಬುಟ್ಳಲ್ಲಪ್ಪಾ ಸಾಯಿಸ್ಬುಟ್ಳು. ಈ ತಾಟಗಿತ್ತಿ ತನ್ನ್ ಗಂಡಂಗೆ ಇಷ ಆಕ್ ಸಾಯಿಸ್ಬುಟ್ಳಲ್ರಪ್ಪ, ರೊಟ್ಟಿನಾಗ್ ಇಷ ಬೆರ್ಸಿ, ತನ್ ಗಂಡಂಗೊಂದ್ ದಾರಿ ತೋರ್ಸಿ ತನ್ ದಾರಿ ಸರಿಮಾಡ್ಕಂಡ್ಬುಟ್ಳಲ್ಲಪ್ಪೋ. ಅಯ್ಯೋ ಇದ್ ಒಬ್ಬ ಮಗನ್ನೂ ನುಂಗ್ಹಾಕ್ಬಿಟ್ಳಲ್ಲಪ್ಪ.

(ಈ ಅನಿರೀಕ್ಷಿತ ಬೆಳವಣಿಗೆಯಿಂದ ಅವಾಕ್ಕಾದ ಕನಕಳ ಮುಖದ ಮೇಲೆ ಡಂಗೂರ ಹೊಡೆಯುತ್ತಿರುವ ಸದ್ದು)

.. ಕೇಳ್ರಪ್ಪೋ ಕೇಳಿ, ಅಂದಾನಿ ಯೆಡ್ತಿ ತನ್ ಗಂಡಂಗೆ ಇಷ ಕೊಟ್ಟು ಸಾಯಿಸ್ಬುಟವ್ಳೆ. ಅದಿಕ್ಕೆ ಕುಲ ಸೇರ್ತಾಐತೆ ಎಲ್ರು ಪಂಚಾಯ್ತಿ ಕಟ್ಟೆ ಹತ್ರ ಬನ್ರಪ್ಪೋ ಬನ್ನಿ.
(ಕನಕಳ ಉದ್ವಿಗ್ನ ಮುಖದ ಮೇಲೆ ಕ್ಯಾಮೆರ ನಿಲ್ಲುತ್ತದೆ)

**ನಿರ್ದೇಶಕರ ಟಿಪ್ಪಣಿ:**
ಕೃಷ್ಣನ ನಿರ್ಗಮನ ಹಳ್ಳಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪರಿಣಾಮವನ್ನು ಬೀರುತ್ತದೆ. ಊರಿನವರ ನಿಷ್ಠುರದ ಮಾತುಗಳಿಂದಾಗಿ ಕನಕ ನಿಧಾನವಾಗಿ ಸಾಯುವ ನಿರ್ಧಾರಕ್ಕೆ ಬದಲಾಗುತ್ತಾಳೆ. ಒಂದು ಉಪಮೆಯಾಗಿ ಕಾಣುವ ದತ್ತೂರಿ ಬೀಜವನ್ನು ತಾನು ತಿಂದು ಸಾಯುವ ಯೋಚನೆಯಿಂದ ರೊಟ್ಟಿಗೆ ಅದನ್ನು ಬಳಸುತ್ತಾಳೆ. ಆದರೆ ಸಾಯುವ ಕೊನೆ ಘಳಿಗೆಯಲ್ಲಿ ಕೃಷ್ಣನ ಬಗ್ಗೆ ತಿಳಿದುಕೊಳ್ಳೋಣವೆಂದು ಕನಕ ಅಯ್ನೋರ ಬಳಿ ಬಂದಾಗ ಅಂದಾನಿ ಅದನ್ನು ತಿಂದು ಸಾಯುತ್ತಾನೆ. ವಿಧಿಯ ವಿಪರ್ಯಾಸಗಳು ಈ ರೀತಿಯ ತಿರುವುಗಳು ನೀಡುವುದರ ಮೂಲಕ ಬದುಕಿನ ಆಳ ಮತ್ತು ಹರವುಗಳನ್ನು ಅಳೆಯತೊಡಗುತ್ತವೆ. ತನ್ನದಲ್ಲದ ತಪ್ಪಿಗೆ ಹೊಣೆಯಾಗುವ ಕೃಷ್ಣನ ಬಾಳಾಗಲಿ, ಕನಕಾಳ ಬಾಳಾಗಲಿ ಎತ್ತ ಕೊಂಡೊಯ್ಯುತ್ತಿದೆ ಎಂಬ ಅರಿವಿಲ್ಲದೆ ಮುಂದೆ ಸಾಗುತ್ತಿರುತ್ತದೆ.



## ದೃಶ್ಯ–65

*ಹಗಲು – ಹಳ್ಳಿಯ ಪಂಚಾಯ್ತಿ ಕಟ್ಟೆ*

(ಪಂಚಾಯ್ತಿ ಕಟ್ಟೆಯ ಬಳಿ ಬರುತ್ತಿರುವ ಬಂದಿರುವ ಎಲ್ಲರೂ ಕನಕಾಳನ್ನು ದೂಷಿಸುತ್ತ, ಬಯ್ಯುತ್ತ ಬರುತ್ತಿದ್ದಾರೆ)

ಒಬ್ಬ : ಇದ್ಯಾಕೊ ಬ್ಡೋ ಅತಿಯಾಗೋಯ್ತು. ಗಂಡಂಗ್ ವಿಷ ಹಾಕ್ ಸಾಯ್ಸೋದು ಅಂದ್ರೇನ್ ಸಾಮಾನ್ಯವ? ಇದನ್ನಿಂಗೆ ಬುಟ್ರೆ ನಾವ್ಯಾರು ಉಳಿಯಂಗಿಲ್ಲ.

ಮತ್ತೊಬ್ಬ : ಹೌದೌದು. ಮೊದ್ಲು ರೊಟ್ಟಿನ ಹೆಂಡ್ರುಗ್ ತಿನ್ಸುಬುಟು ಆಮೇಲ್ ನಾವ್ ತಿನ್ಬೇಕಾಗುತ್ತೆ.
(ಎಲ್ಲರೂ ನಗುತ್ತಾರೆ. ಕಾಳಿ ಕನಕಳನ್ನು ಕರೆದು ತರುತ್ತಾಳೆ. ಎಲ್ಲರೂ ಕನಕಾಳನ್ನು ನೋಡುತ್ತಾರೆ)

ರಾಮಣ್ಣ : (ಮಾತನಾಡುತ್ತಿರುವ ಜನರೆಲ್ಲರಿಗೆ)
.. ಸದ್ದು. ಮಾತ್ ನಿಲ್ಸಿ. ಊರಿನ್ ಪಂಚ್ರು ನಾವೆಲ್ಲ ಸೇರಿದಿವಿ. ಈಗ ಈರೇಗೌಡ್ರು ಮಾತಾಡ್ತಾರೆ.

ಈರೇಗೌಡ : ಇವತ್ತು ಬ್ಹಾಳ ಮುಖ್ಯವಾದ ಪಂಚಾಯ್ತಿ ಸೇರೈತೆ. ಕನಕ ಈ ಊರಿಗ್ ಬಂದಾಗ್ನಿಂದ ಒಂದಲ್ಲ ಒಂದ್ ಅನಾಹುತ ನಡಿತನೇ ಐತೆ. ಇವತ್ತು ಯಾವತ್ತು ನಡಿದೇರೋಂತ ಕಾರ್ಯ ನಡ್ದೋಗೈತೆ. ನ್ಯಾಯದ ಕುಂಟೇಲಿ ನ್ಯಾಯಕ್ಕೆ ಮಾತ್ರ ಬೆಲೆ ಅನ್ನೋ ಇಷ್ಯಾನ ಸುತ್ತಾಮುತ್ತ ಊರ್ಗೆಲ್ಲ ಸಾರಿ ಹೇಳೊ ಸಂಧರ್ಭ ಬಂದೈತೆ. ಕನಕ, ತನ್ನ್ ಗಂಡನಿಗೆ ರೊಟ್ಟಿನಾಗ್ ಇಷಾ ಬೆರ್ಸಿ ಸಾಯ್ಸವ್ಳೆ. ಅವ್ಳಿಗ್ಏನ್ ಶಿಕ್ಷೆ ಕೊಡ್ಬೇಕೂಂತ ನಾವೆಲ್ಲ ತೀರ್ಮಾನ ಮಾಡ್ಬೇಕಾಗೈತೆ. ಈಗ ಏನ್ಮಾಡ್ಬೇಕು ಅಂತ ನೀವೆ ಹೇಳಿ.

ಒಬ್ಬಾಕೆ : ಹೆಣ್ ಕುಲಕ್ಕೆ ಅವ್ಮಾನ ಮಾಡಿರೋಳ್ನ ಏನ್ ಮಾಡ್ಬೇಕು ಅಂತ ಕೇಳ್ತಿದಿರಲ್ಲ ನೀವು? ನೀರು ನೆಳ್ಳು ಇಲ್ಲಿದ್ ಕಡೆ ಒದ್ದು ಬಿಸಾಕಿ ಇವ್ಳ್ನ. ಒದ್ದಾಡಿ, ಉಪ್ವಾಸ ಬಿದ್ದು ಸಾಯ್ಲಿ ಬೋಸುಡಿ.

ಮತ್ತೊಬ್ಬಾಕೆ : ಗಂಡಂಗೆ ಇಷಕೊಟ್ಟು ಹೆಣ್ತೀರ್ನ ನಂಬ್ದಂಗ್ ಮಾಡವ್ಳೆ ಈ ಬಿನ್ನಾಣ್ಗಿತ್ತಿ.

ಒಬ್ಬ : ಹೇಯ್ ಏನ್ ಮಾತಾಡ್ತಿದಿರ ಹೆಂಗುಸ್ರೆಲ್ಲ ಅವ್ಳ್ ಜುಟ್ಟಿಡ್ಕಂಡ್ ದರ ದರಾಂತ ಎಳ್ಕೊಂಡು ಊರಿಂದ ಹೊರ್ಗಡೆ ಹಾಕಿ. ಇಂಥ ಹೆಂಗುಸ್ರು ನಮ್ಮೂರ್ನಾಗಿದ್ರೆ

ಬೀದ್‌ಬೀದಿಯೆಲ್ಲ ಸೂಳ್ಗೇರಿಯಾಗ್ಹೋಗ್ಬಿಡ್ತದೆ. ಅಷ್ಟೆಯಾ.

ಊರಿನವನೊಬ್ಬ : ಸುಮ್ನೆ ದರಾ ದರಾಂತ ಎಳ್ದು ಬಿಸಾಕ್ಬುಟ್ರೆ ಸಾಲ್ದು. ಈ ಸೂಳೆ ಮುಂಡೇನ ಸೀರೆ ಬಿಚ್ಚಿ ಊರೆಲ್ಲ ಮೆರ್ವಣ್ಗೆ ಮಾಡ್ಬೇಕು.

ಕನಕ : (ಕೋಪಗೊಂಡು) ಮುಚ್ಚಯ್ಯ ಬಾಯಿ, ನನ್ ಸೀರೆ ಬಿಚ್ಚಿ ಊರೆಲ್ಲ ಮೆರ್ವಣ್ಗೆ ಮಾಡ್ತೀಯ? ನನ್ನ ಸೂಳೆ ಅಂತ ಕರೀತಿಯ? ನಿನ್ ತಂಗಿ ಸೀರೆ ಬಿಚ್ಚಿ ಮೆರ್ವಣ್ಗೆ ಮಾಡ್ಸುದ್ರೆ ಏನನ್ನುಸ್ತೈತೆ ನಿಂಗೆ? ನಿನ್ ತಂಗಿನ ಸೂಳೆ ಮುಂಡೆ ಅಂದ್ರೆ ಸಂತೋಷ ಆಗ್ತೈತ? ಇಂಥ ಮಾತಾಡಕೆ ನಾಚ್ಕೆ ಆಗಲ್ಲ ನಿಂಗೆ? ನನ್ನ ಸೂಳೆ ಅಂದಿರೂ ನೀನೊಬ್ಬ ಗಂಡು ಸೂಳೆ.



(ರಾಮಣ್ಣ ಮಧ್ಯ ಪ್ರವೇಶಿಸಿ)

ರಾಮಣ್ಣ : ನೋಡು (ಈರೇಗೌಡ ರಾಮಣ್ಣನನ್ನು ತಡೆದು)

ಈರೇಗೌಡ : ರಾಮಣ್ಣ, ಅವ್ಳೇನ್ಹೇಳ್ತಾಳೊ ಹೇಳ್ಲಿ ಬುಡು.

ಕನಕ : ನಿನಗ್ ನನ್ ಮುಂದಲೆ ಹಿಡ್ದು ದರಾ ದರಾಂತ ಎಳಿಬೇಕು ಅಲ್ವೇನಪ್ಪ? ಯಾಕೆ ನಿನ್ಗ್ಯಾರು ಅಕ್ಕಾ ತಂಗೀರಿಲ್ವಾ? ಅವರ್ ಕಷ್ಟಾ ಸುಖ ನಿನಗ್ ಗೊತ್ತಿಲ್ವ? ಒಂದ್ ಮಾತೇಳ್ತಿನಿ ತಿಳ್ಕ, ನನ್ನಿಂದಲ್ಲಯ್ಯ ಕಣಯ್ಯ ಈ ಊರ್ ಸೂಳೆಗೇರಿಯಾಗದು ಅಕ್ಕಾತಂಗಿ ಆಗ್ಬೇಕಾದೋರ್ನೆಲ್ಲ ಸೂಳೆ ಥರ ನೋಡ್ತಿದಿರಲ್ಲ ನಿಮ್ಮಂಥ ಲಜ್ಗೆಟ್ಟವ್ರು, ನಿಮ್ಮಿಂದ ಸೂಳೆಗೇರಿಯಾಗದು. ಇಂಥಾ ಹೊಲಸ್ ಮಾತಾಡೊ ನೀನು, ಒಬ್ಬ ಪಂಚಾಯ್ತಿದಾರ.

.. ನಾನ್ ಹೆಣ್ಕುಲಕ್ಕೆ ಅವ್ಮಾನ ಮಾಡಿದಿನಿ. ಅಲ್ವೇನವ್ವ, ನನ್ನ ಬಲವಂತ್ವಾಗ್ ಹೊತ್ಕಂಡ್ ಬಂದು ಬ್ಯಾಡ ಅಂತ ಬೇಡ್ಕಂಡ್ರು ತಾಳಿ ಬಿಗುದ್ರಲ್ಲ ಅವಾಗೆಲ್ಹೋಗಿತ್ತು ನಿನ್ ಹೆಣ್ತನ? ಆವಾಗೆಲ್ಹೋಗಿತ್ತು ನಿಮ್ ಮಾನ ಮರ್ಯಾದಿ ಪಿಷ್ಟ. ಒಬ್ಬ ಹೆಣ್ಮಗ್ಳಿಗ್ ಅನ್ಯಾಯ ಆಗ್ತಿದ್ರು ಮಾತಾಡಕಾಗ್ದೆರೋರು ಈಗ ದೊಡ್ಡ ದೊಡ್ಡ ಮಾತಾಡ್ತಿದೀರಲ್ಲ. ನೀವೆಲ್ಲ ಹೆಂಗುಸ್ರ? ನೆಲಕ್ ಬಿದ್ದಾಗ ನಂದೂ ಒಂದ್ಕಲ್ಲು ಅನ್ನೋಥರ ನಡ್ಕೊತಿದೀರಲ್ಲ ನಿಮ್ಗೆ ಮನ್ಸಾದ್ರು ಹೆಂಗ್ಬಂತು ಹೇಳಿ.. ಇಲ್ಲ್ಯಾರಾದ್ರು ಹೆಂಗ್ಸಿದ್ರೆ ಹೇಳಿ.

.. ನೀವು ದೊಡ್ಡ ನ್ಯಾಯಸ್ತ್ರು, ನಿಮುಗ್ ನಾಚ್ಕೆ ಆಗಲ್ವೇನ್ರಯ್ಯ ಹಂಗ್ ಕರ್ಕೊಳೋಕೆ? ನಾನ್ ಮಾತಾಡೋಕ್ ಮುಂಚೇನೆ ನನ್ ಕೊಲೆಗಾತಿ ಮಾಡುದ್ರಲ್ಲ ಇದೇನ ನಿಮ್ ನ್ಯಾಯ? ಆ ಅಂದಾನಿನ ಸಾಯ್ಸಂಗಿದ್ರೆ ಯಾವತ್ತೋ ಸಾಯ್ಸ್‌ಬುಡ್ತಿದ್ದೆ ಕಣ್ರಯ್ಯ. ಆದ್ರೆ ನಾನ್ ಅಂಥೋಳಲ್ಲ. ಜೀವ್ಮಾನ ಪೂರ್ತಿ ನನಿಗ್ ನಾನೆ ಸುಟ್ಕಂಡ್ ಬದ್ಕುದ್ನೆ ಹೊರ್ತು, ಯಾರ್ಗು ಹಿಂಸೆ ಕೊಟ್ಟಿಲ್ಲ. ಅವನ್ಗೇನ್ ಬಂತೋ ಗಾಚಾರ, ನಾನ್ ತಿಂದ್ ಸಾಯಣ ಅಂತ ರೊಟ್ಟಿ ಮಾಡಿಟ್ಟಿದ್ರೆ ಅಯ್ನೋರ್ ತಾವ ಹೋಗ್ ಬರಾದ್ರೊಳ್ಗೆ ಅವ್ನೆ ತಿಂದ್ ಸತ್ತೋದ. ಇದಕ್ ನಾನೇನ್ ಮಾಡ್ಲಿ? ನನ್ ಜೀವ ಕೊಡ್ಲಾ? ಆಯ್ತು ನನ್ ಥರ ನಾನ್ ಬದ್ಕಕಾಗ್ದೆ ಇರೋವಾಗ ಈ ಜೀವ ಇಟ್ಕೊಂಡು ಏನ್ಮಾಡ್ಲಿ? ನನ್ ಜೀವ ತಿಂದು ನಿಮ್ ಪಂಚಾಯ್ತಿ ಪ್ರತಿಷ್ಠೆ ಹೆಚ್ಚುಸ್ಕಳ್ರಿ, ಅನ್ಯಾಯಾನ ನ್ಯಾಯ ಮಾಡ್ತ, ಕಣ್‌ಕಟ್ಟಾಟ ಆಡ್ತ ದೊಡ್ಡೋರನ್ನುಸ್ಕಳ್ರಿ.

.. (ವಿಕೃತವಾಗಿ) ಕೊಲೆ ಮಾಡಿದೀನಂತೆ ಕೊಲೆ, ನಾನು ನನ್ ಗಂಡನ್ ಕೊಲೆ ಮಾಡಿದೀನಂತೆ.
(ವಿಕೃತವಾಗಿ ನಗುತ್ತಾ)

.. ಕೇಳ್ರಿ ಎಲ್ರೂ ಕೇಳ್ರಿ ನಾನ್ ಕೊಲೆ ಮಾಡಿದೀನಿ.
(ವಿಕೃತವಾಗಿ ಆಡುತ್ತಿರುವ ಕನಕಾಳನ್ನು ನೋಡಿ ಎಲ್ಲರು ಗೊಂದಲಕ್ಕೀಡಾಗಿ ಅವಳನ್ನೆ ನೋಡುತ್ತಿರುತ್ತಾರೆ)

.. ನಾನ್ ಕೊಲೆ ಮಾಡಿದಿನಿ, ನನ್ ಗಂಡನ್ ಕೊಲೆ

ಮಾಡಿದಿನಿ. ಪಂಚಾಯ್ತಿಯಂತೆ ಪಂಚಾಯ್ತಿ. ಇವ್ರದೆಲ್ಲ ನ್ಯಾಯ, ನನ್ನೊಬ್ಬಳದು ಅನ್ಯಾಯ. ಕೊಲೆ ಮಾಡಿದೀನಂತೆ ನಾನು.



(ವಿಚಿತ್ರವಾಗಿ ಆಡುತ್ತಿರುವ ಕನಕಾಳ ಬಳಿ ಕಾಳಿ ಬಂದು)

ಕಾಳಿ : ಕನಕ.. ಸಮಾಧಾನ ಮಾಡ್ಕೊ. ಯಾಕವ್ವ ಹಿಂಗಾಡ್ತಿದಿ? ಕನಕ..

(ಎನ್ನುವಷ್ಟರಲ್ಲಿ ಕನಕ ಬಿಡಿಸಿಕೊಂಡು ಹುಚ್ಚಿಯಾಗಿ ಓಡಿಹೋಗುತ್ತಾಳೆ. ಇಡೀ ನ್ಯಾಯದ ಕಟ್ಟೆ ಗರ ಬಡಿದಂತೆ ಕೂರುತ್ತದೆ)

**ನಿರ್ದೇಶಕರ ಟಿಪ್ಪಣಿ:**

ಅಂದಾನಿಯ ಸಾವು ಕನಕಾಳ ಬದುಕಿನ ತೀವ್ರ ಘಟನೆಯಾಗುತ್ತದೆ. ಅತ್ತ ಕೃಷ್ಣ ಊರು ಬಿಟ್ಟಿರುವುದು ಮತ್ತು ಇತ್ತ ಅಂದಾನಿ ಮೃತಪಟ್ಟಿರುವುದು ಎಲ್ಲವೂ ತನ್ನಿಂದಲೇ ಎಂಬ ಅಪರಾಧಿ ಪ್ರಜ್ಞೆಯನ್ನು ಊರಿನ ಜನ ಈಕೆಯ ಮೇಲೆ ಆರೋಪ ಮಾಡುತ್ತಾರೆ. ಈ ಸಂಧರ್ಭದಲ್ಲಿ ಊರಿನ ಪಂಚಾಯಿತಿಯ ನ್ಯಾಯದ ದೇಗುಲದ ಮುಂದೆ ತನ್ನ ಅಹವಾಲನ್ನು ಮಂಡಿಸುತ್ತ, ತನ್ನೆಲ್ಲ ಗುಣಗಳನ್ನು ಆತ್ಮವಿಮರ್ಶೆಯಾಗಿ ಪರಿವರ್ತಿಸುತ್ತ ಹಾಗೆಯೇ ಆ ಒತ್ತಡದಿಂದ ಆಕೆ ಮಾನಸಿಕ ಅಸ್ವಸ್ಥೆಯಾಗಿಬಿಡುತ್ತಾಳೆ.



## ದೃಶ್ಯ–66

*ಹಗಲು – ದೇವಸ್ಥಾನದ ಆವರಣ*
*ಹಾಡು: ಓ ಊರ ದ್ಯಾವ್ರೇ*
*ಸಾಹಿತ್ಯ: ಎ. ಮನೋಹರ್*
*ಹಾಡಿದವರು: ಮಂಜುಳಾ ಗುರುರಾಜ್*

(ಹುಚ್ಚಿ ಕನಕಳನ್ನು ಅಟ್ಟಾಡಿಸುವ ಮಕ್ಕಳು. ಅವಳನ್ನು ರಕ್ಷಿಸುವ ಕಾಳಿ. ಹಿರಿಯರು. ದೇವರಿಗೆ ಒಯ್ಯುತ್ತಾ ಯಾವುದರ ಗಮನವಿಲ್ಲದೆ ಓಡಾಡುತ್ತಿರುತ್ತಾಳೆ)

ಓ ಊರ ದ್ಯಾವ್ರೇ.. ಓ ಜೀರ ದ್ಯಾವ್ರೇ..
ಇದು ನ್ಯಾಯಾನ, ಇದು ನೀತಿನಾ..
ನೀ ಯಕ್ಕುಟ್ಹೋಗ.. ನಿನ್ ಮನೆಕಾಯ್ಹೋಗ..
ಮುಗಿಸೋಕೆ ಕಳ್ಸವ್ನೆ ಜವರಾಯ ಭಂಟ್ರ
ನೋಡಿದ್ರು ಸುಮ್ಕಿದ್ದೀ ನಿಂಗವ್ರೇನ್ ನೆಂಟ್ರ..
ಓ ಊರ ದ್ಯಾವ್ರೇ.. ಓ ಕ್ರೂರ ದ್ಯಾವ್ರೇ..
ಇದು ನ್ಯಾಯಾನ, ಇದು ನೀತಿನಾ..
ನೀ ಯಕ್ಕುಟ್ಹೋಗ.. ನಿನ್ ಮನೆಕಾಯ್ಹಾಗ..
ನಗು ನಗುತಾ ನಿಂತಿದ್ಲು ಮುದ್ದಾದ ರತ್ನ



ಕುಡುಗೋಲ ಬೀಸಿದ್ರು ಕುಯ್ದ್ರಲ್ಲೋ ಕತ್ನ
ಓ ಊರ ದ್ಯಾವ್ರೇ.. ಓ ಜೀರ ದ್ಯಾವ್ರೇ..

ಮುತ್ತೀನ ನತ್ತೈತೆ.. ಕತ್ತೀನ ಸರವೈತೆ..
ಹಣೆಮ್ಯಾಲೆ ಕುಂತೈತೆ ಬಟ್ಟು ಬಾಸಿಂಗ
ದೊಡ್ಸೀರೆ ಉಟ್ಕಂಡು.. ಅರಿಶಿನ ಹಚ್ಕಂಡು

ಹಸೆಮಣೆ ಏರ್ತೀನಿ.. ಬಾರೋ ಮದಲಿಂಗ
ಏಯ್.. ನಿಂಗ್ ಕೊಬ್ಬೆಬ್ಬಾಯ್ತು.. ತಲ ಕೆಟ್ ಕೆರವಾಯ್ತು..
ನಿಂಗ್ ಗರ ಬಡಿಯ.. ನಿಂಗ್ ಹುಲಿ ಹಿಡಿದು..
ನಿಂಗ್ ಸೆದ ಬಡಿಯ.. ನಿಂಗ್ ತಲೆ ಹೊಡಿಯ..
ಓ ಊರ ದ್ಯಾವ್ರೇ.. ಓ ಘೋರ ದ್ಯಾವ್ರೇ..
ಇದು ನ್ಯಾಯಾನ.. ಇದು ನೀತಿನಾ..
ನೀ ಯಕ್ಕುಟ್ಹೋಗ.. ನಿನ್ ಮನೆಕಾಯ್ಹಾಗ..



ನೆತ್ತರ ಹರಿಸೋಕೆ ದಂಡು ದಂಡೆ ಬಂದ್ರು
ಪ್ರೀತೀಲಿ ಅರಳಿದ್ದ ಗುಂಡ್ಗೇನೆ ಕಿತ್ರು
ಓ ಊರ ದ್ಯಾವ್ರೇ.. ಓ ಕುಲ್ಡು ದ್ಯಾವ್ರೇ..

ಮೈಲಿಗೆ ಇಲ್ಲದ ಮಲ್ಲಿಗೆ ಹೂವಿಗೆ
ಪೂಜೆಯ ವೇಳೆಗೆ ಬಂತು ಬರಸಿಡಿಲು
ಸತ್ತರೂ ಸರಿಯೇ ಸುಟ್ಟರೂ ಸರಿಯೇ
ನನ್ನೋನ ಸೇವೆಗೆ ಮಾತ್ರ ಈ ಒಡಲು
ಏ.. ನನ್ ಮನೆ ಮುರ್ದೋನೆ..
ನನ್ ಎದೆ ಒಡ್ದೋನೆ..
ಮುಳ್ಳಾದೋನೆ.. ಹಾಳಾದೋನೆ..
ನೀ ನೆಗ್ದು ಬೀಳ.. ನಿಂಗ್ ಹುಳ ಬೀಳ
ಓ ಊರ ದ್ಯಾವ್ರೇ.. ಓ ಕೆಟ್ಟ ದ್ಯಾವ್ರೇ..
ಇದು ನ್ಯಾಯಾನ, ಇದು ನೀತಿನಾ..
ನೀ ಯಕ್ಕುಟ್ಹೋಗ.. ನಿನ್ ಮನೆಕಾಯ್ಹಾಗ..
ನಗು ನಗುತಾ ನಿಂತಿದ್ಲು ಮುದ್ದಾದ ಕತ್ನ



ಕುಡುಗೋಲ ಬೀಸಿದ್ರು ಕುಯ್ದ್ರಲ್ಲೋ ರತ್ನ
ಓ ಊರ ದ್ಯಾವ್ರೇ.. ಓ ಜೀರ ದ್ಯಾವ್ರೇ..

**ನಿರ್ದೇಶಕರ ಟಿಪ್ಪಣಿ:**

ಕನಕಳ ಮಾನಸಿಕ ಒತ್ತಡದ ಸ್ಥಿತಿಯ ಮಜಲುಗಳನ್ನು ಹಲವಾರು ದೃಶ್ಯಗಳ ಮೂಲಕ ಕಟ್ಟಿಕೊಡಲು ಸಾಧ್ಯವಿಲ್ಲ ಎಂಬ ಅರಿವಿನಿಂದಾಗಿ ಅಲ್ಲಿ ಒಂದು ಹಾಡನ್ನು ಬಳಸಲಾಯಿತು. ಅದು ಸಿದ್ಧಸೂತ್ರಗಳಿಗೆ ಬದ್ಧವಾದ ಗಾಯನವಾಗಲಿ ಅಥವಾ ಹಾಡಾಗಲಿ ಅಲ್ಲ. ನಮ್ಮಲ್ಲಿ ಸಾಕಷ್ಟು ಹಳ್ಳಿಗರ ಮನಸ್ಥಿತಿ, ಏನಾದರೂ ಹೆಚ್ಚು ಕಡಿಮೆ ಆದಾಗ ತಕ್ಷಣ ದೇವರನ್ನು ಕೇಳಿಕೊಳ್ಳುವುದು, ಹೇಳಿಕೊಳ್ಳುವುದು ಮತ್ತು ಜಗಳವಾಡುವುದೂ ಇದೆ. ದೇವರು ಅವರಿಗೆ ಒಬ್ಬ ವ್ಯಕ್ತಿಯಾಗಿ ಕಾಣಸಿಗುತ್ತಾನೆ. ಕಷ್ಟಸುಖಗಳನ್ನು ಕೇಳಿಕೊಳ್ಳುವಂತಹ ವ್ಯಕ್ತಿ ಆ ದೇವರಾಗುತ್ತಾನೆ. ಆ ದೇವರ ಜೊತೆ ತನ್ನ ಸಂಭಾಷಣೆಯನ್ನು ಪ್ರಾರಂಭಿಸುತ್ತಾರೆ. ಹಳ್ಳಿಗಳಲ್ಲಿರುವ ಈ ನಡವಳಿಕೆಯನ್ನು ಮತ್ತು ಆ ನಡಾವಳಿಗಳಿಂದಾಗಿ ಉಂಟಾಗುವಂತಹ ನುಡಿಗಟ್ಟುಗಳನ್ನು ಇಲ್ಲಿ ಹಾಡಾಗಿಸಲಾಗಿದೆ. ಬೈಗುಳಗಳ ಸರಮಾಲೆಯೇ ಇದ್ದರೂ ಕೂಡ ಒಟ್ಟಾರೆ ಅಭಿವ್ಯಕ್ತಿ ಗ್ರಾಮ್ಯ ಅಭಿವ್ಯಕ್ತಿಯ ಸೂಚ್ಯಗಳನ್ನು ಸೂಚಿಸುತ್ತ ಅದರ ಮುಖಾಂತರ ಗ್ರಾಮ್ಯಭಾಷೆಯ ಸೊಗಡನ್ನು ಕೂಡ ಹಿಡಿದಿಡಲಾಗಿದೆ. ಮನೋಹರ್‌ರವರು ಈ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಹಾಗೆಯೇ ಈ ಚಿತ್ರದ ಅಂತಿಮ ಹಂತದಲ್ಲೂ ಪ್ರಥಮ ಬಾರಿಗೆ ನಾಯಕನಟನಿಲ್ಲದೆ ನಾಯಕಿಯ ಮೇಲೆ ಕೇಂದ್ರೀಕರಿಸಿ ಚಿತ್ರಿಸಲಾಗಿರುವ ಹಾಡಾಗಿದೆ. ಸುಮಾರು ಹತ್ತು ನಿಮಿಷಗಳ ಕಾಲ ನಾಯಕ ಚಿತ್ರದ ಕೊನೆಯ ಭಾಗದಲ್ಲಿ ಕಾಣಸಿಗುವುದೇ ಇಲ್ಲ. ಇದು ಸಿದ್ಧಸೂತ್ರದ ಸಿನಿಮಾಗಳಿಗಿಂತ ವಿಭಿನ್ನವಾಗಿ ಕಾಣುತ್ತದೆ

## ದೃಶ್ಯ-67

*ಹಗಲು - ಊರಿನ ಬೀದಿ*

(ಊರಿನವರೆಲ್ಲ ಗಾಡಿಕಟ್ಟಿಕೊಂಡು ಜಾತ್ರೆಗೆ ಹೊರಡಲು ಸಿದ್ಧರಾಗಿದ್ದಾರೆ. ಕನಕಳನ್ನು ನಂಜ ಮತ್ತು ಕಾಳಿ ಇಬ್ಬರು ಕರೆತರುತ್ತಿದ್ದಾರೆ)

ಕನಕ : ಬುಡಿ ನನ್ನ.

ನಂಜ : ಕನ್ಕ, ಕನ್ಕ, ಜಾತ್ರೆಗೋದ್ರೆ ಎಲ್ಲ ಸರಿಹೋಯ್ತದೆ ಬಾಮ್ಮ.
(ಮೂವರು ಹಿಡಿದುಕೊಂಡಿರುವಂತೆಯೇ ಕನಕ ಬಿಡಿಸಿಕೊಂಡು ಅಯ್ನೋರ ಬಳಿ ಓಡಿ ಹೋಗಿನಿಂತು)

ಕನಕ : ಮುಟ್ಬೇಡಿ ನನ್ನ.

ಯಜಮಾನ : ಜಾತ್ರೆನಾಗೆ ದೇವ್ರು ತೀರ್ಥ ಕನ್ಕನ್ ಮೈಮ್ಯಾಗ್ ಬಿದ್ರೆ ಹುಚ್ಚ್ ಬಿಟ್ಹೋದ್ರು ಬಿಟ್ಹೋಗ್ಬೋದು.

ಒಬ್ಬಾಕೆ : ಹಾಳಾದ್ ಹೆಣ್ ಜೀವಕ್ಕೆ ಕಷ್ಟ ತಪ್ಪಿದ್ದಲ್ಲ ಕಣವ್ವ. ರಥದ್ ಮುಂದೆ ಉರುಳ್ಸೇವೆ ಮಾಡ್ಸವ. ಆಗ್ಲಾದ್ರು ದೇವ್ರು ಕಣ್ತೆರಿಬೋದು.

ಅಯ್ನೋರು : ಬಾ, ಹೆದ್ರುಬೇಡ ಬಾ, ನಾನು ಇರ್ತೀನಿ ಬಾ.
(ಅವಳನ್ನು ಕರೆದುಕೊಂಡು ಬಂಗಾರು ಎತ್ತಿನ ಗಾಡಿಯನ್ನು ಹತ್ತುತ್ತಾರೆ)

ಬಂಗಾರು : ಊರ್ನೋರೆಲ್ಲ ಜಾತ್ರೆಗೊಂಟಿದೀವಿ. ನಮ್ ಕೃಷ್ಣನೆ ಇಲ್ದಮೇಲೆ ನಮ್ಗೇನ್ ಕೆಲ್ಸ ಸ್ವಾಮಿ.

ಅಯ್ನೋರು ಹಂಗಂದ್ರ ಹೆಂಗಾದೀತೂ ತಮ್ಮ. ನಡಿಯುದೆಲ್ಲ ನಡಿತಾ ಇರ್ಬೇಕಲ್ಲ.
(ಗಾಡಿಗಳು ಊರಿನಿಂದ ಹೊರಡುತ್ತವೆ. ಕನಕ ತಾನೆಲ್ಲಿಗೆ ಹೋಗುತ್ತಿದ್ದೇನೆಂಬ ಅರಿವಿಲ್ಲದೆ ಅದರಲ್ಲಿದ್ದಾಳೆ)



## ದೃಶ್ಯ-67ಅ

*ಹಗಲು - ಊರಿನ ಬೀದಿ*

(ಇನ್ನೊದೆಡೆ ರಾಮು, ಮಹಾದೇವನಿಗೆ)

ರಾಮು : ಓದ್ವರ್ಷ ಇದೇ ಜಾತ್ರೆಲಲ್ಲೋಲ ನಮ್ ಕೃಷ್ಣಂಗು ಕನಕಂಗು ಪರಿಚಯ ಆದದ್ದು.

ಮಹಾದೇವ : ಹ್ದೂ ಕಣ್ಲ, ಇದೊಂದ್ ವರ್ಷದಲ್ ಏನೇನೆಲ್ಲಾ ಆಗ್ಹೋಬುಡ್ತು. ನಾವು ನಮ್ ಕೃಷ್ಣನ್ ಕಳ್ಕೊಂಬುಟ್ವೋ.
(ಗಾಡಿಗಳು ಜಾತ್ರೆಯ ಕಡೆ ಹೊರಡುತ್ತವೆ)

## ದೃಶ್ಯ-68

*ಹಗಲು - ಜಾತ್ರೆ*

(ಜನರೆಲ್ಲರು ಜಾತ್ರೆ ಪ್ರದೇಶಕ್ಕೆ ಬರುತ್ತಿದ್ದಾರೆ. ಕನಕ, ಜಾತ್ರೆಯನ್ನು ನೋಡಿ ಸಂತೋಷಗೊಂಡು ಗಾಡಿಯನ್ನು ಇಳಿದು ಖುಷಿಯಲ್ಲಿ ಓಡಿಹೋಗುತ್ತಾಳೆ)

ಯಜಮಾನ : ಕನಕ.. ನಿಂತ್ಕೊಳವ್ವ.

(ಕನಕಳಿಗೆ ಕೃಷ್ಣನನ್ನು ಕಂಡಂತಾಗಿ ನೃತ್ಯ ಮಾಡುತ್ತಿದ್ದ ಒಂದು ಗುಂಪಿನ ಮಧ್ಯ ಹೋಗಿ ನಿಂತು ಭಯಭೀತಳಾಗುತ್ತಾಳೆ. ಆದರೆ ಆ ಗುಂಪಿನಲ್ಲೂ ಕೃಷ್ಣನನ್ನು ಕಂಡಂತಾಗಿ ಖುಷಿಪಡುತ್ತಾಳೆ. ನಂತರ ಇಲ್ಲದಿರುವುದನ್ನು ನೋಡಿ ಬೇರೆ ತಂಡದ ಬಳಿ ಬರುತ್ತಾಳೆ. ಅಲ್ಲೂ ಕೃಷ್ಣನನ್ನು ಕಂಡಂತಾಗಿ ಖುಷಿಪಡುತ್ತಾಳೆ ನಂತರ ಇಲ್ಲದಿರುವುದನ್ನು ಕಂಡು ರಾಟೆಯ ಹತ್ತಿರ ಓಡಿಬರುತ್ತಿರುವಾಗ ಎತ್ತಿನಗಾಡಿಗೆ ಗುದ್ದಿ ಕೆಳಗೆ ಬೀಳುತ್ತಾಳೆ. ಎತ್ತಿನಗಾಡಿ ಇನ್ನೇನು ಅವಳ ಮೇಲೆ ಹರಿಯುತ್ತದೆನ್ನುವಷ್ಟರಲ್ಲಿ ಕೃಷ್ಣ ಬಂದು ಅವಳನ್ನು ಪಾರು ಮಾಡುತ್ತಾನೆ. ಊರಿನವರೆಲ್ಲರು ಕೃಷ್ಣ ಬಂದಿದ್ದಕ್ಕೆ ಸಂತಸ ಪಡುತ್ತಾರೆ. ಕನಕ, ಕೃಷ್ಣನನ್ನು ನೋಡಿ ಭಾವುಕಳಾಗಿ ತಬ್ಬಿಕೊಳ್ಳುತ್ತಾಳೆ. ನಂತರ ಕೃಷ್ಣ ತನ್ನ ಕೈ ಹಿಡಿಯುವಂತೆ ಸೂಚಿಸಿದಾಗ ಕನಕ ಅವನ ಕೈ ಹಿಡಿದು ಮುಂದ ಸಾಗುತ್ತಾರೆ)





ರಾಮಣ್ಣ : ಕೃಷ್ಣ.. (ಆಗ ಅಯ್ನೋರು ರಾಮಣ್ಣನನ್ನು ತಡೆದು)

ಅಯ್ನೋರು : ತಡಿಬ್ಯಾಡ್ರಿ. ಹಾರೋ ಹಕ್ಕೀನ, ಹರಿಯೋ ನದೀನ, ಬೀಸೋ ಗಾಳಿನ, ಹರಡೋ ಬೆಳಕನ್ನ ತಡಿಯೋದು ಯಾರಿಂದಾನು ಸಾಧ್ಯ ಇಲ್ಲ. ಆದರಂತೆ ಇದು ಜನುಮದ ಜೋಡಿ. ಅವರ ಹಾದಿ ಅವರ್ಗಾಗ್ಲಿ, ನಮ್ ಹಾರೈಕೆನೂ ಅವರ್ಗಾಗ್ಲಿ.

(ಕೃಷ್ಣ ಮತ್ತು ಕನಕ ಮುಂದೆಸಾಗುತ್ತಾರೆ. ಊರಿಗೆ ಊರೆ ಅವರನ್ನು ನೋಡುತ್ತಾ ನಿಲ್ಲುತ್ತದೆ. ಹಿನ್ನಲೆಯಲ್ಲಿ ವಾದ್ಯಗಳು ನುಡಿಸತೊಡಗುತ್ತವೆ)

ನಿರ್ದೇಶಕರ ಟಿಪ್ಪಣಿ:

ಒಂದು ವರ್ಷದಲ್ಲಿ ಇಡೀ ಕಥಾನಕ ನಡೆದುಹೋಗುತ್ತದೆ. ಚಲನಚಿತ್ರದ ಪ್ರಾರಂಭದಲ್ಲಿ ನಾಯಕ ಮತ್ತು ನಾಯಕಿ ಭೇಟಿಯಾಗುವ ಜಾಗದಲ್ಲೆ ಚಲನಚಿತ್ರ ತನ್ನ ಅಂತಿಮವನ್ನು ಕಾಣುತ್ತದೆ. ಜಾತ್ರೆಯನ್ನು ಇಲ್ಲಿ ಕೊನೆಯ ಹಂತವಾಗಿ ನಿರೂಪಿಸಲಾಗಿದೆ. ಕನಕ ತನ್ನ ಹುಚ್ಚಿನ ಪರಮಾವಧಿಯಲ್ಲಿದ್ದಾಗ ಅವಳನ್ನು ಜಾತ್ರೆಗೆ ಕರೆದುಕೊಂಡು ಬಂದು ಅಲ್ಲಿ ಆಕೆಗೆ ದೇವರ ತೀರ್ಥವನ್ನು ಪ್ರೋಕ್ಷಿಸಬಹುದೆಂದು ಕರೆತರುತ್ತಾರೆ. ಆದರೆ ವಿಧಿ ಮತ್ತೊಂದು ಅದ್ಭುತವಾದ ತಿರುವನ್ನು ಇಲ್ಲಿ ಕನಕಳಿಗೆ ಕೊಡುತ್ತದೆ. ಕನಕ ತನ್ನ ಎಲ್ಲ ಹಳೆಯ ನೆನಪುಗಳನ್ನು ಸಂಧಿಸುತ್ತಿದ್ದಾಗ ಅಕಸ್ಮಾತಾಗಿ ಬಂಡಿಯ ಮೂಕಿಗೆ ಸಿಕ್ಕಿಬೀಳುತ್ತಾಳೆ, ಇನ್ನೇನು ಬಂಡಿ ಅವಳ ಮೇಲೆ ಹರಿಯುತ್ತದೆನ್ನುವಷ್ಟರಲ್ಲಿ ವ್ಯಕ್ತಿಯೊಬ್ಬ ಬಂದು ಅವಳನ್ನು ಪಾರುಮಾಡುತ್ತಾನೆ. ಆ ವ್ಯಕ್ತಿ ಬೇರೆ ಯಾರೂ ಆಗಿರದೆ ಕೃಷ್ಣನೇ ಆಗಿರುತ್ತಾನೆ. ಇಬ್ಬರು ಮತ್ತೆ ಕೈ ಕೈ ಹಿಡಿದು ಅಲ್ಲಿಂದ ನಡೆಯತೊಡಗುತ್ತಾರೆ. ಬದುಕು ಹೀಗೆಲ್ಲ ತನ್ನ ತಿರುವುಗಳನ್ನು ವ್ಯಕ್ತಿಗತವಾಗಿ ವೈಯಕ್ತಿಕವಾಗಿ ಮನುಷ್ಯನ ಜೀವನವನ್ನು ಅರ್ಥೈಸಿಕೊಳ್ಳಬಹುದು ಎನ್ನುವುದಕ್ಕೆ ಇದು ಸಾಕ್ಷಿ. ಅಯ್ಯನವರ ಕೊನೆಯ ಮಾತು ನಿಜವಾಗಿಯೂ ಅರ್ಥಪೂರ್ಣ. ಒಂದು ಗ್ರಾಮೀಣ ಸಂಯೋಜನೆಯಲ್ಲಿ, ಗ್ರಾಮೀಣ ಬದುಕಿನ ಹಿನ್ನಲೆಯಲ್ಲಿ, ಗ್ರಾಮ್ಯ ಭಾಷೆಯ ಉಪಯೋಗದಲ್ಲಿ ಮತ್ತು ಗ್ರಾಮ್ಯ ಕಲೆಗಳ ಒಟ್ಟಾರೆ ಸ್ವರೂಪವನ್ನು ತನ್ನದಾಗಿಸಿಕೊಳ್ಳುತ್ತ ಗ್ರಾಮ ಮತ್ತು ಜನಪದ ಇವುಗಳ ಸಾಮ್ಯವನ್ನು ಸಮೀಕರಿಸುತ್ತ ಇಡೀ ಭಾರತದ ಗ್ರಾಮ ಸ್ವರೂಪವೊಂದನ್ನು ಕಣ್ಣಮುಂದೆ ಕಟ್ಟಿಕೊಡುವಲ್ಲಿ ಜನುಮದಜೋಡಿ ಕಾದಂಬರಿ ಎಷ್ಟು ಪ್ರಯೋಗಶೀಲವೋ ಅಷ್ಟೇ ಈ ಚಲನಚಿತ್ರವು ಅತ್ಯಂತ ಪ್ರಯೋಗಶೀಲವಾಗಿ, ಪ್ರಭಾವಶಾಲಿಯಾಗಿ ಜನಮನಸ್ಸನ್ನು ಸೂರೆಗೊಂಡಿದೆ. ಈ ಚಲನಚಿತ್ರ ಕೇವಲ ಒಂದು ಗ್ರಾಮೀಣ ಹಿನ್ನಲೆಯ ಚಲನಚಿತ್ರ ಎನ್ನುವುದಕ್ಕಿಂತ ಕಾಲಾತೀತವಾಗಿ ನಿಲ್ಲಬಲ್ಲ ಮನುಷ್ಯನ ಭಾವನೆಗಳ ಪ್ರತೀಕ ಎಂದು ಹೇಳುವುದು ಬಹಳ ಸೂಕ್ತ.

## ಮುಕ್ತಾಯ

## ನಮ್ಮ ಪ್ರಕಟಣೆಗಳು

| | | |
|---|---|---|
| 1 ಸಮುದಾಯದ ಮೂರು ನಾಟಕಗಳು | : ಶಶಿಧರ್ ಭಾರಿಘಾಟ್ | : ನಾಟಕ |
| 2 ಸುತ್ತಿಕೊಂಡರೆ ಸರ್ಪ | : ಡಾ.ಹೆಚ್.ವಿ.ವೇಣುಗೋಪಾಲ್ | : ನಾಟಕ |
| 3 ನೀರು | : ಪ್ರೊ.ನಗರಗೆರೆ ರಮೇಶ್ | : ನಾಟಕ |
| 4 ದಿಶಾಂತರ | : ಡಿ.ಎಸ್.ಚೌಗಲೆ | : ನಾಟಕ |
| 5 ಬಾರಮ್ಮ ಭಾಗೀರತಿ | : ಡಾ.ಕೆ.ವೈ.ನಾರಾಯಣಸ್ವಾಮಿ | : ನಾಟಕ |
| 6 ಹೂಬಿಟ್ಟಮರದ ನೆರಳು | : ಡಾ.ಜೆ.ಶ್ರೀನಿವಾಸ ಮೂರ್ತಿ | : ಚಿಂತನಮಾಲಿಕೆ |
| 7 ಚಿಕ್ಕವೀರರಾಜೇಂದ್ರ | : ಶ್ರೀನಿವಾಸ ಜಿ. ಕಪ್ಪಣ್ಣ | : ನಾಟಕ |
| 8 ಎನ್ನ ಮನದಂಗಳ | : ಟಿ.ಲಕ್ಷ್ಮೀನಾರಾಯಣ್ | : ಕವನ ಸಂಕಲನ |
| 9 ಸಾಯುವನೇ ಚಿರಂಜೀವಿ | : ಶಶಿಧರ್ ಭಾರಿಘಾಟ್ | : ನಾಟಕ |
| 10 ಮನುಷ್ಯ ಯುದ್ಧದ ಬಣ್ಣಗಳು | : ಮಂಜುನಾಥ .ಎಸ್ | : ಕವನ ಸಂಕಲನ |
| 11 ಯುಯುತ್ಸು | : ಹರಿಕೃಷ್ಣ | : ನಾಟಕ |
| 12 ಕಥೆಗೆ ಸಾವಿಲ್ಲ | : ಬಿ.ಎಂ.ಗಿರಿರಾಜ್ | : ಕಾದಂಬರಿ |
| 13 ಮಾಪ್ರೋ | : ಮಂಗಳೂರು ವಿಜಯ | : ಚಿಂತನ ಸಾಹಿತ್ಯ |
| 14 ಕಸಿಮಡಗಿದ ಕಣ್ಣು | : ಲಕ್ಷ್ಮೀಪತಿ ಕೋಲಾರ | : ಲೇಖನಗಳು |
| 15 ಭರತವಾಕ್ಯ | : ಡಾ.ನಾ.ದಾಮೋದರ ಶೆಟ್ಟಿ | : ನಾಟಕ |
| 16 ತಟ್ಟೆಯೊಳಗಿನ ಜೀವ | : ಡಾ.ನಾ.ದಾಮೋದರ ಶೆಟ್ಟಿ | : ಕವನ ಸಂಕಲನ |
| 17 ಹುಟ್ಟು ಸಾವಿನ ಸತ್ಯ | : ಕೆ.ಶ್ರೀಕಂಠ ಪುತ್ತೂರು | : ಕಥಾಸಂಕಲನ |
| 18 ಅನ್ನದಾತ | : ಪ್ರೊ.ಎಸ್.ಜಿ.ಸಿದ್ಧರಾಮಯ್ಯ | : ನಾಟಕ |
| 19 ಯಡೆಸಾಲು | : ಪ್ರೊ.ಎಸ್.ಜಿ.ಸಿದ್ಧರಾಮಯ್ಯ | : ವಿಮರ್ಶಾ ಲೇಖನ |
| 20 ಚಂದ್ರಗಿರಿ(ಸಾರಾ ಅಭಿನಂದನ ಗ್ರಂಥ) | : ಸಂ–ಡಾ. ಸಬಿಹಾ | : ವಿಮರ್ಶಾ ಲೇಖನ |
| 21 ಕಲ್ಯಾಣದ ಕೊನೆ ದಿನಗಳು | : ಪ್ರೊ.ಕ.ವೆಂ.ರಾಜಗೋಪಾಲ | : ನಾಟಕ |
| 22 ಜನರ ನಡುವೆ | : ಸಂ:ಹೆಚ್.ವಿ.ವೇಣುಗೋಪಾಲ್ | : ನಾಟಕ ಸಂಕಲನ |
| 23 ಕೈವಾರ ನಾರಾಯಣ | : ಡಾ.ಕೆ.ವೈ.ನಾರಾಯಣಸ್ವಾಮಿ | : ನಾಟಕ |
| 24 ತುಂಗ ಮಡಿಲ ಜನಪದ | : ಡಾ. ಗೀತಾ ಬಿ.ವಿ. | : ಜನಪದ ಲೇಖನಗಳು |
| 25 ಮೋಡ ನೆರಳ ನಿರಾಳ | : ಕಾ ತ ಚಿಕ್ಕಣ್ಣ | : ಕಥಾ ಸಂಕಲನ |
| 26 ಗಳಿಗೆಬಟ್ಟಲ ತಿರುವುಗಳಲ್ಲಿ | : ರೂಪ ಹಾಸನ್ | : ಕವನ ಸಂಕಲನ |
| 27 ಆಯಾತಪ್ಪಿದ ರಥ | : ಕೆ.ಶ್ರೀಕಂಠ ಪುತ್ತೂರು | : ಕಥಾ ಸಂಕಲನ |
| 28 ಒಂದೊಂದು ಮುಖದ ಒಂದೊಂದು ಮುಖ | : ಡಾ.ನಾ.ದಾಮೋದರ್ ಶೆಟ್ಟಿ | : ವ್ಯಕ್ತಿ ಚಿತ್ರ |
| 29 ನೆಲದ ದನಿ | : ರವಿ.ರಾ.ಅಂಚನ್ | : ಲೇಖನಗಳು |
| 30 ನೀರೊಳಗಣ ಬೆಳಕು | : ಹೆಚ್.ದಂಡಪ್ಪ | : ವಿಮರ್ಶಾ ಲೇಖನ |
| 31 ವಿವೇಕ ಚಿಂತನೆ | : ರವಿ.ರಾ.ಅಂಚನ್ | : ಲೇಖನಗಳು |
| 32 ಹೋರಾಟದ 2 ನಾಟಕಗಳು | : ಟಿ.ಲಕ್ಷ್ಮಿನಾರಾಯಣ | : ನಾಟಕ ಸಂಕಲನ |
| 33 ಥಾಯ್‌ಲ್ಯಾಂಡ್ ಎಂಬ ಮುಗುಳ್ನಗೆ | : ಡಾ.ಸಿ.ಜಿ.ಲಕ್ಷ್ಮೀಪತಿ | : ಪ್ರವಾಸ ಕಥನ |
| 34 ಬೆಳಕಿನ ಹಣತೆ | : ಹುಲಿಕಟ್ಟಿ ಚನ್ನಬಸಪ್ಪ | : ಕವನ ಸಂಕಲನ |
| 35 Mayandal | : Ravi R.Anchan | : Story |
| 36 Kalutti & Kalkuda | : Dr.K.Savitri | : Story |
| 37 ಶಿವತೀರ್ಥನ್ ಸಮಗ್ರ ಗ್ರಂಥ | : ಕೆ.ನ.ಶಿವತೀರ್ಥನ್ | : ಲೇಖನಗಳು |
| 38 ಮಾಯಂದಾಲ್ | : ರವಿ.ರಾ.ಅಂಚನ್ | : ಕಥಾ ಸಂಕಲನ |
| 39 ಕಲ್ಲುರ್ಟಿ – ಕಲ್ಕುಡ | : ಕೆ.ಸಾವಿತ್ರಿ | : ಕಥಾ ಸಂಕಲನ |
| 40 ಸಾಹಿತ್ಯಕ್ಕಿಂತ ಸಮಾಜ ದೊಡ್ಡದು | : ದಿನೇಶ್ ಅಮಿನ್ ಮಟ್ಟು | : ಅಧ್ಯಕ್ಷ ಭಾಷಣ |
| 41 ಹನಗವಾಡಿ | : ಪ್ರೊ.ಜಿ.ಬಿ.ಶಿವರಾಜು | : ಲೇಖನಗಳು |
| 42 ಭೂಮಿ ಜೀವ | : ಎಚ್.ಸಿ.ಚಿದಾನಂದ ಮೂರ್ತಿ | : ನಾಟಕ |
| 43 ಮುತ್ತು ಬಂದಿದೆ ಕೇರಿಗೆ | : ಡಾ.ಎನ್.ಸುರೇಶ್ ನಾಗಲಮಡಿಕೆ | : ಸಾಂಸ್ಕೃತಿಕ ಅಧ್ಯಯನ |
| 44 ಕಂದನಿಂದ ಕಿಶೋರನವರೆಗು | : ಡಾ.ಸೋಮಶೇಖರ್ | : ವಿಜ್ಞಾನ ಬರಹ |
| 45 ಕಾಡು ಕಣಿವೆಯ ಹಾಡು | : ಜಿ.ಪಿ.ಬಸರಾಜು | : ಪ್ರವಾಸ ಕಥನ |
| 46 ಕುಂತಿಮನಸು | : ಎನ್.ಜೆ.ರವಿಶೇಖರ್ | : ಕವನ ಸಂಕಲನ |
| 47 ಅಂತರಂಗದ ಕಥೆಗಳು | : ಕೆ.ಶ್ರೀಕಂಠ ಪುತ್ತೂರು | : ಕಥೆಗಳು |
| 48 ಸಾವಿರದ ಪದಗಳು | : ಪ್ರೊ.ಯು.ನಾರಾಯಣ ಶರ್ಮಾ | : ಪದಗಳ ಸಂಗ್ರಹ |
| 49 ಜಂಗ್ಲಿ ಜಗ್ಗಿಯ ಅವಾಂತರಗಳು | : ಬಿ.ಎಸ್.ಪರಮೇಶ್ವರ (ಪಮ್ಮಿ) | : ಹಾಸ್ಯ ಲೇಖನ |
| 50 ಉತ್ತರಾರ್ಧ | : ಜಿ.ಹೆಚ್.ನಾಯಕ | : ವಿಮರ್ಶಾ ಲೇಖನ |
| 51 ತುಳುವರ ಯುಗಯಾತ್ರೆ | : ರವಿ.ರಾ.ಅಂಚನ್ | : ಲೇಖನಗಳು |
| 52 ಸಮಗ್ರ ನಾಯಕತ್ವ | : ಡಾ.ಡ್ಯಾನಿಯಲ್ ಫರ್ನಾಂಡಿಸ್.ಎಸ್.ಜೆ | : ಕಥಾನಕ |
| 53 ಹಾದಿಬಳ್ಳಿ | : ಜಿ.ದಕ್ಷಿಣಮೂರ್ತಿ | : ಕವನಸಂಕಲನ |
| 54 ಅಲ್ಲಾರಾಮ | : ಹೆಚ್.ಸಿ.ಚಿದಾನಂದಮೂರ್ತಿ | : ನಾಟಕ |
| 55 ಮೌಲ್ಯ ಮಾರ್ಗ | : ಜಿ.ಹೆಚ್.ನಾಯಕ | : ಸಂಪುಟ 1–5 |
| 60 ಮೌನ ಮುರಿದಾಗ | : ಕೆ.ಸಾವಿತ್ರಿ | : ಲೇಖನಗಳು |
| 61 ಒಂದಿಷ್ಟು ಹಸಿ ಮಣ್ಣು | : ರೂಪ ಹಾಸನ | : ಕವನಸಂಕಲನಗಳು |
| 62 ಮನಸಿನಂಗಳ | : ಡಾ.ಪ್ರಮೀಳಾ ಮಾಧವ್ | : ಕಥಾಸಂಕಲನ |
| 63 ಅಲೆ ಅಲೆದಾಟ | : ಜಿ.ಪಿ.ಬಸರಾಜು | : ಸಂಪುಟ 1–2 |
| 65 ನಾದಾಲೋಕ | : ಡಾ.ಎಂ.ಮೋಹನ ಆಳ್ವ | : ಅಭಿನಂದನಾಗ್ರಂಥ |
| 66 ನಾಟಕದ ಅಮೃತ ವಿಮರ್ಶೆಯ ಗರುಡ | : ಡಾ.ನಾ.ದಾಮೋದರ ಶೆಟ್ಟಿ | : ರಂಗ ವಿಮರ್ಶೆ |
| 67 ಕಣ್ಣ ಕನವರಿಕೆ | : ರವಿ ಜಡಿಗೇನಹಳ್ಳಿ | : ಕವನ ಸಂಕಲನ |
| 68 ಬದುಕಿಗೆ ಗೋಡೆಗಳಿಲ್ಲ | : ಹೆಚ್.ಎಂ.ಮುಜೀಬ್ ಅಹಮದ್ | : ಕವನ ಸಂಕಲನ |

| | | |
|---|---|---|
| 69 ನೇಗಿಲು | : ಪಿ.ಎನ್.ನಾಗೇಂದ್ರ ಶಿರಸಿ | : ಲೇಖನಗಳು |
| 70 ವಿಶಾದಪಾಸನ ಹಾಗೂ ಸರದಾರನ ಸ್ವಗತ | : ಶಶಿರಾಜ್ ರಾವ್ ಕಾವೂರ್ | : ನಾಟಕಗಳು |
| 71 ದಿಶಾಂತರ | : ಡಿ.ಎಸ್.ಚೌಗಲೆ | : ನಾಟಕ |
| 72 ನಿಮಗೊಂದು ಕನಸಿದೆಯಾ | : ಶೈಲಜಾವಿಜಯಕುಮಾರ್ | : ಕಥೆಗಳು |
| 73 ಗೆರೆಗಳು | : ಡಾ.ಸಬಿಹಾ ಭೂಮೀಗೌಡ | : ಕಥಾ ಸಂಕಲನ |
| 74 ಅರಿವೆಂಬ ಅಲ್ಲಮ | : ಯು.ಎನ್.ಸಂಗನಾಳಮಠ | : ಲೇಖನಗಳು |
| 75 ಕನ್ನಡ ದಲಿತ ಸಾಹಿತ್ಯ | : ಡಿ.ಎಸ್.ಚೌಗಲೆ | : ನಾಟಕ |
| 76 ಆಚಾರ–ವಿಚಾರ | : ಪಿ.ಎನ್.ನಾಗೇಂದ್ರ ಶಿರಸಿ | : ಲೇಖನಗಳು |
| 77 ಸಖೀಗೀತ | : ಜ್ಯೋತಿ ಬೊಮ್ಮನಹಳ್ಳಿ | : ಲೇಖನಗಳು |
| 78 ಡಿ.ಎಸ್.ಚೌಗಲೆ ಅವರ ಏಳು ನಾಟಕಗಳು | : ಡಿ.ಎಸ್.ಚೌಗಲೆ | : ನಾಟಕಗಳು |
| 79 ಚದುರಂಗ ಮತ್ತು ಕತ್ತೆ | : ಡಿ.ಎಸ್.ಚೌಗಲೆ | : ನಾಟಕ |
| 80 ಪುದ್ಧವಂಶ | : ಡಿ.ಎಸ್.ಚೌಗಲೆ | : ನಾಟಕ |
| 81 ಮೂರು ಹೆಜ್ಜೆ ಮೂರು ಲೋಕ | : ಡಾ.ನಾ.ದಾಮೋದರ ಶೆಟ್ಟಿ | : ನಾಟಕ |
| 82 ಕಸಿಮಡಗಿದ ಕಣ್ಣು | : ಲಕ್ಷ್ಮೀಪತಿ ಕೋಲಾರ | : ಲೇಖನಗಳು |
| 83 ಎಪ್ಪತ್ತೇಳು ಲೀಲೆಗಳು | : ಡಾ.ವೆಂಕಟೇಶ್ ಇಂದ್ವಾಡಿ | : ಕವನಗಳು |
| 84 ಕಾಮಾಕ್ಷಿ ಸಂಸಾರನೌಕೆ | : ಲಕ್ಷ್ಮಣ ಕೊಡಸೆ | : ಕಾದಂಬರಿ |
| 85 ಅಂದಮಾನಿನ ಎಳೆಯನು ಹಿಡಿದು | : ಡಾ.ಲತಾ ಗುತ್ತಿ | : ಪ್ರವಾಸ ಕಥನ |
| 86 ಅಲೆಮಾರಿ ನಾಗತಿಹಳ್ಳಿ ಚಂದ್ರಶೇಖರ | : ಚೆನ್ನೇನಹಳ್ಳಿ ಸ್ವಾಮಿ | : ಪ್ರ.ಕೃ.ಅಧ್ಯಯನ |
| 87 ಇಸ್ಕಿಲಾರ್ | : ಚಂದ್ರಕಾಂತ ಪೋಕಳೆ | : ಕಥೆಗಳು |
| 88 ಕೀಲಿಕೈ ಮತ್ತು ಇತರ ಪ್ರಬಂಧಗಳು | : ಸಬಿಹಾ ಭೂಮೀಗೌಡ | : ಪ್ರಬಂಧಗಳು |
| 89 ಹಾಡುಗಬ್ಬ | : ಎಸ್.ಜಿ. ಸಿದ್ಧರಾಮಯ್ಯ | : ಕವನಗಳು |
| 90 ಜಾತಿ | : ವಿಜಯಮೋಹನ್ | : ಕಥೆಗಳು |
| 91 ಹುತ್ತವ ಕಟ್ಟಿ ಅಡಗಿತ್ತು ನೋವು | : ಕೇಶವ ಕುಡ್ಲ | : ಕಥಾ ಸಂಕಲನ |
| 92 ಗತಿ (ಇಂಗ್ಲಿಷ್) | : ಬಿ.ಟಿ. ಲಲಿತಾನಾಯಕ್ | : ಕಥಾ ಸಂಕಲನ |
| 93 ದೇಹ–ಮೈಮನಗಳ ಸಂಬಂಧ | : ಎಚ್.ಎಲ್.ಪುಷ್ಪ | : ಲೇಖನಗಳು |
| 94 ಹೊಸ ಹೆಜ್ಜೆ | : ಶೈಲಜವಿಜಯಮೋಹನ್ | : ಕಥಾ ಸಂಕಲನ |
| 95 ನೀಲಿಗ್ಯಾನ | : ಹುಲಿಕುಂಟೆ ಮೂರ್ತಿ | : ಪದ್ಯಗಳು |
| 96 ತಲ್ಲಣ | : ವೆಂಕೋಬ ರಾವ್ | : ಲೇಖನಗಳು |
| 98 ಗಾಂಧಿ ಹೋದರು | : ಚಂದ್ರಶೇಖರ್ ತಾಳ್ಯ | : ಲೇಖನಗಳು |
| 99 Women in Transition | : Shailajavijayakumar | : Stories |
| 100 ಹಾಸುಹೊಕ್ಕು | :ನಾಡೋಜ ಪ್ರೊ.ಕೆ.ಜಿ.ನಾಗರಾಜಪ್ಪ | : ಸಾಧನೆ–ಸಂಭ್ರಮ |
| 101 ಅಲ್ಲಿಗೆ ಹೋದರು ಇಲ್ಲಿಯ ಚಿಂತೆ | : ಎಸ್.ಜಿ. ಸಿದ್ಧರಾಮಯ್ಯ | : ಪ್ರವಾಸ ಕಥನ |
| 102 ವ್ಯೂಹ | : ಶ್ರೀನಾಥ್ ವಸಿಷ್ಠ | : ಪತ್ತೇದಾರಿ ನಾಟಕ |
| 103 ಬೆವರ ದನಿಗಳು..., | : ಬಿ.ಆರ್. ಭಾಸ್ಕರ್ ಪ್ರಸಾದ್ | |
| | ನಾಗರಾಜ್ ಹೆತ್ತೂರ್ | |
| | ಅಪ್ಪಗೆರೆ ಡಿ.ಟಿ.ಲಂಕೇಶ್ | : ಕವನಸಂಕಲನ |
| 104 ಭಿತ್ತಿಚಿತ್ರ | : ರಮ್ಯವರ್ಷಿಣಿ | : ಕವನಸಂಕಲನ |
| 105 ಬಸವಣ್ಣನ ಪುರಾತ ದಾಸಿಮಯ್ಯ | : ಗೊರೂರು ಸೋಮಶೇಖರ | : ಲೇಖನಗಳು |
| 106 ಬಯಲು ಸೀಮೆ ಬೆಂಕಿ ಬೆಳಕು | : ಬಾ.ಮ. ಬಸವರಾಜಯ್ಯ | : ಕಥಾ ಸಂಕಲನ |
| 107 ಭ್ರಮರ ಮತ್ತು ಕೀಟ | : ಎಚ್.ದಂಡಪ್ಪ | : ಲೇಖನಗಳು |
| 108 ವಸಂತಸ್ಮೃತಿ | : ಡಿ.ಆರ್.ನಾಗರಾಜ್ | : ಕವನಸಂಕಲನ |
| 109 ಶೂಲಿಹಬ್ಬ | : ಉಷಾ ಎಂ. | : ನಾಟಕ |
| 110 ವಚನಗಳ ಪ್ರಾಯೋಗಿಕ ವಿಮರ್ಶೆ | : ಡಾ.ಬಸವರಾಜ ಸಬರದ | : ವಿಮರ್ಶೆ |
| 111 ಜನುಮದ ಜೋಡಿ | : ಟಿ.ಎಸ್.ನಾಗಾಭರಣ | : ಚಿತ್ರಕಥೆ |
| 112 ಮೈಸೂರು ಮಲ್ಲಿಗೆ | : ಟಿ.ಎಸ್.ನಾಗಾಭರಣ | : ಚಿತ್ರಕಥೆ |
| 113 ಮಹಿಳೆ, ಚಳುವಳಿ ಮತ್ತು ರಾಜಕಾರಣ | : ಡಾ.ಕೆ.ಷರೀಫಾ | : ವಿಮರ್ಶೆ |

## ನಮ್ಮಲ್ಲಿ ದೊರೆಯುವ ಇತರೆ ಕೃತಿಗಳು

| | | |
|---|---|---|
| 1 ಶರಣ ಸಂಕುಲಕ್ಕೆ ಅಕ್ಕ | : ಸಂಗನಾಳಮಠ ಯು.ಎನ್. | : ಲೇಖನಗಳು |
| 2 ನೆಲಗಂಪು | : ಪೇತ್ರಿ ವಿಶ್ವನಾಥ ಆರ್. ಶೆಟ್ಟಿ | : ಕವನಗಳು |
| 3 ಶರಂತಿ ಮೌನಿ ಮಾತೆ | : ಶಕುಂತಲ ಆರ್. ಪ್ರಭು | : ಆತ್ಮಕಥನ 4 |
| ಸಾಮಾಜಿಕ ಕ್ರಾಂತಿ ಜ್ಯೋತಿ ಮಹಾತ್ಮ ಜ್ಯೋತಿಬಾ ಫುಲೆ | : ರಫಿ. ರಾ. ಅಂಚನ್ | : ಲೇಖನಗಳ |
| 5 ಬೆವರಿನ ಮುಖಗಳು | : ಪಿ.ಎನ್. ನಾಗೇಂದ್ರ, ಶಿರಸಿ | : ಕೃಷಿ ಲೇಖನಗಳು |
| 6 ಬದುಕು ಬಿನ್ನಾಣ | : ಪಿ.ಎನ್. ನಾಗೇಂದ್ರ, ಶಿರಸಿ | : ಲೇಖನಗಳು |
| 7 ಗಾಂಧಿ ವಿಚಾರಣೆ | : ಕ.ವೆಂ. ರಾಜಗೋಪಾಲ | : ನಾಟಕ |
| 8 ಭಗತ್ ಸಿಂಗ್ ವಿಚಾರಣೆ | : ಕ.ವೆಂ. ರಾಜಗೋಪಾಲ | : ನಾಟಕ |
| 9 ಉಪನಿಷತ್ತುಗಳ ಸಾರೋದ್ಧಾರ ಹಾಗೂ ಸಾಧನ ಮಾರ್ಗ | ಸ್ವಾಮಿ ಯೋಗೇಶ್ವರಾನಂದ : ಸರಸ್ವತಿ | : ಲೇಖನಗಳು |
| 10 ಗಾದೆಗಳ ಅಂತರಂಗ | : ಸಿ.ಕೆ.ಪರಶುರಾಮಯ್ಯ | : ಗಾದೆಗಳ ವಿಶ್ಲೇಷಣೆ |
| 11 ಸಂತ ತ್ಯಾಗರಾಜರ ಆಧ್ಯಾತ್ಮಿಕ ಪರಂಪರೆ | : ಎಂ.ಪಿ. ವಸಂತಕುಮಾರಿ | : ಸಂಪ್ರಬಂಧ |